ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಭಾನುವಾರ, 31 ಮೇ 2026
ಸಂಪುಟ 16, ಸಂಚಿಕೆ 67, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಸಾಗರ ಭದ್ರತೆಗೆ ನೌಕಾ ಥಿಯೇಟರ್ ಕಮಾಂಡ್: ತ್ರಿಪಾಠಿ

|೦೭

ಗಡಿ ಜಿಲ್ಲೆಗಳ ಜನಸಂಖ್ಯೆ ಬದಲು ದೇಶಕ್ಕೆ ಸವಾಲು: ಶಾ

|೦೭



ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಹುಣ್ಣಿಮೆ, ನಕ್ಷತ್ರ: ಅನುರಾಧೆ

ದಿನದ ಮಾತು

ಕೆಲಸ ಮಾಡುತ್ತಿದ್ದರೆ ಬಡತನವಿರುವುದಿಲ್ಲ, ಪರಮಾತ್ಮನ ಧ್ಯಾನ ಮಾಡುತ್ತಿದ್ದರೆ ಪಾಪ ವುಂಟಾಗುವುದಿಲ್ಲ, ಮೌನವಾಗಿದ್ದರೆ ಜಗಳವುಂಟಾಗುವುದಿಲ್ಲ.

▲ ಚಾಣಕ್ಯ

ಹೀಗೊಂದು ಮಸಾಲೆಪುರಿ ಆರ್ಡರ್ ಪ್ರಕರಣವು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ಮಾನವ ಹಕ್ಕು ಆಯೋಗ ಅಧ್ಯಕ್ಷ

• **ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.

• ಪುಟ ೪

ವರ್ಚಸ್ಸು ಹೆಚ್ಚಿಸಿಕೊಳ್ಳಲು ಉಗ್ರ ಪಾಕಿಸ್ತಾನದ ಕಸರತ್ತು

• ಪುಟ ೭

ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಜಯಂತಿ ಇಂದು

• ಪುಟ ೭

ಮಲಪ್ಪುರಂ ಸ್ಫೋಟಕ ವಶ ಪ್ರಕರಣ: ಎನ್ಐಎ ದಾಳಿ

• ಪುಟ ೭

ಪಂಜಾಬ್ ಸ್ಥಳೀಯ ಕದನ; ಬಲ ವೃದ್ಧಿಸಿಕೊಂಡ ಬಿಜೆಪಿ

• ಪುಟ ೭

ಉ.ಪ್ರದೇಶದಲ್ಲಿ ಭಾರೀ ಮಳೆಗೆ 28 ಜನ ಸಾವು

• ಪುಟ ೭

ತಿರುವಾಂಕೂರು ರಾಜಮನೆತನದಿಂದ ಸ್ಪಷ್ಟನೆ: ಚಿನ್ನ ನಾಪತ್ತೆಯಾಗಿಲ್ಲ

• ಪುಟ ೭



ರಕ್ಷಣಾ ಸ್ವಾವಲಂಬನೆ

ಭಾರತದ ಸೇನಾ ಬಲ ಹೆಚ್ಚಿಸಿದ ಸೂರ್ಯಾಸ್ತ್ರ

• ಪುಟ ೭

ಸುದ್ದಿ ಸಮಗ್ರ

ಸಿಎಲ್‌ಪಿ ನಾಯಕರಾಗಿ ಆಯ್ಕೆ | ರಾಜ್ಯಪಾಲರ ಭೇಟಿ | ಸರ್ಕಾರ ರಚನೆಗೆ ಹಕ್ಕು ಮಂಡನೆ

ಬುಧವಾರ ಡಿಕೆಶಿ ಪ್ರಮಾಣವಚನ

• **ಬೆಂಗಳೂರು:** ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಶನಿವಾರ ಮತ್ತೊಂದು ಮಹತ್ವದ ಅಧ್ಯಾಯ ಆರಂಭವಾಗಿದೆ. ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಸಿದ್ದರಾಮಯ್ಯ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ, ಹೈಕಮಾಂಡ್ ಸೂಚನೆಯಂತೆ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಘೋಷಿಸಲಾಗಿದೆ.



ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಶನಿವಾರ ಸಂಜೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಲ್ಲ ಶಾಸಕರು ಒಮ್ಮತದ ನಿರ್ಧಾರ ಕೈಗೊಂಡರು. ಸಭೆಯ ಆರಂಭದಲ್ಲಿಯೇ ಸಿದ್ದರಾಮಯ್ಯ ಅವರು ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯನ್ನು ಹೈಕಮಾಂಡ್‌ಗೆ ಬಿಡಲಾಗಿದೆ ಎಂದರು. ಬಳಿಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ. ಶಿವಕುಮಾರ್ ಅವರು ಆಯ್ಕೆಯಾಗಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯ ದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಘೋಷಿಸಿದರು.

ಡಿಕೆಶಿ ಹೆಸರು ಸೂಚಿಸಿದ ಸಿದ್ದರಾಮಯ್ಯ: 10 ನಿಮಿಷಗಳ ವಿರಾಮದ ಬಳಿಕ ಮತ್ತೆ ಸಭೆ ಸೇರಿ ಮಾಜಿ ಸಿಎಂ ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಪ್ರಸ್ತಾಪಿಸಿದರು. ಶಾಸಕ ಡಾ.ಜಿ.ಪರಮೇಶ್ವರ್ ಅವರು ಸಿದ್ದರಾಮಯ್ಯ ಪ್ರಸ್ತಾವನೆ ಅನುಮೋದಿಸಿದರು. ಶಿವಕುಮಾರ್ ಹೆಸರು ಅನುಮೋದನೆಯಾಗುತ್ತಿದ್ದಂತೆಯೇ ಸಭೆಯಲ್ಲಿದ್ದ ಶಾಸಕರು ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು. ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಎಲ್ಲಾ ಶಾಸಕರು ಕೈ ಎತ್ತುವ ಮೂಲಕ ಡಿ.ಕೆ. ಶಿವಕುಮಾರ್ ಅವರ ಆಯ್ಕೆಯನ್ನು ಅನುಮೋದಿಸಿದರು.

ಹೈಕಮಾಂಡ್ ನಿರ್ಧಾರಕ್ಕೆ ಶಾಸಕರ ಸಹಮತ: ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಮುಂದಿನ ಮುಖ್ಯಮಂತ್ರಿ ಯಾರು ಎಂಬ ಕುತೂಹಲಕ್ಕೆ ಹೈಕಮಾಂಡ್ ಈಗಾಗಲೇ ತೆರೆ ಎಳೆದಿತ್ತು.

➡ ಪುಟ ೪



17 ವರ್ಷ ಬಳಿಕ ಪಟ್ಟ ಬಿಟ್ಟುಕೊಟ್ಟ ಸಿದ್ದರಾಮಯ್ಯ

ಮಾಜಿ ಸಿಎಂ ಸಿದ್ದರಾಮಯ್ಯನವರು ಬರೋಬ್ಬರಿ 17 ವರ್ಷ ಸುದೀರ್ಘವಾಗಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ಇದೀಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕಾಂಗ ಪಕ್ಷದ ನಾಯಕನ ಸ್ಥಾನವನ್ನು ಬಿಟ್ಟುಕೊಟ್ಟಿದ್ದಾರೆ.

ಸಿದ್ದರಾಮಯ್ಯ ಪರ ಡಿಕೆಶಿ ಗೌರವ ನಿರ್ಣಯ ಮಂಡನೆ

ಸಿದ್ದರಾಮಯ್ಯನವರು ಒಂದೇ ವಾಕ್ಯದ ನಿರ್ಣಯ ಮಂಡಿಸುವುದರ ಮೂಲಕ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯನಾಗಿ ಆಯ್ಕೆ ಮಾಡಲಾಯಿತು. ಬಳಿಕ ಡಿಕೆ ಶಿವಕುಮಾರ್ ಅವರು ಸಿದ್ದರಾಮಯ್ಯ ಪರ ಗೌರವ ನಿರ್ಣಯ ಮಂಡಿಸಿದ್ದು, ಸಿಎಂ ಆಗಿ ಅವರ ಸೇವೆಯನ್ನು ಸಭೆಯಲ್ಲಿ ಮೆಲುಕು ಹಾಕಲಾಗುತ್ತದೆ.

ನುಡಿದಂತೆ ನಡೆದಿದ್ದೇವೆ: ಸಿಎಲ್‌ಪಿ ಸಭೆಯಲ್ಲಿ ಸಿದ್ದರಾಮಯ್ಯ

ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಮಾತನಾಡಿದ ಮಾಜಿ ಸಿಎಂ ಸಿದ್ದರಾಮಯ್ಯ, ತಮ್ಮ ಆಡಳಿತದ ಬಗ್ಗೆ ವಿವರಿಸಿದರು. ರಾಜ್ಯದಲ್ಲಿ ನುಡಿದಂತೆ ನಡೆದಿದ್ದೇವೆ. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ. ಸರ್ವ ಜನರ ಏಳಿಗೆಗಾಗಿ ನಾನು ಸೇರಿದಂತೆ ನಮ್ಮ ಪಕ್ಷದ ಎಲ್ಲ ಶಾಸಕರು, ಸಂಪುಟ ಸಹೋದ್ಯೋಗಿಗಳು ಉತ್ತಮ ಕೆಲಸ ನಿರ್ವಹಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಹಾಗೂ ಹೈಕಮಾಂಡ್‌ನ ಎಲ್ಲ ನಾಯಕರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸರ್ಕಾರ ರಚನೆಗೆ ಹಕ್ಕು ಮಂಡಿಸಿದ ಡಿಕೆಶಿ

ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಬೆನ್ನಲ್ಲೇ ಡಿ.ಕೆ. ಶಿವಕುಮಾರ್ ಅವರು ಲೋಕಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದಾರೆ. ಶಾಸಕಾಂಗ ಪಕ್ಷದ ನಿರ್ಣಯದ ಪತ್ರದೊಂದಿಗೆ ರಾಜ್ಯಪಾಲರನ್ನು ಭೇಟಿ ಮಾಡಿ, ತಮಗೆ ಬಹುಮತ ಇರುವ ಬಗ್ಗೆ ಮಾಹಿತಿ ನೀಡಿ ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ಈ ವೇಳೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆ.ಸಿ.ವೇಣುಗೋಪಾಲ್, ಸುರ್ಜೇವಾಲಾ ಇದ್ದರು.

ಜೂ.3ರಂದು ಪ್ರಮಾಣವಚನ

ಡಿ.ಕೆ.ಶಿವಕುಮಾರ್ ಅವರ ಪದ ಗ್ರಹಣ ಸಮಾರಂಭಕ್ಕೆ ಈಗಾಗಲೇ ದಿನಾಂಕ ಮತ್ತು ಸಮಯ ನಿಗದಿ ಯಾಗಿದೆ. ಬರುವ ಬುಧವಾರ (ಜೂ.3) ಸಂಜೆ 4.05 ಗಂಟೆಗೆ ಬೆಂಗಳೂರಿನ ಲೋಕಭವನದಲ್ಲಿ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಅವರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಸಮಾರಂಭಕ್ಕೆ ದೆಹಲಿಯ ಹೈಕ ಮಾಂಡ್ ನಾಯಕರು ಹಾಗೂ ನೆರೆಯ ರಾಜ್ಯಗಳ ಮುಖ್ಯಮಂತ್ರಿಗಳು ಸಾಕ್ಷಿಯಾಗಲಿದ್ದಾರೆ.

ಅಜ್ಜಯ್ಯಗೆ ಡಿ.ಕೆ. ಶಿವಕುಮಾರ್ ವಿಶೇಷ ಪೂಜೆ

ಸಿಎಲ್‌ಪಿ ಸಭೆಗೂ ಮುನ್ನವೇ ಡಿ.ಕೆ. ಶಿವಕುಮಾರ್ ತಮ್ಮ ನೆಚ್ಚಿನ ಗುರುಗಳಾದ ಅಜ್ಜಯ್ಯರಿಗೆ ವಿಶೇಷ ಪೂಜೆ ಸಲ್ಲಿಸಿದರು.ಎಲ್ಲರನ್ನೂ ಹೊರಗೆ ಕಳುಹಿಸಿ ವಿಧಾನಸೌಧ ಕೊಠಡಿ ಯಲ್ಲಿ ಆರಾಧ್ಯ ದೈವ ಅಜ್ಜಯ್ಯರಿಗೆ ಪೂಜೆ ಸಲ್ಲಿಸಿದರು. ಬಳಿಕ ಶಾಸಕಾಂಗ ಪಕ್ಷದ ಸಭೆಗೆ ತೆರಳಿದರು.

> **ಚುನಾವಣಾ ಪೂರ್ವದಲ್ಲಿ ಜನರಿಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಗ್ಯಾರಂಟಿ ಯೋಜನೆ ಅನುಷ್ಠಾನ ಮಾಡಿದ್ದೇವೆ. ಇದರೊಂದಿಗೆ ಅತ್ಯುತ್ತಮ ಆಡಳಿತ ನೀಡುವ ಪ್ರಯತ್ನ ಮಾಡಿದ್ದೇನೆ. ಕೇಂದ್ರದ ತಾರತಮ್ಯ ನೀತಿಯ ಹೊರತಾಗಿಯೂ ಉತ್ತಮ ಆರ್ಥಿಕ ನಿರ್ವಹಣೆ ಮಾಡಿದ್ದೇವೆ.**
>
> ■ **ಸಿದ್ದರಾಮಯ್ಯ**, ಮಾಜಿ ಸಿಎಂ

> **ಸಾಮಾಜಿಕ ನ್ಯಾಯದ ಮೇಲಿನ ಸಿದ್ದರಾಮಯ್ಯ ಅವರ ಸಮರ್ಪಣಾ ಭಾವ ಮತ್ತು ಆಡಳಿತಾತ್ಮಕ ಸಾಮರ್ಥ್ಯವು ಪ್ರತಿ ಕಾಂಗ್ರೆಸ್ಸಿಗನಿಗೂ ಮಾದರಿಯಾಗಿದೆ. ಅವರ ಮಾರ್ಗದರ್ಶನದಲ್ಲಿ ನಮ್ಮ ಸರ್ಕಾರ ಮುನ್ನಡೆಯಲಿದೆ**
>
> ■ **ಡಿ.ಕೆ.ಶಿವಕುಮಾರ್,** ನಿಯೋಜಿತ ಸಿಎಂ

> **ಹೈಕಮಾಂಡ್ ನಿರ್ಣಯದಂತೆ ಡಿ.ಕೆ.ಶಿವಕುಮಾರ್ ಅವರನ್ನು ಒಮ್ಮತದಿಂದ ಶಾಸಕಾಂಗ ಸಭೆಯ ನಾಯಕರನ್ನಾಗಿ ಆಯ್ಕೆ ಮಾಡಿದ್ದೇವೆ. ಸಿದ್ದರಾಮಯ್ಯ ಅವರು ಶಿವಕುಮಾರ್ ಹೆಸರನ್ನು ಸೂಚಿಸಿದ್ದು, ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ.**
>
> ■ **ಕೆ.ಸಿ.ವೇಣುಗೋಪಾಲ್,** ಎಐಸಿಸಿ ಪ್ರಧಾನ ಕಾರ್ಯದರ್ಶಿ

ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಹೇಳಿಕೆ

ಆಪರೇಷನ್ ಸಿಂದೂರ್ 2.0ಗೆ ಸಿದ್ಧ

• **ಹೊಸದಿಲ್ಲಿ:** ನಮ್ಮ ಮೂರು ಸೇನಾ ಪಡೆಗಳೂ ಆಪರೇಷನ್ ಸಿಂದೂರ್ 2.0ಗೆ ಸಂಪೂರ್ಣವಾಗಿ ಸಿದ್ಧವಾಗಿವೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಶನಿವಾರ ಹೇಳಿದ್ದಾರೆ.



ಮೂರು ಸೇವೆಗಳು ಭೂಮಿ, ವಾಯು ಮತ್ತು ಸಮುದ್ರವನ್ನು ಮೀರಿ ವಿಸ್ತರಿಸಿರುವ ಆಧುನಿಕ ಮಲ್ಟಿ-ಡೊಮೇನ್ ಯುದ್ಧಕ್ಕೆ ಭಾರತೀಯ ಸೇನೆ ಸನ್ನದ್ಧವಾಗಿದೆ ಎಂದು ತಿಳಿಸಿದ್ದಾರೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (ಎನ್‌ಡಿಎ) 150ನೇ ಕೋರ್ಸ್‌ನ ಪಾಸಿಂಗ್ ಔಟ್ ಪರೇಡ್ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜನರಲ್ ದ್ವಿವೇದಿ, ಪ್ರಸ್ತುತ ಕದನ ವಿರಾಮ ಅಸ್ತಿತ್ವದಲ್ಲಿದ್ದರೂ, ಮುಂದಿನ ಹಂತಕ್ಕೆ ಎಲ್ಲಾ ಮೂರು ಪಡೆಗಳು ತೀವ್ರವಾಗಿ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಆಪರೇಷನ್ ಸಿಂದೂರ ಇನ್ನೂ ಮುಗಿದಿಲ್ಲ. ಅದು ಮುಂದುವರಿದಿದೆ. ಯುದ್ಧಕ್ಕೆ ತಾತ್ಕಾಲಿಕ ಕದನ ವಿರಾಮ ಇದೆ ಅಷ್ಟೇ. ಆದ್ದರಿಂದ ಭಾರತೀಯ ಸೇನೆ ಮತ್ತು ಎಲ್ಲಾ ಮೂರು ಸೇವೆಗಳು ಆಪರೇಷನ್ ಸಿಂದೂರ್ 2.0ಗೆ ಉತ್ತಮವಾಗಿ ತಯಾರಿ ನಡೆಸುತ್ತಿವೆ ಎಂದು ಹೇಳಿದರು.

ಆಧುನಿಕ ಯುದ್ಧಕ್ಕೆ ಸಿದ್ಧ: ಭವಿಷ್ಯದ ಯುದ್ಧವು ಭೂಮಿ, ಕಡಲ ಮತ್ತು ಗಾಳಿಗೆ ಮಾತ್ರ ಸೀಮಿತವಾಗಿರುವುದಿಲ್ಲ, ಬಾಹ್ಯಾಕಾಶ, ಸೈಬರ್ ಮತ್ತು ಅರಿವಿನ ಯುದ್ಧದಂತಹ ಉದಯೋನ್ಮುಖ ಕ್ಷೇತ್ರಗಳಿಂದ ಹೆಚ್ಚು ಪ್ರಭಾವಿತವಾಗಿರುತ್ತದೆ. ಆಧುನಿಕ ಯುದ್ಧಭೂಮಿಗಳು ಹೆಚ್ಚು ಪಾರದರ್ಶಕವಾಗಿವೆ. ಮಿಲಿಟರಿ ಯೋಜಕರು ನಿಯೋಜನೆ ಮತ್ತು ರಕ್ಷಣಾ ಕ್ರಮಗಳ ಬಗ್ಗೆ ಜಾಗರೂಕರಾಗಿರಬೇಕು ಎಂದು ಜನರಲ್ ದ್ವಿವೇದಿ ಹೇಳಿದರು.

➡ ಪುಟ ೪

ದಾವೂದ್ ಜತೆ ನಂಟು | ಅಪಾರ ಮದ್ದುಗುಂಡು, ಶಸ್ತ್ರಾಸ್ತ್ರ ವಶ

ದಾಳಿ ಸಂಚು: 9 ಶಂಕಿತ ಉಗ್ರರ ಸೆರೆ

• **ಹೊಸದಿಲ್ಲಿ:** ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮತ್ತು ಭೂಗತ ಪಾತಕಿ ದಾವೂದ್ ಇಬ್ರಾಹಿಂನೊಂದಿಗೆ ಸಂಪರ್ಕ ಹೊಂದಿರುವ 9 ಶಂಕಿತ ಉಗ್ರರನ್ನು ದಿಲ್ಲಿಯಲ್ಲಿ ಬಂಧಿಸಲಾಗಿದೆ.



ಈ ತಂಡ ದಿಲ್ಲಿ, ಮುಂಬೈ ಮತ್ತು ದೇಶದ ಇತರ ಭಾಗಗಳಲ್ಲಿ ದಾಳಿ ನಡೆಸಲು ಯೋಜಿಸಿತ್ತು ಎಂಬ ಸ್ಫೋಟಕ ಮಾಹಿತಿ ತನಿಖೆಯಲ್ಲಿ ಬಹಿರಂಗಗೊಂಡಿತ್ತು. ಬಂಧಿತ ಆರೋಪಿಗಳು ದಿಲ್ಲಿ, ಮುಂಬೈ ಮತ್ತು ಪಂಜಾಬ್ ನಿವಾಸಿಗಳಾಗಿದ್ದು, ಕೆಲವರು ವಿದೇಶಿ ಪ್ರಜೆಗಳಾಗಿದ್ದಾರೆ ಎಂದು ದಿಲ್ಲಿ ಪೊಲೀಸರ ವಿಶೇಷ ಘಟಕ ತಿಳಿಸಿದೆ. ಬಂಧಿತರ ಬಳಿಯಿದ್ದ ಭಾರೀ ಪ್ರಮಾಣದ ಮದ್ದುಗುಂಡು ಮತ್ತು ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ.

➡ ಪುಟ ೪

ಜಾಲದ ಸಮಗ್ರ ತನಿಖೆ

ಸದ್ಯ ವಿಶೇಷ ಘಟಕವು ಈಗ ಹಣಕಾಸಿನ ಜಾಡು, ಸಂವಹನ ದಾಖಲೆಗಳು ಮತ್ತು ಘಟಕಕ್ಕೆ ಸಂಬಂಧಿಸಿದ ವ್ಯಾಪಕ ಜಾಲದ ಬಗ್ಗೆ ತನಿಖೆ ನಡೆಸುತ್ತಿದೆ. ಲಾಜಿಸ್ಟಿಕ್ಸ್, ಹಣಕಾಸು ಇತ್ಯಾದಿಗಳಿಗಾಗಿ ಆರೋಪಿಗಳು ಮತ್ತು ಸಂಘಟಿತ ಅಪರಾಧ ಜಾಲಗಳ ನಡುವಿನ ಸಂಭಾವ್ಯ ಸಂಪರ್ಕಗಳನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಐಎಸ್‌ಐ ಬೆಂಬಲಿತ ಎಂದು ಹೇಳಲಾಗುವ ದೇಶಭ್ರಷ್ಟ ಗ್ಯಾಂಗ್‌ಸ್ಟರ್ ದಾವೂದ್ ಇಬ್ರಾಹಿಂನ ಭೂಗತ-ಭಯೋತ್ಪಾದಕ ಜಾಲಕ್ಕೆ ಸಂಬಂಧಿಸಿರುವ ಇತ್ತೀಚಿನ ಬಂಧನಗಳ ನಂತರ ಈ ಕಾರ್ಯಾಚರಣೆ ನಡೆದಿದೆ.

ಮಹಿಳೆಯರಿಂದ ಕಾನೂನು ದುರ್ಬಳಕೆ: ಸುಪ್ರೀಂ ಆತಂಕ

• **ಹೊಸದಿಲ್ಲಿ :** ವರದಕ್ಷಿಣೆ ಹಿಂಸೆ, ಕೌಟುಂಬಿಕ ಹಿಂಸೆ, ಪೋಸ್ಕೋ ಹೆಸರಿನಲ್ಲಿ ಪತಿ ಮತ್ತು ಅತ್ತೆ-ಮಾವನ ವಿರುದ್ಧ ಕ್ಷುಲ್ಲಕ ಮತ್ತು ಕಿರುಕುಳ ನೀಡುವ ದೂರುಗಳನ್ನು ದಾಖಲಿಸುವ ಮೂಲಕ ಕಾನೂನನ್ನು ದುರ್ಬಳಕೆ ಮಾಡುವ ಮಹಿಳೆಯರ ಪ್ರಮಾಣ ಹೆಚ್ಚುತ್ತಿರುವ 'ಆತಂಕಕಾರಿ ಪ್ರವೃತ್ತಿ'ಯ ಬಗ್ಗೆ ಸುಪ್ರೀಂಕೋರ್ಟ್ ಶುಕ್ರವಾರ ಕಳವಳ ವ್ಯಕ್ತಪಡಿಸಿದೆ.ಲಾಭದಾಯಕ ಇತ್ಯರ್ಥಗಳಿಗಾಗಿ ಸುಳ್ಳು ದೂರುಗಳನ್ನು ದಾಖಲಿಸುವ ಮೂಲಕ 'ತೋಳುತಿರುಚುವ' ವಿಧಾನ ಅನುಸರಿಸುವ ಪತ್ನಿಯರ ಪ್ರಮಾಣ ಮಿತಿ ಮೀರುತ್ತಿರುವುದರಿಂದಾಗಿ ನಿಜವಾದ ಪ್ರಕರಣಗಳು ಮರೆಮಾಚಲ್ಪಡುತ್ತಿವೆ.

➡ ಪುಟ ೪

ಲಾಭದಾಯಕ ಇತ್ಯರ್ಥಗಳಿಗಾಗಿ ಸುಳ್ಳು ದೂರು ದಾಖಲು





ಈ ಸಲವೂ ಕಪ್ ನಮ್ದೆ?

ಐಪಿಎಲ್ ಫೈನಲ್ ಪಂದ್ಯ ಇಂದು

ರಜತ್ ಬಳಗಕ್ಕೆ ಗುಜರಾತ್ ಟೈಟಾನ್ಸ್ ಎದುರಾಳಿ

ಉಭಯ ತಂಡಗಳ ಮುಖಾಮುಖಿ

ಪಂದ್ಯ **8**

ಆರ್‌ಸಿಬಿ **4**

ಗುಜರಾತ್ **4**

ಗೆದ್ದವರಿಗಿದು ಎರಡನೇ ಕಪ್

- ಆರ್‌ಸಿಬಿ-2025
- ಗುಜರಾತ್-2022

» ಟ್ರೋಫಿ ಉಳಿಸಿಕೊಂಡ ತಂಡ ದಾಖಲೆ ಮೇಲೆ ಆರ್‌ಸಿಬಿ ಕಣ್ಣು

» ಸಮಬಲ ಪೈಪೋಟಿಯಲ್ಲಿ ಗೆದ್ದವರೇ ಕಿಂಗ್!

ಆರ್‌ಸಿಬಿ ಬಲ	ಗುಜರಾತ್ ಬಲ
ವಿರಾಟ್ ಕೊಹ್ಲಿ: 600 ರನ್	ಶುಭಮನ್ ಗಿಲ್: 722 ರನ್
ರಜತ್ ಪಾಟಿದಾರ್: 486 ರನ್	ಸಾಯಿ ಸುದರ್ಶನ್: 710 ರನ್
ಭುವನೇಶ್ವರ್ : 26 ವಿಕೆಟ್	ಕಾಗಿಸೋ ರಬಾಡ: 28 ವಿಕೆಟ್

ಪಂದ್ಯ ವಿವರ

ಯಾವಾಗ: ಭಾನುವಾರ
ಎಲ್ಲಿ: ಅಹಮದಾಬಾದ್, ನರೇಂದ್ರ ಮೋದಿ ಕ್ರೀಡಾಂಗಣ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಶೇ.96.5 ಮನೆಗಳಿಗೆ ಶುದ್ಧ ನೀರು

2023-24ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಟ

• **ಹೊಸದಿಲ್ಲಿ :** 2023-24ನೇ ಸಾಲಿನ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ(ಎನ್‌ಎಫ್‌ಎಚ್‌ಎಸ್-6) ಬಿಡುಗಡೆ ಯಾಗಿದ್ದು, ಇದರಂತೆ ದೇಶದ ಶೇ.98.3ರಷ್ಟು ಮನೆಗಳಿಗೆ ಈಗ ವಿದ್ಯುತ್ ಸೌಲಭ್ಯ ಲಭಿಸಿದ್ದು, ಶುದ್ಧ ಕುಡಿಯುವ ನೀರು ಶೇ.96.5ರಷ್ಟು ಮನೆಗಳಿಗೆ ಲಭಿಸುತ್ತಿದೆ. ಅಂತರ್ಜಾಲ ಬಳಸುವ ಮಹಿಳೆಯರ ಪ್ರಮಾಣ ದುಪ್ಪಟ್ಟಾಗಿದ್ದು, ಶೇ.64.3ಕ್ಕೇರಿದೆ. ಮನೆ ಅಥವಾ ಜಾಗ ಹೊಂದುವ ಮೂಲಕ ಭೂಮಿಯ ಒಡೆತನ ಹೊಂದಿರುವ ಮಹಿಳೆಯರ ಪ್ರಮಾಣವೂ ಶೇ.18.8ಕ್ಕೇರಿದೆ.

➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,90,000**(2,85,000) ಅಪರಂಜಿ ಚಿನ್ನ: **1,54,090**(1,51,390) ಆಭರಣ ಚಿನ್ನ: **1,46,750**(1,44,150) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹95.01

ಕಿರುಸುದ್ದಿ

ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವ



ಕಲಘಟಗಿ: ಪಟ್ಟಣದ ಬೆಂಡಿಗೇರಿ ಓಣಿಯಲ್ಲಿರುವ ಮಲ್ಲಿಕಾರ್ಜುನ ದೇವರ ಜಾತ್ರಾ ಮಹೋತ್ಸವ ಶುಕ್ರವಾರ ವಿಜೃಂಭಣೆಯಿಂದ ಜರುಗಿತು. ಗುರುವಾರ ರಾತ್ರಿ ಮಾಚಾಪುರ ಗ್ರಾಮದ ಭಜನಾ ಮಂಡಳಿ ವತಿಯಿಂದ ಶಿವನಾಮ ಸ್ಮರಣೆ ಹಾಗೂ ಭಜನೆ ಕಾರ್ಯಕ್ರಮಗಳು ಜರುಗಿದವು. ಶುಕ್ರವಾರ ಬೆಳಗ್ಗೆ ದೇವಸ್ಥಾನದ ಅರ್ಚಕ ಮತ್ತು ಪುರೋಹಿತ ವೇ. ಮೂ. ವಿರೇಶಶಾಸ್ತ್ರೀಗಳ ನೇತೃತ್ವದಲ್ಲಿ ಮಲ್ಲಿಕಾರ್ಜುನ ದೇವರಿಗೆ ಮಹಾರುದ್ರಾಭಿಷೇಕ, ನವಗ್ರಹಶಾಂತಿ ಹೋಮ-ಹವನ, ಸಹಸ್ರ ಬಿಲ್ವಾರ್ಚನೆ ಹಾಗೂ ಮಹಾ ಮಂಗಳಾರತಿ ಕಾರ್ಯಕ್ರಮ ಜರುಗಿದವು. ಕಾರ್ಯಕ್ರಮದ ಸಾನ್ನಿಧ್ಯವನ್ನು ಹನ್ನೆರಡುಮಠದ ರೇವಣಸಿದ್ಧ ಮಡಿವಾಳ ಶಿವಚಾರ್ಯರು ವಹಿಸಿದ್ದರು. ಮಧ್ಯಾಹ್ನ ಅನ್ನಸಂತರ್ಪಣೆ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಟ್ರಸ್ಟ್ ಕಮಿಟಿಯವರಾದ ಗಂಗಯ್ಯ ತೆಗೂರಮಠ, ಶಂಕರ್ ಬಡಿಗೇರ್, ಶಿವಾಜಿ ತಹಸೀಲ್ದಾರ್, ಅಣ್ಣಪ್ಪ ತಹಸೀಲ್ದಾರ, ಮಾಂತೇಶ ವಿರಕ್ತಿಮಠ, ಈರಣ್ಣ ಮುಳ್ಳೂರ್, ಈರಣ್ಣ ವಿರಕ್ತಿಮಠ, ಬಸಯ್ಯ ತೇಗೂರಮಠ, ಡಾ. ಎಫ್.ಕೆ. ನಿಗದಿ, ವೇ.ಮೂ. ಸಿದ್ದಯ್ಯ ಪಾಟೀಲ್, ಚನ್ನಯ್ಯ ಹಿರೇಮಠ, ಮಲ್ಲಿಕಾರ್ಜುನ ಒಡೆಯರ, ಹರೀಶ ಗುಡಿಹಾಳ ಸೇರಿದಂತೆ ಕಲಘಟಗಿ ಹಾಗೂ ಬೆಂಡಿಗೇರಿ ಓಣಿಯ ಸದ್ಭಕ್ತ ಮಂಡಳಿ ಇದ್ದರು.

ಜೂ.2ಕ್ಕೆ ಪ್ರತಿಭಟನೆ

ಹುಬ್ಬಳ್ಳಿ: ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲಿನಂತೆ ಸಿಇಟಿ ನಡೆಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಬೇಕು ಹಾಗೂ ನೀಟ್ ರದ್ದುಪಡಿಸಬೇಕು ಎಂದು ಆಗ್ರಹಿಸಿ ಜೂ.2ರಂದು ಬೆಳಗ್ಗೆ 10 ಗಂಟೆಗೆ ನಗರದ ಬಿವಿಬಿ ಎಂಜಿನಿಯರಿಂಗ್ ಕಾಲೇಜ್ ಎದುರು ಪ್ರತಿಭಟನೆ ಆಯೋಜಿಸಲಾಗಿದೆ ಎಂದು ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟದ (ಎನ್‌ಎಸ್‌ಯುಐ) ರಾಜ್ಯ ಘಟಕದ ಕಾರ್ಯದರ್ಶಿ ವಿಶಾಲ ಮಾನೆ ಹೇಳಿದರು. ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2-3 ವರ್ಷಗಳಲ್ಲಿ ಎರಡು ಬಾರಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಇದಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ವೈಫಲ್ಯ ಕಾರಣ. ಇದನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿದರು. ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವುದರಿಂದ ಮರುಪರೀಕ್ಷೆಗೆ ದಿನಾಂಕ ನಿಗದಿಪಡಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದ, ಬಡ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಗಗನಕುಸುಮವಾಗಿದೆ ಎಂದರು.
ಕಾರ್ತಿಕ್ ಕಾಡದೇವರಮಠ, ಕಲ್ಮೇಶ ಉಳ್ಳಾಗಡ್ಡಿ, ಚಂದ್ರಶೇಖರ ಕಂಬಳಿ ಇದ್ದರು.

ಜೂ.6ಕ್ಕೆ ಕ್ಯಾಂಪಸ್ ಸಂದರ್ಶನ

ಧಾರವಾಡ: ಐಟಿಐ ಉತ್ತೀರ್ಣ, ಕೊನೆಯ ವರ್ಷದಲ್ಲಿ ಓದುವ ವಿದ್ಯಾರ್ಥಿಗಳಿಗೆ ಟಾಟಾ ಮೋಟರ್ಸ್, ಇಂಡೋ ಎಂಐಎಂ, ಸ್ನೈಡರ್ ಇಲೆಕ್ಟ್ರಿಕ್, ಟಾಟಾ ಪಾರ್ಟ್ಸ್ ಡೆನೋ ಕಿರ್ಲೋಸ್ಕರ್ ಕಂಪನಿಗಳಲ್ಲಿ ಅಪ್ರೆಂಟೈಶಿಪ್ ತರಬೇತಿಗೆ ಕ್ಯಾಂಪಸ್ ಸದರ್ಶನ ಜೂ.6ರಂದು ಸವದತ್ತಿ ರಸ್ತೆಯ ಜೆಎಸ್ಎಸ್ ಕೌಶಲ್ಯ ಐಟಿಐ ಕಾಲೇಜಿನಲ್ಲಿ ಏರ್ಪಡಿಸಿದೆ. ಮಾಹಿಗೆ ಮೊ:9902679477, ದೂ:0836-2002209ಕ್ಕೆ ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ಪ್ರಬಂಧ-ಚಿತ್ರಕಲಾ ಸ್ಪರ್ಧೆ

ಧಾರವಾಡ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಹವಾಮಾನ ಬದಲಾವಣೆ (ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ) ವಿಷಯದ ಕುರಿತು ನಿಬಂಧ ಹಾಗೂ ಚಿತ್ರಕಲಾ ಸ್ಪರ್ಧೆ ಜೂ.2ರಂದು ವಿದ್ಯಾಗಿರಿಯ ಜೆಎಸ್ಎಸ್ ಉತ್ಸವ ಭವನದಲ್ಲಿ ನಡೆಯಲಿದೆ. ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಹು-ಧಾ ಮಹಾನಗರ ಪಾಲಿಕೆಯ ಸಹಯೋಗದಲ್ಲಿ ಈ ಸ್ಪರ್ಧೆ ನಡೆಯಲಿದ್ದು, ವಿಜೇತರಿಗೆ ಜೂ.5ಕ್ಕೆ ನಡೆಯುವ ಸಮಾರಂಭದಲ್ಲಿ ಬಹುಮಾನ ಮತ್ತು ಪ್ರಶಸ್ತಿ ವಿತರಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಧಾರವಾಡ: ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ವಿವಿಧ ಘಟಕಗಳಾದ ಹೊಸ ಪ್ರದೇಶ ವಿಸ್ತರಣೆ, ಹೂ ಬೆಳಗಳ ಪ್ರದೇಶ ವಿಸ್ತರಣೆ, ತರಕಾರಿ ಬೆಳೆಗಳ ಪ್ರದೇಶ ವಿಸ್ತರಣೆ, ಈರುಳ್ಳಿ ಶೇಖರಣಾ ಘಟಕ, ವೈಯಕ್ತಿಕ ಕೃಷಿ ಹೊಂಡ, ತಳ್ಳುಗಾಡಿ, ಟ್ರ್ಯಾಕ್ಟರ್‌ಗಳಿಗೆ ಸಹಾಯಧನಕ್ಕೆ 2026-27ನೇ ಸಾಲಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ರೈತರು ಜೂ.15ರೊಳಗೆ ನವಲಗುಂದ ಹಿರಿಯ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಲು ಪ್ರಕಟಣೆ ತಿಳಿಸಿದೆ.



ಹುಬ್ಬಳ್ಳಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಕಪ್ ಗೆಲುವು ಸಾಧಿಸಲಿ ಎಂದು ನಗರದ ನೆಹರು ಮೈದಾನದಲ್ಲಿ ಕ್ರಿಕೆಟ್ ಅಭಿಮಾನಿಗಳು ಶುಭ ಹಾರೈಸಿದರು. ರಾಜು ಕೋರ್ಯಾಣಮಠ, ಸಂದೀಪ ಅನ್ವೇಕರ, ಮಹೇಶ ಲಕಾಜನವರ, ಸಂಜೀವ ಇದ್ದರು.

ಕನಿಷ್ಠ ವೇತನ ತಕ್ಷಣ ಜಾರಿಗೆ ಆಗ್ರಹ

ಹುಬ್ಬಳ್ಳಿ: ರಾಜ್ಯ ಸರ್ಕಾರ ಆದೇಶಿಸಿದ ಕನಿಷ್ಠ ವೇತನ ಹು-ಧಾ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿ ಧಾರವಾಡ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪೌರಕಾರ್ಮಿಕರ ಹಾಗೂ ನೌಕರರ ಸಂಘದ ಸದಸ್ಯರು ಪಾಲಿಕೆ ಉಪ ಆಯುಕ್ತೆ ಅನುರಾಧ ವಸ್ತ್ರದ ಅವರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರ ಕನಿಷ್ಠ ವೇತನ ಪರಿಷ್ಕರಣೆ ಅಂತಿಮ ಅಧಿಸೂಚನೆಯನ್ನು ಮೇ 22ರಂದು ಆದೇಶ ಹೊರಡಿಸಿದೆ. ಈ ಪ್ರಕಾರ ವಲಯ-2 ರಲ್ಲಿ ಬರುವ ಅಕುಶಲ ಕಾರ್ಮಿಕರಿಗೆ 899 ರೂ. ಹಾಗೂ ತಿಂಗಳಿಗೆ 23,376 ಕನಿಷ್ಠ ವೇತನ ನಿಗದಿಪಡಿಸಿ ಆದೇಶ ನೀಡಿದೆ. ಈ ಹಿಂದಿನ ಮೂಲ ವೇತನ 17,3036 ರೂ. ಇತ್ತು. ಈಗ 23,376 ಕ್ಕೆ ವೇತನ ಹೆಚ್ಚಳವಾಗಿದೆ. ಮಹಾನಗರ ಪಾಲಿಕೆ ನೇರ ವೇತನ -01, ನೇರ ವೇತನ -02 ಒಳಚರಂಡಿ ಸ್ವಚ್ಚತಾ ಕಾರ್ಮಿಕರು, ಆಟೋ ಟಿಪ್ಪರ ಕಸದ ವಾಹನ ಚಾಲಕರಿಗೆ ಮೇ ತಿಂಗಳಿನಿಂದ ಅನ್ವಯ ವಾಗುವಂತೆ ವೇತನ ಪಾವತಿಸಬೇಕು ಎಂದು ಸಂಘದ ಜಿಲ್ಲಾಧ್ಯಕ್ಷ ವಿಜಯ ಗುಂಟ್ರಾಲ್ ಆಗ್ರಹಿಸಿದರು.

ಗಂಗಮ್ಮ ಸಿದ್ರಾಮಪುರ, ಗಾಳೆಪ್ಪ ದಾಸಲಕೇರಿ, ಕನಕಪ್ಪ ಕೋಟಬಾಗಿ, ಅನಿತಾ ಈನಗೊಂಡ, ಲಕ್ಷ್ಮೀ ಬೇತಾಪಲ್ಲಿ, ಪವನ ಸಗಬಾಲ, ನರಸಿಂಹ ಮಾದರ, ಪಾರವ್ವ ಹೊಸಮನಿ, ಮಹೇಶ ಮಾದರ, ದತಪ್ಪ ಆಪುಸಪೇಟ್ ಇದ್ದರು.



ಹುಬ್ಬಳ್ಳಿ: ರಾಜ್ಯ ಸರ್ಕಾರ ಆದೇಶಿಸಿದ ಕನಿಷ್ಠ ವೇತನ ಹು-ಧಾ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ತಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿ ಧಾರವಾಡ ಜಿಲ್ಲಾ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಪೌರಕಾರ್ಮಿಕರ ಹಾಗೂ ನೌಕರರ ಸಂಘದ ಸದಸ್ಯರು ಪಾಲಿಕೆ ಉಪ ಆಯುಕ್ತೆ ಅನುರಾಧ ವಸ್ತ್ರದ ಅವರಿಗೆ ಮನವಿ ಸಲ್ಲಿಸಿದರು.

ಜಾನಪದ ವಿವಿ ಅಕ್ರಮ | ವಜಾಕ್ಕೆ ಒತ್ತಾಯ | ಜು.18ರಿಂದ ಧರಣಿ

ಕುಲಪತಿ ಬಂಧನಕ್ಕೆ ಆಗ್ರಹ



ಧಾರವಾಡ: ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಹಳ್ಳ ಹಿಡಿಸಿದ ಕುಲಪತಿ ಡಾ. ಟಿ.ಎಂ.ಭಾಸ್ಕರ್ ಅವರನ್ನು ನಿವೃತ್ತಿಗೂ ಮುನ್ನ ಬಂಧಿಸಬೇಕು. ಅಲ್ಲದೇ ಅಕ್ರಮ ನೇಮಕಾತಿ ಕಿಂಗ್‌ಪಿನ್ ಸಹಾಯಕ ಕುಲಸಚಿವ ಜಹಜಾನ್ ಮುದಕವಿ ವಜಾಕ್ಕೆ ಕರ್ನಾಟಕ ರಾಜ್ಯ ಜಾನಪದ ಸ್ನಾತಕೋತ್ತರ ಹಾಗೂ ಸಂಶೋಧಕರ ಒಕ್ಕೂಟವು ಒತ್ತಾಯಿಸಿದೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟ ಅಧ್ಯಕ್ಷ ಡಾ.ಶಿವಸೋಮಣ್ಣ ನಿಟ್ಟೂರು, ಉಪಾಧ್ಯಕ್ಷ ಡಾ.ನಾಗರಾಜ ಎಸ್ ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಬಸವರಾಜ ದುಗಾಣಿ ಅವರು ವಿಶ್ವವಿದ್ಯಾಲಯದಲ್ಲಿ ನಡೆದಿರುವ ಸಾಲು ಸಾಲು ಭ್ರಷ್ಟಾಚಾರ, ನಿಯಮಗಳ ಉಲ್ಲಂಘನೆ ಹಾಗೂ ಅಕ್ರಮಗಳು ನಡೆದಿದೆ ಎಂದು ಆರೋಪಿಸಿದರು.

ವರದಿ ಸಲ್ಲಿಕೆಗೆ ಅಡ್ಡಿ

ಅಕ್ರಮ ನೇಮಕಾತಿಗಳ ಕುರಿತು ತನಿಖೆ ಪರ ಸರ್ಕಾರ ಉನ್ನತ ಶಿಕ್ಷಣ ಪರಿಷತ್, ಉನ್ನತ ಶಿಕ್ಷಣ ಇಲಾಖೆ ಬೆಳಗಾವಿ ಪ್ರಾದೇಶಿಕ ಜಂಟಿ ಆಯುಕ್ತ ಮತ್ತು ನಿವೃತ್ತ ನ್ಯಾಯಾಧೀಶರ ನೇತೃತ್ವದ ಆಯೋಗಗಳನ್ನು ರಚಿಸಲಾಗಿತ್ತು. ಈ ಆಯೋಗ ಸರ್ಕಾರಕ್ಕೆ ತನಿಖಾ ವರದಿ ಸಲ್ಲಿಕೆ ಮಾಡದಂತೆ ಎಚ್ಕೆ ಪಾಟೀಲ ಅಡ್ಡಿಪಡಿಸಿದ್ದಾಗಿ ಒಕ್ಕೂಟ ಅಧ್ಯಕ್ಷ ಡಾ.ಶಿವಸೋಮಣ್ಣ ನಿಟ್ಟೂರು, ಉಪಾಧ್ಯಕ್ಷ ಡಾ.ನಾಗರಾಜ ಎಸ್ ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಬಸವರಾಜ ದುಗಾಣಿ ದೂರಿದರು.

> ಜು.18, 19ರಂದು ಜಾನಪದ ವಿಶ್ವವಿದ್ಯಾಲಯದ ಮುಂಭಾಗ ಬೃಹತ್ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ.
> ■ ಡಾ. ಶಿವಸೋಮಣ್ಣ ನಿಟ್ಟೂರು, ಒಕ್ಕೂಟದ ಅಧ್ಯಕ್ಷ

ಎಚ್‌ಕೆ ವಿರುದ್ಧ ಆರೋಪ

ವಿಶ್ವವಿದ್ಯಾಲಯದಲ್ಲಿ ನಡೆದ ಎಲ್ಲ ಅಕ್ರಮಗಳಿಗೆ ಮಾಜಿ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರ ಕೃಪಕಾಟಕ್ಷವೇ ಕಾರಣ. ಕಾನೂನು ಕಾಪಾಡಬೇಕಾದ ಸಚಿವರೇ ಭ್ರಷ್ಟರ ಬನ್ನಿಗೆ ನಿಂತಿರುವುದು ದುರ್ದೈವ. ತಮ್ಮ 40 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಇಂತಹ ಅಕ್ರಮ ಮಾಡಿರುವುದು ಖಂಡನೀಯ ಎಂದು ಒಕ್ಕೂಟ ಅಧ್ಯಕ್ಷ ಡಾ.ಶಿವಸೋಮಣ್ಣ ನಿಟ್ಟೂರು, ಉಪಾಧ್ಯಕ್ಷ ಡಾ.ನಾಗರಾಜ ಎಸ್ ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಬಸವರಾಜ ದುಗಾಣಿ ಆರೋಪಿಸಿದರು.

- ಜಾನಪದ ವಿವಿಯಲ್ಲಿ ಯುಜಿಸಿ ಹಾಗೂ ವಿಶ್ವವಿದ್ಯಾಲಯದ ಅಧಿನಿಯಮಗಳನ್ನು ಸಂಪೂರ್ಣ ಗಾಳಿಗೆ ತೂರಲಾಗಿದೆ
- ಸಿಂಡಿಕೇಟ್ ಸದಸ್ಯರಿಗೂ ಕನಿಷ್ಠ ಗೌರವ ನೀಡುತ್ತಿಲ್ಲ
- ಇದೇ ಧೋರಣೆ ಮುಂದುವರಿದರೆ ಮುಂದಿನ ಅರ್ಧ ಶತಮಾನ ವಿಶ್ವವಿದ್ಯಾಲಯ ಚೇತರಿಸಿಕೊಳ್ಳದಂತೆ ಹಾಳಾಗಲಿದೆ ಎಂದ ಒಕ್ಕೂಟ ಅಧ್ಯಕ್ಷ ಡಾ.ಶಿವಸೋಮಣ್ಣ ನಿಟ್ಟೂರು, ಉಪಾಧ್ಯಕ್ಷ ಡಾ.ನಾಗರಾಜ ಎಸ್ ಹಾಗೂ ಪ್ರಧಾನ ಕಾರ್ಯದರ್ಶಿ ಡಾ.ಬಸವರಾಜ ದುಗಾಣಿ

ಶಿಕ್ಷಕ ವೃತ್ತಿ ಗೌರವಯುತ ಸೇವೆ: ಗಡದಿನ್ನಿ

ಹುಬ್ಬಳ್ಳಿ: ಇಲ್ಲಿನ ವಿದ್ಯಾನಗರ ಕನಕದಾಸ ಕಾಲೇಜಿನಲ್ಲಿ ಶನಿವಾರ ಇತ್ತೀಚೆಗೆ ನಿಧನರಾದ ಕರ್ನಾಟಕಮಾಧ್ಯಮಿಕಶಾಲಾನೌಕರರಸಂಘದಸಂಸ್ಥಾಪಕಪದಾಧಿಕಾರಿಗಳಾದದಿ.ಸಿ.ವಿ.ಹೂಗಾರ ಹಾಗೂ ಕೆ.ವಿ.ರಾಯಚೂರ ಅವರಿಗೆ ನುಡಿ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮವನ್ನುದ್ದೇಶಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಶ್ರೀಶೈಲ ಗಡದಿನ್ನಿ ಅವರು, ಶಿಕ್ಷಕ ವೃತ್ತಿ ತುಂಬಾ ಗೌರವಯುತ ಸೇವೆಯಾಗಿದೆ. ಈ ಸೇವೆ ಸಲ್ಲಿಸಿದ ದಿ.ಸಿ.ವಿ.ಹೂಗಾರ ಹಾಗೂ ಕೆ.ವಿ.ರಾಯಚೂರ ಅವರ ನಮ್ಮೆಲ್ಲರಿಗೂ ಆದರ್ಶ ಪ್ರಾಯರಾದ್ದಾರೆ ಎಂದರು.

ಅಂದಿನ ದಿನಗಳಲ್ಲಿ ಹೋರಾಟಕ್ಕೆ ಮುಂಚೂಣಿ ಹಾಗೂ ಸಂಘದ ಸಂಸ್ಥಾಪಕರೆಂದರೆ ಅದು ದಿ.ಕೆ.ವಿ.ರಾಯಚೂರ ಹಾಗೂ ಸಿ.ವಿ.ಹೂಗಾರ ಅವರು. ದಿನನಿತ್ಯ ಸೇವೆ ಸಲ್ಲಿಸುವ ಇಡೀ ಶಿಕ್ಷಕ ವೃಂದ ಅವರ ಹೋರಾಟ ಹಾಗೂ ಅವರ ಸೇವೆಯನ್ನು ಸ್ಮರಣೆ ಮಾಡಿಕೊಳ್ಳಲೇಬೇಕೆಂದರು.

ನಿವೃತ್ತ ಶಿಕ್ಷಕ ಎಲ್.ಕೆ.ಅದ್ವಾನಿಮಠ ಮಾತನಾಡಿ, 1970 ರಿಂದ 1990ರ ವರೆಗೆ ನಮ್ಮ ಸಂಘದ ಹೆಸರು ಕೇಳಿದರೆ ಎಲ್ಲರೂ ನಡಗುತ್ತಿದ್ದರು. ಖಾಸಗಿ ಶಿಕ್ಷಣ ಸಂಸ್ಥೆಗಳ ದಬ್ಬಾಳಿಕೆಯಲ್ಲಿಬಹಳಷ್ಟು ಜನರು ನಲಗಿದವರು ಈ ಸಂಘದಲ್ಲಿದ್ದಾರೆ. ಈ ಶಿಕ್ಷಕರ ಸಂಘವನ್ನು ಆರಂಭಿಸಬೇಕೆಂದು ಮೊದಲು ದಿ.ಕೆ.ವಿ.ರಾಯಚೂರ ಅವರು ಹಾಗೂ ಸಿ.ವಿ.ಹೂಗಾರ ಅವರಿಂದಲೇ ಆರಂಭಗೊಂಡ ಸಂಘ ಇಂದು ಇಡೀ ನಾಡಿನಾದ್ಯಂತ ಹೆಮ್ಮರವಾಗಿ ಬೆಳೆದು ನಿಂತಿದೆ. ಅಂದು ನಡೆದ ಹೋರಾಟದ ಫಲವೇ ಇಂದು ನಮ್ಮ ಜೀವನ ಸುಖಕರವಾಗಿ ನಡೆಯುತ್ತಿದೆ ಎಂದರು.

ದಿ.ಸಿ.ವಿ.ಹೂಗಾರ ಅವರ ಪುತ್ರಿ ಶಿಕ್ಷಕಿ ಭಾರತಿ ಹೂಗಾರ ಮಾತನಾಡಿ, ನಿಸ್ವಾರ್ಥ ಜೀವಿ, ಸಮಾಜಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರ ಮಗಳಾಗಿ ಜನ್ಮ ಪಡೆದಿರುವುದು ನನ್ನ ಸೌಭಾಗ್ಯ. ಇಂದಿನ ವ್ಯವಸ್ಥೆಗೆ ನಾವುಗಳು ಹೊಂದಾಣಿಕೆ ಆಗಲೇಬೇಕಾಗಿದೆ ಎಂದರು. ಕಸಾಪಾ ಜಿಲ್ಲಾಧ್ಯಕ್ಷ ಲಿಂಗರಾಜ ಅಂಗಡಿ ಮಾತನಾಡಿ, ಇಬ್ಬರು ಮಹನೀಯರು ತಮ್ಮ ವೃತ್ತಿ ಜೀವನದಲ್ಲಿ ಸಾವಿರಾರ ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದಾರೆ ಎಂದರು. ಆರ್.ರಂಜನ್, ಎಸ್.ಎಲ್. ಹೊಸಮನಿ, ಎಸ್.ಎನ್.ಸಂಜೀವ, ವಿಶ್ವಾಸ ಜಾಧವ, ಶಿವಯೋಗಿ ಅಂಗಡಿ ಮಾತನಾಡಿದರು. ಎಸ್.ಎನ್.ನೆಗಳೂರಮಠ, ಪಿ.ಬಿ.ಸುಣಗಾರ, ಕೆ.ಟಿ.ದೇಶಪಾಂಡೆ, ಬಸವರಾಜ ದಳವಾಯಿ, ಜಿ.ಬಿ.ಬೂದನೂರ, ಆನಂದ ಕುಲಕರ್ಣಿ, ಡಾ.ಎಚ್.ವಿ.ಬೆಳಗಲಿ, ಸಿ.ಎಂ.ತೆಂಬದ, ಬಸವರಾಜ ದೇವರಮನಿ, ದಿ.ಸಿ.ವಿ.ಹೂಗಾರ ಅವರ ಪತ್ನಿ ಶಾಂತಾ ಹೂಗಾರ, ಪುತ್ರ ಬಸವರಾಜ ಹೂಗಾರ, ಅಳಿಯ ವಿಜಯ ಹೂಗಾರ ಸೇರಿದಂತೆ ಮೊದಲಾದವರಿದ್ದರು. ಜಾನಪದ ಕಲಾವಿದ ಹಾಗೂ ಶಿಕ್ಷಕ ರಾಮು ಮೂಲಗಿ ಸ್ವಾಗತ ಗೀತೆ ಪ್ರಸ್ತುತ ಪಡಿಸಿದರು. ಆನಂದ ಕುಲಕರ್ಣಿ ಸ್ವಾಗತಿಸಿದರು.



ಕಮಡೊಳ್ಳಿಯಲ್ಲಿ ತಂಬಾಕು ವಿರೋಧಿ ದಿನಾಚರಣೆ

ಕುಂದಗೋಳ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ತಾಲೂಕಿನ ಕಮಡೊಳ್ಳಿ ಗ್ರಾಮದಲ್ಲಿ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ ಶನಿವಾರ ಜರುಗಿತು.

ಕಮಡೊಳ್ಳಿಯಲ್ಲಿ ಯೋಜನಾಧಿಕಾರಿ ಜಾಫರ ಪ್ರಾಸ್ತಾವಿಕವಾಗಿ ಮಾತನಾಡಿ, ತಂಬಾಕಿನಿಂದ ಆಗುವ ಪರಿಣಾಮ, ಆದರಿಂದ ಕುಟುಂಬ ಹಾಗೂ ಮಕ್ಕಳ ಮೇಲಾಗುವ ಪರಿಣಾಮದ ಬಗ್ಗೆ ವಿವರಿಸಿದರು. ಸಂಪನ್ಮೂಲ ವ್ಯಕ್ತಗಳಾಗಿ ಆಗಮಿಸಿದ ಶಿಕ್ಷಕಿ ಜಯಶ್ರೀ ಅವರು ತಂಬಾಕು ಮುಕ್ತ ಮಾಡಲು ಕ್ರಮಗಳ ಮಾಹಿತಿ ನಿಡಿದರು. ಒಕ್ಕೂಟದ ಅಧ್ಯಕ್ಷೆ ಪರ್ವೀನ ಬಾನು ಹಾಗೂ ವಲಯ ಮೇಲ್ವಿಚಾರಕಿ ರೂಪಾ, ಕೃಷಿ ಮೇಲ್ವಿಚಾರಕ ರವಿ ಪತ್ತಾರ, ಸ್ವ ಸಹಾಯ ಸಂಘದ ಸದಸ್ಯರಿದ್ದರು.



ಸಂತೋಷ ಲಾಡ್‌ಗೆ ಡಿಸಿಎಂ ನೀಡಲು ಆಗ್ರಹ

ಧಾರವಾಡ: ರಾಜ್ಯದ ನೂತನ ಸಚಿವ ಸಂಪುಟದಲ್ಲಿ ಮರಾಠ ಸಮಾಜ ನಾಯಕ ಸಂತೋಷಲಾಡ್ ಅವರಿಗೆ ಉಪಮುಖ್ಯಮಂತ್ರಿ, ಶಾಸಕ ಶ್ರೀನಿವಾಸ ಮಾನೆಗೆ ಸಚಿವ ಸ್ಥಾನ ನೀಡಲು ಮರಾಠ ಸಮಾಜದ ಮುಖಂಡ ಭೀಮಪ್ಪ ಕಾಸಾಯಿ ಆಗ್ರಹಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಜಾತ್ಯಾತೀತ ನಾಯಕರಾದ ಸಂತೋಷ ಲಾಡ್ ಅವರು ಸದಾ ಬಡವರು, ಕಾರ್ಮಿಕರು, ದೀನದಲಿತಪರ ಕೆಲಸ ಮಾಡುತ್ತಾ ಬಂದಿದ್ದಾರೆ. ಅವರ ಅನುಭವ ಮತ್ತು ಜನಪರ ಕಾಳಜಿಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯಿಸಿದ್ದಾರೆ. ಅಲ್ಲದೇ ಎರಡು ಬಾರಿ ಶಾಸಕರಾಗಿ ಹಾಗೂ ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಸಮಾಜಮುಖಿಯಾಗಿ, ಪಕ್ಷದ ನಿಷ್ಠಾವಂತ ಕಾರ್ಯಕರ್ತ ಶ್ರೀನಿವಾಸ ಮಾನೆ ಅವರಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿದ್ದಾರೆ.

ಡಾ.ಬೂದಿಹಾಳಗೆ ಅಭಿನಂದನೆ ಇಂದು: ಹಿರೇಮಠ

ಧಾರವಾಡ: ಸಾರಿಗೆ ಸಂಸ್ಥೆಯ ಧಾರವಾಡ ನಗರಘಟಕದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಎಲ್.ಆರ್.ಬೂದಿಹಾಳ(ಯಡಹಳ್ಳಿ) ಅವರ ಅಭಿನಂದನಾ ಸಮಾರಂಭ ಮೇ 31ರ ಮಧ್ಯಾಹ್ನ 12ಕ್ಕೆ ವಿದ್ಯಾವರ್ಧಕ ಸಂಘದ ನಾಡೋಜ ಡಾ.ಪಾಟೀಲ ಪುಟ್ಟಪ್ಪ ಭವನದಲ್ಲಿ ಹಮ್ಮಿಕೊಂಡಿದ್ದಾಗಿ ಜೀವಿ ಕಲಾಬಳಗದ ಅಧ್ಯಕ್ಷ ಗದಗಯ್ಯ ಹಿರೇಮಠ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಪ್ಪಿನಬೆಟಗೇರಿಯ ಕುಮಾರ ವಿರೂಪಾಕ್ಷ ಸ್ವಾಮೀಜಿ ಸಾನ್ನಿಧ್ಯದ ಸಮಾರಂಭಕ್ಕೆ ಮನಸೂರಿನ ಬಸವರಾಜ ದೇವರು ಚಾಲನೆ ನೀಡಲಿದ್ದು, ಡಾ.ಬೂದಿಹಾಳ ರಚಿಸಿದ ಸಾಮಾಜಿಕ ನಾಟಕ ಕೃತಿ ಬೀಳಗಿ ಶಾಸಕ ಜೆ.ಟಿ.ಪಾಟೀಲ ಬಿಡುಗಡೆಗೊಳಿಸಲಿದ್ದು, ವಿವೇಕಾನಂದ ವಿಶಜ್ಜ ಅಧ್ಯಕ್ಷತೆ ವಹಿಸುವರು. ಶಾಸಕ ಎನ್.ಎಚ್.ಕೋನರೆಡ್ಡಿ, ಕೆ.ಎಂ.ಎಫ್ ನಿರ್ದೇಶಕಿ ಶಿವಲೀಲಾ ಕುಲಕರ್ಣಿ, ಗಣೇಶ ರಾಠೋಡ, ರಂಜಾನ್ ದರ್ಗಾ, ಶಂಕರ ಹಲಗತ್ತಿ, ಸತೀಶ ತುರುಮರಿ, ಡಾ. ಶಶಿಧರ ನರೇಂದ್ರ, ಇನಾಯತ್ ಬಾಗವಾನ, ಕೆಂಪಣ್ಣ ಗುಡ್ಡನ್ನವರ, ಗುರುಪ್ರಸಾದ ಹೊಗಾಡಿ, ಪ್ರವೀಣಕುಮಾರ ಇಡೂರ, ಬಿ.ಆರ್. ಶ್ರೀನಿವಾಶ ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ. ಎಲ್.ಆರ್. ಬೂದಿಹಾಳ, ರಾಮು ಮೂಲಗಿ, ಸಿ.ಎಸ್. ಪಾಟೀಲ್, ಶಿವಾನಂದ ಬೆಂಗೇರಿ, ರಾಜೇಶ್ವರಿ ಕಿರೇಸೂರ ಸೇರಿದಂತೆ ಇತರರಿದ್ದರು.

ಶ್ರೀನಿವಾಸ್‌ಗೆ ಸಚಿವ ಸ್ಥಾನ ನೀಡಲು ಆಗ್ರಹ

ಧಾರವಾಡ: ವಿಧಾನ ಪರಿಷತ್ ಸದಸ್ಯ ಹಾಗೂ ಯಾದವ ಸಂಘದ ರಾಜ್ಯಾಧ್ಯಕ್ಷ ಡಿ.ಟಿ. ಶ್ರೀನಿವಾಸ್ ಅವರಿಗೆ ನೂತನ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಯಾದವ ಸಂಘದ ಧಾರವಾಡ ಜಿಲ್ಲಾ ಗೌರವಾಧ್ಯಕ್ಷ ಕೆ. ರಂಗಸ್ವಾಮಿ ಒತ್ತಾಯಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ರಾಜ್ಯದಲ್ಲಿ ಸುಮಾರು 40 ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಯಾದವ, ಗೊಲ್ಲ ಸಮುದಾಯವು ಮೊದಲಿಂದಲೂ ರಾಜಕೀಯ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿದೆ ಎಂದರು. ಸಾಮಾಜಿಕ ನ್ಯಾಯ, ಹಿಂದುಳಿದ ವರ್ಗಗಳ ಅಭಿವೃದ್ಧಿ, ಯುವ ಸಬಲೀಕರಣ ಮತ್ತು ಸಂಘಟನಾ ಕ್ಷೇತ್ರದಲ್ಲಿ ಡಿ.ಟಿ. ಶ್ರೀನಿವಾಸ ಅಪಾರ ಸೇವೆ ಸಲ್ಲಿಸಿದ್ದು, ಅವರ ರಾಜಕೀಯ ಅನುಭವ, ಜನಪರ ಕಾಳಜಿ ಪರಿಗಣಿಸಿ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು.

ರಾಜ್ಯದಲ್ಲಿ ಸುಮಾರು 95 ಸಣ್ಣ-ಪುಟ್ಟ ಜಾತಿಗಳು ಒಳಗೊಂಡ ಯಾದವ ಅಹಿಂದ ವರ್ಗಗಳನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಶ್ರೀನಿವಾಸ್ ಅವರ ಶ್ರಮಿಸುತ್ತಿದ್ದು, ಅವರಿಗೆ ನೂತನ ಸಂಪುಟದಲ್ಲಿ ಸ್ಥಾನಮಾನ ನೀಡುವಂತೆ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಕೃಷ್ಣಾ ನಂದನವಾಡಿ, ಎಚ್.ಪರಮೇಶ್ವರ, ಅಶೋಕ ಹನಮೂರ, ರೋಹಿತ ಗಂಜಿಗಟ್ಟಿ, ಗುರುನಾಥ ಹುಲಗೂರ, ಆರ್.ಎಸ್.ಪಾಟೀಲ ಇದ್ದರು.



ಹುಬ್ಬಳ್ಳಿ: ಡಿ.ಕೆ.ಶಿವಕುಮಾರ ಅವರು ಮುಖ್ಯ ಮಂತ್ರಿ ಆಗುತ್ತಾರೆ ಎಂದು ಕೇಶ್ವಾಪುರ ಸರ್ವೋದಯ ವೃತ್ತದಲ್ಲಿ ಮುಖಂಡರು ಹಾಗೂ ಅವರ ಬೆಂಬಲಿಗರು ಸಂಭ್ರಮಾಚರಣೆ ಮಾಡಿದರು.



ಧಾರವಾಡ: ಸತ್ತೂರಿನ ನಾರಾಯಣ ಪಾರಾಯಣ ಬಳಗದಿಂದ ಭಾಗವತ ಸಪ್ತಾಹದ ಮಂಗಲೋತ್ಸವ ನಡೆಯಿತು. ಪಾರಾಯಣ ಬಳಗದ ಸದಸ್ಯರು ಹರಿವಾಯು ಗುರುಗಳ ಸ್ತೋತ್ರ ಪಾರಾಯಣ ಮಾಡಿದರು. ವಿದ್ವಾಂಸ ಡಾ. ನಾರಾಯಣ ಆಚಾರ್ಯ ಧಳ್ಕೇಡ್, ರಘೋತ್ತಮ ಅವಧಾನಿ, ಕೃಷ್ಣ ಹುನಗುಂದ, ಎಲ್.ವಿ.ಜೋಶಿ, ಡಾ. ರವಿ ಧುಮ್ಮವಾಡ, ಡಾ.ಗಿರೀಶ ಕುಲಕರ್ಣಿ, ಪ್ರಕಾಶ ದೇಸಾಯಿ, ಗುರುನಾಥ ಸರದೇಶಮುಖ, ವಿಠ್ಠಲ ಅಂಬೇಕರ್, ಆನಂದ ದೇಶಪಾಂಡೆ ಸೇರಿ ಅನೇಕರು ಇದ್ದರು.

ಜೂ.1ರಂದು ಮರಾಠಾ ಮಂಡಳ ವಿರುದ್ಧ ಪ್ರತಿಭಟನೆ



ಧಾರವಾಡ: ಮರಾಠಾ ವಿದ್ಯಾಪ್ರಸಾರಕ ಮಂಡಳದ ಬೈಲಾ ನಿಯಮಗಳು ಗಾಳಿಗೆ ತೂರಿ, ಪುನಃ ಚುನಾವಣೆಗೆ ಸ್ಪರ್ಧಿಸುವ ಹಾಲಿ ಆಡಳಿತ ಮಂಡಳಿ ಸರ್ವಾಧಿಕಾರಿ ಧೋರಣೆ ಖಂಡಿಸಿ ಜೂ.1ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡ ಬಸವರಾಜ ಜಾಧವ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೈಲಾ ಪ್ರಕಾರ ಸತತ ಎರಡು ಅವಧಿ ಅಧಿಕಾರ ನಡೆಸಿದ ನಂತರವೂ ಅವಧಿಪೂರ್ವವೇ ಆಡಳಿತಮಂಡಳಿವಿಸರ್ಜಿಸಿ, ಸ್ವಾರ್ಥ ಸಾಧನೆಗಾಗಿ ಪುನಃ ಚುನಾವಣೆಗೆ ಸ್ಪರ್ಧಿಸುವ ಹಾಲಿ ಆಡಳಿತ ಮಂಡಳಿ ಸರ್ವಾಧಿಕಾರಿ ಧೋರಣೆ ಖಂಡನೀಯ. ಮೌಲ್ಯಗಳನ್ನು ಎತ್ತಿಹಿಡಿಯಬೇಕಾದ ಆಡಳಿತ ಮಂಡಳಿ, ಕೇವಲ ಅಧಿಕಾರದ ಆಸೆಯಿಂದ ನಿಯಮಗಳನ್ನು ಗಾಳಿಗೆ ತೂರಿದೆ. ಸಮಾಜದ ಸದಸ್ಯರ ಹಕ್ಕು, ಅಭಿಪ್ರಾಯ ಮತ್ತು ಅವರು ಇಟ್ಟಿದ್ದ ವಿಶ್ವಾಸ ಸಂಪೂರ್ಣ ತುಳಿಯಲಾಗಿದೆ ಎಂದು ಆರೋಪಿಸಿದರು.

ಸಮಾಜದ ಆಸ್ತಿ ಮತ್ತು ಗೌರವ ಕಾಪಾಡಬೇಕಾದವರು ತಮಗೆ ಬೇಕಾದಂತೆ ವರ್ತಿಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸಮಾಜದ ಜನರು ಇನ್ಮುಂದೆ ಮೌನ ವಹಿಸಬಾರದು. ಪ್ರತಿಯೊಬ್ಬರೂ ಜಾಗೃತಿ ಹೊಂದಬೇಕು. ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕು ಎಂದರು.

ಸಮಾಜದ ಹಕ್ಕುಗಳು ತುಳಿಯುತ್ತಿರುವ ಆಡಳಿತ ಮಂಡಳಿಗೆ ತಕ್ಕ ಪಾಠ ಕಲಿಸಲು ಮತ್ತು ಸಮಾಜ ಬಾಂಧವರಲ್ಲಿ ಜಾಗೃತಿ ಮೂಡಿಸಲು ಜೂನ್ 1ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಸಮಾಜದ ಹಿತಚಿಂತಕರು, ಸದಸ್ಯರು ಹಾಗೂ ಸಾರ್ವಜನಿಕರು ಪಾಲ್ಗೊಳ್ಳಲು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಪುಂಡಲೀಕ ಜಗದಾಳೆ, ನಿಂಗಪ್ಪ ಪಾಗೋಜಿ ಇದ್ದರು.

ಹಿರೇಮಠ ಆರೋಗ್ಯ ವಿಚಾರಿಸಿದ ಬೆಲ್ಲದ

ಧಾರವಾಡ: ಧಾರವಾಡದ ಪ್ರತ್ಯೇಕ ಪಾಲಿಕೆ ರಚನೆಗೆ ನಡೆದ ಹೋರಾಟದ ವೇಳೆ ಗಾಯಗೊಂಡು, ನಗರದ ಖಾಸಗಿ ಆಸ್ಪತ್ರೆಗೆ ದಾಖಲಾದ ಹೋರಾಟಗಾರ ಬಿ.ಡಿ. ಹಿರೇಮಠ ಅವರನ್ನು ಶಾಸಕ ಅರವಿಂದ ಬೆಲ್ಲದ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

ಆಸ್ಪತ್ರೆಗೆ ಭೇಟಿ ನೀಡಿದ ಶಾಸಕರು, ಬಿ.ಡಿ.ಹಿರೇಮಠ ಅವರ ಆರೋಗ್ಯದ ಸ್ಥಿತಿಗತಿ ಪರಿಶೀಲಿಸಿದರು. ವೈದ್ಯರಿಂದ ಗಾಯ ಹಾಗೂ ಚಿಕಿತ್ಸೆ ವಿವರ ಪಡೆದು, ಹಿರೇಮಠ ಅವರಿಗೆ ಧೈರ್ಯ ತುಂಬಿ, ಶೀಘ್ರವೇ ಗುಣಮುಖರಾಗುವಂತೆ ಹಾರೈಸಿದರು.

ನಂತರ ಮಾತನಾಡಿದ ಶಾಸಕ ಅರವಿಂದ ಬೆಲ್ಲದ, ಧಾರವಾಡದ ಹಿತದೃಷ್ಟಿಯಿಂದ ನಡೆದ ಈ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತ ಹಿರೇಮಠ ಅವರ ಕೊಡುಗೆ ದೊಡ್ಡದಿದೆ. ಅವರ ಆರೋಗ್ಯ ಕಡೆಗೆ ಸಂಪೂರ್ಣವಾದ ಗಮನ ಹರಿಸಲಾಗುತ್ತದೆ ಎಂದರು.

ಅಲ್ಲದೇ ಆಗತ್ಯವಿದ್ದರೆ ಎಲ್ಲ ರೀತಿಯ ವೈದ್ಯಕೀಯ ನೆರವು ಹಾಗೂ ಸಹಕಾರ ನೀಡುವ ಭರವಸೆ ನೀಡಿದರು. ಈ ವೇಳೆ ಮೇಯರ್ ಜ್ಯೋತಿ ಪಾಟೀಲ, ಪಾಲಿಕೆ ಸದಸ್ಯೆ ಕವಿತಾ ಕಬ್ಬೇರ, ಮುಖಂಡ ಕರಿಯಪ್ಪ ಸುಣಗಾರ ಅನೇಕರು ಇದ್ದರು.



ಮರಾಠಾ ಅಭಿವೃದ್ಧಿ ನಿಗಮದಿಂದ ಜನಪರ ಯೋಜನೆ



ಹುಬ್ಬಳ್ಳಿ: ಮರಾಠಾ ಅಭಿವೃದ್ಧಿ ಸಂಘ ಹಾಗೂ ಹಿಂದೂ ಸೇನಾ ಸಂಘಟನೆಯ ರಾಜ್ಯ ಘಟಕದ ಆಶ್ರಯದಲ್ಲಿ ಮರಾಠ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಇತ್ತೀಚೆಗೆ ನಗರದ ಗೋಕುಲ ರಸ್ತೆ ಲೋಹಿಯಾನಗರದ ರಂಗಮಂದಿರದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಸಾಮಾಜಿಕ ಹೋರಾಟಗಾರ ಹಾಗೂ ಲಿಂಗಾಯತ ಮುಖಂಡ ರಾಜಶೇಖರ್ ಮೆಣಸಿನಕಾಯಿ ಉದ್ಘಾಟಿಸಿ ಮಾತನಾಡಿ, ರಾಜ್ಯದ ವಿವಿಧ ನಿಗಮಗಳಲ್ಲಿ ಒಂದಾದ ಮರಾಠ ಅಭಿವೃದ್ಧಿ ನಿಗಮದ ಮೂಲಕ ಅನೇಕ ಜನಪರ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಹೇಳಿದರು.

ವಿಶೇಷವಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವೇತನ, ಮಹಿಳೆಯರಿಗೆ ಹೊಲಿಗೆ ಯಂತ್ರಗಳ ವಿತರಣೆ ಹಾಗೂ ರೈತರು ಮತ್ತು ನಿರುದ್ಯೋಗಿಗಳಿಗೆ ಸರ್ಕಾರದ ವಿವಿಧ ಯೋಜನೆಗಳ ಸದುಪಯೋಗ ಪಡೆಯುವಂತೆ ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘಟನೆಯ ಅಧ್ಯಕ್ಷ ವಿನಾಯಕ ಮಾಲದಕರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕೆಪಿಸಿಸಿ ಸಂಯೋಜಕ ಬಂಗಾರೇಶ ಹಿರೇಮಠ, ಭಗತ್ ಸಿಂಗ್ ಸೇವಾ ಸಂಘದ ಅಧ್ಯಕ್ಷ ವಿಶಾಲ ಜಾದವ, ಸಮಾಜಸೇವಕ ಕೆ.ಎಂ. ಕಿಚಡಿ, ಬಿಜೆಪಿ ಮುಖಂಡ ರವಿರಾಜ್ ಕೊಡ್ಲಿ ಹಾಗೂ ವಕೀಲ ಲಕ್ಷ್ಮಣ ಮೊರಬ ಉಪಸ್ಥಿತರಿದ್ದರು.

ಇದೇ ವೇಳೆ ಕೃಷ್ಣ ಶಿಂದೆ, ಸತೀಶ ಬೆಂಗಳೂರಕರ್, ಅನಿಲ್ ಅಲೆಕರ್, ನಾರಾಯಣ ಕೊಂಗಿ, ರವಿಕುಮಾರ್ ವಾರಂಗ, ಕೃಷ್ಣ ಕೋಪರಡೆ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ತಡಸಿನಕೊಪ್ಪ ಫೈರಿಂಗ್ ಪ್ರಕರಣ | ಆರೋಪಿಗಳ ವಿರುದ್ಧ ಕ್ರಮಕ್ಕೆ ಸೂಚನೆ

ರೈತನ ಆರೋಗ್ಯ ವಿಚಾರಿಸಿದ ಜೋಶಿ

ಧಾರವಾಡ: ತಾಲೂಕಿನ ತಡಸಿನಕೊಪದಲ್ಲಿ ಜಮೀನು ವಿವಾದದ ಹಿನ್ನೆಲೆ ನಡೆದ ಫೈರಿಂಗ್ ಘಟನೆಯಲ್ಲಿ ಗಾಯಗೊಂಡ ರೈತ ಮಾರುತಿ ವಾಲಿಕಾರ ಅವರನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಎಸ್‌ಡಿಎಂ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು.



ರೈತನೊಂದಿಗೆ ಸಮಾಲೋಚನೆ ನಡೆಸಿದ ಸಚಿವರು ಘಟನೆಯ ಮಾಹಿತಿ ಪಡೆದು ವೈದ್ಯರಿಂದ ಆರೋಗ್ಯ ವಿವರಗಳನ್ನು ಪಡೆದರು. ಬಳಿಕ ಪ್ರಕರಣದ ತನಿಖೆ ತ್ವರಿತ ಹಾಗೂ ನಿಷ್ಪಕ್ಷಪಾತ ನಡೆಸಲು ದೂರವಾಣಿ ಮೂಲಕ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಹ್ಲಾದ ಜೋಶಿ, ಅಮಾಯಕ ರೈತರ ಮೇಲೆ ನಡೆದ ದಾಳಿ ಖಂಡನೀಯ. ಕಾನೂನು ಕೈಗೆತ್ತಿಕೊಂಡು ಹಿಂಸಾಚಾರ ನಡೆಸಿದವರ ವಿರುದ್ಧ ಯಾವುದೇ ಒತ್ತಡಕ್ಕೆ ಮಣಿಯದೆ ಕಾನೂನು ಕ್ರಮಕ್ಕೆಗೊಳ್ಳಬೇಕು ಎಂದು ಆಗ್ರಹಿಸಿದರು.

ಅಲ್ಲದೇ, ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಬೇಕು. ರೈತರ ಸುರಕ್ಷತೆ ಹಾಗೂ ನ್ಯಾಯ ಖಚಿತಪಡಿಸುವುದು ಸರ್ಕಾರ ಮತ್ತು ಪೊಲೀಸ್ ಇಲಾಖೆಯ ಜವಾಬ್ದಾರಿ. ಈ ನಿಟ್ಟಿನಲ್ಲಿ ತನಿಖೆ ನಡೆಸುವಂತೆ ಆಗ್ರಹಿಸಿದರು.

ಪ್ರಕರಣದ ಆರೋಪಿಗಳ ವಿರುದ್ಧ ಈಗಾಗಲೇ ಹಲವು ಪ್ರಕರಣ ದಾಖಲಾಗಿವೆ. ಮುಖ್ಯ ಆರೋಪಿಯನ್ನು ಈವರೆಗೂ ಬಂಧಿಸದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಆರೋಪಿಗಳನ್ನು ತಕ್ಷಣ ಬಂಧಿಸಲು ಪೊಲೀಸರಿಗೆ ಸೂಚಿಸಿದರು.

ಈ ವೇಳೆ ಮಾಜಿ ಮೇಯರ್ ಈರೇಶ ಅಂಚಟಗೇರಿ, ರೈತ ಮುಖಂಡ ಮಾರುತಿ ಹಿಂಡಸಗೇರಿ, ಬಸವರಾಜ ಅರವಳದ, ಪುಂಡಲಿಕ ತಳವಾರ, ಮೈಲಾರ ಉಪ್ಪಿನ, ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿ ಮತ್ತು ಪೊಲೀಸ್ ಅಧಿಕಾರಿಗಳು ಅನೇಕರು ಇದ್ದರು.

ಪ್ರತ್ಯೇಕ ಪಾಲಿಕೆಗೆ ಅಧಿಸೂಚನೆ ಹೊರಡಿಸಲು ಬೆಲ್ಲದ ಆಗ್ರಹ

ಧಾರವಾಡ: ಸ್ವಾಭಿಮಾನಿ ಹೋರಾಟ ಸಮಿತಿ ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಸತ್ಯಪ್ರತಿಪಾದನೆ ಸತ್ಯಾಗ್ರಹ 16ನೇ ದಿನಕ್ಕೆ ಕಾಲಿಟ್ಟಿದ್ದು, ಶನಿವಾರ ಧರಣಿ ಸ್ಥಳಕ್ಕೆ ಆಗಮಿಸಿದ ಹುಬ್ಬಳ್ಳಿ-ಧಾರವಾಡ 74 ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಬೆಂಬಲ ಸೂಚಿಸಿದರು.



ಶಾಸಕ ಅರವಿಂದ ಬೆಲ್ಲದ ಮಾತನಾಡಿ, ಅಭಿವೃದ್ಧಿಯ ದೃಷ್ಟಿಯಿಂದ ಈ ಹಿಂದೆ ಪ್ರತ್ಯೇಕ ಪಾಲಿಕೆ ರಚನೆ ಠರಾವು ಬಳಿಕ ಕೇಂದ್ರ ಸರ್ಕಾರದ 16ನೇ ಹಣಕಾಸು ಆಯೋಗದ ಅನುದಾನ ಪಡೆಯಲು ಬೃಹತ್ ಪಾಲಿಕೆ ಠರಾವು ಮಾಡಿದ್ದು ಸತ್ಯ ಎಂದರು.

ಆದರೆ, ಪ್ರತ್ಯೇಕ ಪಾಲಿಕೆ ರಚನೆಗೆ ಬಿ.ಡಿ.ಹಿರೇಮಠ, ವೆಂಕಟೇಶ ಮಾಚಕನೂರ, ಮನೋಹ ಪಾಟೀಲರ ನೇತೃತ್ವದಲ್ಲಿ ನಡೆದ ಪಕ್ಷಾತೀತ ಹೋರಾಟದಲ್ಲಿ ಕೆಲವರು ರಾಜಕಾರಣ ಮಾಡಲು ಯತ್ನಿಸಿದರೂ, ಹೋರಾಟಗಾರರು ಸೊಪ್ಪು ಹಾಕದ ಬಗ್ಗೆ ಅಭಿನಂದಿಸಿದರು.

ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಧಾರವಾಡ ಜನರ ಭಾವನಾತ್ಮಕ ವಿಷಯ. ಹೀಗಾಗಿ ಸಾರ್ವಜನಿಕರ ಕೂಗು ಕೂಡ ಸರಿಯಾಗಿದೆ. ಜನರ ಭಾವನೆ ಅರಿತೇ, ಪ್ರತ್ಯೇಕ ಪಾಲಿಕೆ ಕಡತಕ್ಕೆ ರಾಜ್ಯಪಾಲರಿಂದ ಅಂಕಿತ ಹಾಕಿಸಿರುವುದಾಗಿ ಹೇಳಿದರು.

ಹುಬ್ಬಳ್ಳಿ-ಧಾರವಾಡ ವಿಭಜನೆಗೊಂಡು ಎರಡು ಪ್ರತ್ಯೇಕ ಪಾಲಿಕೆ ರಚನೆಯಾದರೆ, ಹೆಚ್ಚಿನ ಅನುದಾನವೂ ಸಹ ಬರಲಿದೆ. ಹುಬ್ಬಳ್ಳಿ ವಾಣಿಜ್ಯ ಕೇಂದ್ರವಾಗಿ, ಧಾರವಾಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೇಂದ್ರವಾಗಿಯೂ ಅಭಿವೃದ್ಧಿ ಹೊಂದಲಿದೆ ಎಂದು ತಿಳಿಸಿದರು.

ಈಗ ರಾಜ್ಯಪಾಲರ ಕೆಲಸ ಮುಗಿದಿದೆ. ಇನ್ನೇನಿದ್ದರೂ ರಾಜ್ಯ ಸರ್ಕಾರದ ಕೆಲಸ. ಯಾವುದೇ ವಿಳಂಬ ಮಾಡದೆ, ತಕ್ಷಣವೇ ಅಧಿಸೂಚನೆ ಹೊರಡಿಸಬೇಕು. ಪಾಲಿಕೆ ಪ್ರತ್ಯೇಕ ಆಗುವರೆಗೆ ಹೋರಾಟ ನಿಲ್ಲಿಸದಂತೆ ಶಾಸಕ ಅರವಿಂದ ಬೆಲ್ಲದ ಮನವಿ ಮಾಡಿದರು.

ಪುಷ್ಪಾ ನವಲಗುಂದ, ಸುಮಿತ್ರಾ ಬಡಿಗೇರ, ಶೋಭಾ ಜಾಧವ, ಮಾದೇವಿ ಕೌದಿ, ಭಾರತಿ ದಳವಾಯಿ, ಶಾಂತಾ ಪವಾರ, ಶಕುಂತಲಾ ಕಟ್ಟೆ, ಅನಿತಾ ಹೊಸಕೋಟೆ, ಮಂಜುನಾಥ ಹೊಂಗಲ, ಗುರುರಾಜ ಹುಣಸಿಮರದ, ಶಿವು ಹಿರೇಮಠ ಇತರರು ಇದ್ದರು.

ರೈತನ ಮೇಲೆ ಗುಂಡಿನ ದಾಳಿ ಸಲ್ಲ

ಸಮಾಜಘಾತಕ ಶಕ್ತಿಗಳ ಜೊತೆಗೆ ಪೊಲೀಸರು ಕೈಜೋಡಿಸುವುದು ಸರಿಯಲ್ಲ. ರೈತರನ್ನು ಹೆದರಿಸಿ, ಜಮೀನು ಕಸಿಯಲು ಪೊಲೀಸರೇ ಕುಮ್ಮಕ್ಕು ನೀಡುವುದು ನಾಚಿಗೇಡು. ರೈತನ ಮೇಲೆ ಗುಂಡಿನ ದಾಳಿ ನಡೆಸಿರುವ ಆರೋಪಿಗಳ ಹೆಸರೇ ದೂರಿನಲ್ಲಿ ಇಲ್ಲ. ಸ್ಥಳದಲ್ಲಿ ಪೊಲೀಸರಿದ್ದರೂ ಆರೋಪಿಗಳು ತಪ್ಪಿಸಿಕೊಂಡಿದ್ದು ಹೇಗೆ? ಎಂದು ಪ್ರಶ್ನಿಸಿದ ಶಾಸಕ ಅರವಿಂದ ಬೆಲ್ಲದ, ಆರೋಪಿಗಳನ್ನು ಬಂಧಿಸಿ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯ ಮಾಡಿದರು.

ಜೂ.2ರಂದು ಟ್ರ್ಯಾಕ್ಟರ್ ಮೂಲಕ ಹೂಳು ತೆರವು

ಬಳ್ಳಾರಿ: ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರ ಜಲಾಶಯದಲ್ಲಿ 33ಕ್ಕೂ ಹೆಚ್ಚು ಟಿಎಂಸಿ ಹೂಳು ತುಂಬಿದ್ದು ನೀರಿನ ಸಂಗ್ರಹ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಈ ಕುರಿತು ಸಾಕಷ್ಟು ಬಾರಿ ಸರ್ಕಾರದ ಗಮನ ಸೆಳೆದರೂ ಇಲ್ಲಿವರೆಗೂ ಕ್ರಮವಿಲ್ಲ. ಕೂಡಲೇ ಜಲಾಶಯದ ಹೂಳು ತೆರವುಗೊಳಿಸಬೇಕು ಎಂದು ಆಗ್ರಹಿಸಿ ಜೂ.2ರಂದು ಸಾಂಕೇತಿಕವಾಗಿ ನಮ್ಮ ರೈತರ ಟ್ರ್ಯಾಕ್ಟರ್ ಮೂಲಕ ಹೂಳು ತೆರವುಗೊಳಿಸುವ ಹೂಳಿನ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ತುಂಗಭದ್ರಾ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಹೇಳಿದರು.



ನಗರದಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಳ್ಳಾರಿ, ವಿಜಯನಗರ, ರಾಯಚೂರು ಹಾಗೂ ಕೊಪ್ಪಳ ಜಿಲ್ಲೆ ಸೇರಿದಂತೆ ನೆರೆಯ ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕರ್ನಾಟಕದ ರೈತರ, ಜನರ ಜೀವನಾಡಿತುಂಗಭದ್ರಾ ಜಲಾಶಯದಲ್ಲಿಹೂಳು ತುಂಬಿದ ಹಿನ್ನೆಲೆ ನೀರಿನ ಸಂಗ್ರಹ ಕಡಿಮೆಯಾಗಿ ಕೊನೆ ಭಾಗದ ರೈತರ ಜಮೀನುಗಳಿಗೆ ನೀರು ತಲುಪುತ್ತಿಲ್ಲ.

ಕಳೆದ 1985ರಿಂದ ಈ ಕುರಿತು ನಾವು ಸೇರಿದಂತೆ ಸಾಕಷ್ಟು ರೈತಪರ ಸಂಘಟನೆಗಳು, ಸರ್ಕಾರದ ಗಮನ ಸೆಳೆದರೂ ಸರ್ಕಾರ ಇಲ್ಲಿವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಹಿನ್ನೆಲೆ ಸರ್ಕಾರದ ಗಮನ ಸೆಳೆಯಲು, ಈ ಹಿಂದೆ ನಮ್ಮ ರೈತ ಸಂಘದಿಂದ ಹೂಳೆತ್ತುವ ಕಾರ್ಯಕ್ಕೆ ಚಾಲನೆ ನೀಡಿದ್ದೇವು. ಸ್ವಾಮೀಜಿಗಳು, ಪಕ್ಷಾತೀತವಾಗಿ ಎಲ್ಲ ರಾಜಕಾರಣಿಗಳು ಎಲ್ಲರೂ ಪ್ರೋತ್ಸಾಹಿಸಿ ನಮ್ಮ ವಿನೂತನ ಹೋರಾಟಕ್ಕೆ ಬೆಂಬಲಿಸಿದ್ದರು. ಆದರೂ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲ.

ಕಾಲಹರಣ ಮಾಡಿದರು ಹೊರತೂ, ರೈತರ ಸಮಸ್ಯೆ ಬಗ್ಗೆ ಆಲೋಚಿಸಿಲ್ಲ. ಮತ್ತೆ ಸ್ವಯಂ ಪ್ರೇರಿತವಾಗಿ ನಮ್ಮ ರೈತರ 101 ಟ್ರ್ಯಾಕ್ಟರ್‌ಗಳ ಮೂಲಕ ಹೂಳೆತ್ತುವ ಮೂಲಕ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು.

ಜೂ.2ರಂದು ಜಲಾಶಯದ ಹಿನ್ನೀರು ಪ್ರದೇಶದ ಗೂಂಡಾ ಸಸ್ಯೋದ್ಯಾನದ ಬಳಿ ಎರಡು ದಿನಗಳ ಮಟ್ಟಿಗೆ ಹೂಳು ಎತ್ತುವ ಕಾರ್ಯ ನಡೆಯಲಿದೆ. 2 ಜೆಸಿಬಿ ಹಾಗೂ 101ಕ್ಕೂ ಹೆಚ್ಚು ಟ್ರ್ಯಾಕ್ಟರ್ ಮೂಲಕ ಸಾವಿರಾರು ರೈತರು ಭಾಗವಹಿಸಲಿದ್ದಾರೆ. ತೆರವುಗೊಳಿಸಿದ ಹೂಳನ್ನು ರೈತರು ತಮ್ಮ ಜಮೀನುಗಳಿಗೆ ಒಯ್ಯಲಿದ್ದಾರೆ.

ಈ ವಿನೂತನ ಅಭಿಯಾನಕ್ಕೆ ಕೊಟ್ಟೂರುಸ್ವಾಮಿ ಶ್ರೀಮಠದ ಬಸವಲಿಂಗ ಸ್ವಾಮೀಜಿ ಸೇರಿದಂತೆ ವಿವಿಧ ಸ್ವಾಮೀಜಿಗಳು ಸಾಥ್ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ಎಂ.ವೀರಭದ್ರ ನಾಯಕ, ಜಾಲಿಹಾಳ ಶ್ರೀಧರ, ಸೇರಿದಂತೆ ವಿವಿಧ ಮುಖಂಡರಿದ್ದರು.

ಡಿ.ಕೆ.ಶಿವಕುಮಾರ ಭೇಟಿ ಮಾಡಿದ ನಿಯೋಗ

ಧಾರವಾಡ: ಶಾಸಕ ಪ್ರಸಾದ ಅಬ್ಬಯ್ಯ ಮತ್ತು ನೀರು ಸರಬರಾಜು ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ ಒಳಗೊಂಡ ನಿಯೋಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಭೇಟಿಮಾಡಿ, ಪ್ರತ್ಯೇಕ ಪಾಲಿಕೆಗೆ ಅಧಿಸೂಚನೆ ಹೊರಡಿಸಲು ಕೋರಿತು.



ನಿಯೋಗದ ಮನವಿಗೆ ಸ್ಪಂದಿಸಿದ ಡಿ.ಕೆ.ಶಿವಕುಮಾರ, ಸರ್ಕಾರ ರಚಿಸಿದ ಬಳಿಕ ಪರಿಶೀಲಿಸಿ, ಕ್ರಮ ಕೈಗೊಳ್ಳುವ ಭರವಸೆ ನೀಡಿದ ನಂತರ ನಿಯೋಗ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್ ಅವರನ್ನು ಭೇಟಿ ಮಾಡಿ, ಅವರೊಂದಿಗೂ ಚರ್ಚಿಸಿತು.

ನಿಯೋಗದಲ್ಲಿ ದಾನಪ್ಪ ಕಬ್ಬೇರ, ನಾಗರಾಜ ಗೌರಿ, ಅರವಿಂದ ಏಗನಗೌಡರ, ರಾಜಶೇಖರ ಕಮತಿ, ಚನ್ನಬಸಪ್ಪ ಮಟ್ಟಿ, ಪ್ರಕಾಶ ಘಾಟಗೆ, ವೀರಣ್ಣ ಶೆಟ್ಟರ್, ಕಿಶೋರ ಬಡಿಗೇರ, ತುಳಜಪ್ಪ ಪೂಜಾರ, ಸಂತೋಷ ನೀರಲಕಟ್ಟಿ ಅನೇಕರು ಇದ್ದರು.

ಕೃಷಿ ಇಲಾಖೆ ಅಧಿಕಾರಿಗಳ ಅನಿರೀಕ್ಷಿತ ದಾಳಿ

ಮಾರಾಟಗಾರರಿಗೆ ನೋಟಿಸ್ ಜಾರಿ

ಕಲಬುರಗಿ: ರೈತರಿಗೆ ರಸಗೊಬ್ಬರವನ್ನು ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಅನಾವಶ್ಯಕವಾಗಿ ಹಣ ವಸೂಲಿ ಮಾಡುವ ಮಾರಾಟಗಾರರ ವಿರುದ್ಧ ರಸಗೊಬ್ಬರ ನಿಯಂತ್ರಣ ಆದೇಶ ಹಾಗೂಅವಶ್ಯಕವಸ್ತುಗಳಕಾಯ್ದೆಯಡಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಕಲಬುರಗಿ ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ಎಚ್ಚರಿಕೆ ನೀಡಿದ್ದಾರೆ.



ಶುಕ್ರವಾರ ಜೇವರ್ಗಿ, ಯಡ್ರಾಮಿ, ಚಿತ್ತಾಪುರ ಹಾಗೂ ಸೇಡಂ ತಾಲೂಕುಗಳ ಕೃಷಿ ಪರಿಕರ ಮಾರಾಟ ಮಳಿಗೆಗಳ ಮೇಲೆ ಜಂಟಿ ಕೃಷಿ ನಿರ್ದೇಶಕರ ನೇತೃತ್ವದ ಅಧಿಕಾರಿಗಳ ತಂಡ ಅನಿರೀಕ್ಷಿತ ದಾಳಿ ನಡೆಸಿ ತಪಾಸಣೆ ಕೈಗೊಂಡಿತು.

ಈ ವೇಳೆ ಐ-ಎಫ್‌ಎಂಎಸ್ ತಂತ್ರಾಂಶದಲ್ಲಿ ರಸಗೊಬ್ಬರ ವಿತರಣೆ, ದಾಸ್ತಾನು ವಿವರಗಳು ಹಾಗೂ ಪಿಓಎಸ್ ಯಂತ್ರಗಳ ದಾಖಲೆಗಳನ್ನು ಪರಿಶೀಲಿಸಲಾಯಿತು. ರೈತರಿಗೆ ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಯಲ್ಲಿ ರಸಗೊಬ್ಬರಮಾರಾಟಮಾಡಲಾಗುತ್ತಿದೆ ಎಂಬ ಸಾರ್ವಜನಿಕರ ದೂರುಗಳ ಹಿನ್ನೆಲೆಯಲ್ಲಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸುವ ಉದ್ದೇಶದಿಂದ ಈ ವಿಶೇಷತಪಾಸಣೆ ನಡೆಸಲಾಗಿದೆ ಎಂದು ಸಮದ್ ಪಟೇಲ್ ತಿಳಿಸಿದ್ದಾರೆ.

ಜೇವರ್ಗಿ, ಯಡ್ರಾಮಿ, ಸೇಡಂ ಹಾಗೂ ಚಿತ್ತಾಪುರ ತಾಲೂಕುಗಳಲ್ಲಿ ಒಟ್ಟು 28 ಕೃಷಿ ಮಳಿಗೆಗಳನ್ನು ತಪಾಸಣೆ ಮಾಡಲಾಗಿದ್ದು, 26 ಮಳಿಗೆಗಳಿಗೆ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿದೆ. 10 ಮಳಿಗೆಗಳಿಗೆ ಮಾರಾಟ ತಡೆ ಆದೇಶ ನೀಡಲಾಗಿದೆ.

ಜೇವರ್ಗಿ ತಾಲೂಕಿನಲ್ಲಿ ಮಾತ್ರ 192.4 ಟನ್ ರಸಗೊಬ್ಬರ ದಾಸ್ತಾನು ತಡೆಹಿಡಿಯಲಾಗಿದ್ದು, ಇದರ ಅಂದಾಜು ಮೌಲ್ಯ ಸುಮಾರು ರೂ.45.75 ಲಕ್ಷಗಳಾಗಿದೆ. ಕಲಬುರಗಿ ಉಪ ಕೃಷಿ ನಿರ್ದೇಶಕ ಡಾ. ಬಾಲರಾಜ್ ಗಂಗರಾವ್, ಸೇಡಂ ಉಪ ಕೃಷಿ ನಿರ್ದೇಶಕ ಅನಸೂಯಾ ಹೂಗಾರ, ಜಾರಿದಳದ ಸಹಾಯಕ ಕೃಷಿ ನಿರ್ದೇಶಕರು, ಸಂಬಂಧಿತ ತಾಲೂಕುಗಳ ಸಹಾಯಕ ಕೃಷಿ ನಿರ್ದೇಶಕರು ಹಾಗೂ ಕೃಷಿ ಅಧಿಕಾರಿಗಳು ಉಪಸ್ಥಿತರಿದ್ದರು.

ರೈತರ ಅಂಚೆ ಕಾರ್ಯಕ್ರಮಕ್ಕೆ ಕೆ.ಪ್ರಕಾಶ್ ಚಾಲನೆ



ಬೆಂಗಳೂರು: ಹಾಪ್‌ಕಾಮ್ಸ್ ಸಹಯೋಗದೊಂದಿಗೆ ಭಾರತೀಯ ಅಂಚೆ ಇಲಾಖೆ, ಪ್ರಸಕ್ತ ಸಾಲಿನಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಪಾರ್ಸೆಲ್ ಮೂಲಕ ಮಾವಿನ ಹಣ್ಣು ತಲುಪಿಸುವ ಸೇವೆ ರೈತರ ಅಂಚೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಗರದ ಜಿಪಿಒ ಮುಖ್ಯ ಅಂಚೆಪಾಲಕರ ಕಚೇರಿಯಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮನೆಬಾಗಿಲಿಗೆ ಗುಣಮಟ್ಟದ ಮಾವಿನ ಹಣ್ಣು ತಲುಪಿಸುವ ಯೋಜನೆಗೆ, ಕರ್ನಾಟಕ ಅಂಚೆ ವಲಯದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಚಾಲನೆ ನೀಡಿ ಮಾತನಾಡಿ, ಮಾವು ಬೆಳೆಗಾರರೊಂದಿಗೆ ಬುಕ್ ನೌ ಪೇ ಲೇಟರ್ ಒಪ್ಪಂದದಡಿ ಪಾರ್ಸೆಲ್ ಸೇವೆ ಒದಗಿಸಲಾಗುತ್ತಿದೆ. ಇದರಿಂದ ರೈತರಿಗೆ ಉತ್ತಮ ಬೆಲೆ ದೊರೆಯುವ ಜತೆಗೆ ಗ್ರಾಹಕರಿಗೆ ತಾಜಾ ಮಾವಿನ ಹಣ್ಣು ಖರೀದಿಸಲು ಸಹಾಯವಾಗಲಿದೆ. ರೈತರು ತಲಾ 3ಕೆಜಿ ಮಾವಿನ ಹಣ್ಣು ಬಾಕ್ಸ್‌ನಲ್ಲಿ ಪ್ಯಾಕ್ ಮಾಡುತ್ತಾರೆ. ಪ್ಯಾಕ್ ಮಾಡಿದ ಮಾವಿನ ಹಣ್ಣನ್ನು ಅದೇ ದಿನ ಅಥವಾ ಮರು ದಿನದಂದು ಬುಕಿಂಗ್ ಮಾಡಿರುವ ಗ್ರಾಹಕರಿಗೆ ವಿತರಿಸಲಾಗುವುದು. ಬೆಂಗಳೂರು ನಗರ ಸೇರಿ ದೇಶದ ಆಯ್ದ ಸ್ಥಳಗಳಿಗೆ 24 ಗಂಟೆಯಲ್ಲಿ ಸ್ಪೀಡ್ ಸೇವೆಯಡಿ ಹಣ್ಣು ವಿತರಿಸುವ ಸೌಲಭ್ಯವಿದೆ. 2019ರ ಮಾರ್ಚ್‌ನಿಂದ 2025ರ ಜೂನ್‌ವರೆಗೆ 3,81,183 ಕೆಜಿ ಮಾವಿನ ಹಣ್ಣು ಅನ್ನು 1.13 ಲಕ್ಷದ ಪಾರ್ಸೆಲ್ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ತಲುಪಿಸಿದ್ದೇವೆ ಎಂದರು. ರೇಷ್ಮೆ ಇಲಾಖೆ ಕಾರ್ಯದರ್ಶಿ ಆರ್.ಗಿರೀಶ್, ಬೆಂಗಳೂರು ಮುಖ್ಯಾಲಯ ಕ್ಷೇತ್ರದ ಅಂಚೆ ಸೇವೆಗಳ ನಿರ್ದೇಶಕಿ ವಿ.ತಾರಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಇಬ್ರಾಹಿಂ ಮೈಗೂರ್, ಹಾಪ್‌ಕಾಮ್ಸ್ ಉಪಾಧ್ಯಕ್ಷ ನಾರಾಯಣಗೌಡ ಮತ್ತಿತರರಿದ್ದರು.


ರೈತರ ಅಂಚೆ ಎಂಬ ವಿಶಿಷ್ಟ ಆನ್‌ಲೈನ್ ವ್ಯಾಪಾರ

ಹಾಪ್‌ಕಾಮ್ಸ್ ಅಧ್ಯಕ್ಷ ಎ.ಎಸ್.ಚಂದ್ರೇಗೌಡ ಮಾತನಾಡಿ, ಮೊದಲ ಬಾರಿಗೆ ಹಾಪ್‌ಕಾಮ್ಸ್ ನಿಂದ ರೈತರ ಅಂಚೆ ಎಂಬ ವಿಶಿಷ್ಟ ಆನ್‌ಲೈನ್ ವ್ಯಾಪಾರ ಸೇವೆ ಪರಿಚಯಿಸಿದ್ದೇವೆ. ಅಂಚೆ ಮೂಲಕ ಮಾವು ಸೇರಿ ಇತರೆ ವಿಶೇಷ ಹಣ್ಣುಗಳನ್ನು ಗ್ರಾಹಕರ ಮನೆಬಾಗಿಲಿಗೆ ತಲುಪಿಸುವ ವ್ಯವಸ್ಥೆ ಇದಾಗಿದೆ. ನೈಸರ್ಗಿಕವಾಗಿ ಮಾಗಿಸಿದ ಹಣ್ಣನ್ನು 3 ಕೆ.ಜಿ. ಹಾಗೂ 5 ಕೆ.ಜಿ. ಸಾಮರ್ಥ್ಯ ಬಾಕ್ಸ್‌ಗಳಲ್ಲಿ ಅಂಚೆ ಮೂಲಕ ಮಾವು ತರಿಸಿಕೊಳ್ಳಬಹುದು. ಬೆಂಗಳೂರಿನ ಎಲ್ಲ ಬಡಾವಣೆಗಳಲ್ಲಿ ಹಾಪ್‌ಕಾಮ್ಸ್ ಮಳಿಗೆಗಳಿಲ್ಲ. ಆದ್ದರಿಂದ, ಗ್ರಾಹಕರಿಗೆ ತಾಜಾ ಹಣ್ಣುಗಳನ್ನು ಒದಗಿಸಲು ಈ ಸೇವೆಯನ್ನು ಆರಂಭಿಸಿದ್ದೇವೆ ಎಂದರು.

ಬುಕ್ ಮಾಡುವುದು ಹೇಗೆ?

ಆಸಕ್ತರು https://hopcomsbengaluru.com ಗೆ ಲಾಗಿನ್ ಆಗಿ ಹೆಸರು ನೋಂದಾಯಿಸಬೇಕು. (ಒಂದು ಬಾರಿ ನೋಂದಾಯಿಸಿದರೆ ಸಾಕು) ಬೇಕಾದ ಹಣ್ಣುಗಳನ್ನು ಆಯ್ಕೆ ಮಾಡಿ ಆನ್‌ಲೈನ್‌ನಲ್ಲಿ ಹಣ ಪಾವತಿಸಿ ಆರ್ಡರ್ ಮಾಡಿದರೆ, 24 ಗಂಟೆಗಳೊಳಗೆ ಅಂಚೆ ಸಿಬ್ಬಂದಿ ಮನೆ ಬಾಗಿಲಿಗೆ ತಲುಪಿಸುತ್ತಾರೆ.

ರಾಮ ಬಾಣ



ಕಿಡಿ ನುಡಿ — ವಾಸುದೇವರಾವ್ ಕಕ್ಕೇನೇಜಿ

ದೈವಾನುಗ್ರಹವಿದ್ದರೆ ಮಾತ್ರ ಬದುಕಿನಲ್ಲಿ ಸಾಧಿಸಲು, ಪಡೆಯಲು ಸಾಧ್ಯ
– ಭೀಮೇಶ್ವರ ಜೋಷಿ
– ಗದ್ದೆಯನ್ನು ಉತ್ತು ಬಿತ್ತಿ ಬೇಕಾದಷ್ಟು ಗೊಬ್ಬರ, ನೀರು ಹಾಕಿದರೂ ಬೆಳೆ ಬರಲು ದೈವಾನುಗ್ರಹ ಬೇಕು, ವ್ಯಾಪಾರಿ ರಾಶಿ ರಾಶಿ ಸರಕುಗಳನ್ನು ತಂದು ಅಂಗಡಿಯನ್ನು ತುಂಬಿದರೂ ಅದನ್ನು ಖರೀದಿಸುವ ಗಿರಾಕಿ ಬರಬೇಕಾದರೂ ದೈವಾನುಗ್ರಹವಿರಲೇ ಬೇಕು!

ದಿನ ಭವಿಷ್ಯ

ಮೇಷ ನಿಮ್ಮ ಸುತ್ತ ಹರ್ಷದ ವಾತಾವರಣ. ಮನೆಯಲ್ಲಿ ಸಂಭ್ರಮ. ನೀವೂ ಭಾಗಿಯಾಗಿರಿ. ಸಣ್ಣ ವಿಷಯಕ್ಕೆ ವಾಗ್ವಾದ ನಡೆಸಲು ಹೋಗದಿರಿ.

ವೃಷಭ ನಿಮ್ಮ ಕಾರ್ಯ ಪೂರೈಸಲು ಹೆಚ್ಚು ಪರಿಶ್ರಮ ಬೇಕು. ಅರ್ಥಕ್ಕೆ ಕೈ ಬಿಡಬೇಡಿ. ವಿವಾಹ ಪ್ರಸ್ತಾಪ ಸಫಲ. ಆರೋಗ್ಯ ಸಮಸ್ಯೆ ನಿವಾರಣೆ.

ಮಿಥುನ ಕೌಟುಂಬಿಕ ವಿಚಾರ ಇತ್ಯರ್ಥಕ್ಕೇ ಈ ದಿನ ಮೀಸಲಾಗಲಿದೆ. ಉತ್ಸಾಹ ಹೆಚ್ಚುವ ಬೆಳವಣಿಗೆ. ಕಾರ್ಯ ಪ್ರಗತಿ. ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ.

ಕಟಕ ನಿಮ್ಮ ಕಾರ್ಯಕ್ಕೆ ಅವಶ್ಯ ಬೆಂಬಲ ಲಭ್ಯ. ಖರೀದಿ ಹುಮ್ಮಸ್ಸಿನಿಂದ ಖರ್ಚು ಹೆಚ್ಚಬಹುದು. ಆಸ್ತಿ ಖರೀದಿಗೆ ಕಾಲ ಸದ್ಯ ಕೂಡಿಬರದು.

ಸಿಂಹ ಪ್ರಮುಖ ಕಾರ್ಯ ಇಂದು ಸಾಧಿಸುವಿರಿ. ವೃತ್ತಿಯಲ್ಲಿ ಯಶಸ್ಸು. ಸ್ವಂತ ಉದ್ಯೋಗಿಗಳಿಗೆ ಆರ್ಥಿಕ ಉನ್ನತಿ. ಕೌಟುಂಬಿಕ ಪರಿಸ್ಥಿತಿ ಸಮಾಧಾನಕರ.

ಕನ್ಯಾ ಯುವಜನರು ಹೆತ್ತವರ ಜತೆ ಸಂಘರ್ಷ ನಡೆಸಿಯಾರು. ಉದ್ದಿಮೆಯಲ್ಲಿ ಧನಹಾನಿ. ಇತರರ ಮನಸ್ಸಿಗೆ ಘಾಸಿ ಎಸಗದಿರಿ. ವಿನಯವಿರಲಿ.

ತುಲಾ ನೀವು ಬಯಸಿದ ಕಾರ್ಯ ಸರಾಗ. ಅಡ್ಡಿಗಳ ನಿವಾರಣೆ. ಖರ್ಚು ಕಡಿಮೆ ಮಾಡಲು ಗಮನ ಕೊಡಿ. ಸಂಬಂಧ ವೃದ್ಧಿಯ ಬೆಳವಣಿಗೆ ಸಂಭವ.

ವೃಶ್ಚಿಕ ಕೆಲಸದಲ್ಲಿ ಪ್ರಗತಿ. ಹಿರಿಯರ ಮೆಚ್ಚುಗೆ. ಮನೆಯಲ್ಲಿ ಕೆಲವು ಬದಲಾವಣೆ ಆದೀತು. ಆರೋಗ್ಯ ಸಮಸ್ಯೆ ನಿವಾರಣೆ, ನಿರಾಳತೆ.

ಧನು ಎಲ್ಲ ಸುಸೂತ್ರವಾಗಿ ನಡೆದರೂ ಮನಸ್ಸಿಗೆ ಸಮಾಧಾನವಿರದು. ಏನೋ ಅತೃಪ್ತಿ. ಕೆಲವರ ವರ್ತನೆಗೆ ಅಸಹನೆ. ಧ್ಯಾನ, ಅಧ್ಯಾತ್ಮ ಸಹಕಾರಿ.

ಮಕರ ಆಪ್ತರ ಜತೆಗಿನ ಭಿನ್ನಮತ ಪರಿಹರಿಸಿ. ಪ್ರೀತಿಗೆ ಸಂಬಂಧಿಸಿದ ಬಿಕ್ಕಟ್ಟು ನಿವಾರಿಸಿ. ವೃತ್ತಿಯಲ್ಲಿ ವಾಗ್ವಾದ, ಸಂಘರ್ಷ ನಡೆದೀತು.

ಕುಂಭ ಶೀಘ್ರ ಪ್ರಗತಿ ಸಾಧಿಸಬೇಕು ಎನ್ನುವುದು ನಿಮ್ಮ ಆಸೆ. ತಾಳ್ಮೆ ಬೆಳೆಸಿಕೊಳ್ಳಿ. ದುಡುಕು ಹಾನಿ ತಂದೀತು. ಕೌಟುಂಬಿಕ ಸಹಕಾರ.

ಮೀನ ಈ ದಿನ ನಿಮಗೆ ಪ್ರತಿಕೂಲ. ಪ್ರಮುಖ ಕಾರ್ಯ ಇಂದು ಬೇಡ. ಸಂಗಾತಿ ಜತೆ ಸಂಘರ್ಷ ಸಂಭವ. ತಾಳ್ಮೆಯ ವ್ಯವಹಾರ ಅಗತ್ಯ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 1,8,4,7

ಬುಧವಾರ ಡಿಕೆಶಿ ಪ್ರಮಾಣವಚನ

ಪುಟ 1 → ಡಿಕೆಶಿ ಅವರ ಸಂಘಟನಾ ಶಕ್ತಿ ಮತ್ತು ಪಕ್ಷಕ್ಕೆ ಅವರು ನೀಡಿದ ಕೊಡುಗೆ ಪರಿಗಣಿಸಿ ಎಐಸಿಸಿ ನಾಯಕತ್ವ ಅವರ ಹೆಸರನ್ನು ಸೂಚಿಸಿತ್ತು. ಶನಿವಾರ ನಡೆದ ಸಭೆಯಲ್ಲಿ ಸಿದ್ದರಾಮಯ್ಯ ಅವರು ಈ ಹೆಸರನ್ನು ಅಧಿಕೃತವಾಗಿ ಮಂಡಿಸುವ ಮೂಲಕ ಅಧಿಕಾರ ಹಸ್ತಾಂತರ ಪ್ರಕ್ರಿಯೆಗೆ ಚಾಲನೆ ನೀಡಿದರು. ತಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಶಾಸಕರಿಗೆ ಮತ್ತು ಹಿರಿಯ ನಾಯಕ ಸಿದ್ದರಾಮಯ್ಯ ಅವರಿಗೆ ಡಿ.ಕೆ. ಶಿವಕುಮಾರ್ ಅವರು ಈ ಸಂದರ್ಭದಲ್ಲಿ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸಿದರು.

ಆಪರೇಷನ್ ಸಿಂದೂರ್ 2.0ಗೆ ಸಿದ್ಧ

ಪುಟ 1 → **ಯುದ್ಧ ಭೂಮಿ ಪಾರದರ್ಶಕ:** ನಾವು ಕಳೆದ ಕೆಲವು ವರ್ಷಗಳಲ್ಲಿ 24/7ನ್ನು ನೋಡಿದ್ದೇವೆ. ಯುದ್ಧಭೂಮಿಯು ಎಷ್ಟು ಪಾರದರ್ಶಕವಾಗಿದೆಯೆಂದರೆ ಪ್ರತಿ ಚಲನೆಯೂ ಇನ್ನೊಂದು ಬದಿಗೆ ತಿಳಿದಿದೆ. ಆದ್ದರಿಂದ, ನಮ್ಮ ನಿಯೋಜನೆಯ ವಿಷಯದಲ್ಲಿ, ನಮ್ಮ ಉದ್ಯೋಗದ ವಿಷಯದಲ್ಲಿ ಮತ್ತು ನಮ್ಮ ಪಡೆಗಳನ್ನು ಮತ್ತು ಗಡಿ ಪ್ರದೇಶಗಳಲ್ಲಿನ ನಾಗರಿಕರನ್ನು ರಕ್ಷಿಸಲು ಅಗತ್ಯವಿರುವ ರಕ್ಷಣೆಯ ವಿಷಯದಲ್ಲಿ ನಾವು ಬಹಳ ಜಾಗರೂಕರಾಗಿರಬೇಕು ಎಂದು ಹೇಳಿದರು.

ಶಿವಕುಮಾರ್‌ಗೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆ

ಡಿಕೆಶಿ ಪಕ್ಷ ನಿಷ್ಠೆ ಅಚಲ



ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ. ಶಿವಕುಮಾರ್ ಅವರಿಗೆ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದನೆಸಲ್ಲಿಸಿದ್ದು, ನಿಮ್ಮ ನಿರಂತರ ಚೈತನ್ಯ, ಸಂಘಟನೆ ಸಾಮರ್ಥ್ಯ ಹಾಗೂ ಕಾಂಗ್ರೆಸ್ ಪಕ್ಷದಲ್ಲಿ ಇರುವ ಅಚಲ ನಿಷ್ಠೆ ಯನ್ನು ನಾನು ಹತ್ತಿರದಿಂದ ಗಮನಿಸಿದ್ದೇನೆ. ಈ ಎಲ್ಲ ಗುಣಗಳು ರಾಜ್ಯದ ಜನರ ಹಿತಕ್ಕಾಗಿ ಅತ್ಯುತ್ತಮವಾಗಿ ಬಳಸಲ್ಪಡಲಿ ಎಂದು ಹಾರೈಸುತ್ತೇನೆ ಎಂದು ತಿಳಿಸಿದ್ದಾರೆ.

ಎಕ್ಸ್‌ನಲ್ಲಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿರುವ ಸಿದ್ದರಾಮಯ್ಯ ಅವರು, 8 ವರ್ಷದ ಅವಧಿಯಲ್ಲಿ ಕರ್ನಾಟಕವನ್ನು ಸಮೃದ್ಧ, ಸ್ವಾವಲಂಬಿ ಹಾಗೂ ಸ್ವಾಭಿಮಾನಿ ರಾಜ್ಯವನ್ನಾಗಿ ರೂಪಿಸಲು ಸಾಧ್ಯವಾದುದು ನನಗೆ ಹೆಮ್ಮೆಯ ವಿಷಯವಾಗಿದೆ. ಈ ಅಭಿವೃದ್ಧಿಯ ರಥವನ್ನು ಮುಂದುವರಿಸುವ ಹೊಣೆಗಾರಿಕೆ ಈಗ ನಿಮ್ಮ ಹೆಗಲ ಮೇಲೆ ಬಂದಿದೆ. ಅದನ್ನು ಸಮರ್ಥವಾಗಿ ಮುನ್ನಡೆಸಲು ಬೇಕಾದ ಸ್ಥೈರ್ಯ, ಸಾಮರ್ಥ್ಯ ಮತ್ತು ದೂರದೃಷ್ಟಿ ನಿಮ್ಮಲ್ಲಿದೆ ಎಂಬ ದೃಢ ನಂಬಿಕೆ ನನಗಿದೆ ಎಂದು ತಿಳಿಸಿದ್ದಾರೆ.

ದೇಶದ ಏಕತೆ, ಅಖಂಡತೆಯನ್ನು ಕಾಪಾಡಲು ಹಾಗೂ ಸಂವಿಧಾನದ ಗೌರವವನ್ನು ಉಳಿಸಲು ನಾವು ಎರಡನೇ ಸ್ವಾತಂತ್ರ್ಯ ಹೋರಾಟ ನಡೆಸಬೇಕಾದ ಘಟ್ಟದಲ್ಲಿದ್ದೇವೆ. ಈ ಹೋರಾಟದಲ್ಲಿ ಕೇವಲ ವಿಧಾನಮಂಡಲ ಪಕ್ಷವಷ್ಟೇ ಅಲ್ಲ, ರಾಜ್ಯದ ಏಳು ಕೋಟಿ ಜನರೂ ನಿಮ್ಮೊಂದಿಗೆ ನಿಲ್ಲಲಿದ್ದಾರೆ. ನೀವು ಸದಾ ಯಶಸ್ಸನ್ನು ಸಾಧಿಸಲಿ ಎಂಬ ಹಾರೈಸಿದ್ದಾರೆ.

ಪ್ರಿಯ ಶಿವಕುಮಾರ್ ಅವರೇ, ಸಹೋದ್ಯೋಗಿಯಾಗಿ ಇಂದು ಕರ್ನಾಟಕವು ಕೇವಲ ಖಜಾನೆ ಹಾಗೂ ಆರ್ಥಿಕ ಬಲದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯವಷ್ಟೇ ಅಲ್ಲ, ಸಂಪತ್ತು, ಅಧಿಕಾರ ಮತ್ತು ಅವಕಾಶಗಳ ಸಮಾನ ಹಂಚಿಕೆಯಲ್ಲಿ ದೇಶಕ್ಕೆ ಮಾದರಿಯಾಗಿಯೂ ಹೊರಹೊಮ್ಮಿದೆ. ನಾವು ಜಾರಿಗೊಳಿಸಿರುವ ಪ್ರತಿಯೊಂದು ಜನಪರ ಯೋಜನೆಯೂ ಇತರ ರಾಜ್ಯಗಳಿಂದ ಮಾದರಿಯಾಗಿ ಸ್ವೀಕರಿಸಿ ಅನುಷ್ಠಾನಗೊಳ್ಳುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮಟ್ಟದಲ್ಲಿ ಕೆಲವು ರಾಜಕೀಯ ಹಿನ್ನಡೆಗಳನ್ನು ಎದುರಿಸಿದೆ. ಚುನಾವಣೆಯಲ್ಲಿ ನಾವು ಸೋಲಬಹುದು ಅಥವಾ ಗೆಲ್ಲಬಹುದು. ಆದರೆ ತಾತ್ವಿಕವಾಗಿ ನಾವು ಎಂದಿಗೂ ಸೋಲಬಾರದು. ಒಂದು ರಾಜಕೀಯ ಪಕ್ಷ ತಾತ್ವಿಕವಾಗಿ ಸೋತರೆ, ಆ ಪಕ್ಷವು ಚುನಾವಣೆಯಲ್ಲಿಯೂ ಗೆಲ್ಲಲು ಸಾಧ್ಯವಿಲ್ಲ ಹಾಗೂ ಕೊನೆಗೆ ನಾಶವಾಗುತ್ತದೆ ಎಂಬ ನಂಬಿಕೆ ನನ್ನದು ಎಂದು ತಿಳಿಸಿದರು.

ಡಿಕೆಶಿಗೆ ಅಭಿನಂದನೆ, ಸಿದ್ದುಗೆ ಧನ್ಯವಾದ ಹೇಳಿದ ಸುರ್ಜೇವಾಲ



ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ಕರ್ನಾಟಕ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಡಿ.ಕೆ ಶಿವಕುಮಾರ್ ಅಭಿನಂದನೆ ಮತ್ತು ಸಿದ್ದರಾಮಯ್ಯ ಅವರಿಗೆ ಧನ್ಯವಾದ ತಿಳಿಸಿದ್ದಾರೆ. ಡಿಕೆ ಶಿವಕುಮಾರ್ ಅವರು ಕರ್ನಾಟಕವನ್ನು ಸಮಗ್ರ ಅಭಿವೃದ್ಧಿ ಮತ್ತು ವೈಭವದ ಹೊಸ ಎತ್ತರಗಳಿಗೆ ಕೊಂಡೊಯ್ಯುವ ಮಹತ್ವಾಕಾಂಕ್ಷಿ ಕನಸನ್ನು ಹೊಂದಿದ್ದಾರೆ. ಅವರ ಎಲ್ಲಾ ಪ್ರಯತ್ನಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ. ಕರ್ನಾಟಕದ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ನಿರ್ವಹಿಸಿದ ಎಂಟು ವರ್ಷಗಳ ಅವಧಿ, ದೂರದೃಷ್ಟಿಯ ನಾಯಕತ್ವ, ಸಾಮಾಜಿಕ ನ್ಯಾಯದತ್ತ ಅಚಲ ಬದ್ಧತೆ ಹಾಗೂ ಜನಕಲ್ಯಾಣ ಮತ್ತು ಅಭಿವೃದ್ಧಿಯನ್ನು ಸಮಾನವಾಗಿ ಮುನ್ನಡೆಸಿದ ಸುವರ್ಣಯುಗವಾಗಿ ಸದಾ ನೆನಪಿನಲ್ಲಿ ಉಳಿಯಲಿದೆ ಎಂದು ಧನ್ಯವಾದ ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಫಲಿತಾಂಶ: ಶೇ.98.08ಕ್ಕೆ ಏರಿಕೆ

ಬೆಂಗಳೂರು: 2026ರ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ-2ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ(ಕೆಎಸ್‌ಇಎಬಿ) ಶನಿವಾರ ಪ್ರಕಟಿಸಿದ್ದು, ಶೇಕಡಾ 62.98ರಷ್ಟು ಫಲಿತಾಂಶ ದಾಖಲಾಗಿದ್ದು, ಇದರೊಂದಿಗೆ ಪರೀಕ್ಷೆ-1 ಮತ್ತು 2 ರ ಒಟ್ಟಾರೆ ಕ್ರೋಢೀಕೃತ ಫಲಿತಾಂಶವು ಶೇ. 98.08 ಕ್ಕೆ ಏರಿಕೆಯಾಗಿದೆ. 2025ರ ಸಾಲಿನ ಕ್ರೋಢೀಕೃತ ಫಲಿತಾಂಶಕ್ಕೆ (ಶೇ. 80.04) ಹೋಲಿಸಿದರೆ ಈ ಬಾರಿ ದಾಖಲೆಯ ಪ್ರಗತಿ ಕಂಡುಬಂದಿದೆ.

ರಾಜ್ಯಾದ್ಯಂತ ಮೇ 18 ರಿಂದ ಮೇ 25 ರವರೆಗೆ ಒಟ್ಟು 358 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ-2ನ್ನು ನಡೆಸಲಾಗಿತ್ತು. ಪರೀಕ್ಷೆ ಮುಗಿದು ಕೇವಲ ಮೂರೇ ದಿನಗಳಲ್ಲಿ ರಾಜ್ಯದ 8 ಶೈಕ್ಷಣಿಕ ಜಿಲ್ಲೆಗಳ 52 ಕೇಂದ್ರಗಳಲ್ಲಿ ಅತ್ಯಂತ ವೇಗವಾಗಿ ಮೌಲ್ಯಮಾಪನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಫಲಿತಾಂಶ ಪ್ರಕಟಿಸಲಾಗಿದೆ. ಪರೀಕ್ಷೆ-2ಕ್ಕೆ ಒಟ್ಟು 49,351 ಶಾಲಾ ವಿದ್ಯಾರ್ಥಿಗಳು, 18,471 ಹೊಸ ವಿದ್ಯಾರ್ಥಿಗಳು, 32,740 ಪುನರಾವರ್ತಿತ ವಿದ್ಯಾರ್ಥಿಗಳು ಹಾಗೂ 2,557 ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 1,03,119 ಅಭ್ಯರ್ಥಿಗಳು ಹಾಜರಾಗಿದ್ದರು.

ಪರೀಕ್ಷೆ-2 ಬರೆದ 49,351 ಶಾಲಾ ವಿದ್ಯಾರ್ಥಿಗಳಲ್ಲಿ 31,080 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಪರೀಕ್ಷೆ-1, ಪರೀಕ್ಷೆ-2 ಎರಡನ್ನೂ ಸೇರಿಸಿ ರಾಜ್ಯದಲ್ಲಿ ಈ ವರ್ಷ ಒಟ್ಟು 8,18,956 ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪಾಸ್ ಮಾಡಿದಂತಾಗಿದೆ. ಪರೀಕ್ಷೆ-2ರಲ್ಲಿ ಬಾಲಕರು ಉತ್ತಮ ಪ್ರದರ್ಶನ ನೀಡಿದ್ದು, ಪರೀಕ್ಷೆ ಬರೆದ 32,888 ಬಾಲಕರಲ್ಲಿ 20,815 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ. 63.29 ಫಲಿತಾಂಶ ದಾಖಲಿಸಿದ್ದಾರೆ. ಹಾಜರಾಗಿದ್ದ 16,463 ಬಾಲಕಿ ಯರಲ್ಲಿ 10, 265 ವಿದ್ಯಾರ್ಥಿನಿಯರು ಪಾಸ್ ಆಗಿದ್ದು, ಶೇ.62.35 ಫಲಿತಾಂಶ ಪಡೆದಿದ್ದಾರೆ.

ಈ ಬಾರಿ ಎಸೆಸ್ಸೆಲ್ಸಿ ಪರೀಕ್ಷೆ-3 ಇಲ್ಲ

ಈ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ-3 ನಡೆಸುವುದಿಲ್ಲ ಎಂದು ಶಿಕ್ಷಣ ಇಲಾಖೆ ಈಗಾಗಲೇ ಸ್ಪಷ್ಟಪಡಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ-1 ರಲ್ಲಿ ಉತ್ತಮ ಫಲಿತಾಂಶ ಬಂದಿರುವ ಹಿನ್ನೆಲೆಯಲ್ಲಿ ಮೂರನೇ ಪರೀಕ್ಷೆ ನಡೆಸುವ ಅಗತ್ಯ ಇಲ್ಲವೆಂದು ಶಿಕ್ಷಣ ಸಚಿವರು ತಿಳಿಸಿದ್ದರು. ಅದರಂತೆ ವಿದ್ಯಾರ್ಥಿಗಳಿಗೆ ಈ ಬಾರಿ ಪರೀಕ್ಷೆ-2 ಕೊನೆಯ ಅವಕಾಶವಾಗಿತ್ತು.

ಮಹಿಳೆಯರಿಂದ ಕಾನೂನು ದುರ್ಬಳಕೆ: ಸುಪ್ರೀಂ ಆತಂಕ

ಪುಟ 1 → ಪತಿಯ ವಿರುದ್ಧ ಲೈಂಗಿಕ ಕಿರುಕುಳದ ಸುಳ್ಳು ಪೋಸ್ಕೋ ಕೇಸುಗಳನ್ನು ಮತ್ತು ಸ್ವಂತ ಅಪ್ರಾಪ್ತ ಮಗಳ ಮೇಲೆಯೇ ಪತಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆಂದು(ಮಗಳಿಂದ ಬಲವಂತವಾಗಿ ಕೇಸು ಕೊಡಿಸುವ) ಸುಳ್ಳು ಪ್ರಕರಣ ದಾಖಲಿಸುವಂತಹ ವೈಪರೀತ್ಯಗಳೂ ನಡೆಯುತ್ತಿರುವುದನ್ನು ನ್ಯಾಯಾಲಯ ಕಳವಳದಿಂದ ಉಲ್ಲೇಖಿಸಿದೆ.

ಇತ್ತೀಚಿನ ದಿನಗಳಲ್ಲಿ, ಸಂಬಂಧ ಹಳಸಿದ ಬಳಿಕ ಸಂಗಾತಿಯಿಂದ 'ವೈವಾಹಿಕ ಪುಷ್ಪಗುಚ್ಛ' ನೀಡಲಾಗುತ್ತಿದೆ ಎಂದು ನ್ಯಾ.ಬಿ.ವಿ. ನಾಗರತ್ನ ಮತ್ತು ನ್ಯಾ.ಉಜ್ವಲ್ ಭೂಯಾನ್ ಅವರನ್ನೊಳಗೊಂಡ ಪೀಠ ಮಾರ್ಮಿಕವಾಗಿ ವ್ಯಾಖ್ಯಾನಿಸಿದೆ. ಇಂತಹ ಕೇಸಿನ ಸೆಟ್‌ಗಳಲ್ಲಿ, ಮತ್ತೆ ಮತ್ತೆ ಬೋಗಸ್ ಹಾಗೂ ಹುಸಿ ಆರೋಪಗಳು, ದೌರ್ಜನ್ಯ, ಕ್ರೌರ್ಯ, ವೈವಾಹಿಕ ಬದುಕಿನ ಸಂಕಷ್ಟಗಳ ಕುರಿತಾದ ಸುಳ್ಳು ಹೇಳಿಕೆಗಳನ್ನು ಕಾಣಬಹುದಾಗಿದೆ. ಆದರೆ ಇವುಗಳಿಗೆ ಯಾವುದೇ ಸೂಕ್ತ ಆಧಾರ, ಸಾಕ್ಷ್ಯಗಳ ಬೆಂಬಲ ಕಂಡುಬರುವುದಿಲ್ಲ. ಇಂತಹ ನಕಲಿ ಪ್ರಕರಣಗಳ ಮೂಲಕ ನ್ಯಾಯಾಲಯಗಳನ್ನು ದುರುಪಯೋಗಪಡಿಸುವ ಮತ್ತು ನ್ಯಾಯಾಲಯಗಳಿಗೆ ಹೊರೆಯುಂಟು ಮಾಡುತ್ತಿರುವ ಬಗ್ಗೆ ನ್ಯಾಯಪೀಠ ನೋವಿನಿಂದ ಉಲ್ಲೇಖಿಸಿದೆ. ಈಗ ಕಾಳಿನಿಂದ ಜೊಳ್ಳನ್ನು ಬೇರ್ಪಡಿಸುವ ಕೆಲಸ ಆಗಬೇಕಿದೆ. ಇಂತಹ ಸುಳ್ಳು ಪ್ರಕರಣಗಳ ಹಾವಳಿಯಿಂದ ನಿಜವಾಗಿಯೂ ಅನ್ಯಾಯಕ್ಕೊಳಗಾದ ಮುಗ್ಧರನ್ನು ಸೋಲದಂತೆ ನೋಡಿಕೊಳ್ಳಬೇಕಿದೆ ಎಂದು ನ್ಯಾಯಾಲಯ ಕಳಕಳಿ ವ್ಯಕ್ತಪಡಿಸಿದೆ.

ಇಂತಹ ಯಾವುದೇ ತಪ್ಪು ಹೆಜ್ಜೆ ಸಂಬಂಧಿಸಿದವರ ದೈಹಿಕ, ಮಾನಸಿಕ ಆರೋಗ್ಯದ ಮೇಲೆ ಬೀಳಬಹುದಾದ ಹಾನಿಕಾರಕ ಪರಿಣಾಮ ಮತ್ತು ವಿವಾಹದ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವುದರಿಂದ ಇಂತಹ ಪ್ರಕರಣಗಳ ವಿಚಾರಣೆಯಲ್ಲಿ ನ್ಯಾಯಾಲಯಗಳು ಹೆಚ್ಚು ಸಂಯಮ ವಹಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಹೇಳಿತು.

ದಾಳಿ ಸಂಚು: 9 ಶಂಕಿತ ಉಗ್ರರ ಸೆರೆ

ಪುಟ 1 → ದಿಲ್ಲಿಯ ಪ್ರಮುಖ ಸೇನಾ ನೆಲೆಗಳು ಮತ್ತು ಭದ್ರತಾ ಸಿಬ್ಬಂದಿ ಮೇಲೆ ದಾಳಿ ನಡೆಸಲು ಯೋಜಿಸುತ್ತಿದ್ದ ಐಎಸ್‌ಐ-ಮುಂಬೈ ಭೂಗತ ಜಾಲಕ್ಕೆ ಸಂಬಂಧಿಸಿದ 9 ಶಂಕಿತ ಉಗ್ರರನ್ನು ಪೊಲೀಸರ ವಿಶೇಷ ಘಟಕ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

ಪ್ರಮುಖ ಸೇನಾ ನೆಲೆಗಳು ಮತ್ತು ಭದ್ರತಾಸಿಬ್ಬಂದಿಮೇಲೆದಾಳಿಮಾಡಲು ಅವರನ್ನು ನಿಯೋಜಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಶಂಕಿತ ಉಗ್ರರ ದಾಳಿ ಯೋಜನೆಯಲ್ಲಿ ಪರಮಾಣು ಸೌಲಭ್ಯಗಳು, ವಿಮಾನ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು ಮತ್ತು ವಿದ್ಯುತ್ ಸ್ಥಾವರಗಳು ಇದ್ದವು ಎಂದು ಮೂಲಗಳು ತಿಳಿಸಿವೆ. ಕೆಲ ಸಮಯದಿಂದ ಈ ತಂಡ ಪೊಲೀಸ್ ಕಣ್ಗಾವಲಿನಲ್ಲಿ ಇತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಂಟ್ರಿ ಬಂದೂಕು ತಯಾರಿಸುತ್ತಿದ್ದ ಖದೀಮರ ಬಂಧನ

9 ಪಿಸ್ತೂಲ್ ವಶ: 13 ಆರೋಪಿಗಳ ಸೆರೆ

ಬೆಳಗಾವಿ: ಜಿಲ್ಲೆಯ ಖಾನಾಪೂರ ತಾಲೂಕಿನಲ್ಲಿ ಅಕ್ರಮವಾಗಿ ಕಂಟ್ರಿ ಪಿಸ್ತೂಲ್ ತಯಾರಿಸುತ್ತಿದ್ದ 13 ಆರೋಪಿಗಳನ್ನು ಬಂಧಿಸಿದ ಬೆಳಗಾವಿ ಪೊಲೀಸರು, ಆರೋಪಿಗಳಿಂದ 9 ಪಿಸ್ತೂಲ್ ಹಾಗೂ ಮದ್ದು ಗುಂಡುಗಳು, ತಯಾರಿಕೆಗೆ ಉಪಯೋಗಿಸುತ್ತಿದ್ದ ಸಾಮುಗ್ರಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಕೆ. ರಾಮರಾಜನ್ ಹೇಳಿದರು.



ಶನಿವಾರ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಖಾನಾಪೂರ ತಾಲೂಕಿನ ಕಾಟಗಾಳಿ ಗ್ರಾಮದಲ್ಲಿ 9 ಕಂಟ್ರಿ ಬಂದೂಕುಗಳ ಜಪ್ತಿ ಮಾಡಲಾಗಿದೆ. ಬಂದೂಕು ತಯಾರಿಸುತ್ತಿದ್ದವ, ಬಂದೂಕು ಖರೀದಿಸಿದವರು, ಅಕ್ರಮವಾಗಿ ಮದ್ದುಗುಂಡುಗಳನ್ನು ಮಾರಾಟ ಮಾಡಿದವರು ಮತ್ತು ಬಂದೂಕಿನ ಬ್ಯಾರೆಲ್‌ಗಳನ್ನು ವೆಲ್ಡಿಂಗ್ ಮಾಡಿಕೊಡುತ್ತಿದ್ದವನು ಸೇರಿ 13 ಜನರನ್ನು ಬಂಧಿಸಿದ್ದೇವೆ ಎಂದರು. ಆರೋಪಿ ಮಾರುತಿ ಶ್ರೀಕಾಂತ್ ಸುತಾರ ಇವನು ಕಾಟಗಾಳಿ ಗ್ರಾಮದಲ್ಲಿಯ ತನ್ನ ಮನೆಯಲ್ಲಿ ಅಕ್ರಮವಾಗಿ 2024ರಿಂದ ಈವರೆಗೆ ಕಂಟ್ರಿ ಬಂದೂಕುಗಳನ್ನು ತಯಾರಿಸಿ ಜನರಿಗೆ ಮಾರಾಟ ಮಾಡುತ್ತಿರುವ ಮಾಹಿತಿ ಸಂಗ್ರಹಿಸಿ ದಾಳಿ ಮಾಡಲಾಗಿತ್ತು. ಸಿದ್ರಾಮ ಅಜ್ಜಪ್ಪ ಹಸರೆ ಖಾನಾಪೂರ ಪೊಲೀಸ್ ಠಾಣೆಯಲ್ಲಿ ಮೇ 11ರಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದರು.

ಆರೋಪಿ ಮಾರುತಿ ಶ್ರೀಕಾಂತ್ ಸುತಾರನನ್ನು ಬಂಧಿಸಿ ಆತನಿಂದ ತಯಾರಿ ಸ್ಥಿತಿಯಲ್ಲಿದ್ದ ಒಂದು ಕಂಟ್ರಿ ಬಂದೂಕು ಹಾಗೂ ಈ ಆರೋಪಿತನಿಂದ ಕಂಟ್ರಿ ಬಂದೂಕುಗಳನ್ನು ಖರೀದಿಸಿದ ಕಾಟಗಾಳಿ ಗ್ರಾಮದ ಸೋಮನಾಥ ಪಲ್ಲಾದ ಚೌಗುಲೆ, ಸಂತೋಷ ಶಿವಾಜಿ ನಾಯಕ, ಮಾರುತಿ ಯಲ್ಲಪ್ಪ ಗುಡದ್ಯಾಗೋಳ, ಬಾಳು ಭರಮಾಣಿ ನಾಯಕ ಮತ್ತು ಲಕ್ಷ್ಮಣ ಬಾಲಪ್ಪ ಗುಜನಾಳ, ಬಸವರಾಜ ಗಂಗಪ್ಪ ಸಾಲೋಟಗಿ, ಬಸವಂತ ಭರಮಾಣಿ ಯರಮಾಳಕರ, ಲಕ್ಷ್ಯಾಲ ಈಶ್ವರ ಗುರವ ಇವರ ಕಡೆಯಿಂದ ತಲಾ ಒಂದರಂತೆ 8 ಕಂಟ್ರಿ ಬಂದೂಕುಗಳನ್ನು ಜಪ್ತ ಮಾಡಲಾಗಿದೆ.

ಹೆಚ್ಚುವರಿ ಎಸ್.ಪಿ ಮಾರ್ಗದರ್ಶನ ಮತ್ತು ಡಿಎಸ್‌ಪಿ ಬೈಲಹೊಂಗಲ ಇವರ ನೇತೃತ್ವದಲ್ಲಿ ಎಲ್.ಎಚ್ ಗೌಂಡಿ, ಪಿ.ಐ.ಖಾನಾಪೂರ, ಠಾಣಾಧಿಕಾರಿ, ಸಿಬ್ಬಂದಿಗಳೊಂದಿಗೆ ತನಿಖೆ ಕೈಕೊಂಡು ಆರೋಪಿತರಿಗೆ, ಕಂಟ್ರಿ ಬಂದೂಕುಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ಶ್ಲಾಘಿಸಿದರು.

ಗೊಂದಲದಲ್ಲಿ ಡಿಕೆಶಿ ಇನ್ನಿಂಗ್ಸ್: ಸಂಸದ ಬೊಮ್ಮಾಯಿ

ಬೆಂಗಳೂರು: ಡಿ.ಕೆ. ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ರಾಜ್ಯದ ಜನತೆ ಈಗಾಗಲೇ ಈ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ. ಅವರಿಗೆ ಅವಕಾಶ ಬಂದಾಗ ಈ ಸರ್ಕಾರವನ್ನು ಕಿತ್ತೊಗೆಯಲಿದ್ದಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನಲ್ಲಿನ ನಾಯಕತ್ವ ಬದಲಾವಣೆ ರಾಜ್ಯದ ಆಡಳಿತದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ. ಇದು ಕಾಂಗ್ರೆಸ್ ದುರಾಡಳಿತದ ಮುಂದುವರೆದ ಭಾಗ. ರಾಜ್ಯದ ಆರ್ಥಿಕತೆಯ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಹಾನಿ ಮಾಡಲಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯ ಆಗಿದ್ದು, ವ್ಯವಸ್ಥೆಯನ್ನು ಸುಧಾರಿಸಲು ಡಿ.ಕೆ. ಶಿವಕುಮಾರ್ ಅವರಿಗೆ ಸಮಯ ಸಿಗುತ್ತದೆಯೊ ಇಲ್ಲವೊ ಗೊತ್ತಿಲ್ಲ ಎಂದರು.

ಸಂಪುಟ ರಚನೆಯ ಕಸರತ್ತಿನಲ್ಲಿ ಆಂತರಿಕ ಭಿನ್ನಮತ ಹೊರಬರುತ್ತಿದೆ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಮಾಡದಿರುವುದರಿಂದ ಒಬಿಸಿ, ಎಸ್ಸಿ-ಎಸ್ಟಿ ಸಮುದಾಯದವರು ಅಸಮಾಧಾನಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಡಿ.ಕೆ. ಶಿವಕುಮಾರ್ ಗೊಂದಲದ ವಾತಾವರಣದಲ್ಲಿ ತಮ್ಮ ಇನ್ನಿಂಗ್ಸ್ ಆರಂಭಿಸುತ್ತಿದ್ದಾರೆ. ಕರ್ನಾಟಕದ ಜನತೆ ಈಗಾಗಲೇ ಈ ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದರು. ಹೊಸ ಸಂಪುಟ ಸೇರಲು ಪ್ರಥಮ ಬಾರಿ ಆಯ್ಕೆಯಾದವರಿಂದ ಹಿಡಿದು ಐದಾರು ಬಾರಿ ಆಯ್ಕೆಯಾದವರೂ ಲಾಬಿ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿದ್ದ ಸಚಿವರು ಸ್ಥಾನ ಬಿಟ್ಟು ಕೊಡಲು ಸಿದ್ಧರಿಲ್ಲ ಎಂದರು.

ಬಿರುಗಾಳಿ ಮಳೆಗೆ ನೆಲಕ್ಕುರುಳಿದ ಮರಗಳು

ಚಿಕ್ಕಮಗಳೂರು: ಶುಕ್ರವಾರ ತಡರಾತ್ರಿ ಸುರಿದ ಭಾರೀ ಬಿರುಗಾಳಿ ಮಳೆಯಿಂದಾಗಿ ನಗರದ ವಿವಿಧೆಡೆ ಸರಣಿ ಆಸ್ತಿ ಪಾಸ್ತಿಗೆ ಸಾಕಷ್ಟು ಹಾನಿ ಸಂಭವಿಸಿದೆ. ರಾತ್ರಿ 12.45 ರ ಸುಮಾರಿಗೆ ಬಿರುಗಾಳಿ, ಗುಡುಗು, ಸಿಡಿಲಿನೊಂದಿಗೆ ಮಳೆಯ ಆರ್ಭಟ ಆರಂಭವಾಯಿತು. ಸುಮಾರು ಒಂದೂವರೆ ಗಂಟೆ ಕಾಲ ಗಾಳಿ, ಮಳೆಯ ಅಬ್ಬರ ಮುಂದುವರಿದ ಪರಿಣಾಮ 20 ಹೆಚ್ಚು ವಿದ್ಯುತ್ ಕಂಬಗಳು, ಹತ್ತಾರು ಮರಗಳು ಬುಡಮೇಲಾದವು. ಹೈಟೆನ್ಶನ್ ವಿದ್ಯುತ್ ಲೈನ್‌ಗಳ ಮೇಲೆ ಭಾರೀ ಗಾತ್ರದ ಮರಗಳು ಉರುಳಿಬಿದ್ದ ಪರಿಣಾಮ ಒತ್ತಡ ತಡೆದು ಕೊಳ್ಳಲಾಗದೆ ಸಾಲು ಸಾಲಾಗಿ ವಿದ್ಯುತ್ ಕಂಬಗಳು ಉರುಳಿ ಬೀಳುವಂತಾಯಿತು. ಕ್ಲಬ್ ಆವರಣದಲ್ಲಿ ನಾಲ್ಕೈದು ಮರಗಳು ಉರುಳಿಬಿದ್ದಿದ್ದು, ಈ ಪೈಕಿ ಒಂದು ಬೃಹತ್ ಮರ ಕಾಂಪೌಡ್ ಪಕ್ಕದ ರಸ್ತೆ ಬದಿ ಹಾದು ಹೋಗಿದ್ದ ವಿದ್ಯುತ್ ಲೈನ್ ಮೇಲೆ ಬಿದ್ದ ಪರಿಣಾಮ 8 ವಿದ್ಯುತ್ ಕಂಬಗಳು, ಬೇಲೂರು ರಸ್ತೆಯಲ್ಲಿ 4 ಮರಗಳು ವಿದ್ಯುತ್ ಲೈನ್ ಮೇಲೆ ಬಿದ್ದು ಕಂಬಗಳಿಗೆ ಹಾನಿ ಸಂಭವಿಸಿದೆ.

ಶೇ.96.5 ಮನೆಗಳಿಗೆ ಶುದ್ಧ ನೀರು

ಪುಟ 1 → ಇದು ನಗರ ಪ್ರದೇಶದಲ್ಲಿ ಶೇ.18.2 ಆಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ.19.1ರಷ್ಟಾಗಿದೆ. 2021ರ ಸಮೀಕ್ಷೆಯಲ್ಲಿದು ಶೇ.14ರಷ್ಟು ಮಾತ್ರ ಇತ್ತು.

ಗೃಹ ಹಿಂಸೆ ಶೇ.22ಕ್ಕೆ ಇಳಿಕೆ: ಮಹಿಳೆಯರಲ್ಲಿ ಬೊಜ್ಜಿನ ಸಮಸ್ಯೆ 2019-21ಕ್ಕೆ ಹೋಲಿಸಿದರೆ ಶೇ.7ರಷ್ಟು ಹೆಚ್ಚಿರುವ ಅಂಶ ವ್ಯಕ್ತವಾಗಿದೆ. ಇದೇ ವೇಳೆ ಕೌಟುಂಬಿಕ ಹಿಂಸೆ ಪ್ರಕರಣಗಳು ಶೇ.29.2ರಿಂದ ಶೇ.22.3ಕ್ಕೆ ಇಳಿಕೆಯಾಗಿದೆ. ಬಾಲ್ಯ ವಿವಾಹ ಪ್ರಮಾಣ ಕೂಡ ಶೇ.23.3ರಿಂದ ಶೇ.20.1ಕ್ಕೆ ಇಳಿಕೆಯಾಗಿದ್ದು, ಉದ್ಯೋಗಸ್ಥ ಮಹಿಳೆಯರ ಪ್ರಮಾಣ ಶೇ.25.4ರಿಂದ ಶೇ.30.8ಕ್ಕೆ ಗಣನೀಯವಾಗಿ ಏರಿಕೆಯಾಗಿರುವುದು ಕಂಡುಬಂದಿದೆ.

ದೇಶದ 715 ಜಿಲ್ಲೆಗಳಲ್ಲಿನ ಸುಮಾರು 6.79 ಲಕ್ಷ ಕುಟುಂಬಗಳನ್ನು ಸಮೀಕ್ಷೆಗೊಳಪಡಿಸಲಾಗಿದ್ದು, ಜನಸಂಖ್ಯೆ, ಆರೋಗ್ಯ, ಪೌಷ್ಟಿಕತೆ ಮತ್ತು ಕುಟುಂಬ ಕಲ್ಯಾಣದ ಅಂಶಗಳನ್ನು ಈ ಸಮೀಕ್ಷೆ ಹೊರಹಾಕಿದೆ.

ಸಿಸೇರಿಯನ್ ಹೆರಿಗೆ ತೀವ್ರ ಹೆಚ್ಚಳ: ಈ ನಡುವೆ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ ಹೆರಿಗೆಗಳು ದಾಖಲೆಯ ಶೇ.54.1ಕ್ಕೇರಿದ್ದರೆ, ಮೊದಲ ಆರು ತಿಂಗಳ ಕಾಲ ಪ್ರತ್ಯೇಕವಾಗಿ ಹಾಲುಣಿಸುವ ಪ್ರಮಾಣ ಶೇ.63.7ರಿಂದ ಶೇ.55.8ಕ್ಕೆ ಇಳಿದಿದೆ. ಆದರೆ ಮಾತ್ರೆ, ಕಾಂಡೋಮ್, ಸಂತಾನಹರಣದಂತಹ ಆಧುನಿಕ ಕುಟುಂಬ ಯೋಜನಾ ವಿಧಾನಗಳನ್ನು ಬಳಸುವವರ ಪ್ರಮಾಣ ಶೇ.56.4ರಿಂದ ಶೇ.52.7ಕ್ಕೆ ಇಳಿದಿದೆ.

2021ರ ಸಮೀಕ್ಷೆಯಲ್ಲಿ ಪೌಷ್ಟಿಕತೆ ಕೊರತೆಯ ಮಕ್ಕಳಲ್ಲಿ ಬೆಳವಣಿಗೆ ಕುಂಠಿತ ಪ್ರಮಾಣ ಶೇ.35.5ರಷ್ಟಿತ್ತು. ಅದೀಗ ಶೇ.29.3ಕ್ಕಿಳಿದಿದೆ. ಮಕ್ಕಳಲ್ಲಿ ಎತ್ತರದ ಪ್ರಮಾಣ ಶೇ.6.2ಕ್ಕೆ ಸುಧಾರಣೆಯಾಗಿದ್ದು, ಇದೊಂದು ಧನಾತ್ಮಕ ಬೆಳವಣಿಗೆ ಎನಿಸಿದೆ. 6ರಿಂದ 2ವರ್ಷ ನಡುವಣ ಮಕ್ಕಳಿಗೆ ಸೂಕ್ತ ಮತ್ತು ಸಮತೋಲಿತ ಪೌಷ್ಟಿಕಾಂಶ ಲಭ್ಯತೆಯು ಶೇ.15.3ರಷ್ಟು ಮಾತ್ರ ಇದ್ದು, ಶೇ.85ರಷ್ಟು ಮಂದಿಗೆ ಇನ್ನೂ ಅಗತ್ಯ ಪೌಷ್ಟಿಕಾಂಶಯುಕ್ತ ಆಹಾರ ಲಭಿಸುತ್ತಿಲ್ಲ ಎಂಬುದು ವ್ಯಕ್ತವಾಗಿದೆ.

ಕೌಟುಂಬಿಕ ಹಿಂಸೆ ಬಿಹಾರದಲ್ಲಿ ಅಧಿಕ: ಬಾಲ್ಯ ವಿವಾಹ ಪ್ರಮಾಣ ಕೇರಳದಲ್ಲಿ ಶೇ.2.9ರಷ್ಟು ಕನಿಷ್ಠ ಪ್ರಮಾಣದಲ್ಲಿದ್ದರೆ, ಇದು ಪಶ್ಚಿಮ ಬಂಗಾಳದಲ್ಲಿ ಶೇ.36.4 ಮತ್ತು ಬಿಹಾರದಲ್ಲಿ ಶೇ.34.6ರಷ್ಟು ಗರಿಷ್ಠ ಪ್ರಮಾಣದಲ್ಲಿದೆ. ಕೌಟುಂಬಿಕ ಹಿಂಸೆಯ ಪ್ರಕರಣಗಳು ಹಿಮಾಚಲ ಪ್ರದೇಶದಲ್ಲಿ ಕನಿಷ್ಠ ಪ್ರಮಾಣ(ಶೇ.4.3)ದಲ್ಲಿದ್ದರೆ, ಬಿಹಾರದಲ್ಲಿ ಗರಿಷ್ಠ (ಶೇ.36.1)ಪ್ರಮಾಣದಲ್ಲಿದೆ. ಅಚ್ಚರಿ ಎಂದರೆ ಕೇರಳದಲ್ಲಿ ಸಾಕ್ಷರತೆ ಪ್ರಮಾಣ ಹೆಚ್ಚಾಗಿದ್ದರೂ, ಇದೀಗ ಕೌಟುಂಬಿಕ ಹಿಂಸೆಯ ಪ್ರಮಾಣ ಕೂಡ ಶೇ.9.8 (2019-21)ರಿಂದ ಶೇ.17.7ಕ್ಕೆ ತೀವ್ರವಾಗಿ ಏರಿರುವ ಆತಂಕಕಾರಿ ಅಂಶವೂ ಸಮೀಕ್ಷೆಯಿಂದ ವ್ಯಕ್ತವಾಗಿದೆ.

ಬೊಜ್ಜಿನ ಸಮಸ್ಯೆ ಹೆಚ್ಚಳ: ಆಂಧ್ರಪ್ರದೇಶ(ಶೇ.48), ಸಿಕ್ಕಿಂ(ಶೇ.48), ಕೇರಳದ(ಶೇ.46.7) ಮಹಿಳೆಯ ರಲ್ಲಿ ಬೊಜ್ಜಿನ ಸಮಸ್ಯೆ ತೀವ್ರವಾಗಿರುವುದು ಕಂಡು ಬಂದಿದೆ. ಈ ಸಮಸ್ಯೆ ಮೇಘಾಲಯ(ಶೇ.13.8), ಜಾರ್ಖಂಡ್‌ನಲ್ಲಿ(ಶೇ.16.9) ಅತಿ ಕಡಿಮೆ ಪ್ರಮಾಣದಲ್ಲಿದೆ.

ಜಾಗತಿಕವಾಗಿ 84 ಕೋಟಿ ಮಹಿಳೆಯರು ಪತಿ ಅಥವಾ ಗೆಳೆಯನಿಂದ ಲೈಂಗಿಕ ದೌರ್ಜನ್ಯಕ್ಕೆ ಈಡಾಗುತ್ತಿದ್ದರೆ, ಭಾರತದಲ್ಲಿ ಶೇ.30ರಷ್ಟು ಮಂದಿ ವೈವಾಹಿಕ ಬದುಕಿನಲ್ಲಿ ಮಾನಸಿಕ, ಆರ್ಥಿಕ ಮತ್ತು ಲೈಂಗಿಕ ಹಿಂಸೆ ಎದುರಿಸುತ್ತಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ವರದಿ ಹೇಳಿದೆ. ಆದಾಗ್ಯೂ 2000 ಇಸವಿಯ ಬಳಿಕ ಇದೀಗ ಪರಿಸ್ಥಿತಿಯಲ್ಲಿ ಸ್ವಲ್ಪ ಸುಧಾರಣೆ ಕಂಡುಬಂದಿದೆ. ಜಾಗತಿಕ ಮಟ್ಟದಲ್ಲಿ 15-49 ವಯಸ್ಸಿನ ಮಹಿಳೆಯರ ಪೈಕಿ ಶೇ.8.4ರಷ್ಟು ಮಂದಿ ಗಂಡನಲ್ಲದ ಜತೆಗಾರನಿಂದ ಲೈಂಗಿಕ ಹಿಂಸೆಗೀಡಾಗುತ್ತಿದ್ದಾರೆ. ಭಾರತದಲ್ಲಿ ಇದು ಶೇ.4ರಷ್ಟಿದೆ.

ನಿವೃತ್ತ ನ್ಯಾ.ಪಿ.ಎನ್. ದೇಸಾಯಿ ಮಾನವ ಹಕ್ಕು ಆಯೋಗ ಅಧ್ಯಕ್ಷ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನದಿಂದ ನಿರ್ಗಮಿಸುವ ಮೊದಲು ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರನ್ನು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ.



ಈ ನೇಮಕ ರಾಜ್ಯ ರಾಜಕೀಯದಲ್ಲಿ ಪಕ್ಷಪಾತದ ಹೊಸ ಆರೋಪಗಳಿಗೆ ಕಾರಣವಾಗಿದೆ. ಮೇ 28 ರಂದು ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವ ಕೆಲವೇ ದಿನಗಳ ಮೊದಲು, ಮೇ 21 ರ ಸುಮಾರಿಗೆ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಅವರನ್ನು ನೇಮಕ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿತ್ತು.

ಮುಖ್ಯಮಂತ್ರಿಗಳ ಪತ್ನಿ ಪಾರ್ವತಿ ಸಿದ್ದರಾಮಯ್ಯ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ಪಡೆದ ನಿವೇಶನ ಸಂಬಂಧ, ಭೂ ಮಂಜೂರಾತಿ ಪ್ರಕರಣದ ತನಿಖೆ ನಡೆಸಿದ ಏಕಸದಸ್ಯ ನ್ಯಾಯಾಂಗ ಆಯೋಗದ ನೇತೃತ್ವವನ್ನು ನ್ಯಾಯಮೂರ್ತಿ ದೇಸಾಯಿ ವಹಿಸಿದ್ದರು, ಈ ಮುಡಾದಿಂದ ಪರ್ಯಾಯ ನಿವೇಶನಗಳ ಹಂಚಿಕೆ ಕಾನೂನುಬಾಹಿರವಲ್ಲ ಎಂದು ತೀರ್ಮಾನಿಸಿ ನ್ಯಾಯಮೂರ್ತಿ ದೇಸಾಯಿ ಆಯೋಗವು ಸಿದ್ದರಾಮಯ್ಯ ಮತ್ತು ಅವರ ಕುಟುಂಬಕ್ಕೆ ಕ್ಲೀನ್ ಚಿಟ್ ನೀಡಿತು. ಈ ವರದಿಯನ್ನು ಸೆಪ್ಟೆಂಬರ್ 2025 ರಲ್ಲಿ ರಾಜ್ಯ ಸಚಿವ ಸಂಪುಟ ಅಂಗೀಕರಿಸಿತು.

ಮೂರಿನಕಟ್ಟೆ ವಿಚಾರದಲ್ಲಿ ಸರ್ಕಾರ ಮೌನ ಪ್ರಶ್ನಿಸಿದ ಕೋಟ

ಕುಂದಾಪುರ: ಸಮಾನತೆಯನ್ನು ನೋಡಬೇಕಾದುದು ಸರಕಾರದ ಮತ್ತು ಸಂವಿಧಾನದ ಜವಾಬ್ದಾರಿ. ದುರದೃಷ್ಟಕ್ಕೆ ಇಡೀ ಕಾಂಗ್ರೆಸ್ ಸರಕಾರ ಹಿಂದುಗಳ ಬದುಕಿನ ಹಕ್ಕಿನ ಪ್ರಶ್ನೆ ಬಂದಾಗ ನಿರ್ಲಕ್ಷ್ಯ ವಹಿಸುವುದು, ನಿರ್ಲಿಪ್ತತೆ ಮಾಡುವುದು ನಡೆಯುತ್ತಿದೆ ಸಂಸದ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.



ಹೆಮ್ಮಾಡಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಟ್ಕಳ ಪ್ರಕರಣದಲ್ಲಿ ತಕ್ಷಣ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಂಡು, ನಿಮ್ಮ ಜೊತೆ ನಾವಿದ್ದೇವೆ ಎಂದು ವಿಶ್ವಾಸ ಮೂಡಿಸಿದ್ದರೆ ಇಂತಹ ಗೊಂದಲಗಳು ಆಗಿರಲು ಸಾಧ್ಯವಿರಲಿಲ್ಲ. ಹಿಂದುಗಳೆಲ್ಲ ಒಟ್ಟಾಗಿ ಬೀದಿಗೆ ಬಂದು ನಮ್ಮ ಬದುಕಿನ ಹಕ್ಕನ್ನು ರಕ್ಷಿಸಿ ಕೊಡಿ ಎಂದು ಸರಕಾರಕ್ಕೆ ಮನವಿ ಮಾಡಿರುವುದು ನೋವಿನ ಸಂಗತಿ. ಈ ಸಂಕಟದ ಸಮಯದಲ್ಲಿ ಎಲ್ಲಾ ಹಿಂದುಗಳ ನೋವಿನ ಪರವಾಗಿ ನಿಲ್ಲಬೇಕಾದ ಜವಾಬ್ದಾರಿ ಇದೆ. ನಾವೆಲ್ಲ ಹಿಂದುಗಳ ಪರವಾಗಿ ನಿಲ್ಲುತ್ತೇವೆ. ಸರಕಾರ ಏನು ಮಾಡುತ್ತದೆಯೋ ಮಾಡಿಕೊಳ್ಳಲಿ ಎಂದು ಅವರು ಸವಾಲು ಹಾಕಿದರು. ಹಿಂದುಗಳಿಗೆ ಅನ್ಯಾಯ ಆದರೆ ಯಾರನ್ನು ಏನೂ ಮಾಡದೆ ಇರುವ ಪರಂಪರೆ ಈ ಸರಕಾರದಲ್ಲಿ ಬೆಳೆದಿರುವ ಹಿನ್ನಲೆಯಲ್ಲಿ ಸಹಜವಾಗಿ ಸಮಾಜದಲ್ಲಿ ಗೊಂದಲ ಸೃಷ್ಟಿಯಾಗುತ್ತಿದ್ದು, ಭಟ್ಕಳದಲ್ಲಿ ಒಂದು ಸಮುದಾಯವರು ಬಂದು ಹಿಂದುಗಳ ಪೂಜಾ ಸ್ಥಳವಾದ ಮೂರಿನಕಟ್ಟೆಯನ್ನು ಒಡೆದು ಹೋದಾಗ, ಸರಕಾರ ನಿರ್ಲಿಪ್ತವಾದರೆ ಅನಿವಾರ್ಯವಾಗಿ ಹಿಂದು ಸಮಾಜ ಬಡಿದೆಳುವ ಪರಿಸ್ಥಿತಿ ಇದೆ. ಇಡೀ ರಾಜ್ಯದಲ್ಲಿ ಇದೇ ವಾತಾವರಣ ಇದೆ. ನೀವು ಹಿಂದುಗಳಿಗೆ ಏನು ಮಾಡಿದರೂ ಆಗುತ್ತದೆ, ಎಷ್ಟೇ ಅಪಮಾನ ಮಾಡಿದರೂ ಆಗುತ್ತದೆ ಎಂಬ ಪರಂಪರೆಯನ್ನು ಸರಕಾರ ಇಟ್ಟುಕೊಂಡಾಗ ಮತ್ತು ಹಿಂದುಗಳಿಗೆ ಅನ್ಯಾಯವಾದರೆ ಹಿಂದುಗಳ ಮೇಲೆಯೇ ಕೇಸು ಮಾಡುತ್ತೇವೆ ಎಂದು ದಬ್ಬಾಳಿಕೆ ಮಾಡಿದಾಗ, ಕೊನೆಯಲ್ಲಿ ಸಹನೆಯ ಕಟ್ಟೆ ಒಡೆದಿರುವ ಸಣ್ಣ ಉದಾಹರಣೆ ಭಟ್ಕಳದಲ್ಲಿ ನಡೆದಿದೆ ಎಂದರು.

ಶಾಸಕರ ಬೆಂಬಲ



ವಿಧಾನಸಭೆಯ ಸಮ್ಮೇಳನ ಸಭಾಂಗಣದಲ್ಲಿ ಶನಿವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾದ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕರು ಕೈ ಎತ್ತುವ ಮೂಲಕ ಬೆಂಬಲಿಸಿದರು.

ಸಿಜೆಪಿ ವಿಚಾರಕ್ಕೆ ಸುನೀಲ್ ಅಂಬೇಕರ್ ಪ್ರತಿಕ್ರಿಯೆ
ಎಲ್ಲ ದನಿಗಳಿಗೂ ಇಲ್ಲಿ ಸ್ಥಾನವುಂಟು

ನಾಗ್ಪುರ: ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ) ಉದಯದ ಕುರಿತು ಪ್ರತಿಕ್ರಿಯಿಸಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನೀಲ್ ಅಂಬೇಕರ್, ಭಾರತೀಯ ಪ್ರಜಾಪ್ರಭುತ್ವವು ಎಲ್ಲ ಧ್ವನಿಗಳು ಹಾಗೂ ಭಾವನೆಗಳಿಗೆ ಅವಕಾಶ ಕಲ್ಪಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ.

- ಎಲ್ಲ ಧ್ವನಿಗಳು ಮತ್ತು ಭಾವನೆಗಳಿಗೆ ಭಾರತೀಯ ಪ್ರಜಾಪ್ರಭುತ್ವದಲ್ಲಿ ಅವಕಾಶ: ಆರ್‌ಎಸ್‌ಎಸ್
- ಜೆನ್ ಝೀ ಪೀಳಿಗೆಗೆ ದೇಶದ ಮೇಲೆ ಅಪಾರ ವಿಶ್ವಾಸವಿದೆ
- ಹೊಸ ರಾಜಕೀಯ ಅಭಿವ್ಯಕ್ತಿಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯ ಭಾಗ
- ಚುನಾವಣೆ, ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣ ವ್ಯವಸ್ಥೆ ಮುಕ್ತವಾಗಿದೆ

ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬಲವಾಗಿದ್ದು, ಚುನಾವಣೆಗಳು ಪಾರದರ್ಶಕವಾಗಿ ನಡೆಯುತ್ತವೆ. ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳೂ ಮುಕ್ತವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಅಂಬೇಕರ್ ಅವರು ಅಭಿಪ್ರಾಯಪಟ್ಟರು.

ಜನರ ಅಭಿಪ್ರಾಯಗಳು, ಅಸಮಾಧಾನಗಳು ಅಥವಾ ಹೊಸ ರೀತಿಯ ರಾಜಕೀಯ ಅಭಿವ್ಯಕ್ತಿಗಳು ಪ್ರಜಾಪ್ರಭುತ್ವದ ಸಹಜ ಪ್ರಕ್ರಿಯೆಯ ಭಾಗವೇ ಆಗಿವೆ. ದೇಶದ ಯುವಜನತೆ, ವಿಶೇಷವಾಗಿ ಜೆನ್ ಝೀ ಪೀಳಿಗೆ, ಭಾರತದ ಮೇಲೆ ಅಪಾರ ನಂಬಿಕೆ ಹೊಂದಿದ್ದು, ಸಂವಿಧಾನಾತ್ಮಕ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು. ಕಾಕ್ರೋಚ್ ಜನತಾ ಪಾರ್ಟಿ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಚರ್ಚೆಗೆ ಕಾರಣವಾಗಿರುವ ಬೆನ್ನಲ್ಲೇ ಅಂಬೇಕರ್ ಈ ಪ್ರತಿಕ್ರಿಯೆ ನೀಡಿದ್ದಾರೆ. ಈ ಬೆಳವಣಿಗೆಯನ್ನು ಅತಿಯಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಅವರು ಸೂಚಿಸಿದ್ದು, ಪ್ರಜಾಪ್ರಭುತ್ವದಲ್ಲಿ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗುವುದು ಸಹಜ ಎಂದು ಹೇಳಿದ್ದಾರೆ.

ಕಿರುಸುದ್ದಿ

ಲಿಂಗಾಯತ ಸಮುದಾಯಕ್ಕೆ ಡಿಸಿಎಂ ಸ್ಥಾನ ನೀಡಿ: ಪಾಟೇಲ್

ಬೆಂಗಳೂರು : ವೀರೇಂದ್ರ ಪಾಟೀಲ್ ಆದಮೇಲೆ ನಮ್ಮ ಸಮುದಾಯಕ್ಕೆ ಉತ್ತಮ ಸ್ಥಾನಮಾನ ಕಾಂಗ್ರೆಸ್‌ನಲ್ಲಿ ಸಿಕ್ಕಿಲ್ಲ. ಹೀಗಾಗಿ ಈ ಬಾರಿ ವೀರಶೈವ/ಲಿಂಗಾಯತ ಸಮುದಾಯದವರಿಗೆ ಉಪ ಮುಖ್ಯಮಂತ್ರಿ ಸ್ಥಾನ ಕೊಡುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕೈಗಾರಿಕಾ ಮತ್ತು ವಾಣಿಜ್ಯ ಘಟಕದ ರಾಜ್ಯಾಧ್ಯಕ್ಷ ವಿಜಯಕುಮಾರ್ ಪಾಟೀಲ್ ಒತ್ತಾಯಿಸಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನ ಸಚಿವ ಸಂಪುಟದಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ಹಾಗೂ ಸಮುದಾಯದ ಹಿರಿಯ ನಾಯಕರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡುವಂತೆ ಆಗ್ರಹಿಸಿದರು. ವೀರಶೈವ ರಾಷ್ಟ್ರೀಯ ಯುವ ಘಟಕದ ಅಧ್ಯಕ್ಷ ವೆಂಕಟರೆಡ್ಡಿ ಮಾತನಾಡಿ, ಲಿಂಗಾಯತ ಪ್ರಬಲ ಸಮುದಾಯಕ್ಕೆ ಈಗಿನ ಪರಿಸ್ಥಿತಿಯಲ್ಲಿ ಸಿಎಂ ಕೊಡೋಕೆ ಸಾಧ್ಯವಿಲ್ಲ. ಆದರಿಂದ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಹೇಳಿದರು.

ಈಜಲು ಹೋದ ಮೂವರು ಬಾಲಕರು ನೀರು ಪಾಲು

ಧಾರವಾಡ: ಕೆರೆಗೆ ಈಜಲು ಹೋಗಿದ್ದ ಮೂವರು ಬಾಲಕರು ಈಜು ಬಾರದೆ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ತಾಲೂಕಿನ ಸಿಂಗನಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಗ್ರಾಮದ ನಿವಾಸಿಗಳಾದ ಅನ್ವರ್ ಇಬ್ರಾಹಿಂ ವಟ್ನಾಳ(13), ಸುಭಾನಿ ಇಸಾಕ್ ಬಾಗಜಿಕೊಪ್ಪ(12) ಹಾಗೂ ಮೆಹಬೂಬ್ ದಾದಾಫಿರ್ ವಡ್ನಾಳ್ (15) ಮೃತ ಬಾಲಕರು. ಗ್ರಾಮದ ಕರೆಮ್ಮನಕೆರೆಗೆ ಮಧ್ಯಾಹ್ನ ಈಜಲು ಹೋದ ಬಾಲಕರು, ನೀರಿನ ಆಳ ತಿಳಿಯದೆ ಒಬ್ಬರನ್ನೊಬ್ಬರು ರಕ್ಷಿಸಲು ಹೋಗಿ ನೀರಲ್ಲಿ ಮುಳುಗಿದ್ದಾರೆ. ಬಾಲಕರು ಮನೆಗೆ ಬಾರದ ಹಿನ್ನಲೆ ಆತಂಕಗೊಂಡ ಪಾಲಕರು ಶೋಧ ನಡೆಸಿದಾಗ ಘಟನೆ ಬೆಳಕಿಗೆ ಬಂದಿದೆ. ಕೆರೆ ದಂಡೆಯಲ್ಲಿ ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ವಿಷಯ ತಿಳಿದು ಸ್ಥಳಕ್ಕೆ ದೌಡಾಯಿಸಿದ ಗರಗ ಠಾಣೆಯ ಪೊಲೀಸರು, ಪರಿಶೀಲನೆ ನಡೆಸಿದ್ದು, ಗ್ರಾಮಸ್ಥರ ನೆರವಿನಿಂದ ಶವಗಳನ್ನು ಹೊರ ತೆಗೆಯಲಾಗಿದೆ. ಈ ಕುರಿತು ಗರಗ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹೆಣ್ಣು ಶವಗಳ ವಿಡಿಯೋ ಚಿತ್ರೀಕರಣ: ಸೆರೆ

ಬೀದರ್: ಬ್ರಿಮ್ಸ್ ಜಿಲ್ಲಾಸ್ಪತ್ರೆಯಲ್ಲಿ ಬೆಚ್ಚಿ ಬೀಳಿಸುವ ಘಟನೆ ಬೆಳಕಿಗೆ ಬಂದಿದ್ದು, ಶವಾಗಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಟೆಂಡರ್‌ನೊಬ್ಬ ಪೋಸ್ಟ್ ಮಾರ್ಟ್‌ಮ್ ವೇಳೆ ಮಹಿಳಾ ಮೃತದೇಹಗಳ ಬೆತ್ತಲೆ ಚಿತ್ರಗಳನ್ನು ತನ್ನ ಮೊಬೈಲ್‌ನಲ್ಲಿ ಸೆರೆ ಹಿಡಿಯುತ್ತಿದ್ದ ಆರೋಪದ ಮೇಲೆ ಬಂಧಿಸಲಾಗಿದೆ. ಆರೋಪಿ ಮುನೀರ್ ಅಹ್ಮದ್ ಹಲವು ವರ್ಷಗಳಿಂದ ಆಸ್ಪತ್ರೆಯ ಶವಾಗಾರ ವಿಭಾಗದಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದಾನೆ. ಪೋಸ್ಟ್‌ಮಾರ್ಟ್‌ಮ್ ಪ್ರಕ್ರಿಯೆ ನಡೆಯುವ ವೇಳೆ ಮಹಿಳಾ ಶವಗಳ ಫೋಟೋಗಳನ್ನು ರಹಸ್ಯವಾಗಿ ತೆಗೆದು ಸಂಗ್ರಹಿಸಿಡುತ್ತಿದ್ದನೆಂಬ ವಿಚಾರ ತಿಳಿದು ಆಸ್ಪತ್ರೆ ಸಿಬ್ಬಂದಿ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾಹಿತಿಯ ಪ್ರಕಾರ, ಆರೋಪಿಯ ಮೊಬೈಲ್ ಫೋನ್ ಪರಿಶೀಲಿಸಿದಾಗ ಹಲವು ಮಹಿಳಾ ಮೃತದೇಹಗಳ ಬೆತ್ತಲೆ ಚಿತ್ರಗಳು ಪತ್ತೆಯಾಗಿವೆ. ಇದರಿಂದ ಆತ ಹಲವು ವರ್ಷಗಳಿಂದ ಇದೇ ರೀತಿಯ ವಿಕೃತ ಕೃತ್ಯ ಎಸಗುತ್ತಿದ್ದಾನೆಯೇ ಎಂಬ ಅನುಮಾನ ಮೂಡಿದ್ದು, ಪೊಲೀಸರು ಈ ನಿಟ್ಟಿನಲ್ಲಿ ತನಿಖೆ ನಡೆಸುತ್ತಿದ್ದಾರೆ.

ರಾಜ್ಯಪಾಲರಿಂದ ಸರ್ಕಾರ ರಚಿಸುವಂತೆ ಶಿವಕುಮಾರ್‌ಗೆ ಆಹ್ವಾನ | ರಾಜಭವನದ ಗಾಜಿನ ಮನೆಯಲ್ಲಿ ಕಾರ್ಯಕ್ರಮ

ಡಿಕೆಶಿಗೆ ಗೋಧೂಳಿ ಮುಹೂರ್ತ ನಿಗದಿ

ಬೆಂಗಳೂರು: ಜೂ. 3ರ ಸಂಜೆ ರಾಜಭವನದ ಗಾಜಿನ ಮನೆಯಲ್ಲಿ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿರುವ ಹಿನ್ನೆಲೆಯಲ್ಲಿ ಡಿಪಿಎಆರ್ ಕಾರ್ಯದರ್ಶಿ ಕೆ.ಜಿ. ಜಗದೀಶ್ ಅವರು ಗಾಜಿನ ಮನೆಯಲ್ಲಿ ಸ್ಥಳಪರಿಶೀಲನೆನಡೆಸಿದರು. ಈ ನಡುವೆ ರಾಜ್ಯಪಾಲರು ಕೂಡಾ ಸರ್ಕಾರ ರಚಿಸುವಂತೆ ಶಿವಕುಮಾರ್ ಅವರಿಗೆ ಆಹ್ವಾನ ನೀಡಿದ್ದಾರೆ.

ನೂತನ ಮುಖ್ಯಮಂತ್ರಿಯಾಗಿ ಆಗಿ ಡಿ.ಕೆ. ಶಿವಕುಮಾರ್ ಪದಗ್ರಹಣ ಮಾಡಲು ಬುಧವಾರ ದಿನ ನಿಗದಿಯಾಗಿದೆ. ತೈಲ ಬೆಲೆ ಏರಿಕೆ ಹಿನ್ನೆಲೆಯಲ್ಲಿ ಸರಳವಾಗಿ ಪ್ರಮಾಣ ವಚನ ಸ್ವೀಕರಿಸಲು ನಿರ್ಧರಿಸಿದ್ದಾರೆ. ಸಾರ್ವಜನಿಕರಿಗೆ ತೊಂದರೆಯಾಗದಂತೆ ಲೋಕಭವನದ ಗಾಜಿನ ಮನೆಯಲ್ಲಿ ಸಂಜೆ ಸಮಾರಂಭ ನಡೆಯಲಿದೆ. ಲಕ್ಷಾಂತರ ಕಾರ್ಯಕರ್ತರಿಗೆ ಬಸ್ ವ್ಯವಸ್ಥೆ ಮಾಡುವ ಯೋಜನೆ ಕೈಬಿಡಲಾಗಿದ್ದು, ಸಿಎಂ ಆದ ಬಳಿಕ ಶಿವಕುಮಾರ್ ಅವರೇ ಸ್ವತಃ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡು ಜನರಿಗೆ ಧನ್ಯವಾದ ಅರ್ಪಿಸಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿವಕುಮಾರ್ ನಿವಾಸದ ಮುಂದೆ ಶಾಸಕರ ದಂಡು: ಶಾಸಕಾಂಗ ಸಭೆಗೂ ಮುನ್ನ ಬೆಂಗಳೂರಿನ ಸದಾಶಿವನಗರದ ಡಿ.ಕೆ.ಶಿವಕುಮಾರ್ ನಿವಾಸಕ್ಕೆ ಮಾಜಿ ಸಚಿವರು, ಸಚಿವಾಕಾಂಕ್ಷಿಗಳು ಹಾಗೂ ಉನ್ನತ ಅಧಿಕಾರಿಗಳು ದಂಡು ದಂಡಾಗಿ ಆಗಮಿಸುತ್ತಿದ್ದಾರೆ. ಪ್ರಮುಖ ನಾಯಕರು ಸದಾಶಿವನಗರದ ನಿವಾಸಕ್ಕೆ ಭೇಟಿ ನೀಡಿ ಡಿ.ಕೆ.ಶಿವಕುಮಾರ್ ಜೊತೆ ಮಹತ್ವದ ಮಾತುಕತೆ ನಡೆಸುತ್ತಿದ್ದಾರೆ. ಹೊಸ ಸರ್ಕಾರದಲ್ಲಿ ಸಚಿವ ಸ್ಥಾನ ಗಿಟ್ಟಿಸಿಕೊಳ್ಳಲು ಸಚಿವಾಕಾಂಕ್ಷಿಗಳ ಕಸರತ್ತು ಜೋರಾಗಿದೆ.

ಸಿದ್ದರಾಮಯ್ಯ ನಿವಾಸಕ್ಕೆ ಶಾಸಕರು, ನಾಯಕರ ಭೇಟಿ: ಇತ್ತ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸಕ್ಕೆ ಕಾಂಗ್ರೆಸ್ ಶಾಸಕರು ಮತ್ತು ಪ್ರಮುಖ ನಾಯಕರು ಭೇಟಿ ನೀಡಿದರು. ಮಾಜಿ ಸಚಿವರಾದ ಕೆ.ಜೆ. ಜಾರ್ಜ್, ಎಂ.ಬಿ.ಪಾಟೀಲ್, ಈಶ್ವರ್ ಖಂಡ್ರೆ, ಶಾಸಕರಾದ ಎ.ಎಸ್. ಪೊನ್ನಣ್ಣ, ಪುಟ್ಟರಂಗಶೆಟ್ಟಿ ಅವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.



> ಕನ್ನಡಿಗರ ಜೀವನದಲ್ಲಿ ಬದಲಾವಣೆ ತರಲು ಕಾಂಗ್ರೆಸ್ ಸರ್ಕಾರ ನಡೆಸುತ್ತಿರುವ ಈ ಪಯಣದಲ್ಲಿ ಸಿದ್ದರಾಮಯ್ಯ ಅವರ ನಿರಂತರ ಪಾಲ್ಗೊಳ್ಳುವಿಕೆಯನ್ನು ಪಕ್ಷವು ಸದಾ ಬಯಸುತ್ತದೆ.
> ■ ಡಿ.ಕೆ. ಶಿವಕುಮಾರ್, ನಿಯೋಜಿತ ಸಿಎಂ

> ಮುಖ್ಯಮಂತ್ರಿ ಸ್ಥಾನದಿಂದ ಪದತ್ಯಾಗ ಮಾಡಿದ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಪರವಾಗಿ ಧನ್ಯವಾದಗಳು. 2013-2018 ಮತ್ತು 2023-2026 ರವರೆಗೆ ಮುಖ್ಯಮಂತ್ರಿಯಾಗಿ ಹಾಗೂ ಎರಡು ಅವಧಿಗಳಲ್ಲಿ ವಿರೋಧ ಪಕ್ಷದ ನಾಯಕನಾಗಿ ಸಲ್ಲಿಸಿದ ಸೇವೆ ಅನನ್ಯ.
> ■ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯ ಕಾಂಗ್ರೆಸ್ ಉಸ್ತುವಾರಿ



ಸಿದ್ದರಾಮಯ್ಯ ಅವರಿಗೆ ಧನ್ಯವಾದ

ನೂತನ ನಾಯಕನಾಗಿ ಆಯ್ಕೆಯಾದ ನಂತರ ಡಿ.ಕೆ. ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ಆಡಳಿತ ಮತ್ತು ನಾಯಕತ್ವವನ್ನು ಶ್ಲಾಘಿಸಿ ಧನ್ಯವಾದ ನಿರ್ಣಯ ಮಂಡಿಸಿದರು. ಇದನ್ನು ಎಲ್ಲಾ ಶಾಸಕರು ತುಂಬು ಹೃದಯದಿಂದ ಅನುಮೋದಿಸಿದರು.

ರಾಜ್ಯಪಾಲರ ಜೊತೆ ಭೇಟಿಯಾಗಿ ಮಾತುಕತೆ ನಡೆಸಿದ ಡಿಕೆಶಿ: ಶಾಸಕಾಂಗ ಸಭೆಗೂ ಮುನ್ನ ಲೋಕಭವನದಲ್ಲಿ ಡಿ.ಕೆ.ಶಿವಕುಮಾರ್ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರನ್ನು ಭೇಟಿಯಾಗಿ ಅನೌಪಚಾರಿಕ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಪ್ರಮಾಣ ವಚನ ಸ್ವೀಕಾರದ ತಾತ್ಕಾಲಿಕ ವೇಳಾಪಟ್ಟಿ ಹಾಗೂ ರಾಜ್ಯಪಾಲರ ಲಭ್ಯತೆ ಕುರಿತು ಚರ್ಚಿಸಿದರು.

ಒಮ್ಮತದಿಂದ ಡಿಕೆಶಿ ಆಯ್ಕೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಹಂಗಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿ.ಕೆ ಶಿವಕುಮಾರ್ ಅವರ ಹೆಸರನ್ನು ಪ್ರಸ್ತಾಪಿಸಿದ್ದು, ಸರ್ವಾನುಮತದಿಂದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕರಾಗಿ ಡಿ.ಕೆ ಶಿವಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಹೆಮ್ಮೆಯಿಂದ ಹೇಳುತ್ತೇನೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪ್ರಕಟಿಸಿದರು.



ವಿಧಾನಸೌಧದಲ್ಲಿ ಶನಿವಾರ ಸಂಜೆ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಅವರು, ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಡಿ.ಕೆ ಶಿವಕುಮಾರ್ ಅವರ ಹೆಸರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಸೂಚಿಸಿತು. ಸಿದ್ದರಾಮಯ್ಯ ಅವರ ಪ್ರಸ್ತಾವನೆಗೆ ಕಾಂಗ್ರೆಸ್ ಶಾಸಕಾಂಗ ಸಭೆಯು ಸರ್ವಾನುಮತದಿಂದ ಒಪ್ಪಿಕೊಂಡಿತು. ಡಾ.ಜಿ.ಪರಮೇಶ್ವರ ಅವರು ಈ ಪ್ರಸ್ತಾವನೆಯನ್ನು ಅನುಮೋದಿಸಿದರು ಎಂದು ಮಾಹಿತಿ ನೀಡಿದರು.

ಈ ಅಧಿಕಾರ ಹಸ್ತಾಂತರದಿಂದ ಕಾಂಗ್ರೆಸ್ ಪಕ್ಷಕ್ಕೆ ಸಂಕಷ್ಟ ಎದುರಾಗಲಿದೆ ಎಂದು ಅನೇಕರು ನಿರೀಕ್ಷಿಸಿದ್ದರು. ಆದರೆ ನಮ್ಮದು ಕುಟುಂಬವಿದ್ದಂತೆ. ಎಲ್ಲರೂ ಸಿದ್ದರಾಮಯ್ಯ ಅವರ ನಡೆ ಹೇಗಿರಲಿದೆ ಎಂದು ಕೇಳುತ್ತಿದ್ದರು. ಆದರೆ ಸಿದ್ದರಾಮಯ್ಯ ಅವರು ನನ್ನ ಹೃದಯದಲ್ಲಿ ಕೇವಲ ಕಾಂಗ್ರೆಸ್ ಪಕ್ಷವಿದೆ. ಕಾಂಗ್ರೆಸ್ ಹೈಕಮಾಂಡ್ ನಿರ್ಧಾರವನ್ನು ಪಾಲಿಸುತ್ತೇನೆ ಎಂದು ಉತ್ತರ ನೀಡಿದ್ದರು. ಸಿದ್ದರಾಮಯ್ಯ ಅವರು ತಮ್ಮ ನಡೆ ಮೂಲಕ ಸಾಬೀತಪಡಿಸಿದರು. ಇದು ಕಾಂಗ್ರೆಸ್ ಒಂದು ಕುಟುಂಬ ಎಂಬುದಕ್ಕೆ ಸಾಕ್ಷಿ ಎಂದು ಬಣ್ಣಿಸಿದರು.

ಮತ್ತೆ 2028ರಲ್ಲಿ ಅಧಿಕಾರಕ್ಕೆ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿಗಳಾಗಿ ಸಿದ್ದರಾಮಯ್ಯ ಅವರ 8 ವರ್ಷಗಳ ಅತ್ಯುತ್ತಮ ಸೇವೆಯನ್ನು ಶ್ಲಾಘಿಸಲಾಗಿದೆ. ಈ ನಿರ್ಣಯವನ್ನು ಸ್ವತಃ ಡಿ.ಕೆ ಶಿವಕುಮಾರ್ ಅವರು ಮಂಡಿಸಿದರು. ಇದು ಕಾಂಗ್ರೆಸ್ ಪಕ್ಷಕ್ಕೆ ಹೆಮ್ಮೆಯ ಕ್ಷಣ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹಾಗೂ ರಾಹುಲ್ ಗಾಂಧಿ ಹಾಗೂ ಸೋನಿಯಾ ಗಾಂಧಿ ಅವರ ಮಾರ್ಗದರ್ಶನದಂತೆ ಈ ಅಧಿಕಾರ ಹಸ್ತಾಂತರ ಮಾಡಲಾಗಿದೆ. ಸಿದ್ದರಾಮಯ್ಯ ಅವರ ಬೆಂಬಲದೊಂದಿಗೆ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ 2028ರಲ್ಲಿ ಅಧಿಕಾರಕ್ಕೆ ಬರಲಿದೆ ಎಂದರು.

ಭಾರತ್ ನೆಟ್ ಉದ್ಯಮಿ ಯೋಜನೆ ಜಾರಿ: ತ್ರಿಪಾಠಿ

ಹುಬ್ಬಳ್ಳಿ: ಬಿಎಸ್‌ಎನ್‌ಎಲ್ ವತಿಯಿಂದ ಗ್ರಾಮೀಣ ಭಾಗದಲ್ಲಿ ಡಿಜಿಟಲ್ ಸಂಪರ್ಕ ಹೆಚ್ಚಿಸಲು ತಿದ್ದುಪಡಿ ಮಾಡಿದ ಭಾರತ್ ನೆಟ್ ಉದ್ಯಮಿ (ಬಿಎನ್‌ಯು) ಯೋಜನೆಯನ್ನು ಜಾರಿಗೆ ತರಲಾಗಿದ್ದು, ಜನರು ಇದರ ಪ್ರಯೋಜನ ಪಡೆಯಬಹುದು ಎಂದು ಬಿಎಸ್‌ಎನ್‌ಎಲ್ ಹಿರಿಯ ಪ್ರಧಾನ ವ್ಯವಸ್ಥಾಪಕ ಧನಂಜಯ್ ಕುಮಾರ್ ತ್ರಿಪಾಠಿ ಹೇಳಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಫ್ರಾಂಚೈಸಿ ಮೂಲಕ ಈ ಯೋಜನೆ ಅನುಷ್ಠಾನ ಮಾಡಲಾಗುತ್ತಿದೆ. 1.02 ಲಕ್ಷ ನೀಡಿ ಫ್ರಾಂಚೈಸಿ ಪಡೆಯಬಹುದು. ಫ್ರಾಂಚೈಸಿಯೊಂದಿಗೆ ಮೂರು ವರ್ಷಗಳ ಒಪ್ಪಂದ ಮಾಡಿಕೊಳ್ಳಲಾಗುತ್ತದೆ. ಪ್ರತಿ ಬ್ರಾಡ್ ಬ್ಯಾಂಡ್ ಸಂಪರ್ಕಕ್ಕೆ ಅವರಿಗೆ 3,200ರಿಂದ 6,400 ನೀಡಲಾಗುತ್ತದೆ. ನಂತರ ಆದಾಯದಲ್ಲಿ ಶೇ 50ರಷ್ಟನ್ನು ಫ್ರಾಂಚೈಸಿಗೆ ಹಂಚಿಕೆ ಮಾಡಲಾಗುತ್ತದೆ ಎಂದರು.

ಸಮಗ್ರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಉದ್ದೇಶವನ್ನು ಈ ಯೋಜನೆ ಹೊಂದಿದೆ. 2022ರಲ್ಲಿ ಈ ಯೋಜನೆ ಆರಂಭವಾಗಿದ್ದು, ಇತ್ತೀಚೆಗೆ ಇದಕ್ಕೆ ತಿದ್ದುಪಡಿ ತರಲಾಗಿದೆ.



ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ 502 ಗ್ರಾಮ ಪಂಚಾಯಿತಿಗಳಿದ್ದು, ಅವುಗಳಲ್ಲಿ ಈಗಾಗಲೇ 160 ಗ್ರಾಮ ಪಂಚಾಯಿತಿಗಳಲ್ಲಿ ಫ್ರಾಂಚೈಸಿಗಳಿವೆ. ಬಹುತೇಕ ಕಡೆ ಜನರು ಫ್ರಾಂಚೈಸಿ ಪಡೆಯಲು ಮುಂದೆ ಬರುತ್ತಿಲ್ಲ ಎಂದು ತಿಳಿಸಿದರು.

ಬ್ರಾಡ್‌ಬ್ಯಾಂಡ್ ಸಂಪರ್ಕಕ್ಕೆ 12 ಯೋಜನೆಗಳಿವೆ. ಗ್ರಾಹಕರು ತಾವು ಆಯ್ಕೆ ಮಾಡಿಕೊಂಡ ಯೋಜನೆಗೆ ಮಾಸಿಕ ಬಿಲ್ ಮಾತ್ರ ಪಾವತಿಸಬೇಕು. ಹೆಚ್ಚುವರಿ ಯಾವುದೇ ಶುಲ್ಕ ಇರುವುದಿಲ್ಲ ಎಂದು ಹೇಳಿದರು.

ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ 370 ಟವರ್‌ಗಳಿವೆ. 4ಜಿ ನೆಟ್‌ವರ್ಕ್ ಸಮರ್ಪಕವಾಗಿ ನೀಡುವ ಉದ್ದೇಶದಿಂದ ಈ ಜಿಲ್ಲೆಗಳಲ್ಲಿ ಒಟ್ಟು 21 ಟವರ್‌ಗಳನ್ನು ಹೊಸದಾಗಿ ಅಳವಡಿಸಲಾಗಿದೆ ಎಂದು ತಿಳಿಸಿದರು.

ಪಡಿತರ ಶೇ. 50 ಜನರಿಗೆ ಸಿಗುತ್ತಿಲ್ಲ

ಬೆಂಗಳೂರು: ಗ್ಯಾರಂಟಿ ಫಲಾನುಭವಿಯ ಹೆಸರು ಏಕಾಏಕಿ ತೆಗೆದುಹಾಕುವುದು ಮತ್ತು ಕಿರುಕುಳ ಕೊಡುವುದು ಎಷ್ಟು ಸರಿ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಆಕ್ಷೇಪಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶನಿವಾರ ಸುದ್ದಿ ಗೋಷ್ಠಿ ನಡೆಸಿದ ಅವರು, ಗೃಹಲಕ್ಷ್ಮಿ ಎಲ್ಲರಿಗೂ ಕೊಡುವುದಾಗಿ ಹೇಳಿದ್ದರು. ಗೃಹಜ್ಯೋತಿ ಕೊಡಿ ಎಂದು ಜನರು ಕಾಂಗ್ರೆಸ್ಸಿನವರನ್ನು ಕೇಳಿದ್ದಾರಾ? ಕಾಂಗ್ರೆಸ್ ದುಡ್ಡಿನಿಂದ ಕೊಡುತ್ತಿದ್ದಾರಾ? ಸರ್ಕಾರದ, ಜನರ ತೆರಿಗೆ ದುಡ್ಡಿನಿಂದ ಕೊಡುತ್ತಿದ್ದಾರೆ. ಇವರಿಗೆ ಮತ ಬೇಕಿತ್ತು. ಆಗ ಎಲ್ಲರಿಗೂ ಕೊಡುವುದಾಗಿ ಹೇಳಿ ಈಗ ಬರೆ ಎಳೆಯುವುದು ಸರಿಯೇ ಎಂದು ಪ್ರಶ್ನಿಸಿದರು. ಪಡಿತರ ಶೇ. 50 ಜನರಿಗೆ ಸಿಗುತ್ತಿಲ್ಲ, ಕೇವಲ ಸರತಿ ಸಾಲಿನಲ್ಲಿ ಕಾಯುವಂತಾಗಿದೆ. ಬಡವರಿಗೆ ಕಿರುಕುಳ ಕೊಡುವ ಸರ್ಕಾರ ಇದಾಗಿದೆ. ರೇಷನ್ ಇಲ್ಲ; ಕಾಯುವುದೇ ಗ್ಯಾರಂಟಿ ಎಂದು ಆಕ್ಷೇಪಿಸಿದರು.

ಕಾಂಗ್ರೆಸ್ ಆಡಳಿತದಲ್ಲಿ ಬೆಂಗಳೂರಿನ ಜನರು ಶಾಪಗ್ರಸ್ತರಾಗಿದ್ದಾರೆ. ನಗರವನ್ನು ಕಾಂಗ್ರೆಸ್ ಕಡೆಗಣಿಸಿದೆ. ಒಂದುವರೆ ಕೋಟಿ ಜನರಿದ್ದಾರೆ. 20ರಿಂದ 30 ಲಕ್ಷ ಜನರು ಬರುತ್ತಾರೆ. ಅವರು ಬೆಂಗಳೂರು ನಗರಕ್ಕೆ ಬರಲು ಹೆದರಬೇಕೇ? ಜಾಗೃತಿ ಕಾರ್ಯ ನಮ್ಮ ಕೆಲಸ ಎಂದು ತಿಳಿಸಿದರು. ಸರ್ಕಾರ ರೀ ಬೂಟ್ ಆಗುತ್ತಿದೆ. ಮೂರು ವರ್ಷ ಕಣ್ಣೀರಲ್ಲೇ ತೊಳೆದಿದ್ದಾರೆ. ಅಭಿವೃದ್ಧಿ ಶೂನ್ಯತೆ ಸೇರಿ ಭ್ರಷ್ಟಾಚಾರ, ಅವ್ಯವಸ್ಥೆ, ಕೆಟ್ಟ ಆಡಳಿತ ನೀಡಿದ್ದಾರೆ. ಮೂರು ವರ್ಷದ ಆಡಳಿತ ನೋಡಿಯೇ ಜನರು ಸುಸ್ತಾಗಿದ್ದಾರೆ ಎಂದು ಟೀಕಿಸಿದರು.

ವೆಂಕಟರಮಣಪ್ಪನವರ ಅಂತ್ಯಕ್ರಿಯೆ



ಪಾವಗಡ: ಶುಕ್ರವಾರ ನಿಧನರಾದ ಮಾಜಿ ಸಚಿವ ವೆಂಕಟರಮಣಪ್ಪನವರ ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ಶನಿವಾರ ಹುಟ್ಟೂರು ಹನುಮಂತನಹಳ್ಳಿಯಲ್ಲಿ ನೆರವೇರಿಸಲಾಯಿತು.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಮಾಜಿ ಸಚಿವ ವೆಂಕಟರಮಣಪ್ಪ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಹೃದಯಾಘಾತದಿಂದ ಮೃತಪಟ್ಟಿದ್ದರು. ವೆಂಕಟರಮಣಪ್ಪ ಅವರು 2008ರ ಅವಧಿಯಲ್ಲಿ ರೇಷ್ಮೆ ಮತ್ತು ಸಣ್ಣ ಕೈಗಾರಿಕಾ ಸಚಿವರಾಗಿ, 2018ರಲ್ಲಿ ಕಾರ್ಮಿಕ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ಅಂತಿಮದರ್ಶನ: ಹನುಮಂತನಹಳ್ಳಿಯಲ್ಲಿ ಇರುವ ತೋಟದ ಮನೆಯಲ್ಲಿ ಮಾಜಿ ಸಚಿವ ವೆಂಕಟರಮಣಪ್ಪ ಅವರ ಪಾರ್ಥೀವ ಶರೀರವನ್ನು ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗಿತ್ತು. ಹಂಗಾಮಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಸಚಿವರಾದ ಕೆ.ಜೆ. ಜಾರ್ಜ್, ಜಮೀರ್ ಅಹಮ್ಮದ್, ಶಾಸಕರಾದ ಕೆ.ಎನ್.ರಾಜಣ್ಣ ಯತೀಂದ್ರಸಿದ್ದರಾಮಯ್ಯ, ರಾಜೇಂದ್ರ ರಾಜಣ್ಣ, ಪರಿಟಾಲ ಸುನೀತಮ್ಮ, ಕಲ್ಯಾಣದುರ್ಗ ಶಾಸಕ ಅಮಲಿನೇನಿ ಸುರೇಂದ್ರಬಾಬು, ಮಾಜಿ ಸಂಸದರಾದ ಮುದ್ದುಹನುಮೇಗೌಡ, ಜನಾರ್ದನಸ್ವಾಮಿ, ಮುಖಂಡರಾದ ಗೂಳಿಹಟ್ಟಿಶೇಖರ್, ರಘುವೀರಾರೆಡ್ಡಿ, ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ, ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸೇರಿದಂತೆ ಸುಮಾರು 19ಕ್ಕೂ ಹೆಚ್ಚು ವಿವಿಧ ಮಠಗಳ ಸ್ವಾಮೀಜಿಗಳು ಆಗಮಿಸಿ, ಅಂತಿಮ ದರ್ಶನ ಪಡೆದು ಮಂತ್ರೋಚ್ಚಾರಣೆಯೊಂದಿಗೆ ಆತ್ಮಕ್ಕೆ ಶಾಂತಿ ಕೋರಿದರು.

ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧ: ಸಂಸದ ಯದುವೀರ್ ಭರವಸೆ

ಮಡಿಕೇರಿಯ ಅರಮನೆ ಸಂರಕ್ಷಿತ ಸ್ಮಾರಕ

ಮೈಸೂರು: ಐತಿಹಾಸಿಕ ಮಡಿಕೇರಿ ಅರಮನೆ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಬೆಂಬಲ ದೊರೆತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು, ಮಡಿಕೇರಿ ಅರಮನೆಯನ್ನು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ತಾಣಗಳು ಹಾಗೂ ಅವಶೇಷಗಳ ಕಾಯ್ದೆ, 1958ರ ಅಡಿಯಲ್ಲಿ ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ ಎಂದು ಅಧಿಕೃತವಾಗಿ ತಿಳಿಸಿದ್ದಾರೆ ಎಂದರು.

ತಮ್ಮ ಪತ್ರದಲ್ಲಿ ಸಚಿವರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮಡಿಕೇರಿ ಅರಮನೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ ಎಂದು ತಿಳಿಸಿದ್ದಾರೆ. ಇದರ ಭಾಗವಾಗಿ, ಪ್ರವಾಸಿಗರ ಅನುಭವವನ್ನು ಉತ್ತಮಗೊಳಿಸುವ ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಡಿಜಿಟಲ್ ಪ್ರದರ್ಶನಗಳನ್ನೊಳಗೊಂಡ ಆಧುನಿಕ ತಾಣ ವಸ್ತುಸಂಗ್ರಹಾಲಯ ಸ್ಥಾಪಿಸುವ ಪ್ರಸ್ತಾವನೆಯೂ ಪರಿಶೀಲನೆಯಲ್ಲಿದೆ. ಇದು ಕೊಡಗಿನ ಸಮೃದ್ಧ ಇತಿಹಾಸ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಪರಿಣಾಮಕಾರಿಯಾಗಿ ಪರಿಚಯಿಸುವ ಮಹತ್ವದ ಹೆಜ್ಜೆಯಾಗಲಿದೆ ಎಂದು ಹೇಳಿದ್ದಾರೆ.



ಈ ಬೆಳವಣಿಗೆಗೆ ಕಾರಣವಾದುದು, 2025ರ ಮಾರ್ಚ್ 18ರಂದು ಸಂಸತ್ ಸದಸ್ಯತ ಯದುವೀರ್ ಒಡೆಯರ್ ಅವರು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವಿವರವಾದ ಮನವಿ. ಆ ಮನವಿಯಲ್ಲಿ ಅವರು ಮಡಿಕೇರಿ ಅರಮನೆಗೆ ಸಂರಕ್ಷಿತ ಸ್ಮಾರಕ ಸ್ಥಾನಮಾನ ನೀಡುವುದು ಹಾಗೂ ಅಲ್ಲಿ ವಸ್ತುಸಂಗ್ರಹಾಲಯ ಸ್ಥಾಪಿಸುವ ಕುರಿತು ಬಲವಾಗಿ ಆಗ್ರಹಿಸಿದ್ದರು.

ಮಡಿಕೇರಿ ಅರಮನೆಯ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಮನಗಂಡು, ಯದುವೀರ್ ಒಡೆಯರ್ ಅವರು ಈ ವಿಷಯವನ್ನು ಕೇಂದ್ರ ಸರ್ಕಾರ ಹಾಗೂ ಎಎಸ್‌ಐ ಅಧಿಕಾರಿಗಳೊಂದಿಗೆ ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ

ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್ ಒಡೆಯರ್, ಮಡಿಕೇರಿ ಅರಮನೆಯ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಬಹುಕಾಲದ ಬೇಡಿಕೆ ಇದೀಗ ಸಾಕಾರಗೊಳ್ಳುವ ಹಂತ ತಲುಪಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಕೊಡಗಿನ ವೈಭವಯುತ ಇತಿಹಾಸವನ್ನು ಪ್ರತಿಬಿಂಬಿಸುವ ಪ್ರಮುಖ ಪರಂಪರೆ ಮತ್ತು ಪ್ರವಾಸೋದ್ಯಮ ತಾಣವಾಗಿ ಮಡಿಕೇರಿ ಅರಮನೆಯನ್ನು ಅಭಿವೃದ್ಧಿಪಡಿಸುವುದರ ಜತೆಗೆ, ಭವಿಷ್ಯದ ಪೀಳಿಗೆಗಳಿಗೆ ಶೈಕ್ಷಣಿಕ ಮತ್ತು ಪ್ರವಾಸೋದ್ಯಮ ಅವಕಾಶಗಳನ್ನು ಸೃಷ್ಟಿಸಲು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಈ ಬೆಳವಣಿಗೆ ಕರ್ನಾಟಕದ ಪ್ರಮುಖ ಐತಿಹಾಸಿಕ ಪರಂಪರೆ ತಾಣಗಳಲ್ಲಿ ಒಂದಾದ ಮಡಿಕೇರಿ ಅರಮನೆಯ ಸಂರಕ್ಷಣೆಯತ್ತ ಮಹತ್ವದ ಹೆಜ್ಜೆಯಾಗಿದೆ.

12 ಆರೋಪಿಗಳ ವಿರುದ್ಧ ಪ್ರಕರಣ ದಾಖಲು

ವಿಜಯಪುರ: ಭೀಮಾತೀರದಲ್ಲಿ ನಡೆದ ಭೀಕರ ಹತ್ಯೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಚಡಚಣ ಪೊಲೀಸ್ ಠಾಣೆಯಲ್ಲಿ 12 ಜನ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಗೋವಿಂದಪುರದ ಕಲ್ಲನಗೌಡ ಈಶ್ವರಗೌಡ ಪಾಟೀಲ, ಅಪ್ಪುಗೌಡ ಲಗಮನಗೌಡ ಉರ್ಫ್ ಲಕ್ಕನಗೌಡ ಪಾಟೀಲ, ಈಶ್ವರಪ್ಪ ಲಗಮನಗೌಡ ಪಾಟೀಲ, ಪ್ರಕಾಶ ಬಸವರಾಜ ಮಾಸ್ತರ್ ಉರ್ಫ್ ಪಾಟೀಲ, ಪ್ರಶಾಂತ ಉರ್ಫ್ ಪರುಗೌಡ ಬಸವರಾಜ ಮಾಸ್ತರ್ ಉರ್ಫ್ ಪಾಟೀಲ, ಸಿದ್ದರಾಮ ಕಲ್ಲನಗೌಡ ಪಾಟೀಲ, ಲಾಯಪ್ಪ ನೇನಪ್ಪ ಬಿರಾದಾರ, ಚಿದಾನಂದಗೌಡ ನಾಮದೇವ ಕೋಳಿ ಉರ್ಫ್ ಟಕ್ಕಲಕಿ, ಮಾಸಿದ್ದ ಶ್ರೀಮಂತ ಬಿರಾದಾರ, ಶ್ರೀಮಂತ ಶಂಕರಪ್ಪ ಬಿರಾದಾರ, ಶಂಕರಪ್ಪ ಮಾದೇವ ಅರಕೇರಿ, ಅಪ್ಪಾಸಾಹೇಬ ಶಂಕರ ಭೋವಿ ಆರೋಪಿಗಳಾಗಿದ್ದಾರೆ.

ಇಲ್ಲಿನ ಚೈತನ್ಯಕುಮಾರ ದುಂಡಪ್ಪ ನಿರಾಳೆ ಎಂಬುವರ ನೀಡಿದ ದೂರಿನ ಅನ್ವಯ ಪ್ರಕರಣದ ದಾಖಲಿಸಲಾಗಿದೆ.

ಶುಕ್ರವಾರ ತಡರಾತ್ರಿಯೇ ಘಟನಾ ಸ್ಥಳಕ್ಕೆ ಉತ್ತರ ವಲಯದ ಐಜಿಪಿ ಸಂದೀಪ ಪಾಟೀಲ ಹಾಗೂ ಎಸ್‌ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ, ಪರಿಶೀಲಿಸಿದರು. ಜಮೀನಿನಲ್ಲಿ ಎಂಟು ಜನರು ಕೆಲಸ ಮಾಡುವಾಗ ಏಕಾಏಕಿ ಬೈಕ್‌ಗಳಲ್ಲಿ 28 ಜನರು ಆಗಮಿಸಿ ಮಚ್ಚು ಹಾಗೂ ಆಯುಧದಿಂದ ಹಲ್ಲೆಗೈದು ಕೊಲೆ ಮಾಡಿದ್ದಾರೆ. ಇದರಲ್ಲಿ ಆರು ಜನರು ಸ್ಥಳದಲ್ಲೇ ಅಸುನೀಗಿದ್ದಾರೆ. ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ತನಿಖೆಗೆ ತಂಡ ರಚಿಸಲಾಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದರು.

ಭೀಕರ ಹತ್ಯೆಗೆ ಪ್ರೇಮ ಪ್ರಕರಣದ ನಂಟು!

ವಿಜಯಪುರ: ಶಾಂತವಾಗಿದ್ದ ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದು, 6 ಜನರು ಭೀಕರ ಹತ್ಯೆಯಾಗಿರುವ ಘಟನೆ ಹಿಂದೆ ಕೇವಲ ಜಮೀನಿನ ವ್ಯಾಜ್ಯವಷ್ಟೇ ಅಲ್ಲ, ಪ್ರೇಮ ಪ್ರಕರಣವೂ ಕಾರಣವೆನ್ನುವುದು ದುರಂತದ ಸಂಗತಿ.

ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರದಲ್ಲಿ ಶುಕ್ರವಾರ ಒಂದೇ ಕುಟುಂಬ 5 ಜನ ಸೇರಿ 6 ಜನರು ಬರ್ಬರ ಹತ್ಯೆಯಾಗಿರುವ ಘಟನೆ ಜಿಲ್ಲೆಯನ್ನೆ ಬೆಚ್ಚಿ ಬೀಳಿಸುವಂತಾಗಿದೆ.

ಇಲ್ಲಿನ ಜಮೀನಿನಲ್ಲೇ ಒಂದೇ ಕುಟುಂಬದ ಐವರು ಸೇರಿದಂತೆ ಆರು ಜನರನ್ನು ಅತ್ಯಂತ ಕ್ರೂರವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಮೇಲ್ನೋಟಕ್ಕೆ ಇದು ಜಮೀನು ವಿವಾದದಂತೆ ಕಂಡರೂ, ಈ ರಕ್ತಪಾತದ ಹಿಂದೆ 2015ರ ಹಳೆಯ ಪ್ರೇಮ ಪ್ರಕರಣ, ಕಿಡ್ನ್ಯಾಪ್ ಮತ್ತು ಕೊಲೆಯ ದ್ವೇಷದ ಘಟನೆ ಬಯಲಾಗಿದೆ.

ಈ ದ್ವೇಷ, ಹಗೆತನಕ್ಕೆ ಚಡಚಣ ಪಟ್ಟಣದ ದುಂಡಪ್ಪ ನಿರಾಳೆ (65), ಶಿವಪುತ್ರ ನಿರಾಳೆ (58), ಚಂದ್ರಕಾಂತ ನಿರಾಳೆ (55), ರಾಹುಲ್ ನಿರಾಳೆ (25), ಸಮರ್ಥ ನಿರಾಳೆ (23) ಹಾಗೂ ಇವರ ಜೊತೆಗಿದ್ದ ಶಬ್ಬೀರ್ ಅತ್ತಾರ (45) ಬಲಿಯಾದ ದುರ್ದೈವಿಗಳಾಗಿದ್ದು, ಇನ್ನು ಗಾಯಗೊಂಡ ಅರವಿಂದ ಕಟಗೆ, ಸಂದೀಪ ಮಾನೆ ಎಂಬುವರನ್ನು ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಯಾವ ದೇಶವನ್ನು ತ್ಯಾಗ ಮಾಡಬೇಕು?

• ಚಾಡಿಕೋರ ಮತ್ತು ಜಿಪುಣನಾದ ರಾಜನಿದ್ದ ದೇಶವನ್ನು.

ಒಂದು ದೇಶ ಸುಭಿಕ್ಷವಾಗಿದ್ದರೆ ಆ ದೇಶದಲ್ಲಿ ವಾಸಮಾಡುವ ಜನರು ಕೂಡ ಸಂತೋಷದಿಂದ ಇರುತ್ತಾರೆ. ಇದಕ್ಕೆ ಮುಖ್ಯವಾದ ಕಾರಣ ಆ ವ್ಯವಸ್ಥೆ. ಆ ವ್ಯವಸ್ಥೆಗೆ ಒಬ್ಬ ಮುಖ್ಯಸ್ಥ ಎಂಬುವವನು ಇರುತ್ತಾನೆ. ಸುವ್ಯವಸ್ಥಿತವಾಗಿ ನಡೆಸಲು ಬೇಕಾದ ಎಲ್ಲ ರೀತಿಯ ಅನುಕೂಲತೆಗಳು ಇರುತ್ತವೆ. ಹೀಗಿದ್ದಾಗ ಆ ದೇಶದಲ್ಲಿ ವಾಸ ಮಾಡಬೇಕು. ಆದರೆ ಇಲ್ಲಿ ಕೇಳುವ ಪ್ರಶ್ನೆ ಇದಕ್ಕೆ ವಿಪರೀತವಾಗಿತ್ತು. ಇಂತಹ ವ್ಯವಸ್ಥೆಯನ್ನು ಹಾಳುಮಾಡುವ ವ್ಯಕ್ತಿ ಇದ್ದರೆ, ಅಂತಹ ದೇಶದಲ್ಲಿ ವಾಸಮಾಡಬಾರದು ಎಂಬುದಾಗಿ ಹೇಳುತ್ತದೆ. ಅಂದರೆ ಒಬ್ಬ ಚಾಡಿಕೋರ ಅಥವಾ ಜಿಪುಣನಾದ ವ್ಯಕ್ತಿ ಈ ವ್ಯವಸ್ಥೆಯ ಮಧ್ಯದಲ್ಲಿದ್ದರೆ, ಆಗ ಆ ವ್ಯವಸ್ಥೆಯು ಹಾಳಾಗುತ್ತದೆ. ದೇಶ ಎಷ್ಟು ಸುಭಿಕ್ಷವಾಗಿದ್ದರೂ ಅದು ಮುಂದೆ ಯಾವುದೋ ಕಾಲದಲ್ಲಿ ದುರ್ಭಿಕ್ಷೆಗೆ ಈಡಾಗುತ್ತದೆ. ಹಾಗಾಗಿ ಇಂಥವನು ಇರುವ ದೇಶದಲ್ಲಿ ಇರಬಾರದು; ಅದನ್ನು ತೊರೆಯಬೇಕು ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ.

ಹಾಗಾದರೆ ಚಾಡಿಕೋರ ಮತ್ತು ಜಿಪುಣ ಎಂದರೇನು? ಇವರಿಂದ ವ್ಯವಸ್ಥೆ ಹೇಗೆ ಹಾಳಾಗುತ್ತದೆ? ಚಾಡಿಕೋರನು ಒಬ್ಬರ ಮಾತನ್ನು ಇನ್ನೊಬ್ಬರಿಗೆ ಹೇಳುತ್ತಾನೆ ಮತ್ತು ಹೀಗೇ ಮಾಡುವುದರ ಮೂಲಕ ಜಗಳ ತಂದು ಇಡುತ್ತಾನೆ. ಆಗ ಅವರಿಬ್ಬರ ಮಧ್ಯದಲ್ಲಿರುವ ಬಾಂಧವ್ಯ ಕೆಡುತ್ತದೆ. ಈ ಚಾಡಿಕೋರನಿಗೆ ಕದ್ದು ಕೇಳುವ ಹಾಗು ಸುಳ್ಳನ್ನು ಸೃಷ್ಟಿಸಿ ಹೇಳುವ ಸ್ವಭಾವವಿರುತ್ತದೆ. ಹೇಳುವ ವಿಷಯಕ್ಕೆ ಸ್ವಲ್ಪ ಖಾರ ಮಸಾಲೆ ಹಾಕಿ ಕೇಳುವವರಿಗೆ ತನ್ನ ಬಗ್ಗೆ ವಿಶೇಷವಾದ ಇನ್ನಷ್ಟು ಕಾಳಜಿ, ಪ್ರೀತಿ ಬರಲಿ ಎಂಬ ರೀತಿಯಲ್ಲಿ ಅವನ ಮಾತುಕತೆಗಳು ಇರುತ್ತವೆ. ಇದರ ಬಗ್ಗೆ ಒಂದು ಸುಭಾಷಿತ ಹೇಗಿದೆ ''ಪರೋಕ್ಷಂ ಗುಣಹಂತಾರಂ ಪ್ರತ್ಯಕ್ಷಂ ಪ್ರಿಯವಾದಿನಮ್। ವರ್ಜಯೇತ್ ತಾದೃಶಂ ಮಿತ್ರಂ ವಿಷಕುಂಭಂ ಪಯೋಮುಖಮ್॥'' ಒಳ್ಳೆಯದು ಆಗದಂತೆ ವ್ಯವಸ್ಥೆಯ ಹಿಂದುಗಡೆ ಕೆಲಸ ಮಾಡುತ್ತಾನೆ; ಎದುರುಗಡೆ ಪ್ರಿಯವಾಗಿ ಮಾತನಾಡುತ್ತಾನೆ. ಅಂದರೆ 'ಹಾಲಿನ ಮುಖವುಳ್ಳ ಗಡಿಗೆಯಂತೆ' ಈ ವ್ಯಕ್ತಿಯನ್ನು ಹೋಲಿಸಿ ಹೇಳಿದ್ದುಂಟು.

ಇನ್ನೊಬ್ಬ ವ್ಯಕ್ತಿ ಜಿಪುಣ. ಹಣ ಎಷ್ಟೇ ಇದ್ದರೂ ತನಗಾಗಲಿ ಅಥವಾ ಬೇರೆಯವರಿಗಾಗಲಿ ಒಂದು ಕಾಸನ್ನು ತನ್ನಿಂದ ಬಿಚ್ಚಲು ಇಷ್ಟಪಡುವುದಿಲ್ಲ. ಅಂದರೆ ಒಂದಷ್ಟನ್ನು ಕೂಡಿಟ್ಟುಕೊಂಡೇ ಖುಷಿಪಡುವಂತಹ ಸ್ವಭಾವ ಈತನದ್ದು. ಇದರಿಂದ ಹಣವನ್ನು ಹೇಗೆ ಸದ್ವಿನಿಯೋಗ ಮಾಡಬೇಕು ಎಂಬ ಬಗ್ಗೆ ಇವನಿಗೆ ಸ್ವಲ್ಪವೂ ಆಸಕ್ತಿಯೂ ಇಲ್ಲ. ಹೀಗಾಗಿ ವ್ಯವಸ್ಥೆಯಲ್ಲಿ ಈ ಬಗೆಯ ವ್ಯಕ್ತಿ ಇದ್ದರೆ ವ್ಯವಸ್ಥೆಗೆ ಬೇಕಾದ ಯಾವ ಹಣವೂ ಅಥವಾ ಪದಾರ್ಥವೂ ಅಲ್ಲಿ ಬಳಕೆಯಾಗುವುದಿಲ್ಲ. ಆದ್ದರಿಂದ ಜಿಪುಣ ಮತ್ತು ಚಾಡಿಕೋರ ಎಂಬ ಎರಡು ವಿಧವಾದ ವ್ಯಕ್ತಿಗಳು ಇದ್ದಲ್ಲಿ ಆ ದೇಶ ಹಾಳಾದಂತೇ ಎಂಬ ಅರ್ಥ. ಹಾಗಾಗಿ ಅಲ್ಲಿ ವಾಸವಾಗಿದ್ದರೂ ಸುಭಿಕ್ಷ ಇರುವುದಿಲ್ಲ. ಅದನ್ನು ತ್ಯಾಗ ಮಾಡಿ ಬೇರೆ ಕಡೆಗೆ ವಾಸ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯವನ್ನು ಈ ಉತ್ತರ ನೀಡುತ್ತದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ಉತ್ತರದತ್ತ ಅರ್ಜುನ: ಭಗದತ್ತನಿತ್ತ ಸಂಗರ

ಧನಪತಿಯಾದ ಕುಬೇರನ ದಿಕ್ಕೆಂದು ಪ್ರಸಿದ್ಧವಾದದ್ದು ಉತ್ತರದಿಕ್ಕು. ಅರ್ಜುನನು ಆ ದಿಕ್ಕನ್ನು, ಹಾಗೆಯೇ ಭೀಮಸೇನನು ಪೂರ್ವದಿಕ್ಕನ್ನು, ಜಯಿಸಿದನು. ಸಹದೇವನು ದಕ್ಷಿಣವನ್ನು ಮತ್ತು ಅಸ್ತ್ರಜ್ಞನಾದ ನಕುಲನು ಪಶ್ಚಿಮದಿಕ್ಕನ್ನು ಜಯಿಸಿದನು. ಇತ್ತ ಧರ್ಮರಾಜನಾದ ಯುಧಿಷ್ಠಿರನು ಮಾತ್ರ ಖಾಂಡವಪ್ರಸ್ಥದ ಮಧ್ಯದಲ್ಲಿಯೇ ಇದ್ದುಕೊಂಡು, ಮಿತ್ರರಿಂದ ಸುತ್ತುವರಿಯಲ್ಪಟ್ಟವನಾಗಿ, ಉತ್ತಮವಾದ ರಾಜಲಕ್ಷ್ಮಿಯಿಂದ ಕಂಗೊಳಿಸಿದನು. ಹಾಗೆಂದು ಸಂಕ್ಷೇಪವಾಗಿ ಹೇಳಿದರೇನು ಬಂತು? ವಿಸ್ತೃತವಾಗಿಯೂ ಹೇಳಬೇಕಲ್ಲವೇ?

ಮೊದಲು ಕುಲಿಂದ ದೇಶದ ಅರಸರನ್ನು ಅರ್ಜುನನು ಮೊಟ್ಟಮೊದಲು ಜಯಿಸಿದನು. ಅದಕ್ಕಾಗಿ ತೀವ್ರವಾದ ಶ್ರಮವೇನೂ ಆತನಿಗೆ ಬೇಕಾಗಲಿಲ್ಲ. ಅವರೊಂದಿಗೆ ಆನರ್ತ, ಕಾಲಕೂಟ ಎಂಬ ರಾಜ್ಯಗಳನ್ನು ಗೆದ್ದನು. ಬಳಿಕ ಸುಮಂಡಲನೆಂಬ ರಾಜನನ್ನು ಗೆದ್ದನು. ಆಮೇಲೆ ಶಾಕಲದ್ವೀಪ ಹಾಗೂ ಸಪ್ತದ್ವೀಪಗಳ ಅರಸರೊಂದಿಗೆ ತುಮುಲವಾದ ಯುದ್ಧವೇ ಆಯಿತು. ಅಲ್ಲೆಲ್ಲಾ ಉತ್ತಮ ಧನುರ್ಧಾರಿಗಳೇ ಇದ್ದರು. ಅವರನ್ನು ಸೋಲಿಸಿದ ಬಳಿಗೆ ಪ್ರಾಗ್ಜ್ಯೋತಿಷಪುರದತ್ತ ಧಾವಿಸಿದನು. ಅಲ್ಲಿನ ರಾಜ ಭಗದತ್ತ. ಆತನಿಗೆ ಕಿರಾತರ ಹಾಗೂ ಚೀನದೇಶದವರ ಸಹಕಾರವಿತ್ತು. ಸಾಗರ ಹಾಗೂ ಅದರ ಬಳಿಯ ಅನೂಪ(ಜೌಗು ಪ್ರದೇಶ)ಗಳ ಮಂದಿಯ ಸಹಕಾರವೂ ಇತ್ತು. ಎಂಟು ದಿನಗಳ ಯುದ್ಧವದು. ಅಷ್ಟು ದಿನ ಸೆಣಸಿದ ಭಗದತ್ತನು ನಗುತ್ತಾ ದಣಿವರಿಯದ ಅರ್ಜುನನಿಗೆ ಹೇಳಿದನು: ಮಹಾಬಾಹೋ ಅರ್ಜುನ, ಸಂಗ್ರಾಮಕ್ಕೆ ಶೋಭೆ ನಿನ್ನ ಪರಾಕ್ರಮ. ಇಂದ್ರಪುತ್ರನೆನಿಸಿದ ನಿನಗೆ ಇದು ಒಪ್ಪುತ್ತದೆ ಬಿಡು! ನಾನು ಸಹ ಇಂದ್ರನ ಮಿತ್ರನೇ. ರಣದಲ್ಲಿ ಶಕ್ರನಿಗೆ ಏನೂ ಕಡಿಮೆಯಿಲ್ಲದವನು. ಆದರೂ ನಿನ್ನ ಮುಂದೆ ನಾ ನಿಲ್ಲಲಾರೆ. ಪಾಂಡುಪುತ್ರನೇ, ನಿನಗೇನು ಬೇಕು ಹೇಳು, ನಿನಗಾಗಿ ನಾನೇನನ್ನು ಮಾಡಲಿ ವತ್ಸನೇ? ನೀನೇನನ್ನು ಹೇಳುವೆಯೋ ಅದನ್ನು ಮಾಡುವೆ ಎಂದನು.

ಆಗ ಅರ್ಜುನನು ಹೇಳಿದನು, ಕುರುವಂಶದ ಅರಸರಲ್ಲಿ ಶ್ರೇಷ್ಠನಾದವನು ಧರ್ಮರಾಜನಾದ ಯುಧಿಷ್ಠಿರ. ಆತನು ಧರ್ಮಜ್ಞ, ಸತ್ಯಸಂಧ. ಆತನು ದೊಡ್ಡಯಜ್ಞವನ್ನು ಮಾಡಿ ವಿಪುಲವಾದ ದಕ್ಷಿಣೆಯನ್ನು ಕೊಡಲಿರುವನು. ಆತನು ಚಕ್ರವರ್ತಿಯಾಗಬೇಕೆಂಬುದು ನನ್ನ ಬಯಕೆ. ಆತನಿಗೆ ನೀನು ಕರವನ್ನೀಯಬೇಕೆಂಬುದೇ ನನ್ನ ಅಪೇಕ್ಷೆ. ನೀನು ನನ್ನ ತಂದೆಯ ಸಖ. ನನ್ನ ವಿಷಯದಲ್ಲೂ ಪ್ರೀತಿಯುಳ್ಳವನು. ಆದ್ದರಿಂದ ನಾನು ನಿನಗೆ ಅಪ್ಪಣೆ ಮಾಡಲಾರೆ. ಆದುದರಿಂದ ಪ್ರೀತಿಪೂರ್ವಕವಾಗಿಯೇ ಕರವನ್ನು ಕೊಡೋಣವಾಗಲಿ ಎಂದನು. ಅದಕ್ಕೆ ಭಗದತ್ತನು, ಕುಂತಿಪುತ್ರನೇ ನನಗೆ ನೀನೆಂತೋ ಅಂತೆಯೇ ಯುಧಿಷ್ಠಿರನೂ. ಅದೆಲ್ಲವನ್ನೂ ಮಾಡುತ್ತೇನೆ, ಹೇಳು ಎಂದನು. ಆತನು ಹಾಗೆ ಹೇಳಲು ಅರ್ಜುನನು, ಇಷ್ಟರಿಂದಲೇ ನನಗೆಲ್ಲವನ್ನೂ ನೀ ಮಾಡಿದಂತೆ. ನನಗೆ ಅನುಮತಿಯನ್ನು ಕೊಡು, ನಾನಿನ್ನು ಹೊರಡಬೇಕು ಎಂದನು.

ಹೀಗೆ ಅವನನ್ನು ಜಯಿಸಿ ಅರ್ಜುನನು ಉತ್ತರದಿಕ್ಕಿನಲ್ಲಿ ಮತ್ತೂ ಮುಂದುವರೆದನು. ಅಂತರ್ಗಿರಿ, ಬಹಿರ್ಗಿರಿ, ಉಪಗಿರಿ ಎಂಬ ಭೂಪ್ರದೇಶಗಳನ್ನು ಜಯಿಸಿದನು. ಅಲ್ಲಿದ್ದ ಪರ್ವತಗಳನ್ನೂ, ಪರ್ವತವಾಸಿಗಳನ್ನೂ ತನಗೆ ಅಧೀನರನ್ನಾಗಿ ಮಾಡಿಕೊಂಡು ಅವರಿಂದ ಮಾಡಬೇಕಾದ ವಸೂಲಿಯನ್ನು ಮಾಡಿದನು. ಹಾಗೆ ಮಾಡಿಯೂ ಅವರನ್ನು ಪ್ರಸನ್ನಗೊಳಿಸಿ, ಅವರೆಲ್ಲರೊಂದಿಗೆ ಮುಂದಿನ ರಾಜ್ಯವಾದ ಉಲೂಕದ ರಾಜನಾದ ಬೃಹಂತನ ಮೇಲೇರಿಹೋದನು. ಆತನು ಹೋಗುವಾಗ ಮೃದಂಗದ ನಾದವೇನು, ರಥನೇಮಿಯ ನಾದವೇನು, ಗಜಗಳ ಗದ್ದಲಗಳೇನು! ಇವೆಲ್ಲವುಗಳಿಂದ ಭೂಮಿಯೇ ನಡುಗಿತು.

ಹೀಗೊಂದು ಮಸಾಲೆಪುರಿ ಆರ್ಡರ್ ಪ್ರಕರಣವು



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

ನಿಮ್ಮಂತೆಯೇ ನಾನೂ 'ಒಂದು ಪ್ಲೇಟ್ ಮಸಾಲಾ ಪುರಿ' ಎಂದೆ ಅಷ್ಟೆ.

'ಸ್ವೀಟಾ, ಖಾರಾನಾ?'

'ಖಾರ ಇರಲಿ.'

'ಮೆಣಸಿನ ಖಾರವೋ, ಮೆಣಸಿನಕಾಯಿಯ ಖಾರವೋ?'

'ಮೆಣಸಿನಕಾಯಿಯದು.'

'ಹಸಿಮೆಣಸಿನಕಾಯಿಯದೋ, ಒಣಮೆಣಸಿನಕಾಯಿಯದೋ?'

ಒಂದು ಬದಲಾವಣೆ ಇರಲೆಂದು 'ಒಣಮೆಣಸಿನಕಾಯಿಯದು' ಎಂದೆ.

'ಗುಂಟೂರಿನದೋ, ಬ್ಯಾಡಗಿಯದೋ?'

'ಬ್ಯಾಡಗಿ.'

'ತೊಟ್ಟು ಬಿಡಿಸಿರುವುದೋ, ತೊಟ್ಟು ಇರುವುದೋ?'

'ಏನು ವ್ಯತ್ಯಾಸ?'

'ತೊಟ್ಟಿನ ಸಮೇತ ಇದ್ದರೆ ತಿನ್ನುವಾಗ ಗಂಟಲಿನಲ್ಲಿ ಸಿಕ್ಕಿಕೊಳ್ಳಬಹುದು.'

'ತೊಟ್ಟಿಲ್ಲದ್ದು.'

'ಜಜ್ಜಿದ್ದೋ, ಹೆಚ್ಚಿದ್ದೋ?'

'ಏನು ವ್ಯತ್ಯಾಸ?'

'ಹೆಚ್ಚಿದ್ದು ಹೆಚ್ಚಾದರೆ ಪಕ್ಕ ಇಡಬಹುದು. ಜಜ್ಜಿದ್ದು ತಿಂದೇ ಅನುಭವಿಸಬೇಕಾದದ್ದು.'

'ಹೆಚ್ಚಿದ್ದು.'

'ಹೆಚ್ಚಿದ್ದನ್ನು ಹುರಿದು ಕೊಡಲೋ, ಹಸಿಯಾಗಿ ಕೊಡಲೋ?'

ನನಗೆ ಆ ಮಾಣಿಯನ್ನು ಹುರಿದುಬಿಡುವಷ್ಟು ಕೋಪ ಉಕ್ಕಿತು. 'ಸ್ವಂತ ತೀರ್ಮಾನ ತೆಗೆದುಕೊಳ್ಳಲು ಆಗದೇನು?' ಎಂದು ಗುಡುಗಿದೆ.

'ನಮ್ಮಿಷ್ಟದಂತೆ ಕೊಡಲು ಇದು ರೋಡ್ ಸೈಡ್ ಚ್ಯಾಟ್ ಸ್ಟಾಲ್ ಅಲ್ಲ ಸಾರ್. ಫೈವ್‌ಸ್ಟಾರ್ ಹೊಟೇಲ್' ಎಂದು ಎದೆಯುಬ್ಬಿಸಿದ. ಅವನು ತೊಟ್ಟಿದ್ದ ಸೂಟ್ ನನ್ನ ಮದುವೆಯ ಸೂಟ್‌ಗಿಂತ ಸುಪೀರಿಯರ್ ಕ್ವಾಲಿಟಿಯದಾಗಿತ್ತು. ಅವನ ಅಂಗಿಯ ಬಿಳುಪು ನಿರ್ಮಾ ಜಾಹೀರಾತಿನಿಂದ ಎತ್ತಿ ತಂದಂತಿತ್ತು. ಬಂದ ಗಿರಾಕಿಗಳೆಡೆಗೆ ಅವನು ಹರಿಸುತ್ತಿದ್ದ ನೋಟವು ಮೈಲಿಗೆಯನ್ನು ಕಂಡ ಮಡಿವಂತರ ನೋಟದಷ್ಟೇ ತೀವ್ರವಾಗಿತ್ತು.

'ಒಣಮೆಣಸಿನ ಬಾಬ್ತೇ ಬೇಡ. ಹಸಿಮೆಣಸಿನಕಾಯಿ ಹಾಕು' ಎಂದೆ.

'ಚಿಕ್ಕಬಳ್ಳಾಪುರದ್ದೋ, ವಿಯಟ್ನಾಂದೋ?'

ವಿಯಟ್ನಾಂ ಮೆಣಸಿನಕಾಯಿಯನ್ನು ಒಮ್ಮೆ ಆರಿಸಿಕೊಂಡಿದ್ದೆ. ಒಂದು ಪಾವು ರವೆಯ ಉಪ್ಪಿಟ್ಟಿಗೆ ಹದಿನೈದು ಮೆಣಸಿನಕಾಯಿಗಳೆಂದು ಬಾಲ್ಯದಲ್ಲಿ ನನ್ನ ಅಮ್ಮ ಹೇಳಿಕೊಟ್ಟಿದ್ದುದನ್ನು ಅನ್ವಯಿಸಿದ್ದೆ. ಕರುನಾಡಿನ ಮಾಮೂಲಿ 'ಅಹಿಂಸಾವಾದಿ' ಅಲ್ಪಖಾರಿಯ ಲೆಕ್ಕದಲ್ಲಿ ವಿಯಟ್ನಾಮಿಯನ್ನು ಹಾಕಿದ್ದು ತಪ್ಪಾಯಿತೆಂದು ಮೊದಲ ತುತ್ತಿನಲ್ಲೇ ತಿಳಿಯಿತು. ಆ ಖಾರದ ಉಗ್ರತೆಗೆ 'ಕಿವಿ ಮೂಗುಗಳಿಂದ ಹೊಗೆ ಹೊರಟಿತು' ಎಂದು ಕಂಡ ಮೂಲಗಳು ತಿಳಿಸಿದವು. ವಿದೇಶದಲ್ಲಿ ಅಷ್ಟು ಮೆಣಸಿನಕಾಯಿಗಳನ್ನು ಬಳಸಿ ಅಡುಗೆ ಮಾಡಿ, ಹಾಗೆ ದೇಹದಿಂದ ಹೊಗೆ ಹೊರಟರೆ ಫೈರ್ ಅಲಾರ್ಮ್ ಮೊಳಗುವುದೋ ಏನೋ.

'ಸ್ವದೇಶಿ ಮೆಣಸಿನಕಾಯಿಗೆ ಜೈ. ಸ್ಥಳೀಯರ ರೈತರಿಗೆ ಜಯವಾಗಲಿ' ಎಂದೆ. ಮಿರುಗು ಸೂಟಿನವ ಸಮ್ಮತಿಸೂಚಕ ತಲೆಯಾಡಿಸಿ, 'ಉದ್ದದ್ದೋ, ಗಿಡ್ಡದ್ದೋ?' ಎಂದ.

'ಉದ್ದ ಮೆಣಸಿನಕಾಯಿಯನ್ನು ಸಕ್ಕರೆಯ ಬದಲಿಗೆ ಬಳಸಬಹುದು ಎನಿಸುತ್ತದೆ' ಎಂದಿದ್ದ ನನ್ನ ಆಂಧ್ರದ ಗೆಳೆಯ. ಚೋಟುದ್ದ ಮೆಣಸಿನಕಾಯಿಯ ಖಾರದ ಮುಂದೆ ಉದ್ದ ಮೆಣಸಿನಕಾಯಿಯದು ವೈಭವ್ ಸೂರ್ಯವಂಶಿಯ ಬ್ಯಾಟಿಂಗಿನ ಮುಂದೆ ಮಹಮದ್ ಸಿರಾಜನ ಬ್ಯಾಟಿಂಗಿನಷ್ಟೇ ಸಪ್ಪೆ.

'ಚೋಟ್ಮೆಣ್ಸಿನ್ಕಾಯಿ' ಎಂದೆ.

'ಗುಡ್ ಚಾಯ್ಸ್' ಎಂದ ನಿರ್ಮಾಂಗಿ, 'ಹೆಚ್ಚಿದ್ದೋ, ಚಚ್ಚಿದ್ದೋ?'

ನನಗೆ ಅವನ ಪ್ರಶ್ನೆಯ ವಿಧ ಇಷ್ಟವಾಯಿತು. ಬೇರೆಯವರಾದರೆ 'ಕಟ್ ಮಾಡಿದ್ದೋ, smash ಮಾಡಿದ್ದೋ?' ಎನ್ನುತ್ತಿದ್ದರು. ಬಡಪಾಯಿಗಳಿಗೆ Mash ಮತ್ತು Smash ಪದಗಳ ಅರ್ಥವ್ಯತ್ಯಾಸವೂ ತಿಳಿದಿರುವುದಿಲ್ಲ. 'ಆಲೂಗಡ್ಡೆಯನ್ನು smash ಮಾಡಿ' ಎನ್ನುವ ಟಿವಿ ರಸಪ್ರವೀಣೆಯರ ನುಡಿಯನ್ನು ಕೇಳಿದಾಗಲೆಲ್ಲ ಆಲೂಗಡ್ಡೆಯನ್ನು ತೆಗೆದುಕೊಂಡು ಅವರ ತಲೆಯ ಮೇಲೆಯೇ ಅಪ್ಪಳಿಸಬೇಕೆನಿಸಿದೆ. ಮ್ಯಾಷ್ ಮಾಡುವುದು ಎಂದರೆ ಗೆಡ್ಡೆಗಳನ್ನು ಒತ್ತಿ, ಹಿಸುಕಿ ಪೇಸ್ಟ್ ಮಟ್ಟಕ್ಕೆ ಮಾಡಿಕೊಳ್ಳುವುದು, ಸ್ಮ್ಯಾಷ್ ಮಾಡುವುದು ಎಂದರೆ ಭಾರವಾದ ವಸ್ತುವಿನಿಂದ ಜಜ್ಜಿ ಪುಡಿಪುಡಿ ಮಾಡುವುದು ಎಂದು ಈ ಮೊದ್ದುಗಿಣಿಗಳಿಗೆ ಅರ್ಥ ಮಾಡಿಸುವುದೂ ಕಷ್ಟವೇ.

'ಮಸಾಲೆಪುರಿಗೆ ಹಸಿರು ಬಟಾಣಿಯೋ, ಬಿಳಿ ಬಟಾಣಿಯೋ?'

ಬಿಳಿ ಬಟಾಣಿ ಎಂದರೆ ಕಾಬೂಲ್ ಕಡಲೆ ಅಥವಾ ಚೆನ್ನಾ. ಚೆನ್ನಾ ನನ್ನ ನಾಲಿಗೆಗೆ ಚೆನ್ನ ಎನಿಸಿಲ್ಲ. 'ಹಸಿರು ಕಡಲೆ' ಎಂದೆ.

'ಪೌಡರ್ ಕಟ್ಟಿದ ಹಸಿರು ಬಟಾಣಿಯೋ, ಸಹಜವಾಗಿ ಹಸಿರಾಗಿರುವುದೋ?'

'ಫೈವ್ ಸ್ಟಾರ್ ಹೊಟೇಲಿನಲ್ಲಿ ಒಣಗಿದ ಬಟಾಣಿಗೆ ಬಣ್ಣ ಕಟ್ಟಿ ಬಳಸುವರೇನು? ನಿಮ್ಮಲ್ಲೂ ಕಲಬೆರಕೆಯೆ?'

'ಇಲ್ಲ. ಆಪ್ಷನ್ ಕೊಟ್ಟೆನಷ್ಟೆ. ಪೌಡರ್ ಕಟ್ಟಿದ್ದನ್ನು ನೀವು ಕೇಳಿದ್ದಿದ್ದರೆ 'ವಿ ಆರ್ ಸಾರಿ ಸರ್. ವಿ ಡು ನಾಟ್ ಪ್ರೊವೈಡ್ ಸಚ್ ಲೋ ಕ್ವಾಲಿಟಿ ಸ್ಟಫ್' ಎನ್ನುತ್ತಿದ್ದೆ. ನಿಮ್ಮ ಆಯ್ಕೆ ಸೂಕ್ತವಾಗಿದೆ. ಅಭಿನಂದನೆಗಳು. ಬಟಾಣಿ ಪೂರ್ಣವಾಗಿ ಬೇಯಲೋ, ಅರ್ಧ ಬೇಯಲೋ?'

'ಹಾಫ್ ಬೇಕ್' ಎಂದೆ. ಪೂರ್ಣವಾಗಿ ಬೆಂದರೆ ಸತ್ವಹೀನವಾಗುವುದೆಂಬ ಅಭಿಪ್ರಾಯವು ವೈರಲ್ ಆಗಿದೆಯಲ್ಲ!

'ಮೆಣಸಿನಕಾಯಿ ಆಯಿತು, ಬಟಾಣಿ ಆಯಿತು. ಈರುಳ್ಳಿ ಬೇಕೋ ಅಥವಾ ಜೈನ್ ಮಸಾಲೆಪುರಿಯೋ?'

ಈರುಳ್ಳಿಯನ್ನು ಹೆಚ್ಚುವಾಗ ಕಂಡಾಗ ನನಗೆ ಕಣ್ಣಲ್ಲಿ ನೀರು; ಅದರ ರುಚಿಯನ್ನು ನೆನೆದಾಗ ನಾಲಿಗೆಯಲ್ಲಿ ನೀರು. ಈರುಳ್ಳಿಯ ಮಧ್ಯಭಾಗದ 'ಫ್ಯಾಟ್ ಸೆಕ್ಷನ್' ನನಗೆ ಬಹಳ ಇಷ್ಟ. ಆ ಘಾಟು ಕಣ್ಣಲ್ಲಿ ನೀರು ಬರಿಸುವಷ್ಟಿದ್ದರೆ ಮತ್ತೂ ಇಷ್ಟ.

'ಸೆಮಿ ಜೈನ್. ಬೆಳ್ಳುಳ್ಳಿ ಬೇಡ, ಈರುಳ್ಳಿ ಇರಲಿ.'

'ನಾವು ಬಳಸುವ ಪೇಸ್ಟಿನಲ್ಲಿ ಬೆಳ್ಳುಳ್ಳಿ ಇರತ್ತೆ.'

'ಪೇಸ್ಟ್ ಬಳಸುವುದನ್ನು ಹೇಳಬೇಡಿ. ತಿಳಿಯದೆ ಮಾಡಿದ ಪಾಪ ಪಾಪವಲ್ಲ' ಎಂದೆ.

'ಬೆಳ್ಳುಳ್ಳಿ ತಿನ್ನುವುದು ಪಾಪವೇನು?'

'ತಿಂದವರು ಬಾಯಿಬಿಟ್ಟಾಗ ಅವರಿಂದ ಹೊರಡುವ ಬಾಯ್ವಾಸನೆಗೆ ಹತ್ತಿರ ಸುಳಿದವರನ್ನು ಕಂಡು 'ಅಯ್ಯೋ ಪಾಪ!' ಎನಿಸುವುದಲ್ಲ, ಆ ವಿಧದಲ್ಲಿ ಪಾಪ!'

'ಈರುಳ್ಳಿಯ ವಾಸನೆ ಶ್ರೀಗಂಧದಂತಿರುವುದೇ? ಓಹ್! ಕ್ಷಮಿಸಿ. ಮಾಣಿಗಳು ಗಿರಾಕಿಗಳೊಡನೆ ವಾದ ಮಾಡುವಂತಿಲ್ಲ. ಮ್ಯಾನೇಜರ್‌ಗೆ ಹೇಳಬೇಡಿ ಪ್ಲೀಸ್!' ಗೋಗರೆದ ಗರಿಸೂಟಿನವ. ಮಾಣಿಯಾದರೇನು, ಸಾಫ್ಟ್‌ವೇರಿಯಾದರೇನು, ಜಾಬ್ ಇನ್‌ಸೆಕ್ಯುರಿಟಿ ಜಾತ್ಯತೀತ, ಉದ್ಯೋಗಾತೀತ.

'ಈರುಳ್ಳಿ ಯಾವುದಿರಲಿ? ಬಿಳಿಯದೋ, ಕೆಂಪಾದುದೋ?'

'ಬಿಳಿ ಈರುಳ್ಳಿ?'

'ಹೂಂ. ಫಾರಿನ್ ಪ್ರಾಡಕ್ಟ್.'

ನೆನಪಾಯಿತು. ಮೆಲ್ಬೋರ್ನಿನ ತರಕಾರಿ ಅಂಗಡಿಯಲ್ಲಿ ಬಿಳಿ, ಅರೆಬಿಳಿ, ಒರಟುಕೆಂಪು, ನುಣುಪುಕೆಂಪು ವಿಧದ ಈರುಳ್ಳಿಗಳನ್ನು ಕಂಡಿದ್ದೆ. ನಮ್ಮ ಕರ್ನಾಟಕದ ಈರುಳ್ಳಿಗಳ ರುಚಿಯ ಮುಂದೆ ಆ ನಾಲ್ಕನ್ನೂ ನಿವಾಳಿಸಿ ಎಸೆಯಬೇಕಾಗಿತ್ತು.

'ನಮ್ಮದೇ, ಅಸಲಿ ಕರ್ನಾಟಕದ್ದೇ, ಈರುಳ್ಳಿಯನ್ನು ಬಳಸಿರಿ. ರೆಡ್ ಈಸ್ ಬ್ಯೂಟಿಫುಲ್' ಎಂದೆ.

'ವೆರಿ ಟ್ರೂ ಸರ್' ಎಂದ ಅವನು ಹೊಟೇಲ್ ಲೇಬರ್ ಯೂನಿಯನ್ನಿನ ಸದಸ್ಯನೆಂದು ನಂತರ ತಿಳಿಯಿತು. ಕಮ್ಯುನಿಷ್ಟರಿಗೆ ಕೆಂಪು ಪ್ರಿಯವೇ.

'ಈರುಳ್ಳಿ ದೊಡ್ಡ ಗಾತ್ರದ್ದೋ, ಬಳ್ಳಾರಿ ಈರುಳ್ಳಿಯೋ?'

'ಹೆಚ್ಚಿಕೊಡುವಿರಲ್ಲ, ತರಿದ ಈರುಳ್ಳಿಯ ಒರಿಜಿನಲ್ ಗಾತ್ರ ಯಾವುದಿದ್ದರೂ ಒಂದೇ!'

'ಫೈವ್‌ಸ್ಟಾರ್ ಹೊಟೇಲ್ಸ್ ಆರ್ ಸ್ಪೆಸಿಫಿಕ್ ಸರ್. ಪ್ರತಿಯೊಂದನ್ನೂ ವಿವರಿಸಿ, ಅರ್ಥಗೊಳಿಸಿಯೇ ಆರ್ಡರ್ ಪಡೆಯಬೇಕೆಂದು ಆರ್ಡರ್ ಆಗಿದೆ.'

'ಬಳ್ಳಾರಿ ಬೇಡ. ಮಾಮೂಲಿ ಸೈಜಿನದು.'

'ನಿಮಗೆ ಮಸಾಲೆಪುರಿಯನ್ನು ಕೊಡುವುದಕ್ಕೆ ಮುಂಚೆಯೂ ಒಂದು ಪ್ಲೇಟಿನಲ್ಲಿ ಈರುಳ್ಳಿ, ಸೌತೆಕಾಯಿಗಳನ್ನು ಕೊಡುತ್ತೇವೆ. ಅದು ನಮ್ಮ ಹೊಟೇಲಿನ ಪದ್ಧತಿ. ಆ ಈರುಳ್ಳಿಯನ್ನು ಶಂಖದಂತೆ ಹೆಚ್ಚಬೇಕೋ, ಚಕ್ರದಂತೆ ಹೆಚ್ಚಬೇಕೋ?'

'ಏನು ವ್ಯತ್ಯಾಸ?'

'ನೀವು ಪ್ರಗತಿಶೀಲರಾದರೆ ಚಕ್ರವನ್ನು ಆಯ್ಕೆ ಮಾಡಿ. ಯಾರು ಏನೇ ಮಾಡಿದರೂ ವಿರೋಧ ವ್ಯಕ್ತಪಡಿಸುವ ವ್ಯಕ್ತಿತ್ವದವರಾದರೆ ಶಂಖ ಹೊಡೆದುಕೊಳ್ಳುವುದನ್ನು ಪ್ರತಿಪಾದಿಸಲು ಶಂಖವನ್ನು ಆಯ್ಕೆ ಮಾಡಿ.'

ಮಿರುಗುಬೂಟಿನವ ಹೀಗೆಯೇ ಕೊತ್ತಂಬರಿ (ನಾಟಿಯೋ, ಫಾರಮ್ಮೋ), ಉಪ್ಪು (ರಾಕ್‌ಸಾಲ್ಟೋ, ಸೀಸಾಲ್ಟೋ; ಕಲ್ಲುಪ್ಪೋ, ಪುಡಿಯುಪ್ಪೋ), ಹುಳಿ (ನಿಂಬೆಯದೋ, ಹುಣಿಸೆಯದೋ; ಗಜನಿಂಬೆಯದೋ, ಪುಟ್ಟನಿಂಬೆಯದೋ) ಮೊದಲಾದ ವಿವರಗಳನ್ನು ಪಡೆಯುವ ಹೊತ್ತಿಗೆ ನನಗೆ ಸಾಕುಸಾಕಾಗಿತ್ತು.

ಕಡೆಗೂ ಆರ್ಡರ್ ಪಡೆದ ಮಾಣಿ 'ಷೆಫ್ಸ್ ಪ್ಯಾಲೇಸ್'ನತ್ತ ನಡೆದ. ರುಚಿರುಚಿಯಾದ ಮಸಾಲೆಪುರಿಯ ಕನಸು ಕಾಣುತ್ತಾ ನಾನು ಮೆತ್ತನೆಯ ಸೀಟಿಗೆ ಒರಗಿದೆ.

ಅರ್ಧಗಂಟೆಯ ನಂತರ ಮಾಣಿ ಅನೇಕ ಪುಟ್ಟ ಪ್ಲೇಟುಗಳನ್ನು ದೊಡ್ಡ ತಟ್ಟೆಯಲ್ಲಿ ಹಿಡಿದು ತಂದ. ಚೋಟ್ಮೆಣ್ಸಿನ್ಕಾಯಿ, ಪುಟ್ಟನಿಂಬೆ, ನಾಟಿಕೊತ್ತಂಬರಿ, ಬೆಂದ ಬಟಾಣಿ ಮೊದಲಾದ ಐಟಂಗಳನ್ನು ಹೊತ್ತ ಪ್ಲೇಟುಗಳು ನನ್ನ ಮೇಜಿನಷ್ಟು ಉದ್ದಗಲಕ್ಕೂ ಹರಡಿ ಕುಳಿತವು.

'ನಿಮಗೆ ಬೇಕಾದ ಪ್ರಮಾಣದಲ್ಲಿ ಮಿಕ್ಸ್ ಮಾಡಿಕೊಳ್ಳಿ ಸಾರ್. ಹ್ಯಾಪಿ ಈಟಿಂಗ್' ಎನ್ನುತ್ತಾ ಮರೆಯಾದ ಮಾಣಿ.

ನಾಯಿಗೊಂದು ಕಾಲ, ಜಿರಳೆಗೊಂದು ಕಾಲ

ವರ್ತಮಾನಕ್ಕಿಂತ ಹಳೆಯ ಇತಿಹಾಸ ತೆಗೆದು ಅದರ ಬಗ್ಗೆ ಹುಚ್ಚರಂತೆ ಪ್ರಶ್ನಿಸುವುದು, ನಮ್ಮವರ ಬಗ್ಗೆಯೇ ನಮಗೆ ನಕಾರಾತ್ಮಕತೆ ಭಾವನೆ ಮೂಡಿಸುವುದು ಹಲವರ ಉದ್ದೇಶ.

• ಪೃಥ್ವಿರಾಜ್ ಕುಲಕರ್ಣಿ



ಖ್ಯಾತ ಕವಿ ವಿಲಿಯಂ ಶೇಕ್ಸ್‌ಪಿಯರ್ ತನ್ನ ಹಾಮ್ಲೆಟ್ ನಾಟಕದಲ್ಲಿ 'Every dog has its day' ಎಂಬ ಹೇಳಿಕೆಯಿಟ್ಟ, ನಂದೂ ಒಂದು ಸಮಯ ಬರುತ್ತೆ ಎಂಬ ಆತ್ಮವಿಶ್ವಾಸದಲ್ಲಿದ್ದ ಜನರ ಹೃದಯಕ್ಕೆ ಈ ಹೇಳಿಕೆ ಗಾಢವಾಗಿ ಅಂಟಿಕೊಂಡಿತು. ಜಗತ್ತಿನ ಯಾವುದೇ ಪ್ರಾಣಿಯಾಗಿರಲಿ, ಅದರದ್ದೂ ಒಂದು ಸಮಯ ಬರುತ್ತೆ. ಆಗ ಅದೂ ಮಿಂಚುತ್ತೆ ಎಂಬುದು ಇದರ ಅರ್ಥ. ಭಾರತದಲ್ಲಿ ಆಧುನಿಕ ಸಿನಿಮಾ ಬರಹಗಾರರು ಇದೇ ಹೇಳಿಕೆಯನ್ನು ಬದಲಾಯಿಸಿ 'ಹರ್ ಕುತ್ತೆ ಕಾ ದಿನ್ ಆತಾ ಹೆ' ಎಂಬ ಡೈಲಾಗ್ ಚಾಲ್ತಿಗೆ ತಂದರು. ಈಗಲೂ ನಾವು ನಮ್ಮ ಜೀವನದಲ್ಲಿ ಯಾರಾದರೂ ಅಪಮಾನ ಮಾಡಿದರೆ, ಅವರಿಗೆ 'ನಂದೂ ಸಮಯ ಬರುತ್ತೆ ಆಗಲೇ ಉತ್ತರಿಸುತ್ತೇನೆ' ಎಂದು ಹೇಳಿ ಬರುವ ವಾಡಿಕೆ ಇಟ್ಟುಕೊಂಡಿದ್ದೇವೆ.

ದೇಶದ ರಾಜಕಾರಣ ನೋಡಿದರೆ, ಇದೇ ಹೇಳಿಕೆ ನೆನಪಿಗೆ ಬರುತ್ತದೆ. ಎಲ್ಲರಿಗೂ ಒಂದು ಕಾಲವೆಂಬಂತೆ ಇಲ್ಲದ ಜನರ ಕಾಲ ಕೂಡಿ ಬರುತ್ತಿದೆ. ಒಂದು ಕಾಲದಲ್ಲಿ ರಾಜಕೀಯ ವಿಶ್ಲೇಷಣೆಗಾಗಿ ಜನರು ಖ್ಯಾತ ಪತ್ರಕರ್ತರ ಅಂಕಣಗಳಿಗಾಗಿ ಕಾಯುತ್ತಿದ್ದರು. ಆದರೆ ದುರದೃಷ್ಟವಶಾತ್ ಈಗಂತೂ ವಿದೇಶಿ ಯೂಟ್ಯೂಬರ್‌ಗಳು ಸೇರಿದಂತೆ ಖಾಲಿ ಕೂತ ಜನರಿಂದ ರಾಜಕೀಯ ವಿಶ್ಲೇಷಣೆ ಕೇಳುವ ಪರಿಸ್ಥಿತಿ ಭಾರತಕ್ಕೆ ಬಂದಿದೆ.

ಆಮ್ ಆದ್ಮಿ ಪಕ್ಷದಲ್ಲಿದ್ದು ವಿಫಲಗೊಂಡ ಅಭಿಜಿತ್ ದಿಪ್ಕೆ ಎಂಬ ಯುವಕ ದೇಶದಲ್ಲಿ ಸಂಚಲನ ಹುಟ್ಟುಹಾಕಿದ್ದು, ಜಿರಳೆ ಪಕ್ಷವೆಂಬ ನಾಟಕ ಕಂಪನಿ ಶುರು ಮಾಡಿದ್ದಾರೆ. ಪಕ್ಷ ಬಂದಿದ್ದೇ ತಡ ಸಾಮಾಜಿಕ ಜಾಲತಾಣದಲ್ಲಿ ಟ್ರೆಂಡಿಂಗ್. ಮಿಲಿಯನ್‌ಗಟ್ಟಲೇ ಹಿಂಬಾಲಕರು!

ವಾಸ್ತವವಾಗಿ ಸಾಮಾಜಿಕ ಜಾಲತಾಣದಿಂದ ಸಿಗುವ ಹಣದಿಂದ ಜೀವನ ನಡೆಸುವ ಜನರ ಸಂಖ್ಯೆ ನಮ್ಮ ದೇಶದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಹೆಚ್ಚಾಗುತ್ತಿರುವ ಸಂಖ್ಯೆ ಜಾಲತಾಣ ಮಾರುಕಟ್ಟೆಯಲ್ಲಿ ಭಾರೀ ಸ್ಪರ್ಧೆ ಹುಟ್ಟುಹಾಕುತ್ತಿದೆ. ಕಾಳಸಂತೆಯಂತೆ ಜಾಲತಾಣ ಮಾರುಕಟ್ಟೆಯಲ್ಲಿ ಎದ್ದು ಬರುವುದು ಸುಲಭದ ಕೆಲಸವೇನಲ್ಲ. ಅಲ್ಲಿ ಎದ್ದು ಬಂದರೆ ಸಾಕು ಬಂದವನಿಗೆ ಕಿಸೆ ತುಂಬ ದುಡ್ಡು, ಕಂಟೆಂಟ್ ತುಂಬ ಜಾಹೀರಾತುಗಳು ಸಿಗುತ್ತವೆ. ಕೆರಿಯರ್ ವಿಚಾರಕ್ಕೆ ಬಂದರೆ ಜೆನ್-ಝಿಗಳ ಜಾಲತಾಣ ಪ್ರೀತಿ ಅವರಿಗೆ ಜೀವನಕ್ಕೆ ಬೇಕಾದಷ್ಟು ದುಡ್ಡು ನೀಡುತ್ತದೆ. ಯೂಟ್ಯೂಬ್‌ನಂತಹ ಮಾಧ್ಯಮಗಳು ಗೋಲ್ಡನ್ ಪ್ಲೇಟ್, ಸಿಲ್ವರ್ ಪ್ಲೇಟ್ ಮತ್ತು ಡೈಮಂಡ್ ಪ್ಲೇಟ್ ಎಂಬ ದೊಡ್ಡ ಗೌರವಗಳನ್ನೂ ನೀಡುತ್ತವೆ. ಜಾಲತಾಣ ನೀಡುವ ಹತ್ತಾರು ಸೌಲಭ್ಯಗಳು ಇನ್‌ಫ್ಲುಯೆನ್ಸರ್‌ಗಳ ರಂಗೇರಿಸಿವೆ. ಪರಿಣಾಮ ನಮ್ಮ ದೇಶದ ಯುವಕರಿಗೆ ಇನ್‌ಫ್ಲುಯೆನ್ಸರ್ ಆಗುವ ಮದವೇರಿದೆ. ಯಾವಮಟ್ಟದಲ್ಲೆಂದರೆ ಸ್ವಂತ ದೇಶ, ಸ್ವಂತ ಧರ್ಮ ವಿರುದ್ಧ ಮಾತನಾಡುವಷ್ಟು, ಸುಳ್ಳುಗಳನ್ನು ಬೊಗಳುವಷ್ಟು, ಮತ್ತೊಬ್ಬರ ಪ್ರಯತ್ನಗಳಿಗೆ ಹೆಸರಿಡುವಷ್ಟು ಮತ್ತು ತಪ್ಪೆಂದು ಗೊತ್ತಿದ್ದರೂ ಮಾತನಾಡಿ ಬಳಿಕ ಕ್ಷಮೆ ಕೇಳುವಷ್ಟು!

ಜಿರಳೆ ಪಕ್ಷದಿಂದ ಆಗುತ್ತಿರುವ ಪಿತೂರಿಯೂ ಇದೆ. ಜಿರಳೆ ಪಕ್ಷ ಯಾವುದೋ ಹೋರಾಟಕ್ಕಾಗಿ ಹುಟ್ಟಿದ ಸಂಘಟನೆಯಲ್ಲ, ಅಥವಾ ಯುವಕರ ಏಳಿಗೆಗಾಗಿ ಹುಟ್ಟಿರುವ ಸಂಘಟನೆಯೂ ಅಲ್ಲ. ಬಾಯಿ ಚಟಕ್ಕೆ ಮಾತನಾಡಿ, ಜನರ ಗಮನ ಸೆಳೆಯಲು ಮಾಡಲಾಗಿರುವ ಒಂದು ಪ್ರಯೋಗ. ಒಬ್ಬ ವ್ಯಕ್ತಿ ಬಂದು ನಮ್ಮ ದೇಶದ ವ್ಯವಸ್ಥೆ ಬಗ್ಗೆ ಮಾತನಾಡುತ್ತಾನೆಂದರೆ ನಮ್ಮ ಜನರು ಸುಮ್ಮನೆ ಕೇಳುವುದಿಲ್ಲ. ಇಂತವರು ಮನೆಗೊಬ್ಬರು ಇರುತ್ತಾರೆ, ಜನರ ಚಿತ್ತ ಕದಿಯಬೇಕಾದಲ್ಲಿ ಒಂದೆರಡು ವಿವಾದಗಳನ್ನು ಮೈಗೆತ್ತಿಕೊಳ್ಳಬೇಕಾಗುತ್ತದೆ. ಒಂದಿಷ್ಟು ಕೇಸುಗಳನ್ನೂ ಜಡಿಸಿಕೊಳ್ಳಬೇಕಾಗುತ್ತದೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಸನಾತನ ಧರ್ಮದ ವಿರುದ್ಧ ಹೋಗುವವರಿಗೆ ಮತ್ತು ಪ್ರಧಾನಿ ಮೋದಿ ವಿರುದ್ಧ ಮಾತನಾಡಿಬಿಟ್ಟರೆ ಅವರಿಗೆ ಎಲ್ಲಿಲ್ಲದ ಜನಪ್ರಿಯತೆ ಸಿಗುತ್ತದೆ. ಇದರ ಲಾಭ ಪಡೆಯಲು ಅದೊಂದು ಪಕ್ಷ ಯಶಸ್ವಿಯಾಗಿದ್ದು ಸುಳ್ಳೇನಲ್ಲ.

ಈ ಹಿಂದಿನಿಂದ ಇಂಥದ್ದೇ ವ್ಯಾಪಾರವೊಂದನ್ನು ಜರ್ಮನಿಯ ಧ್ರುವ್ ರಾಥಿ ಎಂಬ ಮೂರ್ಖ ಯೂಟ್ಯೂಬರ್ ಒಬ್ಬ ಮಾಡುತ್ತಿದ್ದಾನೆ. ಭಾರತ ಸರ್ಕಾರದ ವಿರುದ್ಧ ವಿಡಿಯೋಗಳನ್ನು ಮಾಡುವುದು, ಹಿಂದು ಧರ್ಮದ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುವುದು, ಸೆಕ್ಯುಲರಿಸಂ ಹೆಸರಿನಲ್ಲಿ ಧರ್ಮಗಳ ನಡುವೆ ಜಗಳ ಹಚ್ಚುವುದು, ಭಾರತದ ಇತಿಹಾಸದ ಬಗ್ಗೆ ದೂರದ ಜರ್ಮನಿಯಲ್ಲಿ ಕೂತು ಪ್ರಶ್ನೆಗಳನ್ನು ಕೇಳುವುದು ಈತನ ವ್ಯಾಪಾರದ ಮೂಲ. ಬೇಕಂತಲೆ ವಿವಾದ ಜಾಡಿಸಿಕೊಂಡು ಜನರ ಬಾಯಲ್ಲಿದ್ದು ದುಡ್ಡು ಮಾಡಿಕೊಳ್ಳುವುದು ಈತನ ಮಾರ್ಕೆಟಿಂಗ್ ಸ್ಟ್ರ್ಯಾಟರ್ಜಿ. ಅದೇ ಸ್ಟ್ರ್ಯಾಟರ್ಜಿ ಅಭಿಷೇಕ್ ಬ್ಯಾನರ್ಜಿ ಎಂಬಾತ ಬಳಸಿ ಯಶಸ್ವಿಯಾದ.

ನಮ್ಮ ದೇಶದಲ್ಲಿ ಏನಾದರೂ ಒಂದು ಘಟನೆ ನಡೆದರೆ ಸಾಕು, ಅದು ಇಲ್ಲಿನ ಜೆನ್-ಝಿಗಳಿಗೆ ಕಿವಿಗೆ ಮುಟ್ಟಿ ಅದರ ಬಗ್ಗೆ ಅಭಿಪ್ರಾಯಗಳು ಹುಟ್ಟುವ ಮೊದಲೇ ಈತ ಅದರ ಮೇಲೆ ಇಲ್ಲದ್ದನ್ನೆಲ್ಲ ಸೇರಿಸಿ ವಿಡಿಯೋ ಮಾಡುತ್ತಾನೆ. ವರ್ತಮಾನದ ಬಗ್ಗೆ ಮಾತನಾಡುವುದಕ್ಕಿಂತ ಹಳೆಯ ಇತಿಹಾಸ ತೆಗೆದು ಅದರ ಬಗ್ಗೆ ಹುಚ್ಚರ ಹಾಗೆ ಪ್ರಶ್ನೆ ಕೇಳುವುದು, ನಮ್ಮವರ ಬಗ್ಗೆಯೇ ನಮಗೆ ನಕಾರಾತ್ಮಕತೆ ಭಾವನೆ ಮೂಡುವಂತೆ ಮಾಡುವುದು ಇದರ ಉದ್ದೇಶ. ಇದಕ್ಕಿಂತ ಮೊದಲು ಅಭಿಷೇಕ್ ಬ್ಯಾನರ್ಜಿ ಎಂಬ ಯೂಟ್ಯೂಬರ್ ಕೂಡ ಇದೇ ಕೆಲಸ ಮಾಡುತ್ತಿದ್ದ. ಈಗಲೂ ದೇಶದ ಕಾರ್ಯತಂತ್ರದ ಬಗ್ಗೆ ಪ್ರಶ್ನೆ ಮಾಡುವುದು ಇವರಿಬ್ಬರ ಕೆಲಸ.

ನಮ್ಮ ದೇಶದಲ್ಲಿ ರಾಜಕೀಯ ಪಕ್ಷಗಳು ರಾಜಕೀಯ ಲಾಭಕ್ಕಾಗಿ ಬಾಯಿಗೆ ಬಂದಂತೆ ಮಾತನಾಡುತ್ತವೆ. ರಾಜಕೀಯದಲ್ಲಿದ್ದವರು ಒಬ್ಬರಿಗೊಬ್ಬರ ವಿರುದ್ಧ ಮಾತನಾಡಿ ಕಾಲೆಳೆಯುತ್ತಾರೆ. ನಮ್ಮ ದೇಶದ ವಿಚಾರ ನಮ್ಮ ದೇಶದವರಿಗೆ ಬಿಟ್ಟದ್ದು, ವಿದೇಶಿ ಯೂಟ್ಯೂಬರ್‌ಗಳಿಗ್ಯಾಕೆ ಈ ಉಸಾಬರಿ? ಕಾಕ್ರೋಚ್ ಜನತಾ ಪಾರ್ಟಿ ಕೂಡ ಇದರ ಭಾಗ. ಜೆನ್-ಝಿಗಳಿಗೆ ಒಂದು ವಿಷಯದ ಬಗ್ಗೆ ತಿಳಿದುಕೊಂಡು ಅದರ ಬಗ್ಗೆ ಅಭಿಪ್ರಾಯ ಹುಟ್ಟಿಸಲು ಸಮಯವಿಲ್ಲ. ಒಂದು ವಿಷಯದ ಕುರಿತಂತೆ ತಿಳಿದುಕೊಳ್ಳಬೇಕೆಂಬ ಕುತೂಹಲ ಮೂಡಿದರೆ, ಅವರು ನೇರವಾಗಿ ಧ್ರುವ್ ರಾಥಿ ಅಂಥವರ ವಿಡಿಯೋ ಮೊರೆ ಹೋಗುತ್ತಾರೆ. ಜೆನ್-ಝಿಗಳಿಗೆ ರಾಜಕೀಯದಲ್ಲಿ ಆಸಕ್ತಿಯೂ ಕಡಿಮೆ. ನೇರವಾಗಿ ಮಾಧ್ಯಮೇತರ ವರದಿ ನೋಡುವದಕ್ಕಿಂತಲೂ ಅವರು, ಇಂಥಾ ಯೂಟ್ಯೂಬರ್‌ಗಳ ಮೊರೆ ಹೋಗುತ್ತಾರೆ. ಅದಕ್ಕೆ ಧ್ರುವ್ ರಾಥಿ, ಅಭಿಷೇಕ್ ಬ್ಯಾನರ್ಜಿ ಅಂಥವರಿಗೊಂದು ಕಾಲವಿತ್ತು.

ಈಗ ಜಿರಳೆ ಕಾಲ. ಈ ಹಿಂದೆ ನ್ಯಾಯಾಧೀಶರು ನುಡಿದ ಜಿರಳೆ ಎಂಬ ಹೇಳಿಕೆಯ ಲಾಭ ಪಡೆದ ಅಭಿಜಿತ್ ದಿಪ್ಕೆ ಎಂಬ ವ್ಯಕ್ತಿ ಕೂಡ ಅದನ್ನೇ ಮಾಡಿದ್ದು. ಮೊದಲಿಗೆ ಖಾತೆಯೊಂದನ್ನು ತೆರೆದ ಅಭಿಜಿತ್ ಕೇಂದ್ರ ಸರ್ಕಾರದ ವಿರುದ್ಧ ಮಾತನಾಡತೊಡಗಿದ. ಇಪ್ಪತ್ತೆಂಟು ಆಶ್ವಾಸನೆ ಕೊಟ್ಟ. ನಂತರ ಇತ್ತೀಚಿನ ವಿಡಿಯೋ ಒಂದರಲ್ಲಿ ಬಿಜೆಪಿಯನ್ನು ಅನ್‌ಫಾಲೋ ಮಾಡಲು ಹೇಳಿದ್ದಾನೆ. ದೇಶದಲ್ಲಿ ಯುವಕರ ನೌಕರಿಗಾಗಿ ಹೋರಾಟಗಳು ಆಗಬೇಕಿದೆ. ಆದರೆ ಅದು ಯಾರಿಂದ ಮತ್ತು ಹೇಗೆ ಆಗಬೇಕೆಂಬ ವಿಚಾರ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಯುವಕರ ನೌಕರಿ ಬಗ್ಗೆ ಮಾತುಗಳು ನಡೆದಿದ್ದವು. ದೇಶದಲ್ಲಿ ನಿರುದ್ಯೋಗ ಹೆಚ್ಚಾಗುತ್ತಿದೆ, ಯುವಕರಿಗೆ ನೌಕರಿಯೇ ಇಲ್ಲ ಎಂಬ ಮಾತು ವಿರೋಧ ಪಕ್ಷಗಳು ಹೇಳುತ್ತಾ ಬಂದವು. ಆದರೆ, ಈ ವಿಚಾರದ ಪಕ್ಕಾ ಲಾಭ ಪಡೆದವರೆ ಅಭಿಜಿತ್. ಆದರೆ ಇದು ಸಾಮಾಜಿಕ ಹೋರಾಟವೇ ಅಥವಾ ಸಾಮಾಜಿಕ ಜಾಲತಾಣ ಹೋರಾಟವೇ?

ವಾಸ್ತವವಾಗಿ ಜೆನ್-ಝಿಗಳು ಯಾವುದನ್ನೂ ಗಂಭೀರವಾಗಿ ಪರಿಗಣಿಸುವುದಿಲ್ಲ. ಎಲ್ಲದರಲ್ಲೂ ಹಾಸ್ಯ ಹುಡುಕಲು ಯತ್ನಿಸುತ್ತಾರೆ. ಪ್ರಧಾನಿ ಮೋದಿ ಯಾವ ದೇಶಕ್ಕೆ ಹೋದರು, ಯಾವ ಒಪ್ಪಂದ ಮಾಡಿಕೊಂಡರು ಎಂಬ ವಿಚಾರ ಜಾಲತಾಣ ಪ್ರಿಯರಿಗೆ ಗೊತ್ತಿರುವುದೇ ಇಲ್ಲ. ಅವರಿಗೆ ಗೊತ್ತಿರುವುದು ಕೇವಲ ಮೆಲೋನಿ ಅವರೊಂದಿಗೆ ಮಾತನಾಡುವುದು, ಮೆಲೋಡಿ ಚಾಕಲೇಟ್ ಕೊಟ್ಟಿದ್ದು. ಇವೆಲ್ಲಾ ವಿಚಾರಗಳನ್ನು ಮೀಮ್, ಕಂಟೆಂಟ್ ಮತ್ತು ರೀಲ್ಸ್ ಮಾಡಲು ಬಳಸುತ್ತಾರೆ ಹೊರತು, ಈ ವಿಚಾರವನ್ನೂ ಜೆನ್-ಝಿಗಳು ಅಕ್ಷರಶಃ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ. ಕಾಕ್ರೋಚ್ ಜನತಾ ಪಾರ್ಟಿ ವಿಚಾರದಲ್ಲೂ ಅದೇ ಆಗಿರಬಹುದು. ಕಂಟೆಂಟ್ ಹುಡುಕಾಟದಲ್ಲಿದ್ದವರೇ ಇದರ ಪ್ರಚಾರ ಮಾಡಿದ್ದು. ಮೀಮ್ ಪೇಜ್‌ಗಳೇ ಇದರ ಹವಾ ಮಾಡಿದ್ದು. ಕಾಕ್ರೋಚ್ ಎಂಬ ಹೆಸರು ವಿಭಿನ್ನವಾಗಿದ್ದು ಹಾಸ್ಯದ ಭಾಗವಾಗಿ ತೆಗೆದುಕೊಂಡಿರಬಹುದು. ಈ ನಡುವೆ ಇನ್ನೊಂದು ದೊಡ್ಡ ಕಾಕತಾಳಿಯೆಂದರೆ ಪಾಕಿಸ್ತಾನಿ ಹಿಂಬಾಲಕರು ಇರುವುದು. ಯೂಟ್ಯೂಬರ್ ಧ್ರುವ್ ರಾಥಿಗೂ ಅಲ್ಲಿಯವರೇ ಹಿಂಬಾಲಕರಿದ್ದಾರೆಂಬ ಆರೋಪಗಳಿದ್ದವು. ಆಪರೇಷನ್ ಸಿಂದೂರ ಸಮಯದಲ್ಲಿ ಭಾರತೀಯ ಯೂಟ್ಯೂಬರ್‌ಗಳನ್ನು ಬ್ಯಾನ್ ಮಾಡಿದ್ದ ಪಾಕ್, ರಾಥಿ ಚಾನಲ್ ಮಾತ್ರ ಹಾಗೇ ಬಿಟ್ಟಿತ್ತು. ಈಗಲೂ ಜಿರಳೆ ಪಕ್ಷಕ್ಕೆ ಪಾಕಿಸ್ತಾನ ಬೆಂಬಲ ಹೆಚ್ಚು ಎಂಬ ಆರೋಪವಿದೆ.

ಆಗೊಂದು ಕಾಲ, ಅದು ಧ್ರುವ್ ರಾಥಿಯದ್ದು. ಮುಂದೆ ಬಂದಂತೆ ಇಂಥಾ ಹತ್ತಾರು ಯೂಟ್ಯೂಬರ್‌ಗಳು ಬಂದರು. ಈಗ ಜಿರಳೆ ಪಕ್ಷ, ಇಂತಹ ಪಕ್ಷಗಳೂ ಬರುತ್ತವೆ. ಒಂದು ವೇಳೆ 'ಹರ್ ಕುತ್ತ ಕಾ ದಿನ್ ಆತಾ ಹೆ' ಎಂಬ ಹೇಳಿಕೆ ಬರೆದವರು ಏನಾದರೂ ಈಗ ಬರೆದಿದ್ದರೆ, 'ನಾಯಿಗೊಂದು ಕಾಲ, ಜಿರಳೆಗೊಂದು ಕಾಲ' ಎಂದು ಬರೆಯುತ್ತಿದ್ದರೇನೋ?

ರೂಬಿಯೋ ಭೇಟಿಯ ತಪ್ಪು ಸಂದೇಶಗಳು

• ಅರವಿಂದ ಶೆಣೈ

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರೂಬಿಯೋ ಭಾರತಕ್ಕೆ ಭೇಟಿ ನೀಡಿದ ಸಮಯ, ಸಂದರ್ಭ ನೋಡುವಾಗ ಅದರ ಹಿಂದಿನ ಉದ್ದೇಶ ಎಲ್ಲರಿಗೂ ಅರ್ಥವಾಗುವಂತದ್ದೆ. ಕಳೆದ ಒಂದೂವರೆ ವರ್ಷಗಳಿಂದ ಭಾರತ ಮತ್ತು ಅಮೆರಿಕಗಳ ಮಧ್ಯೆ ಹದಗೆಟ್ಟಿರುವ ಸಂಬಂಧವನ್ನು ಮತ್ತೆ ಸರಿದಾರಿಗೆ ತರಲೆತ್ನಿಸುವ ಸಲುವಾಗಿ ಬಂದಿದ್ದರೆಂಬುದು ಒಂದು ವಿಷಯವಾದರೆ, ಅದರ ಜತೆಗೇ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾಕ್ಕೆ ನೀಡಿದ ಭೇಟಿಯು ಅವರು ಅಪೇಕ್ಷಿಸಿದ ಫಲಿತಾಂಶ ನೀಡದ ಹಿನ್ನೆಲೆಯಲ್ಲಿ ಭಾರತವನ್ನು ಮತ್ತೆ ಓಲೈಸುವ ಪ್ರಯತ್ನವಾಗಿ ಬಂದಿದ್ದರೆಂಬುದು ಮತ್ತೊಂದು ವಿಷಯ. ಚೀನಾವು ಟ್ರಂಪ್ ಭೇಟಿಯ ವೇಳೆ ತಾನೇ ಬಲಿಷ್ಠ ಸ್ಥಾನದಲ್ಲಿದ್ದುಕೊಂಡು ವರ್ತಿಸಿತೇ ವಿನಹ ಅಮೆರಿಕದ ನಿಯಮಗಳಿಗೆ ಸೊಪ್ಪು ಹಾಕಲಿಲ್ಲ. ಉಳಿದೆಲ್ಲ ವಿಶ್ವ ನಾಯಕರ ಜತೆ ತಾನೇ ಮೇಲೆಂಬಂತೆ ವರ್ತಿಸುವ ಟ್ರಂಪ್ ಹಮ್ಮಿಗೆ ಕ್ಸಿ ಜಿನ್‌ಪಿಂಗ್ ಭೇಟಿಯಲ್ಲಿ ದೊಡ್ಡ ಪೆಟ್ಟು ಬಿತ್ತು ಎನ್ನುವುದೂ ಎಲ್ಲರಿಗೆ ತಿಳಿದಿದೆ. ಚೀನಾದಿಂದ ವ್ಯೂಹಾತ್ಮಕ ಹಿನ್ನಡೆ ಅನುಭವಿಸಿದಾಗಲೆಲ್ಲಾ ಅಮೆರಿಕವು ಭಾರತದತ್ತ ನೋಡುತ್ತದೆ ಎಂಬುದು ಈ ಮೊದಲೂ ಹಲವು ಬಾರಿ ಸಾಬೀತಾಗಿದೆ. ಇಂಡೋ-ಪೆಸಿಫಿಕ್ ವಲಯದ ವ್ಯೂಹಾತ್ಮಕ ರಣತಂತ್ರದಲ್ಲಿ ಸರ್ವಾಧಿಕಾರಿ ಚೀನಾದ ವಿರುದ್ಧ ಪ್ರಜಾತಾಂತ್ರಿಕ ರಾಷ್ಟ್ರವಾದ ಭಾರತವನ್ನು ಬಳಸಿಕೊಳ್ಳಬಹುದು ಎಂಬುದು ಅಮೆರಿಕ ಲಾಗಾಯ್ತಿನಿಂದ ಪಾಲಿಸಿಕೊಂಡು ಬಂದ ಧೋರಣೆ.

ಅಮೆರಿಕದ ಆಡಳಿತದ ಪಡಸಾಲೆಯಲ್ಲಿ ಕೂಡಾ ಭಾರತದೊಂದಿಗಿನ ಸಂಬಂಧ ಹದಗೆಡುತ್ತಿರುವ ಬಗ್ಗೆ ಆತಂಕವಿದೆ. ಟ್ರಂಪ್‌ರ ಅವಿವೇಕದ ತೆರಿಗೆ ಸಮರ, ಪಾಕಿಸ್ತಾನದ ಜತೆಗಿನ ಗೊಂದಲದ ನೀತಿ ಭಾರತದೊಂದಿಗಿನ ಸಂಬಂಧ ಕೆಡಲು ಕಾರಣವಾಗಿದೆ ಎಂದು ಅಧಿಕಾರಿಗಳಿಗೆ ಗೊತ್ತು. ಭಾರತದ ಜತೆ ಸಂಬಂಧ ಸುಧಾರಣೆಗೆ ದಶಕಗಳಿಂದ ನಡೆಸಿದ ಪ್ರಯತ್ನಗಳು ಈಗ ಒಮ್ಮೆಗೆ ವ್ಯರ್ಥವಾಗುತ್ತಿರುವುದು ಅವರ ನಿದ್ದೆ ಕೆಡಿಸಿದೆ. ಭಾರತವು ಅಮೆರಿಕಕ್ಕೆ ಕೇವಲ ಪಾಲುದಾರ ರಾಷ್ಟ್ರವಲ್ಲ, ಅದಕ್ಕಿಂತಲೂ ಮುಖ್ಯವಾಗಿ ಚೀನಾಕ್ಕೆ ಪ್ರತಿರೋಧ ಒಡ್ಡಬಲ್ಲ ಏಷ್ಯಾದ ಪ್ರಮುಖ ಶಕ್ತಿ ಎಂಬುದಾಗಿ ಅಮೆರಿಕದ ಆಡಳಿತಗಾರರು ಭಾವಿಸಿದ್ದಾರೆ. ಹಾಗಾಗಿ ರೂಬಿಯೋ ಭಾರತಕ್ಕೆ ಭೇಟಿ ನೀಡಿದ್ದು ಕೇವಲ ರಾಜತಾಂತ್ರಿಕ ಸಂದೇಶವಾಹಕರಾಗಿ ಮಾತ್ರವಲ್ಲ, ಅವರು ಭಾರತ-ಅಮೆರಿಕ ನಡುವಿನ ಸಂಬಂಧವನ್ನು ದುರಸ್ತಿ ಮಾಡುವ ಹೊಣೆ ಹೊತ್ತೂ ಬಂದಿದ್ದರು. ಆದರೆ ರಾಜತಾಂತ್ರಿಕತೆ ಎಂಬುದು ಕೇವಲ ಅಧಿಕೃತ ಮಾತುಕತೆಗಳು ಮತ್ತು ಜಂಟಿ ಹೇಳಿಕೆಗಳಿಂದ ಮಾತ್ರವೇ ನಿರ್ಣಯಿಸಲ್ಪಡುವುದಿಲ್ಲ. ಸಂಬಂಧಿತ ವ್ಯಕ್ತಿಗಳ ವರ್ತನೆ, ಅವರು ತೋರುವ ಕೆಲವು ಸಂಕೇತಗಳು, ಅವರು ತಮ್ಮ ಚರ್ಯೆಯಿಂದ ರವಾನಿಸುವ ಸಂದೇಶಗಳೂ ಮಹತ್ವದ ಪಾತ್ರ ವಹಿಸುತ್ತವೆ.

ರೂಬಿಯೋ ಸೋತದ್ದು ಇಲ್ಲಿಯೆ. ಅವರು ಭಾರತ ಪ್ರವಾಸವನ್ನು ಆರಂಭಿಸಲು ಕೊಲ್ಕತ್ತಾದ ಮದರ್ ಥೆರೆಸಾ ಅವರ 'ಮಿಷನರೀಸ್ ಆಫ್ ಚಾರಿಟಿ'ಯನ್ನು ಆಯ್ದುಕೊಂಡುದೇ ವ್ಯತಿರಿಕ್ತ ಸಂದೇಶ ರವಾನಿಸಿತು. ಕ್ರೈಸ್ತ ಮತಾವಲಂಬಿಯಾದ ರೂಬಿಯೋ ಮೊತ್ತಮೊದಲಾಗಿ ಕ್ರೈಸ್ತ ಧಾರ್ಮಿಕ ಕೇಂದ್ರಕ್ಕೆ ಭೇಟಿ ನೀಡುವುದು ತಪ್ಪಲ್ಲವಾದರೂ ಅವರು ಮಿಷನರಿಸ್ ಆಫ್ ಚಾರೀಟಿಸ್ ಅನ್ನು ಆಯ್ದುಕೊಂಡುದು ಭಾರತದಲ್ಲಿ ತಪ್ಪು ಸಂದೇಶ ನೀಡುವ ಸಾಧ್ಯತೆ ಇದೆ. ಮಿಷನರಿಸ್ ಆಫ್ ಚಾರೀಟಿಸ್ ವಿವಾದಾಸ್ಪದ ಸಂಸ್ಥೆ. ಮತಾಂತರ ಪ್ರಕ್ರಿಯೆಯಲ್ಲಿ ತೊಡಗಿರುವ ಕುರಿತು ರಾದ್ಧಾಂತವೆದ್ದಿದೆ. ಮತಾಂತರಕ್ಕಾಗಿ ವಿದೇಶಿ ನೆರವು ಪಡೆಯುತ್ತಿರುವ ಕುರಿತಂತೆ ಈ ಸಂಸ್ಥೆಯ ವಿರುದ್ಧ ವಿದೇಶೀ ಕೊಡುಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ಕ್ರಮ ತೆಗೆದುಕೊಳ್ಳಲಾಗಿದೆ ಹಾಗೂ ಅದರ ಪರವಾನಿಗೆಯನ್ನು 2021ರಲ್ಲಿ ರದ್ದುಪಡಿಸಲಾಗಿದೆ.

ಭಾರತವೀಗ ಬದಲಾಗಿದೆ ಎಂಬ ಸತ್ಯವನ್ನು ಅರಿತುಕೊಳ್ಳಲು ಅಮೆರಿಕವು ವಿಫಲವಾಗಿದೆಯೆನಿಸುತ್ತದೆ. 1980-90ರ ದಶಕದಲ್ಲಿ ಮದರ್ ಥೆರೆಸಾ ಅವರನ್ನು ವಿಸ್ಮಯದಿಂದ ಆರಾಧಿಸುತ್ತಿದ್ದುದು ನಿಜವಾದರೂ ಈಗ ಅಂತಹ ಭಾವ ಉಳಿದಿಲ್ಲ. ಸಾಮಾಜಿಕ ಜಾಲತಾಣದ ಈ ಕಾಲದಲ್ಲಿ ಮತ್ತು ಮಾಹಿತಿಯುಗದಲ್ಲಿ ಥೆರೆಸಾ ಅವರ ಕಾರ್ಯಗಳೂ ಪರಾಮರ್ಶೆಗೆ ಒಡ್ಡಲ್ಪಟ್ಟಿವೆ. ತಮ್ಮ ಕಾಲದ ಕೆಲವು ಕುಖ್ಯಾತ ಸರ್ವಾಧಿಕಾರಿಗಳೊಡನೆ ಆಕೆ ಹೊಂದಿದ್ದ ನಿಕಟ ಸಂಪರ್ಕ, ಮರಣೋನ್ಮುಖರಾದವರನ್ನು ಕೂಡಾ ಮತಾಂತರಗೊಳಿಸಲು ತೋರುತ್ತಿದ್ದ ಉತ್ಸುಕತೆ ಈಗ ಟೀಕೆಗೆ ಗುರಿಯಾಗುತ್ತಿವೆ. ಕ್ಯಾಥೊಲಿಕ್ ಆಗಿದ್ದ ಆಸ್ಟ್ರೇಲಿಯಾದ ಖ್ಯಾತ ಲೇಖಕಿ ಜರ್ಮೈನ್ ಗ್ರೀರ್ ಕೂಡಾ ಥೆರೆಸಾ ಅವರ ಕೆಲವು ನಿಲುವುಗಳನ್ನು ಟೀಕಿಸಿ ಬರೆದಿದ್ದಾರೆ. ಇಂತಿರುವಾಗ ರೂಬಿಯೋ ಅವರು ತಮ್ಮ ಭಾರತ ಭೇಟಿಯನ್ನು ಮಿಷನರೀಸ್ ಆಫ್ ಚಾರಿಟಿ ಮೂಲಕ ಆರಂಭಿಸಿ ತಪ್ಪು ನಡೆ ಪ್ರದರ್ಶಿಸಿದ್ದಾರೆ. ಭಾರತಕ್ಕೀಗ ಮಿಷನರಿಗಳ, ಅವರ ಮತಾಂತರದ ಅಗತ್ಯವಿಲ್ಲ. ಕೊಲ್ಕತಾ ಕೂಡಾ ಈಗ ಮಿಷನರಿಗಳನ್ನು ಆದರದ ಭಾವದಿಂದ ನೋಡುವುದಿಲ್ಲ. ಪಶ್ಚಿಮ ಬಂಗಾಳ ಕೂಡ ಈಗ ಬದಲಾಗಿದೆ.

ಅಮೆರಿಕದ ಸಮಸ್ಯೆಯೆಂದರೆ ಅದು ಈಗಲೂ ಭಾರತವನ್ನು ತನ್ನ ದಶಕಗಳ ಹಿಂದಿನ ಕನ್ನಡಕದ ಮೂಲಕವೇ ನೋಡುತ್ತಿದೆ. ಅಮೆರಿಕದ ಆಡಳಿತದ ಒಂದು ವರ್ಗವು ಈಗಲೂ ಭಾರತ ವಿರೋಧಿ ಮಾನಸಿಕತೆಯನ್ನೆ ಹೊಂದಿದೆ. ಹಾಗಾಗಿಯೇ ಆಗಾಗ ಅಲ್ಲಿಂದ ಭಾರತ ವಿರೋಧಿ ಹೇಳಿಕೆಗಳು, ಭಾರತವನ್ನು ಅವಹೇಳನ ಮಾಡುವ ಮಾತುಗಳು ಹೊರಬೀಳುತ್ತಿರುತ್ತದೆ.

ಭಾರತದೊಡನೆ ಅಮೆರಿಕವು ಉತ್ತಮ ಸಂಬಂಧ ಬೆಳೆಸಲು ಬಯಸುವುದಾದರೆ, ತನ್ನ ಮುಖಂಡರು ಭಾರತಕ್ಕೆ ಭೇಟಿ ನೀಡುವಾಗ ಇಲ್ಲಿನ ಜನರ ಭಾವನೆಗೆ ಘಾಸಿಯಾಗದಂತೆ ವರ್ತಿಸುವಂತೆ ಸಲಹೆ ಸೂಚನೆಗಳನ್ನು ನೀಡುವುದೂ ಅಗತ್ಯವಾಗಿದೆ. ಅಮೆರಿಕನ್ ಮುಖಂಡರ ಭೇಟಿಯೇ ಪರಮ ಪಾವನ ಎಂದು ಭಾರತೀಯರು ಭಾವಿಸುವ ಕಾಲ ಸರಿದುಹೋಗಿದೆ. ಅಮೆರಿಕನ್ನರೂ ಈಗ ಭಾರತೀಯರ ಪರಾಮರ್ಶೆಗೆ ಒಳಪಡುತ್ತಿದ್ದಾರೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನ ಪಾಠ ಉಲ್ಲೇಖಿಸಿದ ತ್ರಿಪಾಠಿ

ಸಾಗರ ಭದ್ರತೆಗೆ ನೌಕಾ ಥಿಯೇಟರ್ ಕಮಾಂಡ್

ಹೊಸದಿಲ್ಲಿ: ದೇಶದ ಸಾಗರ ಭದ್ರತೆ, ಆರ್ಥಿಕ ಸ್ಥಿರತೆ ಹಾಗೂ ಇಂಧನ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸಲು ಸೇನೆಯ ಮೂರು ಅಂಗಗಳನ್ನು ಹಾಗೂ ಕರಾವಳಿ ಭದ್ರತಾ ಪಡೆಯ ಸಾಮರ್ಥ್ಯಗಳನ್ನು ಒಗ್ಗೂಡಿಸುವ ಪ್ರತ್ಯೇಕ ನೌಕಾ ಥಿಯೇಟರ್ ಕಮಾಂಡ್ ರಚನೆ ಅಗತ್ಯ ಎಂದು ಭಾರತೀಯ ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಪ್ರತಿಪಾದಿಸಿದ್ದಾರೆ.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಮಾತನಾಡಿದ ಅವರು, ಥಿಯೇಟರೈಸೇಶನ್ ಕೇವಲ ಆಡಳಿತಾತ್ಮಕ ಪುನರ್‌ರಚನೆಯಾಗಿರದೆ, ರಾಷ್ಟ್ರೀಯ ಸೇನಾ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ವೃದ್ಧಿಸುವ ಉದ್ದೇಶದಿಂದ ರೂಪುಗೊಳ್ಳಬೇಕು ಎಂದು ಹೇಳಿದ್ದಾರೆ.



ಪಶ್ಚಿಮ ಏಷ್ಯಾದಲ್ಲಿ ಉಲ್ಬಣಗೊಂಡಿರುವ ಸಂಘರ್ಷದ ಹಿನ್ನೆಲೆಯಲ್ಲಿ ಸಾಗರ ಭದ್ರತೆ, ಇಂಧನ ಪೂರೈಕೆ ಮತ್ತು ಆರ್ಥಿಕ ಸ್ಥಿರತೆ ಪರಸ್ಪರ ನೇರವಾಗಿ ಸಂಬಂಧ ಹೊಂದಿವೆ ಎಂಬುದು ಮತ್ತೊಮ್ಮೆ ಸ್ಪಷ್ಟವಾಗಿದೆ ಎಂದು ಅವರು ಹೇಳಿದರು. ಸಾಗರ ಮಾರ್ಗಗಳಲ್ಲಿ, ಇಂಧನ ಸಾಗಣೆ ಹಾಗೂ ಲಾಜಿಸ್ಟಿಕ್ಸ್ ವ್ಯವಸ್ಥೆಯಲ್ಲಿ ಉಂಟಾಗುವ ಅಡಚಣೆಗಳು ವಿಮಾ ವೆಚ್ಚ, ಸಾಗಣೆ ದುಬಾರಿ ಹಾಗೂ ಪ್ರಾದೇಶಿಕ ಕಾರ್ಯತಂತ್ರದ ಸಮತೋಲನದ ಮೇಲೆ ತಕ್ಷಣದ ಪರಿಣಾಮ ಬೀರುತ್ತವೆ ಎಂದು ವಿವರಿಸಿದರು.

ಇದೇ ವೇಳೆ, ರಷ್ಯಾ–ಉಕ್ರೇನ್ ಯುದ್ಧ ಹಾಗೂ ಪಶ್ಚಿಮ ಏಷ್ಯಾ ಬಿಕ್ಕಟ್ಟುಗಳು ಜಾಗತಿಕ ಭದ್ರತೆಯ ಪರಸ್ಪರ ಅವಲಂಬನೆಯನ್ನು ನೆನಪಿಸುತ್ತಿವೆ. ಸಂಘರ್ಷದಿಂದ ಭೌಗೋಳಿಕವಾಗಿ ದೂರದಲ್ಲಿರುವುದು ಅದರ ಪರಿಣಾಮಗಳಿಂದ ದೂರವಿರುವುದಲ್ಲ ಎಂಬುದನ್ನು ಈ ಬೆಳವಣಿಗೆಗಳು ತೋರಿಸಿವೆ ಎಂದು ಅವರು ಅಭಿಪ್ರಾಯಪಟ್ಟರು.

ಯುದ್ಧದ ಸ್ವರೂಪದಲ್ಲಿ ಮಹತ್ತರ ಬದಲಾವಣೆಗಳಾಗುತ್ತಿದ್ದು, ಸಮುದ್ರದ ತಳದಿಂದ ಬಾಹ್ಯಾಕಾಶದವರೆಗೆ ಯುದ್ಧರಂಗ ವಿಸ್ತರಿಸಿದೆ.

> ಆರ್ಥಿಕತೆ, ಇಂಧನ ಸುರಕ್ಷತೆಗೆ ಸಮುದ್ರ ಮಾರ್ಗಗಳ ರಕ್ಷಣೆ ಅನಿವಾರ್ಯ: ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ

ಸೈಬರ್, ಮಾಹಿತಿ, ವಿದ್ಯುತ್ಕಾಂತೀಯ ಹಾಗೂ ಜ್ಞಾನಾತ್ಮಕ ಕ್ಷೇತ್ರಗಳೂ ಸಮಾನವಾಗಿ ಮಹತ್ವ ಪಡೆದಿವೆ. ವೇಗ, ವ್ಯಾಪ್ತಿ ಮತ್ತು ಏಕಕಾಲಿಕ ಕಾರ್ಯಾಚರಣೆಗಳು ಆಧುನಿಕ ಯುದ್ಧಗಳ ಪ್ರಮುಖ ಲಕ್ಷಣಗಳಾಗಿವೆ ಎಂದು ತ್ರಿಪಾಠಿ ಹೇಳಿದರು.

ಕೃತಕ ಬುದ್ಧಿಮತ್ತೆ(ಎಐ), ಕ್ವಾಂಟಮ್ ತಂತ್ರಜ್ಞಾನ ಹಾಗೂ ಸ್ವಾಯತ್ತ ವ್ಯವಸ್ಥೆಗಳನ್ನು ಭಾರತೀಯ ನೌಕಾಪಡೆ ವೇಗವಾಗಿ ಅಳವಡಿಸಿಕೊಳ್ಳುತ್ತಿದೆ. ಭವಿಷ್ಯದ ನೌಕಾಪಡೆ ಕೇವಲ ಯುದ್ಧನೌಕೆಗಳ ಮೇಲೆ ಅವಲಂಬಿತವಾಗಿರದೆ, ಮಾನವರಹಿತ ಹಾಗೂ ಉನ್ನತ ಸಾಮರ್ಥ್ಯದ ವೇದಿಕೆಗಳ ಸಮನ್ವಯದ ಮೂಲಕ ಪರಿಣಾಮಕಾರಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿರಲಿದೆ ಎಂದು ಅವರು ತಿಳಿಸಿದರು.

ಆಪರೇಷನ್ ಸಿಂದೂರ್ ವೇಳೆ ಭಾರತೀಯ ನೌಕಾಪಡೆಯು ತೋರಿದ ಸಿದ್ಧತೆ ಮತ್ತು ಕಾರ್ಯತಂತ್ರದ ಸಾಮರ್ಥ್ಯವನ್ನು ಉಲ್ಲೇಖಿಸಿದ ಅವರು, ವಾಹಕ ಯುದ್ಧ ಸಮೂಹ ಹಾಗೂ ಉತ್ತರ ಅರಬ್ಬೀ ಸಮುದ್ರದಲ್ಲಿನ ಮುಂಚೂಣಿ ನಿಯೋಜನೆಯು ಪಾಕಿಸ್ತಾನ ನೌಕಾಪಡೆಯನ್ನು ಬಂದರುಗಳ ಸುತ್ತಮುತ್ತಲೇ ಸೀಮಿತಗೊಳಿಸಿತು ಎಂದು ಹೇಳಿದರು. ಈ ಕಾರ್ಯಾಚರಣೆಯಲ್ಲಿ ಮೂರು ಸೇನಾ ಪಡೆಗಳ ನಡುವಿನ ಸಮನ್ವಯವು ಜಂಟಿ ಕಾರ್ಯಾಚರಣೆಯ ಮಹತ್ವವನ್ನು ಮತ್ತಷ್ಟು ಸಾಬೀತುಪಡಿಸಿದೆ ಎಂದರು.

ಭಾರತದ ಸಾಗರ ಹಿತಾಸಕ್ತಿಗಳ ರಕ್ಷಣೆ ಹಾಗೂ ಮುಕ್ತ, ಸುರಕ್ಷಿತ ಮತ್ತು ಸಮಗ್ರ ಇಂಡೋ–ಪೆಸಿಫಿಕ್ ಪ್ರದೇಶದ ನಿರ್ಮಾಣವೇ ಭಾರತದ ಗುರಿಯಾಗಿದೆ ಎಂದು ಸ್ಪಷ್ಟಪಡಿಸಿದರು.

ತಿರುವಾಂಕೂರು ರಾಜಮನೆತನದಿಂದ ಸ್ಪಷ್ಟನೆ

ದೇಗುಲದ ಚಿನ್ನ ನಾಪತ್ತೆಯಾಗಿಲ್ಲ

ತಿರುವನಂತಪುರಂ: ಕೇರಳದ ಪ್ರಸಿದ್ಧ ಶ್ರೀ ಪದ್ಮನಾಭಸ್ವಾಮಿ ದೇವಾಲಯದಿಂದ ಅಮೂಲ್ಯ ವಸ್ತುಗಳು ನಾಪತ್ತೆಯಾಗಿವೆ ಎಂಬ ಆರೋಪಗಳನ್ನು ತಿರುವಾಂಕೂರು ರಾಜಮನೆತನ ತಳ್ಳಿಹಾಕಿದೆ.

ತಿರುವಾಂಕೂರು ರಾಜಮನೆತನದ ಮಾಜಿ ಸದಸ್ಯ ಆದಿತ್ಯ ವರ್ಮಾ ಅವರು, ನಾಪತ್ತೆಯಾಗಿವೆ ಎಂದು ಹೇಳಲಾಗಿರುವ ಎಲ್ಲ ಅಮೂಲ್ಯ ವಸ್ತುಗಳೂ ದೇವಾಲಯದ ಮುಖ್ಯ ದೇವರಾದ ಅನಂತ ಪದ್ಮನಾಭಸ್ವಾಮಿಯ ಸನ್ನಿಧಿಯಲ್ಲೇ ಸುರಕ್ಷಿತವಾಗಿವೆ ಎಂದು ಸ್ಪಷ್ಟಪಡಿಸಿದರು.

ದೇವಾಲಯದ ಅಮೂಲ್ಯ ವಸ್ತುಗಳು ಕಣ್ಮರೆಯಾಗಿವೆ ಎಂಬ ಪೊಲೀಸ್ ವರದಿಯ ವಿಶ್ವಾಸಾರ್ಹತೆಯನ್ನೂ ಅವರು ಪ್ರಶ್ನಿಸಿದರು. ದೇವಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸರು, ಆಡಳಿತ ಸಮಿತಿಯ ಅಧ್ಯಕ್ಷರಾಗಿರುವ ಜಿಲ್ಲಾ ನ್ಯಾಯಾಧೀಶರು ಹಾಗೂ ಇತರೆ ಸದಸ್ಯರಿಗೆ ಯಾವುದೇ ವಸ್ತು ನಾಪತ್ತೆಯಾಗಿರುವ ಮಾಹಿತಿ ಇಲ್ಲದಿರುವಾಗ ಏಕಪಕ್ಷೀಯ ಪೊಲೀಸ್ ವರದಿ ಹೇಗೆ ಸಿದ್ಧವಾಯಿತು ಎಂಬುದು ಆಶ್ಚರ್ಯಕರ ಎಂದು ಅವರು ಹೇಳಿದರು. ಈ ಕುರಿತು ವೈಯಕ್ತಿಕವಾಗಿ ಪರಿಶೀಲನೆ ನಡೆಸಲಾಗಿದ್ದು, ನಾಪತ್ತೆಯಾಗಿವೆ ಎಂದು ಹೇಳಲಾಗಿದ್ದ ವಸ್ತುಗಳು ತಮ್ಮ ಎಂದಿನ ಸ್ಥಳದಲ್ಲೇ ಇವೆ ಎಂಬುದು ದೃಢಪಟ್ಟಿದೆ ಎಂದು ಆದಿತ್ಯ ವರ್ಮಾ ತಿಳಿಸಿದರು. ಈ ಪ್ರಕರಣದ ಸತ್ಯಾಸತ್ಯತೆ ತಿಳಿದುಕೊಳ್ಳಲು ರಾಜ್ಯ ಪೊಲೀಸ್ ಮಹಾನಿರ್ದೇಶಕ, ಮುಖ್ಯಮಂತ್ರಿ, ಗೃಹ ಸಚಿವ ಹಾಗೂ ದೇವಸ್ವಂ ಸಚಿವರಿಗೆ ಪತ್ರ ಬರೆಯಲಾಗುವುದು ಎಂದರು.



ರಕ್ಷಣಾ ಸ್ವಾವಲಂಬನೆ

ಭಾರತದ ದೇಶೀಯ ರಕ್ಷಣಾ ಉತ್ಪಾದನಾ ವಲಯದಲ್ಲಿ ಮತ್ತೊಂದು ಐತಿಹಾಸಿಕ ಮೈಲಿಗಲ್ಲು ಸ್ಥಾಪನೆಯಾಗಿದೆ. ಪುಣೆ ಮೂಲದ ಖಾಸಗಿ ರಕ್ಷಣಾ ಸಂಸ್ಥೆ ನಿಬೆ ಲಿಮಿಟೆಡ್ ಅಭಿವೃದ್ಧಿಪಡಿಸಿರುವ 'ಸೂರ್ಯಾಸ್ತ್ರ ಯೂನಿವರ್ಸಲ್ ರಾಕೆಟ್ ಲಾಂಚರ್' ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿವೆ. ಒಡಿಶಾದ ಚಂಡೀಪುರದಲ್ಲಿರುವ ಇಂಟರಿಮ್ ಟೆಸ್ಟ್ ರೇಂಜ್‌ನಲ್ಲಿ(ಐಟಿಆರ್) ಇತ್ತೀಚೆಗೆ ಸರಣಿ ಪ್ರಯೋಗಗಳನ್ನು ನಡೆಸಲಾಗಿದ್ದು, ಮಿಷನ್ ಉದ್ದೇಶಗಳನ್ನು ಅತ್ಯಂತ ನಿಖರವಾಗಿ ಸಾಧಿಸಲಾಗಿದೆ. ಈ ಹೊಸ ತಂತ್ರಜ್ಞಾನವು ಸಾಂಪ್ರದಾಯಿಕ ಫಿರಂಗಿ ಪಡೆ ಮತ್ತು ಬೃಹತ್ ಬ್ಯಾಲಿಸ್ಟಿಕ್ ಕ್ಷಿಪಣಿಗಳ ನಡುವಿನ ಅಂತರವನ್ನು ಕಡಿಮೆ ಮಾಡಲಿದ್ದು, ಭಾರತೀಯ ಸೇನೆಗೆ ಯುದ್ಧಭೂಮಿಯಲ್ಲಿ ಹೊಸ ಶಕ್ತಿ ನೀಡಲಿದೆ. ಆ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

ಸುದ್ದಿ ಸಮಗ್ರ

ಏನಿದು ಸೂರ್ಯಾಸ್ತ್ರ ರಾಕೆಟ್ ವ್ಯವಸ್ಥೆ

ಸೂರ್ಯಾಸ್ತ್ರ ಎಂಬುದು ಭಾರತದ ಮೊದಲ ದೇಶೀಯ ಯೂನಿವರ್ಸಲ್ ಮಲ್ಟಿ–ಕ್ಯಾಲಿಬರ್ ರಾಕೆಟ್ ಲಾಂಚರ್ ವ್ಯವಸ್ಥೆಯಾಗಿದೆ.

ಅಭಿವೃದ್ಧಿ: ಇದನ್ನು ಪುಣೆಯ ನಿಬೆ ಲಿಮಿಟೆಡ್ ಸಂಸ್ಥೆಯು ಇಸ್ರೇಲ್‌ನ ಎಲ್ಬಿಟ್ ಸಿಸ್ಟಮ್ಸ್ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ.


ಉದ್ದೇಶ: ಶತ್ರು ಪ್ರದೇಶದ ಆಳದಲ್ಲಿರುವ ಕಮಾಂಡ್ ಸೆಂಟರ್‌ಗಳು, ರಡಾರ್ ಕೇಂದ್ರಗಳು ಮತ್ತು ಶಸ್ತ್ರಾಸ್ತ್ರ ಸರಬರಾಜು ಮಾರ್ಗಗಳನ್ನು ನಿಖರವಾಗಿ ಧ್ವಂಸಗೊಳಿಸಲು ಇದನ್ನು ವಿನ್ಯಾಸಗೊಳಿಸಲಾಗಿದೆ.

ತಂತ್ರಜ್ಞಾನ: ಇಸ್ರೇಲ್‌ನ ನಿಖರ ಮತ್ತು ಸಾರ್ವತ್ರಿಕ ಉಡಾವಣಾ ವ್ಯವಸ್ಥೆ ತಂತ್ರಜ್ಞಾನವನ್ನು ಆಧರಿಸಿ ಇದನ್ನು ಸಿದ್ಧಪಡಿಸಲಾಗಿದ್ದು, ಇನ್ಮುಂದೆ ಸಂಪೂರ್ಣವಾಗಿ ಭಾರತದಲ್ಲೇ ಉತ್ಪಾದನೆಯಾಗಲಿದೆ.

ರಕ್ಷಣಾ ವಲಯದಲ್ಲಿ ಖಾಸಗಿ ರಂಗದ ಕ್ರಾಂತಿ

ಕಳೆದ ಒಂದು ದಶಕದಲ್ಲಿ ಭಾರತದ ರಕ್ಷಣಾ ವಲಯದಲ್ಲಿ ಖಾಸಗಿ ರಂಗದ ಪಾತ್ರ ಶೇ.25 ರಿಂದ 30ರಷ್ಟಕ್ಕೆ ಏರಿಕೆಯಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಶೇ.50ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ರಾಜನಾಥ್ ಸಿಂಗ್ ತಿಳಿಸಿದರು.

300
ಕಿಮೀ ಗುರಿ, ನಿಖರ ದಾಳಿ:
ಭಾರತದ ಸೇನಾ ಬಲ ಹೆಚ್ಚಿಸಿದ
ಸೂರ್ಯಾಸ್ತ್ರ



ಹೊಸ ತಂತ್ರಜ್ಞಾನಗಳ ಅನಾವರಣ

ಸೂರ್ಯಾಸ್ತ್ರ ಪರೀಕ್ಷೆಯೊಂದಿಗೆ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಟಿಎನ್‌ಟಿ ಪ್ಲಾಂಟ್ ತಂತ್ರಜ್ಞಾನ, ಆರ್‌ಡಿಎಕ್ಸ್ ಪ್ಲಾಂಟ್ ತಂತ್ರಜ್ಞಾನ ಮತ್ತು ನವೀಕರಿಸಬಹುದಾದ ಜೈವಿಕ ಇಂಧನ ಸಂಕುಚಿತ ಬಯೋಗ್ಯಾಸ್ ಪ್ಲಾಂಟ್ ಅನ್ನು ಉದ್ಘಾಟಿಸಲಾಯಿತು. ಹಾಗೆಯೇ ಉಪಗ್ರಹ ಜೋಡಣೆ ತಂತ್ರಜ್ಞಾನಕ್ಕಾಗಿ ನಿಬೆ ಗ್ರೂಪ್ ಮತ್ತು ಬ್ಲಾಕ್ ಸ್ಕೈ ಸಂಸ್ಥೆಗಳ ನಡುವೆ ಒಪ್ಪಂದ ಏರ್ಪಟ್ಟಿದೆ. ಈ ಹೊಸ ಪ್ರಯತ್ನಗಳು ಸ್ಥಳೀಯ ಸಣ್ಣ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಉದ್ಯೋಗಾವಕಾಶ ಸೃಷ್ಟಿಸಲಿದ್ದು, ಯುವಕರಿಗೆ ಅತ್ಯಾಧುನಿಕ ತಂತ್ರಜ್ಞಾನದ ಕೌಶಲಗಳನ್ನು ಒದಗಿಸಲಿವೆ.

ಪಿನಾಕಾ ಸಾಮರ್ಥ್ಯ ಮೀರಿದ ಸೂರ್ಯಾಸ್ತ್ರ

ದೀರ್ಘ ವ್ಯಾಪ್ತಿ ಅಂದರೆ 300 ಕಿಮೀ ದೂರವರೆಗೂ ಶತ್ರುಗಳ ವಿರುದ್ಧ ನಿಖರ ದಾಳಿ ನಡೆಸಲು ಸಮರ್ಥವಾಗಿ ಸೂರ್ಯಾಸ್ತ್ರ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ. ಮೊಬೈಲ್ ಉಡಾವಕಗಳು, ಬ್ಯಾಟರಿ ಕಮಾಂಡ್ ಪೋಸ್ಟ್‌ಗಳು, ಲೋಡರ್ ವಾಹನಗಳಿಂದ ಸಜ್ಜಿತ ಸೂರ್ಯಾಸ್ತ್ರವನ್ನು, ಪ್ರಸಕ್ತ ಅಸ್ತಿತ್ವದಲ್ಲಿರೋ ಪಿನಾಕಾ ಮಲ್ಟಿ ಬ್ಯಾರಲ್ ರಾಕೆಟ್ ಉಡಾವಕದ ದಾಳಿ ಸಾಮರ್ಥ್ಯವನ್ನೂ ಮೀರಿದ ಟಾರ್ಗೆಟ್‌ಗಳ ವಿರುದ್ಧವೂ ದಾಳಿ ನಡೆಸಲು ಅಭಿವೃದ್ಧಿಪಡಿಸಲಾಗಿದೆ.

ಪ್ರಮುಖ ವೈಶಿಷ್ಟ್ಯಗಳು

- ಅತ್ಯಂತ ವೇಗವಾಗಿ ಚಲಿಸುವ 6★6 ಟಾಟಾ ಟ್ರಕ್ ಮೇಲೆ ಈ ಸೂರ್ಯಾಸ್ತ್ರ ಲಾಂಚರ್ ಅನ್ನು ಅಳವಡಿಸಲಾಗಿದ್ದು, ಆಧುನಿಕ ಯುದ್ಧತಂತ್ರಗಳಿಗೆ ಪೂರಕವಾಗಿ ವಿನ್ಯಾಸಗೊಳಿಸಲಾಗಿದೆ.
- ಮಲ್ಟಿ–ಕ್ಯಾಲಿಬರ್ ಮಾಡ್ಯುಲರ್ ಪಾಡ್ಸ್: ಒಂದೇ ರೀತಿಯ ರಾಕೆಟ್ ಉಡಾವಣೆಗಷ್ಟೇ ಸೀಮಿತವಾಗದೆ, ಬೇರೆ ಬೇರೆ ಗಾತ್ರದ ರಾಕೆಟ್‌ಗಳನ್ನು ಒಂದೇ ಲಾಂಚರ್ ಬಳಸಿ ಉಡಾಯಿಸಬಹುದು.
- 122 ಎಂಎಂ ರಾಕೆಟ್: ಹತ್ತಿರದ ಗುರಿಗಳ ಮೇಲೆ ದಾಳಿ ಮಾಡಲು.
- 306 ಎಂಎಂ ಎಕ್ಸ್‌ಟ್ರಾ ಕ್ಷಿಪಣಿ: 150 ಕಿ.ಮೀ ದೂರದ ಗುರಿಗಳಿಗೆ
- 370 ಎಂಎಂ ಪ್ರಿಡೇಟರ್ ಹಾಕ್ ಕ್ಷಿಪಣಿ: 300 ಕಿ.ಮೀ ದೂರದ ಗುರಿಗಳಿಗೆ.
- ಸ್ಕೈಸ್ಟ್ರೈಕರ್ ಲೋಯಿಟರಿಂಗ್ ಮ್ಯೂನಿಷನ್: ಇದನ್ನು ಆತ್ಮಹತ್ಯಾ ಡ್ರೋನ್' (ಸುಸೈಡ್ ಡ್ರೋನ್) ಎಂದೂ ಕರೆಯಲಾಗುತ್ತಿದ್ದು, 100 ಕಿಮೀ ದೂರ ಕ್ರಮಿಸಿ ಶತ್ರುಗಳ ಮೇಲೆ ದಾಳಿ ಮಾಡಬಲ್ಲದು.
- ಶೂಟ್ ಆ್ಯಂಡ್ ಸ್ಕೂಟ್: ರಾಕೆಟ್ ಉಡಾಯಿಸಿದ ತಕ್ಷಣ ಶತ್ರುಗಳ ರಡಾರ್‌ಗಳು ನಮ್ಮನ್ನು ಪತ್ತೆ ಹಚ್ಚುವ ಮುನ್ನವೇ ಲಾಂಚರ್ ವಾಹನವು ಅಲ್ಲಿಂದ ಸುರಕ್ಷಿತವಾಗಿ ಬೇರೆಡೆಗೆ ಚಲಿಸುವ ತಂತ್ರಜ್ಞಾನ ಹೊಂದಿದೆ.
- ಸುಧಾರಿತ ನ್ಯಾವಿಗೇಷನ್: ಇದು ಜಿಪಿಎಸ್, ಇನರ್ಶಿಯಲ್ ನ್ಯಾವಿಗೇಷನ್ ಹಾಗೂ ಡಿಜಿಟಲ್ ಬ್ಯಾಲಿಸ್ಟಿಕ್ ಕಂಪ್ಯೂಟೇಶನ್ ವ್ಯವಸ್ಥೆಗಳನ್ನು ಒಳಗೊಂಡಿದೆ.

ಅತ್ಯಂತ ನಿಖರ ದಾಳಿ

ಚಂಡೀಪುರದಲ್ಲಿ ನಡೆದ ಪರೀಕ್ಷೆಗಳ ವೇಳೆ ಸೂರ್ಯಾಸ್ತ್ರ ವ್ಯವಸ್ಥೆಯ ಎರಡು ಮಾದರಿಗಳನ್ನು ಪರೀಕ್ಷಿಸಲಾಯಿತು. ಇವುಗಳ 'ಸರ್ಕ್ಯುಲರ್ ಎರರ್ ಪ್ರೋಬಬಲ್'(ಸಿಇಪಿ–ಗುರಿಯಿಂದ ತಪ್ಪಿಹೋಗುವ ಗರಿಷ್ಠ ಅಂತರ) ಜಾಗತಿಕ ಮಟ್ಟದಲ್ಲೇ ಅತ್ಯುತ್ತಮವಾಗಿದೆ:

- 150 ಕಿ.ಮೀ ದೂರದ ಮಾದರಿ: ಇದರ ಸಿಇಪಿ ಕೇವಲ 1.5 ಮೀಟರ್ ಆಗಿತ್ತು.
- 300 ಕಿ.ಮೀ ದೂರದ ಮಾದರಿ: ಇದರ ಸಿಇಪಿ ಕೇವಲ 2 ಮೀಟರ್ ಆಗಿತ್ತು.

ಆಧುನಿಕ ಯುದ್ಧ ನಿರ್ಧರಿಸುವ ತಂತ್ರಜ್ಞಾನ

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಆಧುನಿಕ ಯುದ್ಧಗಳು ಕೇವಲ ಸೈನಿಕರ ಸಂಖ್ಯೆಯ ಮೇಲೆ ನಿರ್ಧಾರವಾಗುವುದಿಲ್ಲ, ಬದಲಿಗೆ ಆಟೊಮೇಷನ್ ಮತ್ತು ನಿಖರ ಆಯುಧಗಳ ತಂತ್ರಜ್ಞಾನದ ಮೇಲೆ ನಿರ್ಧಾರವಾಗುತ್ತವೆ ಎಂದಿದ್ದಾರೆ. ರಷ್ಯಾ–ಉಕ್ರೇನ್ ಸಂಘರ್ಷ ಹಾಗೂ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿಗಳೇ ಇದಕ್ಕೆ ಸಾಕ್ಷಿ ಎಂದಿರುವ ಅವರು, ಭಾರತವು ಈ ಹಿಂದೆಯೇ ಆಪರೇಷನ್ ಸಿಂದೂರ್ ಮೂಲಕ ಇಂತಹ ತಂತ್ರಜ್ಞಾನ ಆಧಾರಿತ ಯುದ್ಧ ಸಾಮರ್ಥ್ಯವನ್ನು ಪ್ರದರ್ಶಿಸಿದೆ ಎಂದು ನೆನಪಿಸಿಕೊಂಡರು.

ಕಿರು ಸುದ್ದಿ

ಉ.ಪ್ರದೇಶದಲ್ಲಿ ಭಾರೀ ಮಳೆಗೆ 28 ಜನ ಸಾವು

ಲಖನೌ: ಕಳೆದೆರಡು ದಿನಗಳಿಂದ ಉತ್ತರ ಪ್ರದೇಶದ ಕೆಲ ಭಾಗಗಳಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ ಸುರಿದಿದ್ದು, 28 ಮಂದಿ ಮೃತಪಟ್ಟಿದ್ದಾರೆ. ಜನಜೀವನ ಅಸ್ತವ್ಯಸ್ತಗೊಂಡಿದ್ದು, ನೂರಾರು ಮರಗಳು ನೆಲಕ್ಕುರುಳಿದೆ. 12ಕ್ಕೂ ಹೆಚ್ಚು ಮನೆಗಳು ಕುಸಿದಿದೆ. ಇದರಿಂದಾಗಿ ಮನೆಯೊಳಗಿದ್ದ ಹಲವರು ಜೀವ ಕಳೆದುಕೊಂಡಿದ್ದಾರೆ. ಬೆಳೆ ಹಾನಿ ಅಂದಾಜು ಮಾಡಲು ಮತ್ತು ರೈತರು, ಸಂತ್ರಸ್ತರ ಕುಟುಂಬಗಳಿಗೆ ಪರಿಹಾರ ನೀಡುವಂತೆ ಡಿಸಿಎಗಳಿಗೆ ಸಿಎಂ ಯೋಗಿ ಆದಿತ್ಯನಾಥ್ ನಿರ್ದೇಶಿಸಿದ್ದಾರೆ.

ಅಭಿಷೇಕ್ ಮೇಲೆ ಚಪ್ಪಲಿ, ಕಲ್ಲು ತೂರಿ ಪ್ರತಿಭಟನೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಸೋನಾಪುರದಲ್ಲಿ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಮೇಲೆ ಸ್ಥಳೀಯರು ಕಲ್ಲು, ಮೊಟ್ಟೆ ಮತ್ತು ಚಪ್ಪಲಿಗಳನ್ನು ಎಸೆದು ಪ್ರತಿಭಟನೆ ನಡೆಸಿದ್ದಾರೆ. ಚುನಾವಣೋತ್ತರ ಹಿಂಸಾಚಾರ ಪೀಡಿತರ ಕುಟುಂಬಗಳನ್ನು ಭೇಟಿ ಮಾಡಲು ತೆರಳಿದ್ದ ವೇಳೆ ಈ ಘಟನೆ ನಡೆದಿದೆ. ಬಿಜೆಪಿ ಕಾರ್ಯಕರ್ತರು ತನ್ನನ್ನು ಕೊಲ್ಲಲು ಯತ್ನಿಸಿದ್ದಾರೆ ಎಂದು ಅಭಿಷೇಕ್ ಆರೋಪಿಸಿದರೆ, ಸ್ಥಳೀಯರ ಆಕ್ರೋಶದ ಪರಿಣಾಮ ಇದಾಗಿದೆ ಎಂದು ಬಿಜೆಪಿ ಹೇಳಿದೆ.

ಪಂಜಾಬ್ ಸ್ಥಳೀಯ ಕದನ; ಬಲ ವೃದ್ಧಿಸಿಕೊಂಡ ಬಿಜೆಪಿ


ಚಂಡೀಗಢ: ಪಂಜಾಬ್‌ನಲ್ಲಿ ನಡೆದ ಸ್ಥಳೀಯ ನಗರಾಡಳಿತ ಚುನಾವಣೆಗಳಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಸ್ವಂತ ನೆಲೆಯಲ್ಲಿ ಪ್ರಬಲ ಪಕ್ಷವಾಗಿ ಗುರುತಿಸಿಕೊಂಡಿದೆ. 2021ರ ಚುನಾವಣೆಯಲ್ಲಿ ಕೇವಲ 20 ವಾರ್ಡ್‌ಗಳನ್ನು ಗೆದ್ದಿದ್ದ ಬಿಜೆಪಿ ಈ ಬಾರಿ ಯಾವುದೇ ಪಕ್ಷದ ಮೈತ್ರಿಯಿಲ್ಲದೆಯೇ 170 ಸ್ಥಾನಗಳನ್ನು ಗೆದ್ದು, ಪಂಜಾಬ್‌ನಲ್ಲೂ ದೃಢವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದೆ.

''ಪಂಜಾಬ್‌ನ ಕ್ಯಾಲಿಫೋರ್ನಿಯಾ'' ಎಂದೇ ಖ್ಯಾತಿ ಪಡೆದ ಅಬೋಹಾರ್ ನಗರಪಾಲಿಕೆ ಚುನಾವಣೆಯಲ್ಲಿ ಬಿಜೆಪಿ 50 ಸ್ಥಾನಗಳ ಪೈಕಿ 28 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂದಿದೆ. ಈ ಮೂಲಕ ಅಬೋಹಾರ್‌ನಲ್ಲಿ ಮೊದಲ ಬಿಜೆಪಿ ಮೇಯರ್ ಅಧಿಕಾರದ ಚುಕ್ಕಾಣಿ ಹಿಡಿಯಲಿದ್ದಾರೆ. 2027ರ ಪಂಚಾಬ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಬಲವನ್ನು ದೃಢವಾಗಿ ಹೆಚ್ಚಿಸಿಕೊಳ್ಳುತ್ತಿರುವುದನ್ನು ಇದು ತೋರಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ. ಇಲ್ಲಿ ಆಳುವ ಆಪ್ 20 ಸ್ಥಾನಗಳನ್ನು ಪಡೆದರೆ, ಕಾಂಗ್ರೆಸ್ ಕೇವಲ 1 ಸ್ಥಾನ ಪಡೆದಿದ್ದು, ಪಕ್ಷೇತರರೊಬ್ಬರು ಗೆದ್ದಿದ್ದಾರೆ.

ಮೇ 26ರಂದು ಪಂಜಾಬ್‌ನ ಒಟ್ಟು 8 ಮಹಾನಗರ ಪಾಲಿಕೆ, 75 ಮುನ್ಸಿಪಲ್ ಕೌನ್ಸಿಲ್, 20 ನಗರ ಪಂಚಾಯತ್‌ಗಳಿಗೆ ಚುನಾವಣೆ ನಡೆದಿತ್ತು. ಆಳುವ ಆಪ್ ಆಪ್ 954 ಸ್ಥಾನಗಳನ್ನು ಪಡೆದು ಮೇಲುಗೈ ಸಾಧಿಸಿದೆ. ಕಾಂಗ್ರೆಸ್ 390, ಸ್ವತಂತ್ರರು 251, ಅಕಾಲಿದಳ 191, ಬಿಜೆಪಿ 170 ಹಾಗೂ ಬಿಎಸ್‌ಪಿ 7 ಸ್ಥಾನಗಳನ್ನು ಗಳಿಸಿವೆ.

ಗಡಿ ಜಿಲ್ಲೆಗಳ ಜನಸಂಖ್ಯೆ ಬದಲು ದೇಶಕ್ಕೆ ಸವಾಲು

ಹೊಸದಿಲ್ಲಿ: ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯೆ ಬದಲಾವಣೆ ದೇಶದ ಮುಂದಿರುವ ಅತ್ಯಂತ ಗಂಭೀರ ಸವಾಲು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈ ಬೆಳವಣಿಗೆಗಳ ಬಗ್ಗೆ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ವರದಿ ಮಾಡಲು ಕರೆ ನೀಡಿದ್ದಾರೆ. ಭಾರತ–ಪಾಕಿಸ್ತಾನ ಗಡಿಯಲ್ಲಿರುವ ಗುಜರಾತಿನ ಕಚ್ ಜಿಲ್ಲೆಯ ಭುಜ್‌ನಲ್ಲಿ ನಡೆದ ಭದ್ರತಾ ಪರಿಶೀಲನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ



ಶಾ, ಅಸ್ತಿತ್ವದಲ್ಲಿರುವ ನುಸುಳುಕೋರರನ್ನು ಗುರುತಿಸಲು ಮತ್ತು ಡ್ರೋನ್, ಮಾದಕ ದ್ರವ್ಯಕ್ಕೆ ಸಂಬಂಧಿಸಿದ ಬೆದರಿಕೆಗಳ ಜಾಡು ಪತ್ತೆ ಗಡಿ ಜಿಲ್ಲೆಗಳ ಆಡಳಿತಗಳು ಎಸ್‌ಒಪಿ ರೂಪಿಸಬೇಕು ಎಂದರು. ಅಂತಾರಾಷ್ಟ್ರೀಯ ಗಡಿಯ 15 ಕಿಮೀ ವ್ಯಾಪ್ತಿಯೊಳಗೆ ಅತಿಕ್ರಮಣದ ಬಗ್ಗೆ ಶೂನ್ಯ ಸಹಿಷ್ಣುತೆಯ ವಿಧಾನವನ್ನು ಅಳವಡಿಸಿಕೊಳ್ಳುವ ಮತ್ತು ಗಡಿ ಪ್ರದೇಶಗಳಲ್ಲಿನ ತೀವ್ರಗಾಮಿತ್ವದ ಕೇಂದ್ರಗಳ ಮೇಲೆ ನಿಗಾ ವಹಿಸುವ ಅಗತ್ಯವನ್ನು ಒತ್ತಿ ಹೇಳಿದರು. ಗಡಿ ಜಿಲ್ಲೆಗಳಲ್ಲಿನ ಜನಸಂಖ್ಯಾ ಬದಲಾವಣೆಗಳು ಅತ್ಯಂತ ಗಂಭೀರವಾದ ಸವಾಲನ್ನು ಒಡ್ಡುತ್ತವೆ. ಜಿಲ್ಲಾಧಿಕಾರಿಗಳು ಅಂತಹ ಬೆಳವಣಿಗೆಗಳ ಕಟ್ಟುನಿಟ್ಟಾದ ಮೇಲ್ವಿಚಾರಣೆ ಮತ್ತು ನಿಯಮಿತ ವರದಿಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಶಾ ಸೂಚಿಸಿದ್ದಾರೆ. ಈಗಾಗಲೇ ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದಾಗಿ ಭಾರತದಾದ್ಯಂತ ಜನಸಂಖ್ಯಾ ಬದಲಾವಣೆಗಳನ್ನು ನಿರ್ಣಯಿಸಲು ಹಾಗೂ ಈ ಸಮಸ್ಯೆಯನ್ನು ಎದುರಿಸಲು ಕ್ರಮಗಳನ್ನು ಸೂಚಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗಿದೆ.

ಮಲಪ್ಪುರಂ ಸ್ಫೋಟಕ ವಶ ಪ್ರಕರಣ: ಎನ್‌ಐಎ ದಾಳಿ

ಕಣ್ಣೂರು: ಮಲಪ್ಪುರಂ ಜಿಲ್ಲೆಯ ತಿರುರಂಗಡಿ ಬಳಿಯ ಚೆಮ್ಮಾಡ್‌ನಿಂದ ಮೂರು ತಿಂಗಳ ಹಿಂದೆ ಭಾರೀ ಪ್ರಮಾಣದಲ್ಲಿ ವಶಪಡಿಸಿಕೊಳ್ಳಲಾದ ಸ್ಫೋಟಕಗಳಿಗೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಕಾಸರಗೋಡು, ಕಣ್ಣೂರು, ಕೋಯಿಕ್ಕೋಡು, ಮಲಪ್ಪುರಂ ಸೇರಿದಂತೆ ಉತ್ತರ ಕೇರಳದ ಹಲವೆಡೆಗಳಲ್ಲಿ ಶನಿವಾರ ದಾಳಿ ನಡೆಸಿದೆ. ಪ್ರಕರಣದಲ್ಲಿ ನಂಟು ಹೊಂದಿರುವ ಆರೋಪಿಗಳ ನಿವಾಸಗಳು, ಉದ್ಯಮ ಕೇಂದ್ರಗಳು, ಸಂಸ್ಥೆಗಳು ಸೇರಿದಂತೆ ಹಲವೆಡೆಗಳಲ್ಲಿ ಶನಿವಾರ ನಸುಕಿನಲ್ಲಿ ಎನ್‌ಐಎ ವ್ಯಾಪಕ ದಾಳಿ–ಶೋಧ ಕಾರ್ಯಾಚರಣೆ ನಡೆಸಿತು. ಮಲಪ್ಪುರಂ ಜಿಲ್ಲೆಯ ತಿರುರಂಗಡಿ ಮತ್ತು ವಂಡೂರ್, ಕೋಯಿಕ್ಕೋಡು ಜಿಲ್ಲೆಯ ಎರಂಜಿಮಾವು, ಕಣ್ಣೂರು ಮತ್ತು ಕಾಸರಗೋಡು ಜಿಲ್ಲೆಗಳ ಅನೇಕ ಕಡೆಗಳಲ್ಲಿ ದಾಳಿ ನಡೆದಿದೆ. ಘಟನೆಗೆ ಸಂಬಂಧಿಸಿ ಸ್ಫೋಟಕ ವಸ್ತುಗಳ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆಯ ಮುಂದುವರಿದ ಭಾಗವಾಗಿ ಈ ಕಾರ್ಯಾಚರಣೆ ನಡೆಸಿದ್ದೇವೆ. ಆರೋಪಿಗಳ ಒಡೆತನದ ಸಂಸ್ಥೆಗಳಲ್ಲದೆ, ಶಂಕಿತ ವ್ಯಕ್ತಿಗಳ ಸಂಸ್ಥೆಗಳಲ್ಲೂ ತಪಾಸಣೆ ನಡೆಸಲಾಗುತ್ತಿದೆ ಎಂದು ಎನ್‌ಐಎ ಕೇರಳ ಘಟಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಳೆದ ಫೆಬ್ರವರಿಯಲ್ಲಿ ಪೊಲೀಸರು ಚೆಮ್ಮಾಡ್‌ನಲ್ಲಿ ಲಾರಿಯೊಂದರಿಂದ ಭಾರೀ ಪ್ರಮಾಣದ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದರು. ಇದರಲ್ಲಿ 10,500ಕ್ಕೂ ಅಧಿಕ ಜಿಲೆಟಿನ್ ಕಡ್ಡಿಗಳು, ಡಿಟೋನೇಟರ್‌ಗಳು, ತಂತಿಗಳು ಸೇರಿವೆ. ಈ ಸಂಬಂಧಿಸಿ ಲಾರಿ ಮಾಲೀಕತ್ವ ಹೊಂದಿರುವ ಮಹಿಳೆಯೊಬ್ಬಳನ್ನು ವಶಕ್ಕೆ ತೆಗೆದುಕೊಂಡು ತನಿಖೆ ನಡೆಸಲಾಗುತ್ತಿದೆ.

ನಾಳೆ ಮ್ಯಾನ್ಮಾರ್ ಅಧ್ಯಕ್ಷ ಯು ಜತೆ ಮೋದಿ ಮಾತುಕತೆ

ಹೊಸದಿಲ್ಲಿ: ಮ್ಯಾನ್ಮಾರ್ ಅಧ್ಯಕ್ಷ ಯು ಮಿನ್ ಆಂಗ್ ಹ್ಲೈಂಗ್ ಅವರು ಶನಿವಾರ ಬೋಧ್ ಗಯಾದಲ್ಲಿರುವ ಮಹಾಬೋಧಿ ದೇವಾಲಯಕ್ಕೆ ಭೇಟಿ ನೀಡುವ ಮೂಲಕ ತಮ್ಮ ಐದು ದಿನಗಳ ಭಾರತ ಭೇಟಿಯನ್ನು ಪ್ರಾರಂಭಿಸಿದ್ದಾರೆ. ಈಶಾನ್ಯ ರಾಜ್ಯಗಳಾದ ಮಣಿಪುರ ಮತ್ತು ನಾಗಾಲ್ಯಾಂಡ್ ಸೇರಿದಂತೆ ಭಾರತದೊಂದಿಗೆ ಮ್ಯಾನ್ಮಾರ್ 1,640 ಕಿಮೀ ಗಡಿಯನ್ನು ಹಂಚಿಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಮ್ಯಾನ್ಮಾರ್ ಅಧ್ಯಕ್ಷ ಹ್ಲೈಂಗ್ ಜೂ.1ರಂದು ಮಾತುಕತೆ ನಡೆಸಲಿದ್ದಾರೆ. ಉಭಯ ದೇಶಗಳ ನಡುವಿನ ಐತಿಹಾಸಿಕ ಮತ್ತು ನಾಗರಿಕ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಕುರಿತು ಅಧ್ಯಕ್ಷ ಹ್ಲೈಂಗ್ ಅವರು ಪ್ರಧಾನಿ ಮೋದಿ ಜತೆ ಚರ್ಚಿಸಲಿದ್ದಾರೆ. ಅವರು ವ್ಯಾಪಾರ ವೇದಿಕೆಯಲ್ಲೂ ಭಾಗವಹಿಸಲಿದ್ದಾರೆ ಎಂದು ಎಂಇಎ ಹೇಳಿದೆ. ದಿಲ್ಲಿಯಲ್ಲಿ ಮಾತುಕತೆ ಬಳಿಕ ಹ್ಲೈಂಗ್ ಅವರು ಉದ್ಯಮದ ನಾಯಕರೊಂದಿಗಿನ ಸಭೆ, ವ್ಯಾಪಾರ ಸಂವಾದ ಮತ್ತು ಬೃಹತ್ ಉದ್ಯಮ ಮತ್ತು ಹೂಡಿಕೆ ಅವಕಾಶಗಳ ಮೇಲೆ ಕೇಂದ್ರೀಕರಿಸಿದ ತಾಣಗಳಿಗೆ ಭೇಟಿ ನೀಡಲು ಜೂ.2ರಂದು ಮುಂಬೈಗೆ ಪ್ರಯಾಣಿಸುತ್ತಾರೆ.

ವಾಷಿಂಗ್ಟನ್‌ನಲ್ಲಿ ಲಾಬಿ ಮಾಡಲು ಸಂಸ್ಥೆ ನೇಮಕ | ತಿಂಗಳಿಗೆ 50 ಸಾವಿರ ಡಾಲರ್ ಪಾವತಿ

ವರ್ಚಸ್ಸು ಹೆಚ್ಚಿಸಿಕೊಳ್ಳಲು ಉಗ್ರ ಪಾಕಿಸ್ತಾನದ ಕಸರತ್ತು

ವಾಷಿಂಗ್ಟನ್: ಉಗ್ರ ಪೋಷಕರ ದೇಶ, ಭಿಕಾರಿ ದೇಶವೆಂಬ ಪಟ್ಟ ಕಳಚಿಕೊಳ್ಳಲು ಮುಂದಾಗಿರುವ ಪಾಕಿಸ್ತಾನ, ಅಮೆರಿಕದಲ್ಲಿ ಲಾಬಿ ನಡೆಸುವ ಸಲುವಾಗಿಯೇ ಸಂಸ್ಥೆಯೊಂದನ್ನು ನೇಮಕ ಮಾಡಿದೆ.

ಮಾಜಿ ರಿಪಬ್ಲಿಕನ್ ಸಂಸದ ಟಾಮ್ ಗ್ರೇವ್ಸ್ ನೇತೃತ್ವದ ಎರ್ವಿನ್ ಗ್ರೇವ್ಸ್ ಸ್ಟ್ರಾಟೆಜಿ ಗ್ರೂಪ್ ಎಂಬ ಲಾಬಿಯಿಂಗ್ ಸಂಸ್ಥೆಯನ್ನು ಪಾಕಿಸ್ತಾನ ಸರ್ಕಾರ ನೇಮಿಸಿಕೊಂಡಿದ್ದು, ಈ ಸಂಬಂಧ ಎರಡು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಈ ಸಂಸ್ಥೆಗೆ ಮಾಸಿಕ 50 ಸಾವಿರ ಡಾಲರ್ ನೀಡಲಿದೆಯಂತೆ.

ಅಮೆರಿಕ ನ್ಯಾಯಾಂಗ ಇಲಾಖೆಗೆ ಸಲ್ಲಿಸಲಾದ ದಾಖಲೆಗಳ ಪ್ರಕಾರ, ವಾಷಿಂಗ್ಟನ್‌ನಲ್ಲಿರುವ ಪಾಕಿಸ್ತಾನ ರಾಯಭಾರ ಕಚೇರಿ ಈ ಒಪ್ಪಂದ ಮಾಡಿಕೊಂಡಿದ್ದು, ಅಮೆರಿಕ ಕಾಂಗ್ರೆಸ್, ಆಡಳಿತ ವಿಭಾಗ, ನೀತಿ ಸಂಶೋಧನಾ ಸಂಸ್ಥೆಗಳು ಹಾಗೂ ಕೈಗಾರಿಕಾ ವಲಯಗಳಲ್ಲಿ ಪಾಕಿಸ್ತಾನದ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಜವಾಬ್ದಾರಿಯನ್ನು ಸಂಸ್ಥೆಗೆ ನೀಡಲಾಗಿದೆ.

ಇತ್ತೀಚಿನ ತಿಂಗಳುಗಳಲ್ಲಿ ಅಮೆರಿಕ–ಇರಾನ್ ಸಂಘರ್ಷ ಶಮನಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆಯ ಪ್ರಯತ್ನಗಳನ್ನು ನಡೆಸಿದ್ದರೆ, ಪ್ರಧಾನಿ ಶೆಹಬಾಜ್ ಷರೀಫ್ ಹಾಗೂ ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ವಾಷಿಂಗ್ಟನ್ ಭೇಟಿ ನೀಡಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಿದ್ದರು. ಈ ಬೆಳವಣಿಗೆಗಳ ನಂತರ ಅಮೆರಿಕದಲ್ಲಿ ತನ್ನ ಸ್ಥಾನಮಾನವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪಾಕಿಸ್ತಾನ ಈ ಕ್ರಮ ಕೈಗೊಂಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ, ಮತ್ತೊಂದೆಡೆ 2026ರ ಮಾರ್ಚ್‌ನಲ್ಲಿ ಪ್ರಕಟವಾದ ಅಮೆರಿಕ ಕಾಂಗ್ರೆಸ್ ವರದಿ ಪಾಕಿಸ್ತಾನದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿತ್ತು. ಹಲವು ಉಗ್ರ ಸಂಘಟನೆಗಳು ಇನ್ನೂ ಪಾಕಿಸ್ತಾನದಲ್ಲಿ ಸಕ್ರಿಯವಾಗಿದ್ದು, ಅವುಗಳನ್ನು ನಿಯಂತ್ರಿಸುವಲ್ಲಿ ಸರ್ಕಾರದ ಪ್ರಯತ್ನಗಳು ನಿರೀಕ್ಷಿತ ಯಶಸ್ಸು ಕಾಣಲಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಕಾಂಗ್ರೆಸ್ ಸದಸ್ಯರೊಂದಿಗೆ ನೇರ ಸಂಪರ್ಕಕ್ಕೆ ಒತ್ತು: ಒಪ್ಪಂದದ ಪ್ರಕಾರ, ಅಮೆರಿಕ ಕಾಂಗ್ರೆಸ್ ಸದಸ್ಯರು, ಅವರ ಸಿಬ್ಬಂದಿ ಹಾಗೂ ಪ್ರಮುಖ ಸರ್ಕಾರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಪಾಕಿಸ್ತಾನಿ ಪ್ರತಿನಿಧಿಗಳ ಸಭೆಗಳನ್ನು ಆಯೋಜಿಸಲಾಗುತ್ತದೆ. ಜತೆಗೆ ಪಾಕಿಸ್ತಾನಕ್ಕೆ ಅಮೆರಿಕ ಶಾಸಕರ ಭೇಟಿಗಳನ್ನು ಸಂಯೋಜಿಸುವುದು, ಭೇಟಿಗೂ ಮುನ್ನ ಮಾಹಿತಿ ನೀಡುವುದು ಹಾಗೂ ರಾಯಭಾರ ಕಚೇರಿಯಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಕೆಲಸವೂ ಸಂಸ್ಥೆಯದ್ದಾಗಿರುತ್ತದೆ.

ನಾನ್ ನ್ಯಾಟೋ ಸ್ಥಾನಮಾನವಂತೆ: ಅಮೆರಿಕ ನೀಡಿರುವ ಮೇಜರ್ ನಾನ್–ನ್ಯಾಟೋ ಅಲೈ ಸ್ಥಾನಮಾನ ಪಾಕಿಸ್ತಾನಕ್ಕೆ ಕಾರ್ಯತಂತ್ರದ ದೃಷ್ಟಿಯಿಂದ ಮಹತ್ವದ್ದಾಗಿದೆ. ಈ ಸ್ಥಾನಮಾನಕ್ಕೆ ಧಕ್ಕೆಯಾಗುವ ಯಾವುದೇ ಕಾಂಗ್ರೆಸ್ ಅಥವಾ ಆಡಳಿತಾತ್ಮಕ ಕ್ರಮಗಳ ವಿರುದ್ಧ ರಾಜತಾಂತ್ರಿಕ ಮಟ್ಟದಲ್ಲಿ ಸ್ಪಂದಿಸುವುದು ಹಾಗೂ ಪಾಕಿಸ್ತಾನದ ಪರವಾಗಿ ವಾದ ಮಂಡಿಸುವುದು ಲಾಬಿಯಿಂಗ್ ಸಂಸ್ಥೆಯ ಪ್ರಮುಖ ಕಾರ್ಯಗಳಲ್ಲಿ ಒಂದಾಗಿದೆ.

ಲಾಬಿ ಸಂಸ್ಥೆ ಜವಾಬ್ದಾರಿ?

- ಅಮೆರಿಕ ಕಾಂಗ್ರೆಸ್ ಹಾಗೂ ಆಡಳಿತ ವಿಭಾಗದೊಂದಿಗೆ ಸಂಪರ್ಕ ಸಾಧಿಸುವುದು
- ಪಾಕಿಸ್ತಾನದ ವಿರುದ್ಧ ಪರಿಣಾಮ ಬೀರುವ ನೀತಿ ಮತ್ತು ಶಾಸನಾತ್ಮಕ ಕ್ರಮಗಳ ಮೇಲೆ ನಿಗಾ ಇಡುವುದು
- ಮಾನವ ಹಕ್ಕುಗಳು, ನಿರ್ಬಂಧಗಳು ಹಾಗೂ ಭದ್ರತಾ ನೆರವಿಗೆ ಸಂಬಂಧಿಸಿದ ಬೆಳವಣಿಗೆಗಳ ವಿಶ್ಲೇಷಣೆ
- ನೀತಿ ತಜ್ಞರು, ಚಿಂತಕರ ವೇದಿಕೆಗಳು ಹಾಗೂ ಶೈಕ್ಷಣಿಕ ವಲಯಗಳಲ್ಲಿ ಪಾಕಿಸ್ತಾನದ ಪರ ಅಭಿಪ್ರಾಯ ನಿರ್ಮಾಣ

ಇಂದು ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ 301ನೇ ಜಯಂತಿ

ವಿವಿಧೆಡೆ ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮ

ಇಂದೋರ್/ಪುಣೆ: 18ನೇ ಶತಮಾನದಲ್ಲಿ ತಮ್ಮ ಸಮರ್ಥ ಆಡಳಿತ ಮತ್ತು ನ್ಯಾಯಪ್ರಿಯತೆಯಿಂದ ಪ್ರಜೆಗಳ ಮನದಲ್ಲಿ ಅಚಲ ಸ್ಥಾನ ಗಳಿಸಿದ ರಾಜಮಾತೆ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರ 301ನೇ ಜಯಂತಿಯನ್ನು ದೇಶಾದ್ಯಂತ ಸಂಭ್ರಮದಿಂದ ಆಚರಿಸಲಾಗುತ್ತಿದೆ. 1725 ಮೇ 31ರಂದು ಅಹಲ್ಯಾಬಾಯಿ ಅವರು ಜನಿಸಿದ್ದಾರೆ. ಈ ಹಿನ್ನೆಲೆ ಶನಿವಾರದಿಂದಲೇ ಅವರ ಜನ್ಮಸ್ಥಳವಾದ ಚೌಂಡಿ(ಅಹಲ್ಯಾನಗರ) ಸೇರಿದಂತೆ ಇಂದೋರ್, ಪುಣೆ ಹಾಗೂ ಮಹಾರಾಷ್ಟ್ರದಾದ್ಯಂತ ವಿವಿಧ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅಹಲ್ಯಾಬಾಯಿ ಅವರ ಜನ್ಮಸ್ಥಳವಾದ ಅಹಮದ್‌ನಗರ ಜಿಲ್ಲೆಯ ಚೌಂಡಿಯಲ್ಲಿ ಶನಿವಾರ ಭಕ್ತರು ಮತ್ತು ರಾಜಕೀಯ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗೌರವ ಸಲ್ಲಿಸಿದ್ದಾರೆ.

ಇನ್ನು ಹೋಳ್ಕರ್ ಸಂಸ್ಥಾನದ ರಾಜಧಾನಿಯಾಗಿದ್ದ ಇಂದೋರ್‌ನ ರಾಜವಾಡಾ ಪ್ರದೇಶದಲ್ಲಿ ಭವ್ಯವಾದ ದೇವಿ ಅಹಲ್ಯಾ ಜಯಂತಿ ಪರ್ವ ಆಚರಿಸಲಾಗುತ್ತಿದ್ದು, ಶನಿವಾರ ಸಂಜೆ ಸಾಂಪ್ರದಾಯಿಕ ಪಾಲ್ಕಿ ಉತ್ಸವ ಮತ್ತು ಭವ್ಯ ಶೋಭಾಯಾತ್ರೆ ನಡೆದಿದೆ.

ಮೋದಿ, ಫಡ್ನವೀಸ್ ನಮನ: ಪ್ರಧಾನಿ ನರೇಂದ್ರ ಮೋದಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವೀಸ್ ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಸಾಮಾಜಿಕ ಮಾಧ್ಯಮಗಳ ಮೂಲಕ ಲೋಕಮಾತೆ ಪುಣ್ಯಶ್ಲೋಕ ಅಹಲ್ಯಾಬಾಯಿ ಹೋಳ್ಕರ್ ಅವರಿಗೆ ವಿನಮ್ರ ನಮನ ಸಲ್ಲಿಸಿದ್ದಾರೆ.



ಶ್ರೇಷ್ಠ ಆಡಳಿತಗಾರ್ತಿ

ಪುಣ್ಯಶ್ಲೋಕ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ಅವರು ಭಾರತದ ಹಾಗೂ ವಿಶೇಷವಾಗಿ ಮರಾಠಾ ಸಾಮ್ರಾಜ್ಯದ ಇತಿಹಾಸದಲ್ಲಿನ ಅತ್ಯಂತ ಶ್ರೇಷ್ಠ, ದೂರದೃಷ್ಟಿಯುಳ್ಳ ಮತ್ತು ದಕ್ಷ ಆಡಳಿತಗಾರ್ತಿಯರಲ್ಲಿ ಒಬ್ಬರಾಗಿದ್ದರು. ಅವರು ಮಧ್ಯ ಭಾರತದ ಮಾಳ್ವಾ ಪ್ರದೇಶವನ್ನು ಸುಮಾರು 30 ವರ್ಷ ಅತ್ಯಂತ ಸಮರ್ಥವಾಗಿ ಆಳಿದರು. ಜನರು ಅವರಿಗೆ ಗೌರವದಿಂದ ಲೋಕಮಾತೆ ಮತ್ತು ದೇವಿ ಎಂಬ ಬಿರುದುಗಳನ್ನು ನೀಡಿದ್ದರು

ಕಿರುಸುದ್ದಿ

ಜೂ.28ರಿಂದ ಪಲ್ಸ್ ಪೋಲಿಯೋ ಅಭಿಯಾನ

ಬಾಗಲಕೋಟೆ: ಪ್ರಸಕ್ತ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನವನ್ನು ಜೂ.28ರಿಂದ ಜು.1ರ ವರೆಗೆ ಒಟ್ಟು ನಾಲ್ಕು ದಿನ ದೇಶ್ಯಾದ್ಯಂತ ಹಮ್ಮಿಕೊಂಡಿದ್ದು, ಜಿಲ್ಲೆಯಲ್ಲಿ ಐದು ವರ್ಷದೊಳಗಿನ ಒಟ್ಟು 2,03,443 ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಲಾಗಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲೀಯೋ ಲಸಿಕಾ ಕಾರ್ಯಕ್ರಮ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲಾದ್ಯಂತ 0-5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಲಸಿಕೆ ಹಾಕಲಾಗುತ್ತಿದ್ದು, ಇದಕ್ಕಾಗಿ 407777 ಮನೆಗಳನ್ನು ಗುರುತಿಸಲಾಗಿದೆ. ನಗರ ಪ್ರದೇಶದ 68969 ಹಾಗೂ ಗ್ರಾಮೀಣ ಪ್ರದೇಶದ 1,34,474 ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದೆ. ಜೂ.28ರಂದು ಬೂತ್ ಮಟ್ಟದಲ್ಲಿ ಹಾಗೂ ಜೂ.29, 30ರಂದು ಎರಡು ದಿನ ಗ್ರಾಮೀಣ ಪ್ರದೇಶಗಳಲ್ಲಿ, ಜೂ.29ರಿಂದ ಜು.1ರ ವರೆಗೆ ಮೂರು ದಿನ ನಗರ ಪ್ರದೇಶಗಳಲ್ಲಿ ಆರೋಗ್ಯ ಕಾರ್ಯಕರ್ತರು ಮನೆ ಮನೆಗೆ ಭೇಟಿ ನೀಡಿ ಐದು ವರ್ಷದೊಳಗಿನ ಮಕ್ಕಳಿಗೆ ಪೋಲೀಯೋ ಹನಿ ಹಾಕಲಿದ್ದಾರೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮಂಜುನಾಥ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಸಮಗ್ರ ಸಾಹಿತ್ಯ ಸಂಪುಟ ಲೋಕಾರ್ಪಣೆ ನಾಳೆ

ವಿಜಯನಗರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ಹಾಗೂ ವಿಜಯನಗರ ಮಹಾವಿದ್ಯಾಲಯ ಸಂಯುಕ್ತಾಶ್ರಯದಲ್ಲಿ ಹಿರಿಯ ಸಾಹಿತಿ ಎಸ್.ಎಸ್.ಹಿರೇಮಠ ಸಮಗ್ರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆ ಸಮಾರಂಭವನ್ನು ಜೂ.1ರಂದು ಬೆಳಿಗ್ಗೆ 11ಕ್ಕೆ ವಿಜಯನಗರ ಮಹಾವಿದ್ಯಾಲಯದ ಸಮ್ಮೇಳನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಹಿರಿಯ ಸಾಹಿತಿ ಡಾ.ರಹಮತ್ ತರೀಕೆರೆ ಪುಸ್ತಕ ಲೋಕಾರ್ಪಣೆಗೊಳಿಸಲಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷೆ ಡಾ. ಮಾನಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬರಹಗಾರರು ಮತ್ತು ಸಾಮಾಜಿಕ ಕಾರ್ಯಕರ್ತ ಬಿ. ಪೀರ್‌ಬಾಷಾ, ಮಣಿಪಾಲ್ ವಿಶ್ವವಿದ್ಯಾಲಯ ನಿವೃತ್ತ ಪ್ರಾಧ್ಯಾಪಕ ಪ್ರೊ. ಕೆ.ಫಣಿರಾಜ್, ವಿಜಯನಗರ ಮಹಾವಿದ್ಯಾಲಯದ ಅಧ್ಯಕ್ಷರು ಮಲ್ಲಿಕಾರ್ಜುನ್ ಎನ್.ಮೆಟ್ರಿ, ಪ್ರಾಚಾರ್ಯ ಮಹಾಂತೇಶ್ ಎನ್.ಆರಾಧ್ಯಮಠ, ಎಸ್.ಎಸ್.ಹಿರೇಮಠರ ಧರ್ಮಪತ್ನಿ ಯೋಗಿತಾ ಎಸ್.ಹಿರೇಮಠ ಭಾಗವಹಿಸಲಿದ್ದಾರೆ.

ವಸತಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ವಿಜಯನಗರ: 2026-27ನೇ ಸಾಲಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ಬಾಲಕರ, ಬಾಲಕಿಯರ ವಸತಿ ನಿಲಯ ಪ್ರವೇಶಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.31ಕೊನೆ ದಿನವಾಗಿದೆ. ಅರ್ಜಿ ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ಇಲಾಖೆ ವೆಬ್ ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಸಲ್ಲಿಸಿದ ಅರ್ಜಿಯೊಂದಿಗೆ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಫೋಟೋ, ಬ್ಯಾಂಕ್ ಪಾಸ್ ಬುಕ್, ಹಿಂದಿನ ವರ್ಷದ ಅಂಕಪಟ್ಟಿ ದಾಖಲೆಗಳೊಂದಿಗೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 9901147362ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜಿಟಿಟಿಸಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ವಿಜಯನಗರ: ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಯಾಗಿದ್ದು, ಈಗಾಲೇ ಡಿಪ್ಲೊಮೊ ಕೋರ್ಸುಗಳಿಗೆ ಪ್ರವೇಶಾತಿ ಪ್ರಕ್ರಿಯೆ ಆರಂಭವಾಗಿದೆ. ಎಐಸಿಟಿಇ ನವದೆಹಲಿಯಿಂದ ಅನುಮೋದಿತಗೊಂಡ ಡಿಟಿಡಿಎಂ (ಡಿಪ್ಲೊಮಾ ಇನ್ ಟೂಲ್ ಅಂಡ್ ಡೈ ಮೇಕಿಂಗ್), ಡಿಎಂಸಿಹೆಚ್ (ಡಿಪ್ಲೊಮಾ ಇನ್ ಮೆಕಾಟ್ರಾನಿಕ್ಸ್), ಡಿಪಿಎಂ (ಡಿಪ್ಲೊಮಾ ಇನ್ ಪ್ರಿಸಿಷಿಯನ್ ಮ್ಯಾನ್ಯುಫ್ಯಾಕ್ಚರಿಂಗ್) ಕೋರ್ಸ್‌ಗಳು ಲಭ್ಯವಿದ್ದು, ವಿದ್ಯಾರ್ಹತೆಯು 10ನೇ ತರಗತಿ ಉತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದು. ತರಬೇತಿಯೂ 3+1 ವರ್ಷ ಅವಧಿಯಾಗಿದೆ. ಸೈನ್ಸ್ ಐಟಿಐ ಪಾಸಾದ ವಿದ್ಯಾರ್ಥಿಗಳಿಗೆ ನೇರವಾಗಿ ದ್ವಿತೀಯ ವರ್ಷಕ್ಕೆ ಪ್ರವೇಶ ಪಡೆಯಬಹುದು. ಅರ್ಜಿ ಸಲ್ಲಿಸಲು ಜೂನ್ 10 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ 8105640142ಗೆ ಸಂಪರ್ಕಿಸಬಹುದಾಗಿದೆ ಎಂದು ಸರ್ಕಾರಿ ಉಪಕರನಾಗಾರ ಮತ್ತು ತರಬೇತಿ ಕೇಂದ್ರದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಪ್ಪೆ ಚಿಪ್ಪು ತರಲು ಹೋಗಿ 11 ಜನರ ಸಾವು ಪ್ರಕರಣ

ಪರಿಹಾರ ಮೊತ್ತ ರೂ.25ಲಕ್ಷಕ್ಕೆ ಹೆಚ್ಚಿಸಿ: ಪ್ರಣವಾನಂದ ಶ್ರೀಗಳು

ಭಟ್ಕಳ: ಕಪ್ಪೆ ಚಿಪ್ಪು ತರಲು ಹೋಗಿ ನದಿಯಲ್ಲಿ ಮುಳುಗಿ ಮೃತಪಟ್ಟ 11 ಜನರಿಗೆ ಸಚಿವ ಮಂಕಾಳ ವೈದ್ಯ ಅವರು ತ್ವರಿತವಾಗಿ ರಾಜ್ಯ ಸರ್ಕಾರದಿಂದ 15 ಲಕ್ಷ ಹಾಗೂ ವೈಯಕ್ತಿಕವಾಗಿ 1 ಲಕ್ಷ ನೀಡಿರುವುದು ಸ್ವಾಗತಾರ್ಹ. ಆದರೆ, ಈ ಪರಿಹಾರ ಮೊತ್ತವನ್ನು 25 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಪ್ರಣವಾನಂದ ಸ್ವಾಮೀಜಿ ಆಗ್ರಹಿಸಿದರು.



ಅವರು ಶನಿವಾರ ಸಾರದಹೊಳೆಯಲ್ಲಿ ಮೃತರ ಕುಟುಂಬಗಳಿಗೆ ಭೇಟಿ ನೀಡಿ ಸಾಂತ್ವಾನ ಹೇಳಿದ ನಂತರ ಸುದ್ದಿಗಾರರ ಜೊತೆ ಮಾತನಾಡಿ, ನದಿಯಲ್ಲಿ ಮೃತಪಟ್ಟ ಕುಟುಂಬದವರಿಗೆ ಸಚಿವ ಮಂಕಾಳ ವೈದ್ಯ ಸರ್ಕಾರದಿಂದ 15 ಲಕ್ಷ ಪರಿಹಾರ ಕೊಡಿಸಿದ್ದಾರೆ. ಈ ಪರಿಹಾರ ಮೊತ್ತ ಸಾಲುವುದಿಲ್ಲ, ಈ ಪರಿಹಾರ ಮೊತ್ತವನ್ನು 25 ಲಕ್ಷಕ್ಕೆ ಹೆಚ್ಚಿಸಬೇಕು. ರಾಜ್ಯ ಮುಖ್ಯಮಂತ್ರಿಗಳ ಜೊತೆ ಸಚಿವರು ಮಾತನಾಡಿ ಶೀಘ್ರದಲ್ಲಿ ಹೆಚ್ಚುವರಿ ಪರಿಹಾರ ಕೊಡಿಸಬೇಕು. ಇಲ್ಲವಾದಲ್ಲಿ ಈ ಬಗ್ಗೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

ಸಚಿವರು ತಮ್ಮ ಸ್ವಕ್ಷೇತ್ರಕ್ಕೆ ಪ್ರಾತಿನಿಧ್ಯ ನೀಡಿದಂತೆ ಇದೇ ಜಿಲ್ಲೆಯ ಅಂಕೋಲದಲ್ಲಿ ಗುಡ್ಡ ಕುಸಿತದಿಂದ ಮೃತಪಟ್ಟ 7 ಜನರ ಕುಟುಂಬಗಳಿಗೆ ಸಮರ್ಪಕ ಪರಿಹಾರ ಕೊಡಿಸಲಿಲ್ಲ, ಸಚಿವ ಮಂಕಾಳ ವೈದ್ಯ ಆಗಲಿ ಜಿಲ್ಲೆಯ ಜಿಲ್ಲಾಧಿಕಾರಿ ಕೆ ಲಕ್ಷ್ಮೀಪ್ರೀಯಾ ಆಗಲಿ ಇನ್ನೂ ತನಕ ಮೃತ ಕುಟುಂಬ ಸದಸ್ಯರ ಭೇಟಿ ಮಾಡಿ ಸಾಂತ್ವಾನ ಹೇಳಲಿಲ್ಲ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ ಹೊಂದಾಣಿಕೆ ರಾಜಕೀಯದಿಂದಾಗಿ ಜಿಲ್ಲೆಯ ಅಭಿವೃದ್ಧಿ ಕುಂಠಿತವಾಗಿದೆ. ಜಿಲ್ಲಾಧಿಕಾರಿ ಕೆ ಲಕ್ಷ್ಮೀಪ್ರೀಯಾ ನಿಷ್ಪ್ರಯೋಜಕರಾಗಿದ್ದು ಅವರನ್ನು ಈ ಜಿಲ್ಲೆಯಿಂದ ವರ್ಗಾವಣೆ ಮಾಡಬೇಕಾಗಿದೆ. ಹೆದ್ದಾರಿ ಕಾಮಗಾರಿ ನಡೆಸುತ್ತಿರುವ ಐಆರ್.ಬಿ ಒಂದು ಭಯೋತ್ಪಾದನೆ ಸಂಘಟನೆಯಂತೆ ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು.

ಡಿ.ಕೆ.ಶಿವಕುಮಾರ ಈ ರಾಜ್ಯದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಬಗ್ಗೆ ಸಂತಷ ವ್ಯಕ್ತಪಡಿಸಿದ ಸ್ವಾಮೀಜಿ, ಈಡಿಗ ನಾಮಧಾರಿ ಸಮುದಾಯದ ಬೇಲೂರು ಗೋಪಾಲಕೃಷ್ಣ ಅವರಿಗೆ ಸಚಿವ ಸ್ಥಾನ ನೀಡಬೇಕು. ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಹಾಗೂ ನಿಗಮ ಮಂಡಳಿಗಳಿಗೆ ಆಯ್ಕೆ ಸಂದರ್ಭದಲ್ಲಿಯೂ ಈಡಿಗ, ನಾಮಧಾರಿ ಪ್ರತಿನಿಧಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುವಂತೆ ಮುಖ್ಯಮಂತ್ರಿಗಳಲ್ಲಿ ಆಗ್ರಹಿಸುತ್ತೇನೆ ಎಂದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಎಲ್ಲಾ ಜಾತಿ ಸಮುದಾಯಗಳನ್ನು ಒಗ್ಗಟ್ಟಾಗಿ ತೆಗೆದುಕೊಂಡು ಹೋಗುವ ಕೆಲಸ ಮಾಡಬೇಕು ಎಂದರು.

ಮಾಜಿ ಶಾಸಕ ಜೆ.ಡಿ ನಾಯ್ಕ, ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾ ಘಟಕ ಅಧ್ಯಕ್ಷ ದೇವರಾಜ ನಾಯ್ಕ, ತಾಲೂಕು ಘಟಕ ಅಧ್ಯಕ್ಷ ಶ್ರೀಧರ ಎಸ್ ನಾಯ್ಕ, ಪ್ರಮುಖರಾದ ಸತೀಶಕುಮಾರ ನಾಯ್ಕ, ಅರುಣ ನಾಯ್ಕ ಇತರರು ಇದ್ದರು.

ಜಾನಪದ ಸಾಹಿತ್ಯಕ್ಕೆ ಅಶ್ಲೀಲ ಪದಬಳಕೆ: ವಿಷಾದ

ಸಿಂದಗಿ: ಜಾನಪದ ಹೆಸರಿನಲ್ಲಿ ಇತ್ತೀಚಿನ ದಿನಮಾನಗಳಲ್ಲಿ ಅಶ್ಲೀಲ ಹಾಡುಗಳು ಹೆಚ್ಚುತ್ತಿವೆ. ಇದರಿಂದ ಉತ್ತರ ಕರ್ನಾಟಕದ ಜಾನಪದ ಹಾಡಿನ ಘನತೆ ಕುಗ್ಗುತ್ತಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ತಾಲೂಕಾಧ್ಯಕ್ಷ ರಾಜಶೇಖರ ಕೂಚಬಾಳ ಹೇಳಿದರು.

ಸಿಂದಗಿ ನಗರದಲ್ಲಿ ಬಿಗ್ ಬಾಸ್ ಸೀಜನ್ 12ರ ರನ್ನರಪ್ ರಕ್ಷಿತಾ ಶೆಟ್ಟಿ ಹಾಗೂ ಜಾನಪದ ಗಾಯಕ ಮಾಳು ನಿಪನಾಳ ಅವರಿಗೆ ಸ್ವಗ್ರಹದಲ್ಲಿ ಸನ್ಮಾನಿಸಿ ಮಾತನಾಡಿ ಅವರು, ಉತ್ತರ ಕರ್ನಾಟಕ ಜನರ ಜೀವನಾಡಿಯಾಗಿರುವ ಶ್ರೇಷ್ಠ ಜಾನಪದ ಸಾಹಿತ್ಯಕ್ಕೆ ಇಂದಿನ ಯುವ ಜನಾಂಗ ಅಶ್ಲೀಲ ಪದಬಳಕೆ ಮಾಡುತ್ತಿರುವುದು ಬೇಸರ ಸಂಗತಿ. ಯುವ ಕಲಾವಿದರು, ಗಾಯಕರು, ಗೀತ ರಚನೆಕಾರರು ಅಶ್ಲೀಲತೆ ಪದ ಬಳಕೆ ನಿಲ್ಲಿಸಬೇಕು ಎಂದು ಸಲಹೆ ನೀಡಿದರು.

ಸನ್ಮಾನವನ್ನು ಸ್ವೀಕರಿಸಿದ ಬಿಗ್‌ಬಾಸ್ ಸಿಜನ್ 12ರ ರನ್ನರ್ ರಕ್ಷಿತಾ ಶೆಟ್ಟಿ ಮತ್ತು ಗಾಯಕ ಮಾಳು ನಿಪನಾಳ ಮಾತನಾಡಿ, ಸಿಂದಗಿಯ ಜನರು ಕಲಾವಿದರನ್ನು ಗೌರವಿಸುವಲ್ಲಿ, ಪ್ರೋತ್ಸಾಹಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ. ಹಂದಿಗನೂರರವೀಂದ್ರ, ಹಂದಿಗನೂರ ಸಿದ್ರಾಮಪ್ಪ, ರಾಜು ತಾಳಿಕೋಟಿ ಸೇರಿದಂತೆ ಅನೇಕ ಕಲಾ ದಿಗ್ಗಜರನ್ನು ಮತ್ತು ಸಾಹಿತಿಗಳನ್ನು ನೀಡಿದ ಪುಣ್ಯ ಭೂಮಿ ಇದು. ಈ ನಗರಕ್ಕೆ ಬಂದು ಸನ್ಮಾನ ಸ್ವೀಕರಿಸುತ್ತಿರುವುದು ಸಂತಸ ತಂದಿದೆ ಎಂದರು.

ಈ ವೇಳೆ ಆರಕ್ಷಕ ಮೌಲಾಲಿ ಆಲಗೂರ ಮಾತನಾಡಿದರು. ಕೂಚಬಾಳ ಅವರತ ಕುಟುಂಬದ ಸದಸ್ಯರು ಈರ್ವ ಕಲಾವಿದರಿಗೆ ಬುದ್ಧನ ಮೂರ್ತಿ ಉಡುಗೊರೆಯಾಗಿ ನೀಡಿದರು.



ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಿ

ಬಳ್ಳಾರಿ: ಧೂಮಪಾನ ಮಾಡುವವರಿಗಿಂತ ಅವರ ಸುತ್ತಮುತ್ತಲಿರುವ ಸಾರ್ವಜನಿಕರಿಗೆ ಹೆಚ್ಚಿನ ಆರೋಗ್ಯ ಹಾನಿಯಾಗುವ ಸಾಧ್ಯತೆ ಇರಲಿದೆ. ವಿಶೇಷವಾಗಿ ಬಾಯಿ ಹಾಗೂ ಶ್ವಾಸಕೋಶದ ಕ್ಯಾನ್ಸರ್ ಸೇರಿದಂತೆ ದೇಹದ ಇತರ ಪ್ರಮುಖ ಅಂಗಾಂಗಗಳು ಹಾನಿಗೀಡಾಗುವುದರಿಂದ, ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ತಂಬಾಕು ಉತ್ಪನ್ನಗಳ ಬಳಕೆಯನ್ನು ತಿರಸ್ಕರಿಸಬೇಕು ಎಂದು ಡಿಹೆಚ್‌ಒ ಡಾ.ಯಲ್ಲಾ ರಮೇಶ್ ಬಾಬು ತಿಳಿಸಿದ್ದಾರೆ.

ನಿಕೋಟಿನ್ ಮತ್ತು ತಂಬಾಕು ವ್ಯಸನವನ್ನು ಎದುರಿಸುವುದು ಈ ವರ್ಷದ ಘೋಷಣೆಯಾಗಿದೆ. ತಂಬಾಕು ಸೇವನೆಯಿಂದ ಉಂಟಾಗುವ ಮಾರಕ ಕಾಯಿಲೆಗಳು ಮತ್ತು ಅವುಗಳ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ಆರೋಗ್ಯ ಸಂಸ್ಥೆಯು 1987 ರಿಂದ ಈ ದಿನಾಚರಣೆಯನ್ನು ಜಾರಿಗೆ ತಂದಿದೆ. ತಂಬಾಕು ಕಂಪನಿಗಳ ವ್ಯಾಪಾರ ನೀತಿಗಳ ಬಗ್ಗೆ ಜನರನ್ನು ಎಚ್ಚರಿಸುವುದು ಮತ್ತು ಸಾರ್ವಜನಿಕ ಆರೋಗ್ಯವನ್ನು ರಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದಿದ್ದಾರೆ.

ವಾಣಿಜ್ಯ ಬೆಳೆಯಾಗಿರುವ ತಂಬಾಕು ಉತ್ಪನ್ನಗಳಲ್ಲಿ 4 ಸಾವಿರಕ್ಕೂ ಹೆಚ್ಚು ರಾಸಾಯನಿಕಗಳಿದ್ದು, ಇದರಲ್ಲಿರುವ 'ನಿಕೋಟಿನ್' ಎಂಬ ರಾಸಾಯನಿಕವು ತೀವ್ರ ವ್ಯಸನವನ್ನು ಉಂಟುಮಾಡುತ್ತದೆ. ಸಿಗರೇಟ್, ಬೀಡಿ, ಸಿಗಾರ್, ಗುಟ್ಕಾ, ಖೈನಿ, ಜರ್ದಾ ಮತ್ತು ಹುಕ್ಕಾ ರೂಪದಲ್ಲಿ ಇದನ್ನು ಬಳಸಲಾಗುತ್ತಿದ್ದು, ಇದರಿಂದ ಈ ಮಾರಕ ಪರಿಣಾಮಗಳು ಎದುರಾಗುತ್ತವೆ. ಕ್ಯಾನ್ಸರ್ ಅಪಾಯದಿಂದ ಶ್ವಾಸಕೋಶ, ಬಾಯಿ, ಗಂಟಲು ಮತ್ತು ನಾಲಿಗೆಯ ಕ್ಯಾನ್ಸರ್ ಸಾಧ್ಯತೆ ಹೆಚ್ಚುತ್ತದೆ. ಹೃದಯಾಘಾತ ಮತ್ತು ದೀರ್ಘಕಾಲದ ಶ್ವಾಸಕೋಶದ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ನಿಯಮಬಾಹಿರವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇದುವವರಿಗೆ ಕಾಯ್ದೆಯಡಿ ದಂಡ ವಿಧಿಸಲಾಗುವುದು ಹಾಗೂ ತಂಬಾಕು ಮಾರಾಟಗಾರರು ಕಡ್ಡಾಯವಾಗಿ ಪರವಾನಗಿ ಹೊಂದಿರಬೇಕು. ತಂಬಾಕು ತ್ಯಜಿಸುವುದರಿಂದ ಉಸಿರಾಟ ವ್ಯವಸ್ಥೆ ಸುಧಾರಿಸುತ್ತದೆ, ಹೃದಯದ ಆರೋಗ್ಯ ಉತ್ತಮಗೊಳ್ಳುತ್ತದೆ, ಕ್ಯಾನ್ಸರ್‌ನಂತಹ ಗಂಭೀರ ಕಾಯಿಲೆಗಳ ಅಪಾಯ ಕಡಿಮೆಯಾಗುತ್ತದೆ. ಇದರೊಂದಿಗೆ ಅನಗತ್ಯ ಹಣದ ವ್ಯಯ ತಪ್ಪಿ, ಜೀವನದ ಗುಣಮಟ್ಟ ಹೆಚ್ಚುತ್ತದೆ ಎಂದು ತಿಳಿಸಿದ್ದಾರೆ. ಜಿಲ್ಲೆಯ ಎಲ್ಲಾ ಶಾಲಾ-ಕಾಲೇಜುಗಳಲ್ಲಿ ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಮುಖ ಹೋಟೆಲ್‌ಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಕಡ್ಡಾಯವಾಗಿ ಪ್ರತ್ಯೇಕ 'ಸ್ಮೋಕಿಂಗ್ ಝೋನ್' (ಧೂಮಪಾನ ವಲಯ) ಸ್ಥಾಪಿಸಲು ಸ್ಥಳೀಯ ಆಡಳಿತಗಳ ಸಹಕಾರ ಅಗತ್ಯವಾಗಿದೆ.

ಜಿಲ್ಲಾ ಆಸ್ಪತ್ರೆಯ ಕೋಣೆ ಸಂಖ್ಯೆ-43 ರಲ್ಲಿ ತಂಬಾಕು ವ್ಯಸನಿಗಳಿಗಾಗಿ 'ತಂಬಾಕು ವ್ಯಸನ ಮುಕ್ತ ಕೇಂದ್ರ' ಕಾರ್ಯನಿರ್ವಹಿಸುತ್ತಿದೆ. ಇಲ್ಲಿ ಸಾರ್ವಜನಿಕರಿಗೆ ಉಚಿತ ಆಪ್ತಸಮಾಲೋಚನೆ ಹಾಗೂ ಅಗತ್ಯ ಚಿಕಿತ್ಸಾ ಸೇವೆಗಳನ್ನು ನೀಡಲಾಗುತ್ತಿದ್ದು, ವ್ಯಸನಿಗಳು ಇದರ ಸದುಪಯೋಗ ಪಡೆದುಕೊಂಡು ತಂಬಾಕು ರಹಿತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕಾಗಿ ಆರೋಗ್ಯಾಧಿಕಾರಿಗಳು ವಿನಂತಿಸಿದ್ದಾರೆ.

ದೇವಋಷಿ ಮಹಾದೇವ ಗಂಗಾಯಿ ಅಜ್ಜನ ಅಂತ್ಯಕ್ರಿಯೆ

ರಾಯಬಾಗ: ತಾಲೂಕಿನ ಹಳೆದಿಗ್ಗೇವಾಡಿ ಗ್ರಾಮದ ದೇವಋಷಿಗಳಾದ ಶ್ರೀ ಮಹಾದೇವ ಗಂಗಾಯಿ(ಅಜ್ಜಾ) (72) ಅನಾರೋಗ್ಯದಿಂದ ವಿಧಿವಶರಾಗಿದ್ದು, ವಿಧಿ ವಿಧಾನಗಳ ಪ್ರಕಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.



ಶುಕ್ರವಾರ ಸಂಜೆ ನಿಧನರಾಗಿದ್ದು, ಭಾನುವಾರ ಬೆಳಗ್ಗೆ ಹಳೆ ದಿಗ್ಗೇವಾಡಿ ಗ್ರಾಮದಲ್ಲಿ ಲಿಂಗಾಯತ ವಿಧಿವಿಧಾನಗಳ ಪ್ರಕಾರ ಅಂತ್ಯಕ್ರಿಯೆ ನಡೆಯಿತು.

ಶುಕ್ರವಾರ ರಾತ್ರಿಯಿಂದ ಬೆಳಿಗ್ಗೆ 9 ಗಂಟೆವರೆಗೆ ಮಹಾದೇವ ಅಜ್ಜನವರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಇಡಲಾಗಿತ್ತು. ಅಲ್ಲದೇ ರಾತ್ರಿಯಿಂದ ಭಜನೆಗಳು ನಡೆದವು.

ಹಳೆದಿಗ್ಗೇವಾಡಿ, ದಿಗ್ಗೇವಾಡಿ, ಬಾವನಸೌಂದತ್ತಿ, ಕಂಚಕರವಾಡಿ, ಯಡ್ರಾಂವ, ನಸಲಾಪುರ, ಜಲಾಲಪುರ, ಭಿರಡಿ, ಚಿಕ್ಕೋಡಿ, ರಾಯಬಾಗ, ಹುಕ್ಕೇರಿ, ಇಂಗಳಿ, ಚಿಂಚಲಿ, ಸೇರಿದಂತೆ ಜಿಲ್ಲೆಯ ವಿವಿಧ ಭಾಗಗಳಿಂದ ಭಕ್ತಾಧಿಗಳು ಆಗಮಿಸಿ ಅಜ್ಜನವರ ದರ್ಶನ ಪಡೆದರು.

ಸುತ್ತಮುತ್ತಲಿನ ಗ್ರಾಮಸ್ಥರು ಅಜ್ಜನವರ ಮಾತುಗಳು ಮೀರುತ್ತಿರಲಿಲ್ಲ, ಅಜ್ಜ ಹೇಳಿದ ವಾಕ್ಯವೇ ಕೊನೆಯದಾಗಿತ್ತು. ಹಾಗಾಗಿ ಈ ಭಾಗದ ಜನರು ಅಪಾರ ನಂಬಿಕೆ ಇಟ್ಟಿದ್ದರು. ಅವರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಆಗಮಿಸಿ ಅಜ್ಜನ ಪಾರ್ಥಿವ ಶರೀರದ ಮುಂದೆ ಆಕ್ರಂದನ ಮುಗಿಲು ಮುಟ್ಟಿತು.

ಮಹಾದೇವ ಅಜ್ಜಾ ಅವರು 1968ರಲ್ಲಿ ರಾಮು ಚೌಗಲೆ ಎಂಬುವರಿಗೆ ಮೂರುವರೆ ತಿಂಗಳು ಆದ ಮೇಲೆ ಭೂಮಿ ಅಳ್ಳಾಡತೈತಿ ನೋಡ ಎಂದು ಹೇಳಿದ್ದ ಅದೇ ರೀತಿ ಭೂಕಂಪನವಾಯಿತು. 1983ರಲ್ಲಿ ದಂಡೆಗೋಳ ಮಹಾದೇವ ಎಂಬಾತ ರಥಯ ಬಾವಿ ತೋಡುತ್ತಿದ್ದ ಆದರೆ, ನೀರಿನ ಸುಳಿಹು ಸಿಕ್ಕಿರಲಿಲ್ಲ, ನಂತರ ಮಹಾದೇವ ಅಜ್ಜನಿಗೆ ಭೇಟಿ ನೀಡಿ ವಿವರಿಸಿದ್ದಾನೆ. ಮರುದಿನ ಅಜ್ಜಾ ಬಾವಿಗೆ ಬಂದಿದ್ದು, ಮೇಲಿನಿಂದ ಬಾವಿಯೊಳಗೆ ಮೂರು ಕಲ್ಲು ಎಸೆದು ಇಲ್ಲಿ ನೀರಿನ ಝರಿ ಇದೆ ನಿಮ್ಮ ಕಾರ್ಯ ಮುಂದುವರಿಸಿ ಎಂದಾಗ ಒಂದು ಮೊಳ ಅಗೆಯುವಾಗ ಝರಿಗಳು ಚುಮ್ಮಿಸಿದ್ದು, ಎಲ್ಲರನ್ನು ಆಶ್ಚರ್ಯಚಕಿತಗೊಳಿಸಿತು.

ಅಲ್ಲದೇ ಮತ್ತೊಬ್ಬ ಭಕ್ತನು ಕೆಮ್ಮು ಕಡಿಮೆ ಆಗಿರಲಿಲ್ಲ, ಎಲ್ಲ ಆಸ್ಪತ್ರೆಗಳು ಸುತ್ತಾಡಿ ಹಣ ಸುರಿದರೂ ಕಡಿಮೆ ಆಗಲಿಲ್ಲ, ನಂತರ ಅಜ್ಜನಿಗೆ ವಿಷಯ ತಿಳಿಸಿದ್ದಾಗ ಅಜ್ಜ ಅವರು ಎರಡು ಭಜ್ಜಿ ತಿನ್ನಿಸಿದಾಗ ಕೆಲವೇ ಸಮಯದಲ್ಲಿ ಕೆಮ್ಮು ಮಾಯವಾಯಿತು. ಲಾಕ್‌ಡೌನ್ ಸಮಯದಲ್ಲೂ ಶ್ರೀ ಗಂಗಾದೇವಿ ಜಾತ್ರೆಯು ನಡೆಯುತ್ತದೆ ಎಂದು ಹೇಳಿದಾಗ ಜಾತ್ರೆಯು ಸುಗಮವಾಗಿ ನಡೆಯಿತು. ಮಹಾದೇವ ಅಜ್ಜನವರ ಪವಾಡಗಳು ಹತ್ತು ಹಲವು ನಡೆದಿವೆ.

ಅಂತಿಮಯಾತ್ರೆಯಲ್ಲಿ ನಂದಿಕುರಳಿಯ ಪಂಚಲಿಂಗೇಶ್ವರ ಮಠದ ವೀರಭದ್ರೇಶ್ವರ ಸ್ವಾಮೀಜಿ, ಸವದತ್ತಿಯ ಓಂಕಾರ ಆಶ್ರಮ ಮಠದ ಭ್ರಮರಾಂಭಿಕಾದೇವಿಯವರು, ಹಾಗೂ ಸಹಸ್ರಾರು ಭಕ್ತಾಧಿಗಳು ಭಾಗವಹಿಸಿದ್ದರು.

ವಸಂತ ಗಾನಲಹರಿಗೆ ಜೋಶಿ ಚಾಲನೆ | ವಾದ್ಯಗಳ ನಿನಾದ-ಮಧುರ ಗಾನ

ಧಾರವಾಡ ಸಂಗೀತ ಪರಂಪರೆ ಜೀವಂತ

ಧಾರವಾಡ: ಸಾಂಸ್ಕೃತಿಕ ನಗರಿ, ವಿದ್ಯಾಕಾಶಿ ಹಾಗೂ ಸಂಗೀತದ ತವರೂರಾದ ಧಾರವಾಡದಲ್ಲಿ ಮತ್ತೊಮ್ಮೆ ಸ್ವರಲೋಕದ ಮಧುರ ನಿನಾದ ಮತ್ತು ಕಂಚಿನ ಕಂಠದ ಮೊಳಗಿದೆ.



ಸತ್ತೂರಿನ ಡಾ.ಡಿ.ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ಶನಿವಾರ ನಡೆದ 'ವಸಂತ ಗಾನಲಹರಿ' ರಾಷ್ಟ್ರೀಯ ಸಂಗೀತೋತ್ಸವ ಶಾಸ್ತ್ರೀಯ ಸಂಗೀತದ ಪ್ರೇಮಿಗಳಿಗೆ ರಸದೌತಣ ನೀಡಿತು. ದೇಶದ ವಿವಿಧೆಡೆಯಿಂದ ಆಗಮಿಸಿದ್ದ ದಿಗ್ಗಜ ಕಲಾವಿದರ ವಾದ್ಯ ನಿನಾದ ಮತ್ತು ಕಂಚಿನ ಕಂಠದ ಮಧುರ ಗಾಯನಕ್ಕೆ ಕಲಾಕ್ಷೇತ್ರ ಸಾಕ್ಷಿಯಾಯಿತು. ಈ ಪ್ರತಿಷ್ಠಿತ ರಾಷ್ಟ್ರೀಯ ಸಂಗೀತೋತ್ಸವಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಸಚಿವ ಪ್ರಹ್ಲಾದ ಜೋಶಿ, ಧಾರವಾಡದ ಮಣ್ಣು ಮತ್ತು ಸಂಗೀತಕ್ಕಿರುವ ಅವಿನಾಭಾವ ಸಂಬಂಧ ಸ್ಮರಿಸಿ, ಧಾರವಾಡ ಸಂಗೀತ ಜೀವಂತಿಕೆ ಕೊಂಡಾಡಿದರು. ಧಾರವಾಡ ಕೇವಲ ವಿದ್ಯಾಕಾಶಿಯಲ್ಲ, ಇದು ಸಂಗೀತ ದಿಗ್ಗಜರನ್ನು ದೇಶಕ್ಕೆ ನೀಡಿದ ಪವಿತ್ರ ಭೂಮಿ. ಪಂ.ಭೀಮಸೇನ್ ಜೋಶಿ, ಗಂಗೂಬಾಯಿ ಹಾನಗಲ್, ಮಲ್ಲಿಕಾರ್ಜುನ ಮನ್ಸೂರ್ ಅಂತಹ ಚೇತನಗಳು ನಡೆದಾಡಿದ ಈ ನೆಲದಲ್ಲಿ ಸಂಗೀತಕ್ಕೆ ಸದಾ ವಿಶಿಷ್ಟ ಗೌರವವಿದೆ ಎಂದರು.

ಇಂತಹ ರಾಷ್ಟ್ರೀಯ ಸಂಗೀತೋತ್ಸವಗಳು ನಮ್ಮ ಸಾಂಪ್ರದಾಯಿಕ ಶಾಸ್ತ್ರೀಯ ಸಂಗೀತದ ಪರಂಪರೆ ಮುಂದಿನ ಪೀಳಿಗೆಗೆ ದಾಟಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಜೋಶಿ ಶ್ಲಾಘಿಸಿದರು. ಇಂತಹ ಉತ್ಸವಗಳು ನಿರಂತರವಾಗಿ ನಡೆಯುವ ಮೂಲಕ ಯುವ ಕಲಾ ಪ್ರತಿಭೆಗಳಿಗೆ ಸೂಕ್ತ ವೇದಿಕೆ ಸಿಗುವಂತಾಗಲಿ ಎಂದು ಸಚಿವ ಪ್ರಹ್ಲಾದ ಜೋಶಿ ಆಶಿಸಿದರು.

ಪ್ರೇಕ್ಷಕರು ಮಂತ್ರಮುಗ್ಧ: ನಂತರ ಆರಂಭವಾದ ಸಾಂಸ್ಕೃತಿಕ ಸೌರಭ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. ಕಲಾಕ್ಷೇತ್ರದ ವೇದಿಕೆಯಲ್ಲಿ ಮೂಡಿಬಂದ ಸ್ವರ ಮತ್ತು ಲಯದ ಜುಗಲ್ಬಂದಿ ನೆರೆದಿದ್ದ ಶ್ರೋತೃಗಳನ್ನು ರಂಜಿಸಿತು.

ವಾದ್ಯ ಸಂಗೀತದ ಸಮ್ಮೋಹನ: ಪಿಟೀಲು, ಸಿತಾರ್ ಮತ್ತು ತಬಲಾಗಳ ನಾದವೈಭವ ಕಿವಿಗಳಿಗೆ ಹಬ್ಬದಂತಿತ್ತು. ಕಲಾವಿದರ ಬೆರಳುಗಳ ಜಾದೂಗೆ ವಾದ್ಯಗಳಿಂದ ಹೊರಹೊಮ್ಮಿದ ನಾದಲಹರಿ ಸಭಾಂಗಣದಲ್ಲಿ ಶಾಂತ ಹಾಗೂ ದೈವಿಕ ವಾತಾವರಣ ಸೃಷ್ಟಿಸಿತು.

ಕಂಚಿನ ಕಂಠದ ಮಧುರ ಗಾಯನ: ರಾಷ್ಟ್ರೀಯ ಮಟ್ಟದ ಖ್ಯಾತ ಗಾಯಕರ ಕಂಚಿನ ಕಂಠದಿಂದ ಮೂಡಿ ಬಂದ ರಾಗಗಳು ಕಲಾಕ್ಷೇತ್ರದಲ್ಲಿ ಅನುರಣಿಸಿದವು. ಶಾಸ್ತ್ರೀಯ ಗಾಯನದ ಆಲಾಪನೆ, ತಾನ್‌ಗಳ ವೈವಿಧ್ಯತೆ, ಭಾವಪೂರ್ಣ ಪ್ರಸ್ತುತಿಗೆ ಸಂಗೀತ ಪ್ರೇಕ್ಷಕರು 'ವಾಹ್.. ಭೇಶ್..' ಎಂದು ತಲೆದೂಗಿದರು.

ವೀಕೆಂಡ್ ಸಂಜೆಯಾಗಿದ್ದರಿಂದ ಧಾರವಾಡದ ಮೂಲೆ ಮೂಲೆಗಳಿಂದ ಸಂಗೀತಾಸಕ್ತರು ಡಾ.ಡಿ.ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರಕ್ಕೆ ಹರಿದು ಬಂದಿದ್ದರು. ಸಭಾಂಗಣ ಸಂಪೂರ್ಣ ಭರ್ತಿಯಾಗಿದ್ದು, ಕಲಾವಿದರ ಪ್ರತಿ ಪ್ರಸ್ತುತಿಗೂ ಚಪ್ಪಾಳೆಯ ಸುರಿಮಳೆಯ ಗೌರವ ಸಮರ್ಪಣೆಯಾಯಿತು. ಕಾರ್ಯಕ್ರಮದಲ್ಲಿ ಶಾಸಕ ಅರವಿಂದ ಬೆಲ್ಲದ, ಗೋವಿಂದ ಜೋಶಿ, ಎಂ.ಆರ್. ಪಾಟೀಲ್, ಮೇಯರ್ ಜ್ಯೋತಿ ಪಾಟೀಲ್, ಪಾಲಿಕೆ ಸಭಾನಾಯಕ ಈರೇಶ್ ಅಂಚಟಗೇರಿ, ಸವಿತಾ ಅಮರಶೆಟ್ಟಿ, ಸಂದೀಪ ಭೋದಿಹಾಳ, ಶಂಕರ ಕುಂಬಿ ಇತರರು ಇದ್ದರು.

ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮ

ವಿವೇಕಾನಂದರ ಆದರ್ಶ ಅಳವಡಿಸಿಕೊಳ್ಳಿ

ರಾಯಬಾಗ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ರಾಯಬಾಗ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ ಅಥಣಿ ಹಾಗೂ ಮಲಗೌಡಾ ಪದವಿಪೂರ್ವ ಮಹಾವಿದ್ಯಾಲಯ(ಕೆ.ಎಲ್.ಇ) ಇವರ ಸಂಯುಕ್ತಾಶ್ರಯದಲ್ಲಿ ತಂಬಾಕು ವಿರೋಧ ದಿನಾಚರಣೆ ಆಚರಿಸಲಾಯಿತು.



ಸಂಪನ್ಮೂಲ ವ್ಯಕ್ತಿಗಳಾಗಿ ರಾಜಯೋಗಿನಿ ಬ್ರಹ್ಮಕುಮಾರಿ ಪುಷ್ಪಾ ಅಕ್ಕನವರು ಮಾತನಾಡಿ, ಮನಸ್ಸು ಹತೋಟಿಯಲ್ಲಿಟ್ಟುಕೊಂಡರೇ ಜಗತ್ತನ್ನೆಗೆಲ್ಲಬಹುದು. ಸ್ವಾಮಿ ವಿವೇಕಾನಂದರ ಜೀವನ ಶೈಲಿ ಅಳವಡಿಸಿಕೊಂಡಿದ್ದೆ ಆದರೆ, ಆದರ್ಶ ವಿದ್ಯಾರ್ಥಿ ಆಗಬಹುದೆಂದು ಅಭಿಪ್ರಾಯಪಟ್ಟರು. ಅಥಣಿ ವ್ಯಾಪ್ತಿಯ ಧರ್ಮಸ್ಥಳ ಯೋಜನೆಯ ನಿರ್ದೇಶಕಿಯರಾದ ಲೀಲಾವತಿರವರು ಜೀವನದಲ್ಲಿ ಮಾನವೀಯ ಮೌಲ್ಯಗಳ ರೂಢಿಸಿಕೊಂಡು ಸಾಧಕರಾಗಬೇಕೆಂದು ಶುಭಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಉಪನ್ಯಾಸಕರಾದ ಆರ್.ಎಸ್. ಬುಗಡಿಕಟ್ಟಿರವರು ವಹಿಸಿದ್ದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ದೀಪಕ ಪಾಟೀಲ, ವಸಂತ ಹೊಸಮನಿ, ವಿದ್ಯಾಪೂಜಾರಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ರಾಯಬಾಗದ ಕ್ಷೇತ್ರ ಯೋಜನಾಧಿಕಾರಿಗಳಾದ ಹರೀಶ್ ಪಾವಸ್ಕರರವರು ಭಾಗವಹಿಸಿದ್ದರು.

ಸ್ವಾಗತವನ್ನು ಉಪನ್ಯಾಸಕರಾದ ಅಭಿನಂದನ್ ಜಿ.ಹಂಚಿರವರು ನಡೆಸಿದರು. ವಲಯ ಮೇಲ್ವಿಚಾರಕರಾದ ವೆಂಕಟೇಶ ಗೌಡ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿ ಕಾರ್ಯಕ್ರಮ ನಿರ್ವಹಿಸಿದರು. ಸೇವಾಪ್ರತಿನಿಧಿ ಜ್ಯೋತಿರವರು ಧನ್ಯವಾದ ನಡೆಸಿದರು. ಕಾಲೇಜಿನ ಶಿಕ್ಷಕರು ಹಾಗೂ 180 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾರ್ಯಕ್ರಮದ ಪ್ರಯೋಜನ ಪಡೆದರು.

ಮತದಾರರ ಪರಿಷ್ಕರಣೆಯಿಂದ ಮತದಾನದ ಹಕ್ಕು ಕಡಿತ: ಕಸ್ತೂರಿ ಹಳ್ಳದ

ನವಲಗುಂದ: ಎಸ್.ಐ.ಆರ್ ನೆಪದಲ್ಲಿ ದೇಶವ್ಯಾಪಿ ಕೋಟ್ಯಂತರ ಅಮಾಯಕ ಜನರ ಮತದಾನದ ಹಕ್ಕನ್ನು ಕಸಿಯಲು ಕೇಂದ್ರ ಚುನಾವಣಾ ಆಯೋಗ ಹೊರಟಿದೆ ಎಂದು ಮಹಿಳಾ ಸಾಂತ್ವನ ಕೇಂದ್ರದ ಅಧ್ಯಕ್ಷೆ ಕಸ್ತೂರಿ ಹಳ್ಳದ ಅಭಿಪ್ರಾಯ ವ್ಯಕ್ತಪಡಿಸಿದರು.



ಈ ಕುರಿತು ಎಸ್.ಐ.ಆರ್ ವಿರೋಧಿ ಜಾತ್ಯಾತೀತ ಪಕ್ಷಗಳ ಜನಪರ ಸಂಘಟನೆಗಳ ಒಕ್ಕೂಟ ನವಲಗುಂದ ಘಟಕದ ವತಿಯಿಂದ ತಹಶೀಲ್ದಾರ ಸುಧೀರ ಸಾಹುಕಾರ ಅವರ ಮೂಲಕ ಮುಖ್ಯ ಚುನಾವಣಾ ಆಯುಕ್ತರಿಗೆ ಮನವಿ ನೀಡಿ ಮಾತನಾಡಿದ ಅವರು, ಈಗಾಗಲೇ 13 ರಾಜ್ಯಗಳಲ್ಲಿ ಎಸ್.ಐ.ಆರ್ ಪರಿಷ್ಕರಣೆ ನಡೆಸಿ 6.5 ಕೋಟಿ ಜನರನ್ನು ಮತದಾರರ ಪಟ್ಟಿಯಿಂದ ಹೊರ ಹಾಕಲಾಗಿದ್ದು ಈ ಕೂಡಲೇ ಕರ್ನಾಟಕದಲ್ಲಿ ಈ ಪ್ರಕ್ರಿಯೆ ಸ್ಥಗಿತಗೊಳಿಸಿ ಜನಸ್ನೇಹಿ ಎಸ್.ಐ.ಆರ್ ಪ್ರಕ್ರಿಯೆ ಆರಂಭಿಸಬೇಕೆಂದು ಆಗ್ರಹ ಮಾಡಿದರು.

ಮಹಿಳಾ ಸಾಂತ್ವನ ಕೇಂದ್ರದ ಕಾರ್ಯಕರ್ತೆ ಸವಿತಾ ಸರನಾಡಗೌಡರ ಮಾತನಾಡಿ, ಸದ್ಯ ನಡೆಯುತ್ತಿರುವಂತಹ ಎಸ್.ಐ.ಆರ್ ಪ್ರಕ್ರಿಯೆಗೆ ನಮ್ಮದು ಯಾವುದೇ ರೀತಿಯ ವಿರೋಧವಿಲ್ಲ, ಮತದಾರರ ತೀವ್ರ ಪರಿಷ್ಕರಣೆ ವೇಳೆ ಜನರನ್ನೆಲ್ಲಾ ಆರೋಪಿಗಳಂತೆ ಕಾಣುವ, ಅಮಾಯ ಜನರನ್ನು ಪರದಾಡುವಂತೆ ಮಾಡುವ ಮೂಲಕ ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕುವ ಕೆಲಸ ಜನ ವಿರೋಧಿಯ ಕೆಲಸವಾಗಿದೆ ಎಂದರು.

ಮಹಿಳಾ ಸಾಂತ್ವನ ಕೇಂದ್ರದ ಕಾರ್ಯಕರ್ತೆ ಕಾವೇರಿ ಗುಡಿಸಾಗರ ಮಾತನಾಡಿ, ಎಸ್.ಐ.ಆರ್ ಪ್ರಕ್ರಿಯೆಯಲ್ಲಿ ಮತದಾರರ ಮೂಲ ಹುಡುಕುವಂತಹ ಪ್ರಯತ್ನ ಮಾಡುತ್ತಿದ್ದಾರೆ. ಮೊದಲಿಗೆ ಪ್ರತಿಯೊಬ್ಬರೂ ತಮ್ಮ ಹೆಸರು 2025ರ ಮತದಾರರ ಪಟ್ಟಿಯಲ್ಲಿ ಮಾತ್ರವಲ್ಲ, 2002ರ ಮತದಾರರ ಪಟ್ಟಿಯಲ್ಲೂ ಇತ್ತು ಅಥವಾ ತನ್ನ ತಂದೆ ತಾಯಿಯರು ಇದ್ದರು ಎಂದು ನಿರೂಪಿಸಬೇಕು. ಅದಾಗದಿದ್ದರೆ ಅವರು ಕೇಳುವ ದಸ್ತಾವೇಜನ್ನು ತೋರಿಸಬೇಕು. ಆ ದಸ್ತಾವೇಜುಗಳಲ್ಲಿ ಸಣ್ಣಪುಟ್ಟ ವ್ಯತ್ಯಾಸ ಇದ್ದರೂ ಮತದಾನದ ಹಕ್ಕನ್ನು ನಿರಾಕರಿಸಲಾಗಿದ್ದು ಇದು ಅಮಾಯಕರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಾಮಾಜಿಕ ಕಾರ್ಯಕರ್ತೆ ಗಿರಿಜಾ ಹೂಗಾರ ಮಾತನಾಡಿ, ಕಾಗದದ ಗದ್ದಲಗಳಲ್ಲಿ ಇದುವರೆಗೆ ಅತಿಹೆಚ್ಚು ಡಿಲೀಟ್ ಆಗಿರುವವರು ವಿವಾಹಿತ ಮಹಿಳೆಯರು, ಅಲೆಮಾರಿ ಆದಿವಾಸಿ ದಲಿತ ಸಮುದಾಯಗಳ, ಗ್ರಾಮೀಣ ಭಾಗದ ಬಡವರು ಹಾಗೂ ಅಲ್ಪಸಂಖ್ಯಾತರು, ಈ ಎಸ್.ಐ.ಆರ್‌ನ ಅಸಲಿ ಉದ್ದೇಶ ನುಸುಳುಕೋರರನ್ನು ಪತ್ತೆ ಹಚ್ಚುವುದಲ್ಲ, ಅದು ಚುನಾವಣಾ ಆಯೋಗದ ಕೆಲಸವೂ ಅಲ್ಲ, ಇಲ್ಲಿ ಅಸಲಿ ಉದ್ದೇಶ ಬೇರೆಯದ್ದೇ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶ್ರುತಿ ಬೆಂಡಿಗೇರಿ, ಮಾಬುಸಾಬ ಯರಗುಪ್ಪಿ, ಮಲ್ಲಿಕಾರ್ಜುನಸ್ವಾಮಿ ಮಠಪತಿ, ಶಿವಲಿಂಗಯ್ಯ ಹಿರೇಮಠ, ಬಸವರಾಜ ಮಲ್ಲದಾಸರ ಉಪಸ್ಥಿತರಿದ್ದರು.

ಮೂಲದಲ್ಲೇ 4 ವಿಧದ ತ್ಯಾಜ್ಯ ಪ್ರತ್ಯೇಕಿಸಿ | ಪಾಲಿಕೆ ಆಯುಕ್ತರ ಖಡಕ್ ಆದೇಶ

ನಿಯಮ ಉಲ್ಲಂಘಿಸಿದರೆ ಬೀಳಲಿದೆ ದಂಡದ ಬಿಸಿ!

ಕಲಬುರಗಿ: ನಗರದಲ್ಲಿ ಪರಿಸರ ಸಂರಕ್ಷಣೆ, ಸ್ವಚ್ಛತೆ ಹಾಗೂ ಘನತ್ಯಾಜ್ಯ ನಿಯಮಗಳ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಸಾರ್ವಜನಿಕರು ಕಡ್ಡಾಯವಾಗಿ ತಮ್ಮ ಮನೆಗಳ ಕಸವನ್ನು ಮೂಲದಲ್ಲೇ ನಾಲ್ಕು ಪ್ರತ್ಯೇಕ ವಿಭಾಗಗಳಾಗಿ ವಿಂಗಡಿಸಿ ಪಾಲಿಕೆಯ ಕಸದ ವಾಹನಗಳಿಗೆ ನೀಡಬೇಕು ಎಂದು ಮಹಾನಗರ ಪಾಲಿಕೆ ಆಯುಕ್ತರು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ.



ನಾಲ್ಕು ಭಾಗಗಳಾಗಿ ಪ್ರತ್ಯೇಕಿಸದ ಮಿಶ್ರ ಕಸವನ್ನು ಪಾಲಿಕೆಯ ವಾಹನಗಳು ಯಾವುದೇ ಕಾರಣಕ್ಕೂ ಸ್ವೀಕರಿಸುವುದಿಲ್ಲ, ನಿಯಮ ಉಲ್ಲಂಘಿಸಿ ಎಲ್ಲೆಂದರಲ್ಲಿ ಕಸ ಎಸೆಯುವವರ ಮತ್ತು ಮಿಶ್ರ ಕಸ ನೀಡುವವರ ವಿರುದ್ಧ ಕಾನೂನು ರೀತ್ಯಾ ದಂಡ ವಿಧಿಸಲಾಗುವುದು ಎಂದು ಆಯುಕ್ತರು ಎಚ್ಚರಿಸಿದ್ದಾರೆ.

ಸಾರ್ವಜನಿಕರು ತಮ್ಮ ಮನೆ ಹಾಗೂ ವಾಣಿಜ್ಯ ಮಳಿಗೆಗಳ ತ್ಯಾಜ್ಯವನ್ನು ಕೆಳಕಂಡಂತೆ ನಾಲ್ಕು ಬಣ್ಣದ ಬಕೆಟ್‌ಗಳಲ್ಲಿ ಪ್ರತ್ಯೇಕಿಸಬೇಕಾಗಿದೆ.

ಹಸಿ ಕಸ (ಹಸಿರು ಬಕೆಟ್): ನೈಸರ್ಗಿಕವಾಗಿ ಕೊಳೆಯುವ ಮತ್ತು ಗೊಬ್ಬರ ಮಾಡಬಹುದಾದ ಅಡುಗೆಮನೆ ಹಾಗೂ ತೋಟದ ತ್ಯಾಜ್ಯವನ್ನು ಈ ಬಕೆಟ್‌ಗೆ ಹಾಕಬೇಕು. ಅಡುಗೆ ಮನೆಯ ತ್ಯಾಜ್ಯ, ತರಕಾರಿ, ಹಣ್ಣುಗಳ ಸಿಪ್ಪೆಗಳು, ಉಳಿದ ಆಹಾರ ಮತ್ತು ಬಳಸಿ ಉಳಿದ ಟೀ ಅಥವಾ ಕಾಫಿ ಪುಡಿ ಇದರ ವ್ಯಾಪ್ತಿಗೆ ಬರುತ್ತವೆ.

ಒಣ ಕಸ (ನೀಲಿ ಬಕೆಟ್): ಕೊಳೆಯದ, ಆದರೆ ಮರುಬಳಕೆಗೆ ಯೋಗ್ಯವಾಗಿರುವ ಸ್ವಚ್ಛವಾದ ವಸ್ತುಗಳನ್ನು ಇದಕ್ಕೆ ಸೇರಿಸಬೇಕು. ಪ್ಲಾಸ್ಟಿಕ್ ವಸ್ತುಗಳು, ಕಾಗದ, ರಟ್ಟಿನ ಬಾಕ್ಸ್‌ಗಳು, ಲೋಹದ ವಸ್ತುಗಳು, ಗಾಜಿನ ಬಾಟಲಿಗಳು, ಹಳೆಯ ಬಟ್ಟೆ ಮತ್ತು ರಬ್ಬರ್ ವಸ್ತುಗಳನ್ನು ಈ ಬಕೆಟ್‌ಗೆ ಹಾಕಬೇಕು.

ನೈರ್ಮಲ್ಯ ತ್ಯಾಜ್ಯ (ಕೆಂಪು ಬಕೆಟ್ / ಪೇಪರ್‌ನಲ್ಲಿ ಸುತ್ತಿರುವುದು): ಆರೋಗ್ಯದ ದೃಷ್ಟಿಯಿಂದ ಅತ್ಯಂತ ಜಾಗರೂಕತೆಯಿಂದ ವಿಲೇವಾರಿ ಮಾಡಬೇಕಾದ ವೈಯಕ್ತಿಕ ತ್ಯಾಜ್ಯಗಳನ್ನು ಕಡ್ಡಾಯವಾಗಿ ದಿನಪತ್ರಿಕೆಯಲ್ಲಿ ಸುರಕ್ಷಿತವಾಗಿ ಸುತ್ತಿ, ಅದರ ಮೇಲೆ ಕೆಂಪು ಬಣ್ಣದ ಗುರುತು ಮಾಡಿ ನೀಡಬೇಕು. ಬಳಸಿದ ಡೈಪರ್‌ಗಳು, ಸ್ಯಾನಿಟರಿ ಟವಲ್‌ಗಳು, ನ್ಯಾಪ್‌ಕಿನ್‌ಗಳು ಹಾಗೂ ಟ್ಯಾಂಪೂನ್‌ಗಳನ್ನು ಈ ರೀತಿ ವಿಲೇವಾರಿ ಮಾಡಬೇಕು.

ವಿಶೇಷ ಕಾಳಜಿ ತ್ಯಾಜ್ಯ (ಕಪ್ಪು ಬಕೆಟ್): ರಾಸಾಯನಿಕ ಅಥವಾ ತಾಂತ್ರಿಕ ಕಾರಣಗಳಿಂದ ಪರಿಸರಕ್ಕೆ ತೀವ್ರ ಹಾನಿ ಉಂಟುಮಾಡುವ ಅಪಾಯಕಾರಿ ತ್ಯಾಜ್ಯಗಳನ್ನು ಈ ವಿಭಾಗಕ್ಕೆ ಸೇರಿಸಬೇಕು. ಬಣ್ಣದ ಡಬ್ಬಗಳು, ಕೀಟನಾಶಕಗಳ ಬಾಟಲಿಗಳು, ಸಿಎಫ್‌ಎಲ್ ಬಲ್ಬ್‌ಗಳು, ಟ್ಯೂಬ್‌ಲೈಟ್‌ಗಳು, ಹಳೆಯ ಬ್ಯಾಟರಿಗಳು ಮತ್ತು ಗೃಹ ಬಳಕೆಯ ವೈದ್ಯಕೀಯ ತ್ಯಾಜ್ಯಗಳನ್ನು ಕಪ್ಪು ಬಕೆಟ್‌ನಲ್ಲಿ ನೀಡಬೇಕು.

ನಗರವನ್ನು ಸ್ವಚ್ಛ ಹಾಗೂ ಸುಂದರವಾಗಿಸಲು ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿದೆ. ಪಾಲಿಕೆಯ ಈ ಸ್ವಚ್ಛತಾ ಅಭಿಯಾನಕ್ಕೆ ನಾಗರಿಕರು ಕೈಜೋಡಿಸಬೇಕು ಮತ್ತು ದಂಡದ ಕ್ರಮದಿಂದ ಪಾರಾಗಲು ಕಡ್ಡಾಯವಾಗಿ ಕಸ ವಿಂಗಡಣೆ ಮಾಡಬೇಕು ಎಂದು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಸೊಸೈಟಿ, ತುಮಕೂರು

ಜಿಲ್ಲಾ ಯೋಜನಾ ನಿರ್ವಹಣಾ ಘಟಕ,
ಎನ್.ಆರ್.ಹೆಚ್.ಎಂ. ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ ಆವರಣ,
ತುಮಕೂರು, ಇ-ಮೇಲ್ : dpmotumkur@gmail.com, dhotumkur@gmail.com

ಸಂಖ್ಯೆ : ಡಿ.ಪಿ.ಎಂ.ಯು./ಎನ್.ಹೆಚ್.ಎಂ./05/2010–11
ದಿನಾಂಕ : 29–05–2026

ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲೆಯ ಎಲ್ಲಾ Non 24X7 PHC, UPHC, 4X7 PHC, CHC, MCH, FRU, DH, NAMMA Clinic, TB, Centre & SC-AAM ಗಳ ಜೈವಿಕ ವೈದ್ಯಕೀಯ ತ್ಯಾಜ್ಯ ಕೆ.ಎಸ್.ಪಿ.ಸಿ.ಬಿ. ನಿಯಮದನ್ವಯ ನಿರ್ವಹಣೆ ಮಾಡಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

ಇ–ಪ್ರೋಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ಈ ಕೆಳಗಿನಂತಿದೆ.

ವಿವರ : 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಜಾಲ್ತಿಯಲ್ಲಿರುತ್ತದೆ ದಿನಾಂಕ : 26–05–2026, 2) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 12–06–2026 ರ ಸಂಜೆ 4.00 ಗಂಟೆಗೆ, 3) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : 15–06–2026 ರ ಬೆಳಿಗ್ಗೆ 11.00 ಗಂಟೆಗೆ, 4) ಟೆಂಡರ್ ತೆರೆಯುವ ಸ್ಥಳ ಮತ್ತು ಪ್ರಾಧಿಕಾರ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ತುಮಕೂರು, 5) ಜೈವಿಕ ವೈದ್ಯಕೀಯ ತ್ಯಾಜ್ಯ ಕೆ.ಎಸ್.ಪಿ.ಸಿ.ಬಿ. ನಿಯಮದನ್ವಯ ನಿರ್ವಹಣೆ ಟೆಂಡರ್ ಮೊತ್ತ ಮತ್ತು ಇ.ಎಂ.ಡಿ. ಮೊತ್ತ : ರೂ. 84,68,400/–, ಇ.ಎಂ.ಡಿ. ಮೊತ್ತ : ರೂ. 2,12,000/– ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ನಮೂದಿಸುವುದು.

ಹೆಚ್ಚಿನ ಮಾಹಿತಿಯನ್ನು ಜಿಲ್ಲಾ ಯೋಜನಾ ನಿರ್ವಹಣಾ ಘಟಕ, ತುಮಕೂರು ಇಲ್ಲಿ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ. ಮೊಬೈಲ್ ಸಂಖ್ಯೆ : 94498 43123.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.

ಡಿಐಪಿಆರ್/ತುಮಕೂರು/20/ಮಣಿಪಾಲ್/2026–27

ಕರ್ನಾಟಕ ಸರ್ಕಾರ
ತಾಲೂಕ ಪಂಚಾಯತಿ ಕಾರಟಗಿ

ಸಂ: ತಾಪಂಕಾ/ಸಿಬ್ಬಂದಿ/ ಹೊ.ಗು.ಸಿ/ಸಿ.ಆರ್– /2026–27/171
ದಿನಾಂಕ: 30–05–2026

ಟೆಂಡರ್ ಪ್ರಕಟಣೆ

ವಿಷಯ:– 2026–27ನೇ ಸಾಲಿಗಾಗಿ ತಾಲೂಕಾ ಪಂಚಾಯತ ಕಾರಟಗಿ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯುವ ಬಗ್ಗೆ.

2026–27ನೇ ಸಾಲಿಗಾಗಿ ತಾಲೂಕಾ ಪಂಚಾಯತ ಕಾರಟಗಿ ಕಛೇರಿಗೆ ಹೊರಗುತ್ತಿಗೆ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರಕ್ಯೂರ್‌ಮೆಂಟ್ ಮೂಲಕ ಪಡೆಯಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್‌ದಾರರು ವಿವರಗಳನ್ನು https://kppp.karnataka.gov.in/kppp ನಲ್ಲಿ ಪಡೆದು ಅಪ್‌ಲೋಡ್ ಮಾಡಬಹುದಾಗಿದೆ.

ವಿವರ: ಟೆಂಡರ್ ಪ್ರಾಧಿಕಾರ ಹಾಗೂ ಪ್ರಕಟಣಾ ವಿವರ:
1 ಟೆಂಡರ್ ಕರೆದ ಪ್ರಾಧಿಕಾರದ ಹೆಸರು ಮತ್ತು ವಿಳಾಸ: ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕಾ ಪಂಚಾಯತ ಕಾರಟಗಿ 2 ಟೆಂಡರ್ ಸಲ್ಲಿಸಲು ಆರಂಭ ದಿನಾಂಕ: 01–06–2026 3 ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ : 11–06–2026 4 ತಾಂತ್ರೀಕ ಬಿಡ್ ತೆರೆಯುವ ದಿನಾಂಕ: 12–06–2026 5 ಆರ್ಥಿಕ ಬಿಡ್ ತೆರೆಯುವ ದಿನಾಂಕ: 15–06–2026 6 ಟೆಂಡರ್ ತೆರೆಯುವ ಸ್ಥಳ: ತಾಲೂಕಾ ಪಂಚಾಯತ ಕಾರ್ಯಾಲಯ ಕಾರಟಗಿ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕಾ ಪಂಚಾಯತ ಕಾರಟಗಿ.

ಡಿಐಪಿಆರ್/ಕೊಪ್ಪಳ/122/ಕೆಎಸ್‌ಎಂಸಿಎ/2026–27

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಗ್ರಾ.ಕು.ನೀ.&ನೈ. ವಿಭಾಗ,
ಪಂಚಾಯತ್ ಭವನ, 3ನೇ ಮಹಡಿ, ರಾಮನಗರ ವಿಭಾಗ,
ಬೆಂಗಳೂರು ದಕ್ಷಿಣ ಜಿಲ್ಲೆ – 562 159,
ಇಮೇಲ್ : eerdwsdrmgr2017@gmail.com

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ : 02/ಕಾ.ಅ./ಗ್ರಾ.ಕು.ನೀ.&ನೈ.ವಿ./ರಾ/ಸ.ಇಂ./1&3. ಜೆಇ/ಜೆಜೆಎಂ/364/2026–27 ದಿನಾಂಕ : 30–05–2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ ಜೆಜೆಎಂ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ, ಕನಕಪುರ ಮತ್ತು ಚನ್ನಪಟ್ಟಣ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

1) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 97.55 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 1,95,100/–, 2) ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ : ರೂ. 09.01 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 11,300/–, 3) ಕಾಲಾವಧಿ : 06 ತಿಂಗಳು, 4) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ : 15–06–2026 ರ ಸಂಜೆ 5.30 ಗಂಟೆಯವರೆಗೆ, 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 17–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ, 6) ಆರ್ಥಿಕ ಬಿಡ್ ತೆರೆಯುವ ದಿನಾಂಕ : 19–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ.

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದು ಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ : https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ರಾಮನಗರ ವಿಭಾಗ, ಬೆಂಗಳೂರು ದಕ್ಷಿಣ ಜಿಲ್ಲೆ.

ಡಿಐಪಿಆರ್/ರಾಮನಗರ/72/ಮಣಿಪಾಲ್/2026–27

ಪಟ್ಟಣ ಪಂಚಾಯತ ಕಾರ್ಯಾಲಯ ಶೇಡಬಾಳ

ಸಂಖ್ಯೆ:ಪಪಂಶೇ/ಲೋ.ಶಾ/ಇಪ್ರೋ–14/2026–27 ದಿನಾಂಕ: 01–06–2026

ಇ–ಪ್ರೋಕ್ಯುರಮೆಂಟ ಟೆಂಡರ ಪ್ರಕಟಣೆ

ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಶೇಡಬಾಳ ಇವರಿಂದ ರೂ. 146.00 ಕೇಂದ್ರ ಪುರಸ್ಕೃತ ಅಮೃತ 2.0 ಯೋಜನೆಯಡಿಯಲ್ಲಿ ಅಭಿವೃದ್ಧಿ ಮಾಡುವ 01 ಕಾಮಗಾರಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.kppp.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು. 1. ಟೆಂಡರ ಕುರಿತು ವಿವರಣೆಗಾಗಿ ಕೊನೆಯ ದಿನಾಂಕ 11–06–2026 5.00 ಘಂಟೆವರೆಗೆ. 2. ಟೆಂಡರಿನ ಮೊದಲನೆ ಸಭೆಯ (Pre-bid meeting) ದಿನಾಂಕ: 12–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ. 3. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 18–06–2026 ಅಪರಾಹ್ನ 4.00 ಘಂಟೆವರೆಗೆ. 4. ಟೆಂಡರಿನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 20–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ. 5. ಟೆಂಡರಿನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 23–06–2026 11.00 ಘಂಟೆ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ, ಕಚೇರಿಯಲ್ಲಿ.

ಸಹಿ/–(ಶ್ರೀ ಕೆ. ಕೆ. ಗಾವಡೆ) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಶೇಡಬಾಳ
ಸಹಿ/–ಶ್ರೀ. ಉತ್ಕರ್ಷ ಭರತೇಶ ಪಾಟೀಲ ಅಧ್ಯಕ್ಷರು ಪಟ್ಟಣ ಪಂಚಾಯತ ಶೇಡಬಾಳ

DIPR/BGM/RO-NO-345/KSMCA/2025-26

CHANGE OF NAME

I, MOHMED NERA KHADER SAHEB (Old Name) Resident of Basha Colony, 2d cross Post :Manki, Taluk : Honnavar, Dist : Uttara Kannada, Karnataka state, pin code : 581348, have changed my name as MOHMED MEERA SHAIKH affidavit Dtd.: 30-05-2026 sworn before notary S. G. Hegde.

CHANGE OF NAME

I, NOORAHMAD GAFFARSAB DURGADI (Old Name) Resident of Kasaba Galli Haliyal, have changed my father name as NOORAHMAD ABDULGAFFAR DURGADI (New Name) for all purposes, vide affidavit dated: 30/05/2026 before notary Santosh Ganapati Habbu.

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿಜಿಕೆ/ಪಿಬಿ–2,3/ಟೆಂಡರ್/2026–27/603
ದಿನಾಂಕ : 29–05–2026

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ & ದ್ವಿ-ಲಕೋಟೆ) ಕೆ.ಡಬ್ಲ್ಯೂ. 1, 2 & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2025–26 ನೇ ಸಾಲಿನ ವಿವಿಧ ಲೆಕ್ಕ ಶಿರ್ಷಿಕೆಗಳಡಿ ಮಂಜೂರಾದ ಅನುದಾನದ ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಜಮಖಂಡಿ, ಬೀಳಗಿ, ಬಾದಾಮಿ ಹಾಗೂ ತೇರದಾಳ ವಿಧಾನಸಭಾ ಮತ ಕ್ಷೇತ್ರದ ಗ್ರಾಮೀಣ ರಸ್ತೆ, ಸೇತುವೆ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 2 & 3 ರ ನಿಬಂಧನೆ ಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 1999 –2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ. : 25537, 25526, 25550, 25592, 25546, 25547, 22142/ಕರೆ–3, 26671, 22143/ಕರೆ–2, 22172/ಕರೆ–2, ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25588, 25541, ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25532, 25551, 25549, 18795/ಕರೆ–2, ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ : 25525, 25548.

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ. 10.00 ದಿಂದ 60.00 ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 18–06–2026 ರ ಸಂಜೆ 5.30 ಗಂಟೆವರೆಗೆ. 2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 20–06–2026 ರ ಬೆಳಿಗ್ಗೆ 11.00 ಗಂಟೆಯ ನಂತರ. 3) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : ತಾಂತ್ರಿಕ ಬಿಡ್ ಅನುಮೋದನೆ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ : https://kppp.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/69/ಮಣಿಪಾಲ್/2026–27

ಪೊಲೀಸ್ ಉಪ ಮಹಾನಿರೀಕ್ಷಕರು, ಈಶಾನ್ಯ ವಲಯ ಕಲಬುರಗಿ

ಜಿಲ್ಲಾ ಪೊಲೀಸ್ ಭವನ, ಜಿ.ಜಿ.ಹೆಚ್. ರೋಡ್, ಕಲಬುರಗಿ. ದೂ.08472–263605, Email: estnergba@ksp.gov.in

ಸಂ. STS/01/ NER/DRONE/2026–27 ದಿನಾಂಕ:29/05/2026.

ಟೆಂಡರ ಪ್ರಕಟಣೆ

ಪೊಲೀಸ್ ಇಲಾಖೆಗೆ ಅವಶ್ಯಕತೆಯಿರುವ SUPPLY AND MAINTENANCE OF UNMANNED AERIAL VEHICLE (DRONE) WITH ACCESSORIES ಗಳನ್ನು ಅವಶ್ಯಕವಿರುವ ಡ್ರೋಣ್ ಮತ್ತು ಅದರ ಸಾಧನ ಸಾಮಗ್ರಿಗಳನ್ನು ಖರೀದಿಸಲು ಅಳವಡಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ ಪ್ರಕಟಣೆ ಸಂಖ್ಯೆ ಟೆಂಡರ No:KSP/2025-26/IND0535/CALL-2, 2) ಟೆಂಡರ ಪ್ರಕಟಣೆ ದಿನಾಂಕ : 26.05.2026, 3) ಟೆಂಡರಗೆ ಸಂಬಧಿಸಿದ ಯಾವುದೇ ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ : 01.06.2026 at 17.00 hrs, 4) ಪ್ರಿ–ಬಿಡ್ ಮಿಟಿಂಗ್ ದಿನಾಂಕ : 02.06.2026 at 11.30 hrs, ಸ್ಥಳ ಪೊಲೀಸ್ ಭವನ ಕಲಬುರಗಿ 5) ಆನ್‌ಲೈನ್ ಟೆಂಡರ ಫಾರಂಗಳನ್ನು ಡೌನಲೋಡ್ ಮಾಡಿಕೊಂಡು, ಟೆಂಡರ ಅನ್ನು ಇ–Procurment portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ : 09.06.2026 at 17–30 hrs, 6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : 11–06–2026 at 11–00 hrs 7) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : 15.06.2026 at 11–00 hrs, 8) ಟೆಂಡರನ ಅಂದಾಜು ಮೊತ್ತ ರೂ. Rs. 100 Lakhs, 9 ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ.ಮೊತ್ತ ರೂ. Rs. 1,50,000/– 10) ವ್ಯವಹರಿಸ ಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ರಜಾ ದಿನಗಳನ್ನು ಹೊರತುಪಡಿಸಿ ಪೋಲೀಸ್ ಉಪ ಮಹಾ ನಿರೀಕ್ಷಕರು, ಈಶಾನ್ಯ ವಲಯ, ಕಲಬುರಗಿ Ph: 08472–263605.

ಸಹಿ/– ಪೊಲೀಸ್ ಉಪ ಮಹಾನಿರೀಕ್ಷಕರು
ಈಶಾನ್ಯ ವಲಯ ಕಲಬುರಗಿ ರವರ ಪರವಾಗಿ

ವಾ.ಸಾ.ಸಂ.ಇ.ಕಲಬುರಗಿ/172/ದೇಶಪಾಂಡೆ ಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/ಕೆಕೆಆರ್‌ಡಿಬಿ/2026–27/1084 ದಿನಾಂಕ:25.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https:kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/RD/WORK_INDENT36171 (General Category)	100.00
2)	PWD/2026-27/RD/WORK_INDENT36085 (General Category)	100.00
3)	PWD/2026-27/RD/WORK_INDENT36082 (General Category)	100.00
4)	PWD/2026-27/BR/WORK_INDENT35848 (General Category)	20.25
5)	PWD/2026-27/BD/WORK_INDENT36378	345.40
6)	PWD/2026-27/RD/WORK_INDENT35843	108.69
7)	PWD/2026-27/BD/WORK_INDENT36126	500.00
8)	PWD/2026-27/BD/WORK_INDENT36098	600.00
9)	PWD/2026-27/RD/WORK_INDENT35911	200.00
10)	PWD/2026-27/RD/WORK_INDENT35912	200.00
11)	PWD/2026-27/RD/WORK_INDENT35913	219.00
12)	PWD/2026-27/RD/WORK_INDENT36135	128.50
13)	PWD/2026-27/RD/WORK_INDENT36136	114.20
14)	PWD/2026-27/RD/WORK_INDENT35910	175.00
15)	PWD/2026-27/RD/WORK_INDENT35909	180.00
16)	PWD/2026-27/RD/WORK_INDENT35908	291.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ : 30.05.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ. ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: 02.06.2026 ರಂದು 12.00 ಗಂಟೆಯ ವರೆಗೆ. ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 08.06.2026 ರಂದು 16.00 ಗಂಟೆಯ ವರೆಗೆ. ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 09.06.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/193

ಜಲ ಸಂಪನ್ಮೂಲ ಇಲಾಖೆ
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ)

ಬೇಲೂರ ಕೈಗಾರಿಕಾ ವಸಾಹತು, ಧಾರವಾಡ– 580011.ದೂರವಾಣಿ: 0836–2486889
ಮೊ: 9448386889 ಮಿಂಚಂಚೆ: walmiengtrg@gmail.com www.walmidharwad.karnataka.gov.in

ಕ್ರಸಂ. ವಾಲ್ಮಿ/ತಾಂ.ಶಾ/ಮಾನವ ಸಂಪನ್ಮೂಲ/ಟೆಂಡರ್/2026–27/331
ದಿನಾಂಕ: 30–05–2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ನಿರ್ದೇಶಕರು, ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ, ಬೇಲೂರು ಕೈಗಾರಿಕಾ ವಸಾಹತು, ಧಾರವಾಡ–580011 ಕಚೇರಿ ಅಡಿಯಲ್ಲಿ ವಿವಿಧ ಮಾನವ ಸಂಪನ್ಮೂಲ ಸರಬರಾಜು ಮಾಡಲು ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ ಶೇಕಡವಾರು ಟೆಂಡರನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಆಹ್ವಾನಿಸಲಾಗಿದೆ.

Sl. No.	Name of Work	Amount put to Tender excluding GST in Lakhs	EMD Rs.
1	Providing Manpower Services at WALMI, Campus, Dharwad for the period of one year during 2026-27	60.98	1,44,000/-
2	Providing Housekeeping and training support staff Services at WALMI, Campus, Dharwad for the period of one year during 2026-27	62.95	1,49,000/-
3	Providing Agriculture and Related Works Labor Services at WALMI, Campus, Dharwad for the period of one year during 2026-27	28.77	68,000/-
4	Providing Security Services at WALMI Campus, Dharwad for the period of one year during 2026-27	50.24	1,19,000/-

ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ನಿಗದಿತ ಇ.ಎಮ್.ಡಿ ಶುಲ್ಕದೊಂದಿಗೆ https://kppp.karnataka.gov.in ಪೋರ್ಟಲ್‌ನಲ್ಲಿ, ಅರ್ಜಿಯನ್ನು ದಿನಾಂಕ: 02–06–2026, ರಿಂದ ಡೌನ್‌ಲೋಡ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17–06–2026 ರಂದು ಸಂಜೆ 4.00 ಗಂಟೆಯ ವರೆಗೆ ಬಿಡ್ ತೆರೆಯುವ ದಿನಾಂಕ: 18–06–2026 ರ ಸಂಜೆ 4.30 ಗಂಟೆಯ ನಂತರ ಮಾಡಲಾಗುವುದು. ಟೆಂಡರ್‌ಗೆ ಸಂಬಂದಪಟ್ಟಂತೆ ಇ.ಎಂ.ಡಿ. ಮೊತ್ತ, ಟೆಂಡರ್ ಷರತ್ತುಗಳು ಹಾಗೂ ಇನ್ನಿತರೆ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ https://kppp.karnataka.gov.in ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಹಾಗೂ ಈ ಕಚೇರಿ ದೂರವಾಣಿ ಸಂಖ್ಯೆ 0836–2486680 ಸಂಪರ್ಕಿಸಬಹುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ನಿರ್ದೇಶಕರು,
ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ.
ವಾಲ್ಮಿ, ಧಾರವಾಡ– 580011

ಡಿಐಪಿಆರ್/ಧಾರವಾಡ/246/ಮಣಿಪಾಲ್/2026–27

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ
ಕೆ.ಜಿ.ಎಫ್–563122 CITY MUNICIPAL COUNCIL ROBERTSONPET KOLAR GOLD FIELDS - 563122

Website: www.robertsonpetcity.mrcgov.in, E mail: itstaff_ulb_robertsonpet@yahoo.com Phone No:08153-260256

ಸಂಖ್ಯೆ:ನಸರಾ/ಶಾಶಾ/ಸ.ಅ/ಇ–ಪ್ರೊಕ್/ಸಿಆರ್/02/2026–27 ದಿನಾಂಕ:26.05.2026

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ದ್ವಿ–ಲಕೋಟೆ ಪದ್ಧತಿ)

ರಾಬರ್ಟ್‌ಸನ್‌ಪೇಟೆ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆ ನಿಧಿ ಮತ್ತು ಮಾನ್ಯ ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಅನುದಾನದ ಅಡಿಯಯಲ್ಲಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

sl no	Name of work	estimated cost (Rs.In Lakhs	category
1	DMA/2026-27/OW/WORK_INDENT57582	300.00	OTHERS
2	DMA/2025-26/OW/WORK_INDENT53058/CALL-3	80.5	OTHERS
3	DMA/2025-26/OW/WORK_INDENT53068/CALL-3	50.3	OTHERS
4	DMA/2025-26/OW/WORK_INDENT53071/CALL-3	67.5	OTHERS

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂಖ್ಯೆ: 08153–260256.

ಸಹಿ/– ಡಾ॥ಎಂ.ಆರ್ ರವಿ, ಆಡಳಿತಾಧಿಕಾರಿಗಳು, ನಗರಸಭೆ, ಕೆಜಿಎಫ್, ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ
ಸಹಿ/– ಶ್ರೀಧರ್ ವಿ, ಪೌರಾಯುಕ್ತರು, ನಗರಸಭೆ, ಕೆಜಿಎಫ್

ವಾಸಾಸಂಇ/ ಕೋಲಾರ/ ಆರ್.ಓ.ಸಂಖ್ಯೆ:91/ಕೆಎಸ್‌ಎಂಸಿಎ/ 2026–27

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಕಾರ್ಯನಿರ್ವಾಹಕ ಇಂಜನೀಯರವರ ಕಚೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ದೂರವಾಣಿ : 0836– 2747944(ಕ) Fax No.: 0836-2741209 E-mail: eepwddha@gmail.com

ಕ್ರಸಂ:ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,4/2026–27/1004 ದಿನಾಂಕ: 30–05–2026

ಟೆಂಡರ್ ಪ್ರಕಟಣೆ I.F.T – KW – 3 & 4
ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಕೆ ಡಬ್ಲ್ಯೂ–1, 3 & 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕನಿಷ್ಠ ರೂ.12.50 ಲಕ್ಷಗಳಿಂದ ಗರಿಷ್ಠ ರೂ.200.00 ಲಕ್ಷಗಳ ವರೆಗೆ, 4059–80–051–0–60–132, ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಯೋಜನೆ, 8443 Deposit construction, 5054–04–337–0–01–154 ಜಿಲ್ಲಾ ರಸ್ತೆಗಳು ಸುಧಾರಣೆ ಅಡಿ, 2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿ ಬರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕಾಮಗಾರಿಯ ವಿವರ ಈ ಕೆಳಗಿನಂತಿದೆ.

1. Calander of Events: - ಸಾಮಾನ್ಯ:– 1) PWD/2025-26/RD/WORK_INDENT30736/CALL-4, 2) PWD/2025-26/SE1161 (Extension), 3) PWD/2025-26/BD/WORK_INDENT34990/CALL-2 (Extension) 1) ಪ್ರೀಬಿಡ್/ಆಕ್ಷೇಪಣೆ–ಸಂದೇಹ ದಿನಾಂಕ: 08.06.2026 (ಬೆಳಗ್ಗೆ 12:30 ಗಂಟೆಯವರೆಗೆ). 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 09.06.2026 (ಸಾಯಂಕಾಲ 16:00 ಗಂಟೆಯವರೆಗೆ). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10.06.2026 (ಸಾಯಂಕಾಲ 16:30 ಗಂಟೆಯ ನಂತರ). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.06.2026 (ಸಾಯಂಕಾಲ 16:30 ಗಂಟೆಯ ನಂತರ).

2. Calander of Events: - ಸಾಮಾನ್ಯ:– 1) PWD/2026-27/RD/WORK_INDENT35914.
1) ಪ್ರೀಬಿಡ್/ಆಕ್ಷೇಪಣೆ–ಸಂದೇಹ ದಿನಾಂಕ: 18.06.2026 (ಬೆಳಗ್ಗೆ 12:30 ಗಂಟೆಯವರೆಗೆ). 2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 19.06.2026 (ಸಾಯಂಕಾಲ 16:00 ಗಂಟೆಯವರೆಗೆ). 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.06.2026 (ಸಾಯಂಕಾಲ 16:30 ಗಂಟೆಯ ನಂತರ). 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 22.06.2026 (ಸಾಯಂಕಾಲ 16:30 ಗಂಟೆಯ ನಂತರ).

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.kppp.karnataka.gov.in ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಚೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ. ಒಂದು ವೇಳೆ ಟೆಂಡರ್ ತೆರೆಯುವ ದಿನಾಂಕದಂದು ರಜಾ ದಿನಗಳು ಬಂದಲ್ಲಿ ಕಚೇರಿಯ ಕೆಲಸದ ದಿನದಂದು ಟೆಂಡರ್ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ./ಧಾರವಾಡ/247/2026–27/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
(ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ)
ಆಡಳಿತಾಧಿಕಾರಿಗಳ ಕಾರ್ಯಾಲಯ, ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ದೇವರ ತಿಮ್ಮಾಲಾಪುರ, ಹರಪನಹಳ್ಳಿ ತಾಲ್ಲೂಕು, ವಿಜಯನಗರ ಜಿಲ್ಲೆ.

ಲ.ವೇ.ದೇ/15/ಸಿಆರ್/2026–27 ದಿನಾಂಕ –22.05.2026

ಹರಾಜು ಪ್ರಕಟಣೆ

ವಿಷಯ:– ಹರಪನಹಳ್ಳಿ ತಾಲ್ಲೂಕು ದೇವರತಿಮ್ಮಾಲಾಪುರ ಗ್ರಾಮದ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ಅಡವಿಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ರಿ.ಸ.ನಂ 84/ B . ವಿಸ್ತೀರ್ಣ 3.00 ಎಕ್ಕರೆ ಹಾಗೂ ಹರಪನಹಳ್ಳಿ ಕಸಬಾಕ್ಕೆ ಸೇರಿದ ರಿ.ಸ.ನಂ 209/ B. ವಿಸ್ತೀರ್ಣ 5.85 ಎಕ್ಕರೆ ಜಮೀನನ್ನು 03 ವರ್ಷಗಳ ಕಾಲಾವಧಿಗೆ ರೈತರಿಗೆ ಲಾವಣಿ (ಗುತ್ತಿಗೆ) ಗೆ ಹಾಕಲು ಹರಾಜು ಪ್ರಕಟನೆ ಕುರಿತು

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ದೇವರತಿಮ್ಮಾಲಾಪುರ ಗ್ರಾಮದ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಾಲಯವು ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ಒಳಪಟ್ಟಿದ್ದು, ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ಅಡವಿಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ರಿ.ಸ.ನಂ 84/ B . ವಿಸ್ತೀರ್ಣ 3.00 ಎಕ್ಕರೆ ಹಾಗೂ ಹರಪನಹಳ್ಳಿ ಕಸಬಾಕ್ಕೆ ಸೇರಿದ ರಿ.ಸ.ನಂ 209/ B. ವಿಸ್ತೀರ್ಣ 5.85 ಎಕ್ಕರೆ ಜಮೀನನ್ನು 03 ವರ್ಷಗಳ ಕಾಲಾವಧಿಗೆ ದಿನಾಂಕ – 05.06.2026 ರಂದು ಬೆಳಿಗ್ಗೆ 11 ಗಂಟೆಗೆ ದೇವಸ್ಥಾನದ ಮುಂಭಾಗದಲ್ಲಿ ಮಾನ್ಯ ಸಹಾಯಕ ಆಯುಕ್ತರು ಹಿಂದೂ ಧಾರ್ಮಿಕ ದತ್ತಿ ಇಲಾಖೆ ವಿಜಯನಗರ /ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ತಹಶೀಲ್ದಾರ್ ಹರಪನಹಳ್ಳಿ ರವರ ಸಮಕ್ಷಮದಲ್ಲಿ ಹಾಗೂ ಧರ್ಮಕರ್ತರ, ಗ್ರಾಮಸ್ಥರ, ರೈತರ, ಸಮ್ಮುಖದಲ್ಲಿ ಬಹಿರಂಗವಾಗಿ ಲಾವಣಿ (ಗುತ್ತಿಗೆ) ಗೆ ಹಾಕಲು ರೈತರಿಗೆ ಆಹ್ವಾನಿಸಲಾಗಿದೆ. ಆಸಕ್ತರು ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಕೋರಿದೆ.

ಕ್ರ ಸಂ	ಜಿಲ್ಲೆ	ತಾಲ್ಲೂಕು	ಕಂದಾಯ ಗ್ರಾಮ	ರಿ.ಸ.ನಂ	ವಿಸ್ತೀರ್ಣ	ಗುತ್ತಿಗೆ ಅವಧಿ	ಜಮೀನು ಇರುವ ಸ್ಥಳ
01	ವಿಜಯನಗರ	ಹರಪನಹಳ್ಳಿ	ಅಡವಿಹಳ್ಳಿ	84/ B	3.00 ಎಕ್ಕರೆ	03 ವರ್ಷ	ಅಡವಿಹಳ್ಳಿಗ್ರಾಮಕ್ಕೆ ಹೊಂದಿಕೊಂಡಿದೆ
02	ವಿಜಯನಗರ	ಹರಪನಹಳ್ಳಿ	ಹರಪನಹಳ್ಳಿ ಕಸಬಾ	209 / B	5.85 ಎಕ್ಕರೆ	03 ವರ್ಷ	ತ್ಯಾಜ್ಯವಿಲೇವಾರಿ ಘಟಕದ ಹತ್ತಿರ

ಈ ಮೇಲ್ಕಂಡಂತೆ ಅಡವಿಹಳ್ಳಿ ಕಂದಾಯ ಗ್ರಾಮಕ್ಕೆ ಸೇರಿದ ರಿ.ಸ.ನಂ 84/ B . ವಿಸ್ತೀರ್ಣ 3.00 ಎಕ್ಕರೆ ಜಮೀನಿಗೆ ಸರ್ಕಾರಿ ಹರಾಜು ಅಂದಾಜು ಮೊತ್ತ ರೂ.292950 /– ಹಾಗೂ ಹರಪನಹಳ್ಳಿ ಕಸಬಾಕ್ಕೆ ಸೇರಿದ ರಿ.ಸ.ನಂ 209/ B. ವಿಸ್ತೀರ್ಣ 5.85 ಎಕ್ಕರೆ ಜಮೀನಿಗೆ ಸರ್ಕಾರಿ ಹರಾಜು ಅಂದಾಜು ಮೊತ್ತ ರೂ.571252 /– ರೂಗಳು ಸರ್ಕಾರಿ ಹರಾಜು ಅಂದಾಜು ಮೊತ್ತವಾಗಿರುತ್ತದೆ. ದಿನಾಂಕ –05.06.2026 ರಂದು ಬೆಳಿಗ್ಗೆ 11 ಗಂಟೆಗೆ ದೇವಸ್ಥಾನದ ಮುಂಭಾಗದಲ್ಲಿ ಮಾನ್ಯ ಸಹಾಯಕ ಆಯುಕ್ತರು ಹಿಂದೂ ಧಾರ್ಮಿಕ ದತ್ತಿ ಇಲಾಖೆ ವಿಜಯನಗರ /ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ಹಾಗೂ ಮಾನ್ಯ ತಹಶೀಲ್ದಾರ್ ಹರಪನಹಳ್ಳಿ ರವರ ಸಮಕ್ಷಮದಲ್ಲಿ ಹಾಗೂ ಧರ್ಮಕರ್ತರ, ಗ್ರಾಮಸ್ಥರ, ರೈತರ, ಸಮ್ಮುಖದಲ್ಲಿ ಬಹಿರಂಗವಾಗಿ ಲಾವಣಿ (ಗುತ್ತಿಗೆ) ಗೆ ಹಾಕಲು ರೈತರಿಗೆ ಆಹ್ವಾನಿಸಲಾಗಿದ್ದು ಹರಾಜಿನಲ್ಲಿ ಭಾಗವಹಿಸಲು ಆಸಕ್ತಿವುಳ್ಳವರಿಗೆ ಈ ಕೆಳಗಿನ ಷರತ್ತುಗಳಿಗೆ ಒಳಪಡಿಸಿ ಈ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಕೋರಿದೆ.

ಷರತ್ತುಗಳು: 01.ಹರಾಜಿನಲ್ಲಿ ಭಾಗವಹಿಸುವರು ರೂ/–10000/– ರೂ ಗಳ ಮುಂಗಡ ಠೇವಣಿ ಹಣವನ್ನು ಹರಾಜು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ದೇವಾಲಯದ ಕಛೇರಿಯಲ್ಲಿ ಪಾವತಿಸಿ ಭಾಗವಹಿಸಬೇಕು. 02.ಪ್ರತ್ಯೇಕ ಜಮೀನುಗಳಿಗೆ ಪ್ರತ್ಯೇಕವಾಗಿ ಠೇವಣಿ ಹಣವನ್ನು ದೇವಾಲಯದ ಕಛೇರಿಯಲ್ಲಿ ಪಾವತಿಸಿ ಭಾಗವಹಿಸಬೇಕು. 03.ಮುಂಗಡ ಠೇವಣಿ ಹಣವನ್ನು ಪಾವತಿಸದಿರುವವರಿಗೆ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. 04. ಮೇಲ್ಕಂಡಂತೆ ನಮೂದಿಸಿರುವ ಪ್ರತ್ಯೇಕ ಜಮೀನುಗಳಿಗೆ ಪ್ರತ್ಯೇಕವಾಗಿ ದರವನ್ನು ಪಾವತಿಸುವ ಬಗ್ಗೆ ಬಿಡ್ಡು ಮಾಡತಕ್ಕದ್ದು. 05. ಹೆಚ್ಚಿಗೆ ಬಿಡ್ಡು ಆದ ಬಿಡ್ಡುದಾರರ ಮುಂಗಡ ಠೇವಣಿ ಹಣವನ್ನು ಹೊರತುಪಡಿಸಿ ಹರಾಜಿನಲ್ಲಿ ಭಾಗವಹಿಸಿದ ಉಳಿದವರ ಮುಂಗಡ ಹಣವನ್ನು ಸ್ಥಳದಲ್ಲಿಯೇ ಹಿಂತಿರುಗಿಸಲಾಗುವುದು. 06.ಉನ್ನತ ಬಿಡ್ಡು ಮಾಡಿದ ಬಿಡ್ಡುದಾರನು 15 ದಿನಗಳ ಒಳಗಾಗಿ ಪೂರ್ಣ ಹಣವನ್ನು ದೇವಸ್ಥಾನದ ಆಡಳಿತ ಕಛೇರಿಯಲ್ಲಿ ನೀಡಿ ಅಧಿಕೃತವಾದ ರಶೀದಿಯನ್ನು ಪಡೆಯತಕ್ಕದ್ದು. 07. ಹರಾಜಿನ ಉನ್ನತ ಬಿಡ್ಡುದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸಲು ವಿಫಲವಾದಲ್ಲಿ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಯಾವುದೇ ಸೂಚನೆ ನೀಡದೆ ಮರು ಹರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು. 08. ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಮಾನ್ಯ ಸಹಾಯಕ ಆಯುಕ್ತರು ಹಿಂದೂ ಧಾರ್ಮಿಕ ದತ್ತಿ ಇಲಾಖೆ ವಿಜಯನಗರ/ ಬಳ್ಳಾರಿ ಇವರ ವ್ಯಾಪ್ತಿಗೊಳಪಟ್ಟಿರುತ್ತದೆ. 09. ಉನ್ನತ ಬಿಡ್ಡುದಾರರ ಗಮನಕ್ಕೆ ಪ್ರಕೃತಿಯ ಹಿತಾದೃಷ್ಟಿ ಹಾಗೂ ಅನಾವೃಷ್ಟಿಗೆ ಮತ್ತು ಲಾಭ–ನಷ್ಟಗಳಿಗೆ ದೇವಸ್ಥಾನದ ಹಾಗೂ ಇಲಾಖೆಯ ಅಧಿಕಾರಿಗಳು ಜವಬ್ದಾರರಲ್ಲ.

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ದೇವಸ್ಥಾನದ ಕಛೇರಿಯನ್ನು ಸಂಪರ್ಕಿಸಲು ಸೂಚಿಸಿದೆ

ಸಹಿ/–ತಹಶೀಲ್ದಾರರು/ಆಡಳಿತಾಧಿಕಾರಿಗಳು
ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿ ದೇವಸ್ಥಾನ ದೇವರತಿಮ್ಮಾಲಾಪುರ ಹರಪನಹಳ್ಳಿ ತಾಲ್ಲೂಕು

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/102

ಕಿರುಸುದ್ದಿ

ಅಪ್ಪ-ಅಮ್ಮನೊಂದಿಗೆ ಮಲಗಿದ್ದ ಮಗು ನಾಪತ್ತೆ!

ಭಟ್ಕಳ: ತಂದೆ-ತಾಯಿಯೊಂದಿಗೆ ಮಲಗಿದ್ದ ಪುಟ್ಟ ಮಗು ನಾಪತ್ತೆಯಾಗಿರುವ ಘಟನೆ ಮುರ್ಡೇಶ್ವರದಲ್ಲಿ ಬೆಳಕಿಗೆ ಬಂದಿದ್ದು, ಮಗುವನ್ನು ಯಾರೋ ಅಪಹರಿಸಿರುವ ಶಂಕೆಯಲ್ಲಿ ಮುರ್ಡೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಹಾರಾಷ್ಟ್ರದ ಸೊಲ್ಲಾಪುರ ನಿವಾಸಿ ಶೋಭಾ ಕುಮಾರಿ ಪೊಲೀಸರಿಗೆ ದೂರು ನೀಡಿದ್ದು, ತಮ್ಮ ದೂರಿನಲ್ಲಿ ಅವರ ಕುಟುಂಬ ಗುಜರಿ ವಸ್ತು ಸಂಗ್ರಹಿಸಿ ಜೀವನ ಸಾಗಿಸುತ್ತಿದ್ದು, ಕೆಲಸದ ನಿಮಿತ್ತ ಊರು ಊರು ಸುತ್ತುತ್ತಾ ಬಂದು ಸುಮಾರು ಎರಡು ವಾರಗಳ ಹಿಂದೆ ಮುರ್ಡೇಶ್ವರಕ್ಕೆ ಬಂದು ರೈಲು ನಿಲ್ದಾಣದ ಸಮೀಪದ ರಸ್ತೆಯ ಬದಿಯಲ್ಲಿರುವ ಗೂಡಂಗಡಿಯ ಮುಂದೆ ನೆಲೆಸಿದ್ದರು. ರಾತ್ರಿ ಊಟ ಮುಗಿಸಿ ಶೋಭಾ ಕುಮಾರಿ, ಪತಿ ಹಾಗೂ ಮಗು ಅಲ್ಲೇ ಮಲಗಿದ್ದರು. ಮುಂಜಾನೆ ಸುಮಾರು 3 ಗಂಟೆ ವೇಳೆ ಎಚ್ಚರವಾದಾಗ ಮಗು ತಮ್ಮ ಮಧ್ಯದಲ್ಲೇ ಮಲಗಿರುವುದನ್ನು ಅವರು ಗಮನಿಸಿದ್ದು, ಬೆಳಗ್ಗೆ ಸುಮಾರು 6 ಗಂಟೆಗೆ ಮತ್ತೆ ಎಚ್ಚರವಾದಾಗ ಮಗು ಕಾಣೆಯಾಗಿದೆ ಎಂದು ತಿಳಿಸಿದ್ದಾರೆ. ತಕ್ಷಣ ಸುತ್ತಮುತ್ತಲಿನ ಪ್ರದೇಶದಲ್ಲಿ ಮಗುವಿಗಾಗಿ ಹುಡುಕಾಟ ನಡೆಸಿದರೂ ಯಾವುದೇ ಸುಳಿವು ಸಿಕ್ಕಿಲ್ಲ, ತಾವು ಗಾಢ ನಿದ್ರೆಯಲ್ಲಿದ್ದ ವೇಳೆ ಅಪರಿಚಿತರು ಮಗುವನ್ನು ಅಪಹರಿಸಿರುವ ಶಂಕೆ ಇದ್ದು ಹುಡುಕಿಕೊಡುವಂತೆ ಕೋರಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಮುರ್ಡೇಶ್ವರ ಪೊಲೀಸರು ನಾಪತ್ತೆಯಾದ ಮಗುವಿನ ಪತ್ತೆಗೆ ತನಿಖೆ ಮುಂದುವರಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1550	6158
ಉದ್ದಿನಕಾಳು	2529	7031
ಒಣ ಮೆಣಸಿನಕಾಯಿ	3099	42901
ಹೆಸರುಕಾಳು	1519	7509
ನೆಲಗಡಲೆ (ಶೇಂಗಾ)	2899	9119
ಜೋಳ	1889	1989
ಈರುಳ್ಳಿ	500	1900
ಆಲೂಗಡ್ಡೆ	1100	1700
ಕುಸುಬೆ	5221	7489
ಸೋಯಾಬಿನ್	5010	7489
ತೊಗರಿ	4503	4503
ಗೋಧಿ	2007	5089

ರಾಜ್ಯ ಮಾಹಿತಿ ಹಕ್ಕು ಆಯೋಗದ ಕಲ್ಬುರ್ಗಿ ಪೀಠದ ಆಯುಕ್ತ ಬಿ.ವೆಂಕಟ್ ಸಿಂಗ್ ಹೇಳಿಕೆ

ಆರ್‌ಟಿಐ ಅರ್ಜಿ ವಿಲೇವಾರಿಯಲ್ಲಿ ಕರ್ನಾಟಕ ಮಾದರಿ

ವಿಜಯನಗರ: ಮಾಹಿತಿ ಹಕ್ಕು ಕಾಯ್ದೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಕರ್ನಾಟಕ ಮಾಹಿತಿ ಆಯೋಗವು ಇಡೀ ದೇಶದಲ್ಲೇ ಅತ್ಯಂತ ತ್ವರಿತ ಮತ್ತು ದಕ್ಷತೆಯಿಂದ ಕೆಲಸ ಮಾಡುತ್ತಿದ್ದು, ಅರ್ಜಿಗಳ ವಿಲೇವಾರಿಯಲ್ಲಿ ಹೊಸ ದಾಖಲೆ ಬರೆದಿದೆ ಎಂದು ರಾಜ್ಯ ಮಾಹಿತಿ ಹಕ್ಕು ಆಯೋಗದ ಕಲ್ಬುರ್ಗಿ ಪೀಠದ ಆಯುಕ್ತ ಬಿ.ವೆಂಕಟ್ ಸಿಂಗ್ ತಿಳಿಸಿದರು.



ಹೊಸಪೇಟೆಯಲ್ಲಿ ಮಾಹಿತಿ ಹಕ್ಕು ಕಾಯ್ದೆ ಕುರಿತು ಜಿಲ್ಲಾ ಮಟ್ಟದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಆಯೋಜಿಸಿದ್ದ ಮಾಹಿತಿ ಹಕ್ಕು ಕಾಯ್ದೆ ತರಬೇತಿ ಕಾರ್ಯಾಗಾರದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ನಾನು ಸೇರಿದಂತೆ 6 ಜನರು ಮಾಹಿತಿ ಹಕ್ಕು ಆಯೋಗದ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಆಯೋಗದ ಕಾರ್ಯಕ್ಷಮತೆ ಮತ್ತಷ್ಟು ಚುರುಕುಗೊಂಡಿದೆ. ಆಯೋಗದಲ್ಲಿ 56,000 ಅರ್ಜಿಗಳು ಬಾಕಿ ಇದ್ದವು. ಆದರೆ, ಕೇವಲ ಒಂದೇ ವರ್ಷದ ಅವಧಿಯಲ್ಲಿ 40,000 ಅರ್ಜಿಗಳನ್ನು ವಿಲೇವಾರಿ ಮಾಡುವ ಮೂಲಕ ಆಯೋಗವು ಐತಿಹಾಸಿಕ ಸಾಧನೆ ಮಾಡಿದೆ. ಕಳೆದ ಡಿಸೆಂಬರ್, ಮಾರ್ಚ್ ನಲ್ಲಿ ವಿಶೇಷ ಅಭಿಯಾನವನ್ನು ಹಮ್ಮಿಕೊಂಡು, ಶೇ.75 ರಷ್ಟು ಹಳೆಯ ಪ್ರಕರಣಗಳನ್ನು ಯಶಸ್ವಿಯಾಗಿ ವಿಲೇವಾರಿ ಮಾಡಲಾಗಿದೆ. ಪ್ರಸ್ತುತ 2023 ಮತ್ತು 2024ನೇ ಸಾಲಿನ ಪ್ರಕರಣಗಳ ವಿಚಾರಣೆ ಪ್ರಗತಿಯಲ್ಲಿದೆ ಎಂದರು.

ಕಲಬುರ್ಗಿ ಪೀಠದಲ್ಲಿ 6,200 ಅರ್ಜಿಗಳು ಬಾಕಿ ಇದ್ದವು. 2025 ರ ನವೆಂಬರ್ 24 ರಿಂದ ವಿಚಾರಣೆ ಆರಂಭಿಸಿ, ಇಂದಿನವರೆಗೆ ನಡೆಸಿದ 101 ದಿನಗಳ ಕಲಾಪಗಳಲ್ಲಿ ಒಟ್ಟು 3,537 ಪ್ರಕರಣಗಳನ್ನು ವಿಚಾರಣೆಗೆ ಎತ್ತಿಕೊಳ್ಳಲಾಗಿದೆ. ಇದರಲ್ಲಿ 1,548 ಪ್ರಕರಣಗಳನ್ನು ಸಂಪೂರ್ಣವಾಗಿ ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಮಾಹಿತಿ ಒದಗಿಸಲಾಗಿದೆ. ಇನ್ನುಳಿದಂತೆ ರಾಯಚೂರು ಜಿಲ್ಲೆಯಲ್ಲಿ 2,337, ಕಲಬುರ್ಗಿ 1,318, ಬಳ್ಳಾರಿ 835, ಕೊಪ್ಪಳ 650, ?ವಿಜಯನಗರ 611, ಯಾದಗಿರಿ 580, ಬೀದರ್ 400 ಅರ್ಜಿಗಳು ಬಾಕಿಯಿವೆ. ಆರ್‌ಟಿಐ ಕುರಿತ ಅಧಿಕಾರಿಗಳಲ್ಲಿರುವ ಗೊಂದಲಗಳನ್ನು ಪರಿಹರಿಸಲು ಈಗಾಗಲೇ ಕಲ್ಯಾಣ ಕರ್ನಾಟಕ ಭಾಗದ ಬೀದರ್, ಬಳ್ಳಾರಿ, ಕೊಪ್ಪಳ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಈಗಾಗಲೇ ಕಾರ್ಯಾಗಾರಗಳು ಮುಗಿದಿದ್ದು, ವಿಜಯನಗರ ಜಿಲ್ಲೆಯು ಐದನೇ ಜಿಲ್ಲೆಯಾಗಿದೆ. ಮುಂದಿನ ದಿನಗಳಲ್ಲಿ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲೂ ಕಾರ್ಯಾಗಾರ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಬೇಜವಾಬ್ದಾರಿ ಅಧಿಕಾರಿಗಳಿಗೆ ದಂಡದ ಬಿಸಿ: ಮಾಹಿತಿ ನೀಡಲು ವಿಳಂಬ ಮಾಡುವ ಅಥವಾ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಆಯೋಗವು ಕಠಿಣ ಕ್ರಮ ಕೈಗೊಳ್ಳುತ್ತಿದೆ. ಕಳೆದ 101 ದಿನಗಳ ಅವಧಿಯಲ್ಲಿ ಮಾಹಿತಿ ನೀಡಲು ನಿರಾಕರಿಸಿದ ಅಧಿಕಾರಿಗಳಿಗೆ ಒಟ್ಟು 4,33,000 ರೂ. ದಂಡ ವಿಧಿಸಲಾಗಿದೆ. ಅಲ್ಲದೆ, ಮಾಹಿತಿ ಪಡೆಯಲು ವಿಳಂಬವಾಗಿ ಅರ್ಜಿದಾರರು ಅನುಭವಿಸಿದ ಆರ್ಥಿಕ ಮತ್ತು ಸಮಯದ ನಷ್ಟವನ್ನು ಸರಿದೂಗಿಸಲು 38,000 ರೂ. ಪರಿಹಾರವನ್ನು ಅರ್ಜಿದಾರರಿಗೆ ಕೊಡಿಸುವ ಮೂಲಕ ಆಯೋಗವು ದಕ್ಷತೆ ಮೆರೆದಿದೆ ಎಂದು ಆಯುಕ್ತ ಬಿ.ವೆಂಕಟಸಿಂಗ್ ತಿಳಿಸಿದರು.

ಈ ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ಪೀಠದ ರಾಜ್ಯ ಮಾಹಿತಿ ಆಯುಕ್ತ ಡಾ. ಹರೀಶಕುಮಾರ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ಉಪಸ್ಥಿತರಿದ್ದರು.

> **ಆರ್‌ಟಿಐ ಕಾರ್ಯಕರ್ತ ಎಂಬುದು ಸ್ವಯಂ ಘೋಷಿತ ಪದವಾಗಿದೆ. ಅದಕ್ಕೆ ವಿಶೇಷ ಮಾನ್ಯತೆ ಇಲ್ಲ. ಮಾಹಿತಿ ಹಕ್ಕು ಕಾಯ್ದೆಯಡಿ ಎಲ್ಲರೂ ಸಮಾನರು. ಆದರೆ, ಕೆಲವರು ಅಧಿಕಾರಿಗಳ ಮೇಲೆ ಪ್ರಭಾವ ಬೀರುವ ಅಥವಾ ಇನ್ನ್ಯಾವುದೋ ಉದ್ದೇಶದಿಂದ ಮಾಹಿತಿ ಹಕ್ಕು ಅರ್ಜಿಯಲ್ಲಿ ತಮ್ಮನ್ನು ಆರ್‌ಟಿಐ ಕಾರ್ಯಕರ್ತ ಎಂದು ಬಿಂಬಿಸಿಕೊಳ್ಳುತ್ತಾರೆ. ಅದಕ್ಕೆ ಯಾವುದೇ ಮಾನ್ಯವಿಲ್ಲ. ಆರ್‌ಟಿಐ ಮತ್ತಿತರೆ ಅನಧಿಕೃತ ಪದನಾಮಗಳಿಂದ ಬಿಂಬಿಸಿಕೊಳ್ಳುವ ಅರ್ಜಿದಾರರ ಅರ್ಜಿಯನ್ನು ಮುಲಾಜಿಲ್ಲದೇ ತಿರಸ್ಕರಿಸಬೇಕು.**
>
> ■ ಬದ್ರುದ್ದೀನ್ ಕೆ., ಮಾಹಿತಿ ಹಕ್ಕು ಆಯೋಗದ ಆಯುಕ್ತ

ಅಘನಾಶಿನಿ ನದಿ ಜೋಡಣೆ ಯೋಜನೆ ವಿರುದ್ಧ ನಿರಂತರ ಹೋರಾಟ



ಸಿದ್ದಾಪುರ: ಜನ ಮತ್ತು ಪರಿಸರ ವಿರೋಧಿ ಅಘನಾಶಿನಿ-ವೇದಾವತಿ ನದಿ ಜೋಡಣೆ ಯೋಜನೆ ವಿರೋಧಿಸಿ ನಿರಂತರವಾಗಿ ಸಾಂಘಿಕ ಮತ್ತು ಕಾನೂನು ಹೋರಾಟಕ್ಕೆ ಹೋರಾಟಗಾರರ ವೇದಿಕೆಯು ಸನ್ನದ್ಧವಾಗಿದೆ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ತಾಲೂಕಿನ ಕ್ಯಾದಗಿ ಗ್ರಾಮ ಪಂಚಾಯತ ವ್ಯಾಪ್ತಿಯ ಶ್ರೀ ಮಹಾಗಣಪತಿ ದೇವಸ್ಥಾನದ ಆವರಣದಲ್ಲಿ ಅಘನಾಶಿನಿ ನದಿ ಜೋಡಣೆ ವಿರೋಧಿ ಸಭೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಆಕ್ಷೇಪ ಪತ್ರದ ಸ್ವೀಕೃತಿ ಪ್ರತಿ ಮತ್ತು ಯುನೆಸ್ಕೋ ವಿಶ್ವ ಸಂಸ್ಥೆಯಿಂದ ಹೋರಾಟಗಾರರವೇದಿಕೆಗೆಬಂದಿರುವ ಉತ್ತರದ ಪ್ರತಿ ವಿತರಿಸಿ ಅವರು ಮಾತನಾಡಿದರು.

ಯುನೆಸ್ಕೋ ಉತ್ತರ ಪ್ರತಿ ಮತ್ತು ಆಕ್ಷೇಪಣಾ ಪತ್ರ ವಿತರಣೆ

ಹೋರಾಟಗಾರ ಪ್ರಮುಖರಾದ ಕೆ.ಟಿ.ನಾಯ್ಕ ಹೆಗ್ಗೇರಿ, ರಾಜು ನಾಯ್ಕ ಕಿರೆಹೊಡ, ಶ್ರೀಧರ ಹೆಗಡೆ ಕೆರೆಮನೆ, ಆರ್.ಆರ್.ಹೆಗಡೆ ಐನಕೈ, ರಾಮಕೃಷ್ಣ ನಾಯ್ಕ ಶಿರೂರು, ಸಭೆಯನ್ನುದ್ದೇಶಿಸಿ ಮಾತನಾಡಿದರು. ಚಂದ್ರಕಾಂತ ಆರ್. ನಾಯ್ಕ ಹೆಗ್ಗೇರಿ, ಆರ್.ಟಿ.ನಾಯ್ಕ ಆರಳಿಮಕ್ಕಿ, ಕೆ.ಡಿ.ರಾಮಪ್ಪ ಕೊಂಡ್ಲಿ, ಮಾರುತಿ ಬಿಳ್ಳುಮನೆ, ಶ್ರೀನಿವಾಸ ಕಲ್ಲಾಳ , ಪ್ರಕಾಶ ಜಿ.ನಾಯ್ಕ ಕ್ಯಾದಗಿ, ಶ್ರೀಪಾದ ನಾಯ್ಕ ಶಿರೂರು, ಸಂತೋಷ ವಿ.ನಾಯ್ಕ ಕ್ಯಾದಗಿ, ರವೀಂದ್ರ ಭಟ್ಟ ಕಲ್ಲಾಳ, ರಾಘವೇಂದ್ರ ಬಿಳ್ಳುಮನೆ ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು. ದಿವಾಕರ ನಾಯ್ಕ ಸ್ವಾಗತಿಸಿದರೆ, ಮಾಬ್ಲೇಶ್ವರ ನಾಯ್ಕ ಬೇಡ್ಕಣಿ ಪ್ರಾಸ್ತಾವಿಕ ಮಾತನಾಡಿದರು.

20 ಸಾವಿರಕ್ಕೂ ಮಿಕ್ಕಿ ಆಕ್ಷೇಪ ಪತ್ರ

ಸಾರ್ವತ್ರಿಕವಾಗಿ ಅಘನಾಶಿನಿ ನದಿ ಜೋಡಣೆ ಯೋಜನೆಗೆ ತೀವ್ರ ವಿರೋಧ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ 20 ಸಾವಿರಕ್ಕೂ ಮಿಕ್ಕಿ ಆಕ್ಷೇಪ ಪತ್ರ ದಾಖಲಿಸಿರುವುದು ಹೋರಾಟದ ಮಹತ್ವಪೂರ್ಣ ಹೆಜ್ಜೆಯಾಗಿದೆ. ಅಲ್ಲದೇ, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ನದಿ ಜೋಡಣೆ ವಿರೋಧಿಸಿ ವಿತರಿಸಿದಂತಹ ಆಕ್ಷೇಪ ಪತ್ರಗಳನ್ನು ಹೋರಾಟಗಾರರ ವೇದಿಕೆಯು ಉಚಿತವಾಗಿ ಮುದ್ರಿಸಿ, ಸ್ವೀಕೃತಿ ಪ್ರತಿ ವಿತರಿಸಲಾಗಿದೆ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ಅಧ್ಯಕ್ಷ ರವೀಂದ್ರ ನಾಯ್ಕ ತಿಳಿಸಿದ್ದಾರೆ.

ಹಸಿರೆಲೆ ಗೊಬ್ಬರದಿಂದ ಮಣ್ಣಿನ ಗುಣಮಟ್ಟ ವೃದ್ಧಿ

ಬಳ್ಳಾರಿ: ಮಣ್ಣಿನ ಸಾವಯವ ಅಂಶ ಹಾಗೂ ಫಲವತ್ತತೆಯನ್ನು ಸುಧಾರಿಸುವಲ್ಲಿ ಹಸಿರು ಗೊಬ್ಬರದ ಪಾತ್ರ ಅನನ್ಯವಾಗಿದೆ ಎಂದು ಐಸಿಎಆರ್-ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಪ್ರಾದೇಶಿಕ ಕೇಂದ್ರದ ಪ್ರಧಾನ ವಿಜ್ಞಾನಿ (ಮಣ್ಣು ವಿಜ್ಞಾನ) ಡಾ.ಕೆ.ರಾಜನ್ ಅವರು ಹೇಳಿದರು.

ಐಸಿಎಆರ್-ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯ ಪ್ರಾದೇಶಿಕ ಕೇಂದ್ರ ವತಿಯಿಂದ ಬುಡಕಟ್ಟು ಉಪ ಯೋಜನೆ ಅಡಿ ಮತ್ತಾಜನಹಳ್ಳಿ ಗ್ರಾಮದಲ್ಲಿ 'ಸ್ಥಿತ ಸ್ಥಳದಲ್ಲಿಯೆ ಹಸಿರೆಲೆ ಗೊಬ್ಬರ: ಮಣ್ಣಿನ ಸಾವಯವ ಪದಾರ್ಥ ಮತ್ತು ಫಲವತ್ತತೆಯನ್ನು ಹೆಚ್ಚಿಸುವುದು' ಕುರಿತು ಶುಕ್ರವಾರ ಹಮ್ಮಿಕೊಂಡಿದ್ದ ವಿಶೇಷ ಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ರೈತರು ತಮ್ಮ ಜಮೀನುಗಳಲ್ಲಿ ಸುನ್ಹೆಂಪ್ (ಸೆಣಬು), ಡೈಂಚಾ, ಗೋವಿನ ಜೋಳ ಮತ್ತು ಉದ್ದು ಮುಂತಾದ ಹಸಿರು ಗೊಬ್ಬರದ ಬೆಳೆಗಳನ್ನು ನಿಯಮಿತವಾಗಿ ಬಳಸಬೇಕು ಎಂದು ರೈತರಿಗೆ ಕರೆ ನೀಡಿದರು.

ಬೆಳೆಗಳಿಗೆ ಪೋಷಕಾಂಶಗಳ ಪೂರೈಕೆ, ಸಾರಜನಕ ಸ್ಥಿರೀಕರಣ ಹಾಗೂ ಮಣ್ಣಿನ ಜೈವಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಈ ಬೆಳೆಗಳ ಪ್ರಾಮುಖ್ಯತೆಯನ್ನು ಚಿತ್ರಗಳ ಮೂಲಕ ವಿವರಿಸಿದ ಅವರು, ಮಣ್ಣಿನ ದೀರ್ಘಕಾಲೀನ ಉತ್ಪಾದಕತೆಗಾಗಿ ಪ್ರತಿ ವರ್ಷ ತಪ್ಪದೇ ಹಸಿರೆಲೆ ಗೊಬ್ಬರವನ್ನು ಮಣ್ಣಿಗೆ ಸೇರಿಸಲು ರೈತರಲ್ಲಿ ಮನವಿ ಮಾಡಿದರು.

ಹಿರಿಯ ವಿಜ್ಞಾನಿ (ಅರಣ್ಯ) ಡಾ.ರಮೇಶ ಎಂ.ಎನ್. ಮಾತನಾಡಿ, ರೈತರು ಕೃಷಿ ಹೊಲಗಳ ಬದುಗಳ ಮೇಲೆ ಸ್ಥಳೀಯವಾಗಿ ಲಭ್ಯವಿರುವ ಜೀವಂತ ಹಸಿರುಪೊದೆಗಳನ್ನು ಬೆಳೆಸುವ ಮೂಲಕ ಮಣ್ಣನ್ನು ಸಾವಯವ ವಸ್ತುಗಳಿಂದ ಸಮೃದ್ಧಗೊಳಿಸಬಹುದು. ಇದು ರಾಸಾಯನಿಕ ಗೊಬ್ಬರಗಳ ಮೇಲಿನ ವೆಚ್ಚ ಮತ್ತು ಬೇಡಿಕೆಯನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ ಎಂದರು.

ರೈತರು ಮನೆಯಲ್ಲಿ ತಯಾರಾಗುವ ಕುರಿ ಮತ್ತು ಮೇಕೆ ಗೊಬ್ಬರವನ್ನು ಹೊರಗಡೆ ಮಾರಾಟ ಮಾಡುವ ಬದಲು, ತಮ್ಮದೇ ಭೂಮಿಯ ದೀರ್ಘಕಾಲೀನ ಸುಸ್ಥಿರತೆ ಹಾಗೂ ಉತ್ಪಾದಕತೆಯನ್ನು ಕಾಯ್ದುಕೊಳ್ಳಲು ಸ್ವಂತ ಜಮೀನಿಗೆ ಬಳಸಿಕೊಳ್ಳಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಜಾಗೃತಿ ಅಭಿಯಾನದಲ್ಲಿ ಮತ್ತಾಜನಹಳ್ಳಿ ಗ್ರಾಮದ ಒಟ್ಟು 56 ರೈತರು ಅತ್ಯಂತ ಆಸಕ್ತಿಯಿಂದ ಭಾಗವಹಿಸಿದ್ದರು. ಇದರಲ್ಲಿ 41 ಮಹಿಳಾ ರೈತರು ಹಾಗೂ 15 ಪುರುಷ ರೈತರು ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಗ್ಯಾಸ್ ಸಿಲಿಂಡರ್ ಸ್ಫೋಟಿಸಿ ಕೊಲೆಗೆ ಯತ್ನ

ಕಲಬುರಗಿ: ಹೆಚ್ಚುವರಿ ವರದಕ್ಷಿಣೆ ತರುವಂತೆ ಹಾಗೂ ಮಕ್ಕಳಾಗಿಲ್ಲ ಎಂಬ ನೆಪ ಒಡ್ಡಿ ವಿವಾಹಿತ ಮಹಿಳೆಯೊಬ್ಬರ ಮೇಲೆ ಪತಿ ಮತ್ತು ಆತನ ಕುಟುಂಬಸ್ಥರು ಅಮಾನುಷವಾಗಿ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿರುವ ಘಟನೆ ನಗರದ ಬಿದ್ದಾಪುರ ಕಾಲೋನಿಯಲ್ಲಿ ನಡೆದಿದೆ. ಕಾವ್ಯ (28) ಎಂಬುವವರೇ ಕೊಲೆ ಯತ್ನದಿಂದ ಕೂದಲೆಳೆಗಳ ಅಂತರದಲ್ಲಿ ಪಾರಾದ ದುರ್ದೈವಿ. ಗಂಡ ಮಹೇಶ್‌ಕುಮಾರ್ ಮತ್ತು ಆತನಮನೆಯವರು ಕಾವ್ಯ ಅವರ ಕೈಕಾಲು ಕಟ್ಟಿ, ಕುತ್ತಿಗೆಯನ್ನು ಕಾಲಿನಿಂದ ತುಳಿದು ತೀವ್ರವಾಗಿ ಹಲ್ಲೆ ನಡೆಸಿದ್ದಾರೆ. ಅಷ್ಟಕ್ಕೇ ನಿಲ್ಲಿಸದೆ, ಅಡುಗೆ ಮನೆಯ ಗ್ಯಾಸ್ ಪೈಪ್ ಕತ್ತರಿಸಿ ಸಿಲಿಂಡರ್ ಸ್ಫೋಟಿಸುವ ಮೂಲಕ ಇದೊಂದು ಆಕಸ್ಮಿಕ ಅಪಘಾತ ಎಂದು ಬಿಂಬಿಸಲು ಸಂಚು ರೂಪಿಸಿದ್ದರು ಎನ್ನಲಾಗಿದೆ. ಸದ್ಯ ತೀವ್ರ ಗಾಯಗೊಂಡಿರುವ ಮಹಿಳೆಯನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಮಹಿಳಾ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಾಗಿದೆ.

ರಸ್ತೆ ವಿಭಜಕಕ್ಕೆ ಕಾರ್ ಡಿಕ್ಕಿ: ವ್ಯಕ್ತಿ ಸಾವು

ರಬಕವಿ-ಬನಹಟ್ಟಿ: ವಿಜಯಪುರ ನಗರಕ್ಕೆ ಅಂಟಿಕೊಂಡಿರುವ ಬುಲೆಟ್ ಶೋರೂಂ ಬಳಿ ಸೊಲ್ಲಾಪೂರ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಶುಕ್ರವಾರ ರಾತ್ರಿ 9:30ರ ಸುಮಾರು ರಸ್ತೆ ವಿಭಜಕಕ್ಕೆ ಕಾರು ಡಿಕ್ಕಿಯಾಗಿ ರಬಕವಿ ಮೂಲದ ವ್ಯಕ್ತಿಯೋರ್ವ ಮೃತಪಟ್ಟಿದ್ದಾರೆ.



ರಬಕವಿಯ ಉದ್ಯಮಿ ಉದಯ ಜಿಗಜಿನ್ನಿಯವರ ಪುತ್ರ ಸಮರ್ಥ(28) ಮೃತ ದುರ್ದೈವಿ. 4 ವರ್ಷಗಳಿಂದ ವಿಜಯಪೂರ ಖಾಸಗಿ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಇಬ್ಬರು ಗೆಳೆಯರೊಂದಿಗೆ ಕಾರ್‌ನಲ್ಲಿ ಸಂಚರಿಸುವಾಗ ಸ್ವತಃ ಕಾರ್ ಚಾಲನೆ ಮಾಡುತ್ತಿದ್ದ ಸಮರ್ಥ ಮೃತಪಟ್ಟಿರುವುದು ಶನಿವಾರ ರಬಕವಿ ಪಟ್ಟಣದಲ್ಲಿ ಶೋಕದ ವಾತಾವರಣ ಮಡುಗಟ್ಟಿತ್ತು. ವಿಜಯಪುರ ಟ್ರಾಫಿಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ಸಮರ್ಥನ ಅಂತಿಮ ಸಂಸ್ಕಾರ ಶನಿವಾರ ರಬಕವಿ ಪಟ್ಟಣದ ರುದ್ರಭೂಮಿಯಲ್ಲಿ ಜರುಗಿತು. ಕಳೆದ 6 ತಿಂಗಳ ಹಿಂದೆಯಷ್ಟೇ ವಿವಾಹವಾಗಿತ್ತು.

ಎಲೆಕ್ಟ್ರಾನಿಕ್ ವ್ಯಾಪಾರಿಗೆ 1.90 ಲಕ್ಷ ರೂ. ವಂಚನೆ

ಕಲಬುರಗಿ: ಜಿಲ್ಲೆಯ ಹಿರಿಯ ಎಲೆಕ್ಟ್ರಾನಿಕ್ ವ್ಯಾಪಾರಿಯೊಬ್ಬರಿಗೆ ಅಪರಿಚಿತ ವ್ಯಕ್ತಿಯೊಬ್ಬ ಕರೆ ಮಾಡಿ, ಸಂಬಂಧಿ ಎಂದು ನಂಬಿಸಿ ಲಕ್ಷಾಂತರ ರೂಪಾಯಿ ವಂಚಿಸಿರುವ ಘಟನೆ ಬೆಳಕಿಗೆ ಬಂದಿದೆ.

ಇಲ್ಲಿನ ಸೂಪರ್ ಮಾರ್ಕೆಟ್ ಬಳಿಯ ನಿವಾಸಿ, 'ಕರ್ನಾಟಕ ರೇಡಿಯೋ ಹೌಸ್' ಮಾಲೀಕರಾದ ವಿಶ್ವನಾಥ ನಾಗಪ್ಪ ಖುಬಾ (74) ವಂಚನೆಗೊಳಗಾದವರು. ಇವರಿಗೆ ಅಪರಿಚಿತ ನಂಬರ್‌ನಿಂದ ಕರೆ ಮಾಡಿದ ವ್ಯಕ್ತಿಯೊಬ್ಬ ಹಿಂದಿಯಲ್ಲಿ ಮಾತನಾಡಿ, ತಾನು ರಾಂಚಿಯ ಸಂಬಂಧಿ ಶರ್ಮಾ ಎಂದು ಪರಿಚಯಿಸಿಕೊಂಡಿದ್ದಾನೆ. ತನ್ನ ಅಣ್ಣ ಆಸ್ಪತ್ರೆಗೆ ದಾಖಲಾಗಿದ್ದು, ತುರ್ತು ಹಣದ ಅಗತ್ಯವಿದೆ ಎಂದು ಸುಳ್ಳು ಹೇಳಿದ್ದಾನೆ. ಅಲ್ಲದೆ, ತಾನು ಹಣ ಮರು ಪಾವತಿಸಿರುವುದಾಗಿ ನಕಲಿ ಬ್ಯಾಂಕ್ ಸಂದೇಶ ಕಳುಹಿಸಿ ನಂಬಿಸಿದ್ದಾನೆ.

ಇದನ್ನು ನಿಜವೆಂದು ನಂಬಿದ ವಿಶ್ವನಾಥ ಹಾಗೂ ಅವರ ಮಗ ಹಂತ-ಹಂತವಾಗಿ ಒಟ್ಟು 1,90,000 ರೂಪಾಯಿಗಳನ್ನು ಆನ್‌ಲೈನ್ ಮೂಲಕ ವರ್ಗಾಯಿಸಿದ್ದಾರೆ. ತಡವಾಗಿ ವಂಚನೆ ಅರಿತ ಸಂತ್ರಸ್ತರು ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದು, ತನಿಖೆ ಮುಂದುವರಿದಿದೆ.


ಪೆಹಲ್ಗಾಂ ಉಗ್ರರೊಂದಿಗೆ ನಂಟೆಂದು ಡಿಜಿಟಲ್ ಅರೆಸ್ಟ್: 21 ಲಕ್ಷ ರೂ. ವಂಚನೆ

ಹಾವೇರಿ: ಪೆಹಲ್ಗಾಮ್ ದಾಳಿಯ ಪ್ರಮುಖ ಉಗ್ರನೊಂದಿಗೆ ನಂಟು ಹೊಂದಿದ್ದು, ತಾವು ಇಡಿ ಹಾಗೂ ಸಿಬಿಐ ಅಧಿಕಾರಿಗಳೆಂದು ಬೆದರಿಸಿ 21.50 ಲಕ್ಷ ರೂಪಾಯಿಗಳನ್ನು ಹಂತಹಂತವಾಗಿ ಹಾಕಿಸಿಕೊಂಡು ಡಿಜಿಟಲ್ ಅರೆಸ್ಟ್ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಹಾನಗಲ್ಲ ತಾಲೂಕು ಅಕ್ಕಿಆಲೂರಿನ ನಾಗಭೂಷಣ್ ಎಂಬವರೇ ಹಣ ಕಳೆದುಕೊಂಡವರು. ಅಪರಿಚಿತರಾದ ರಣಬೀರ್ ಸಿಂಗ್ ಹಾಗೂ ಪ್ರದೀಪ್‌ಕುಮಾರ ಎಂಬುವವರು ತಮ್ಮನ್ನು ಸಿಬಿಐ, ಇಡಿ ಅಧಿಕಾರಿಗಳೆಂದು ಪರಿಚಯಗೊಂಡು ವಾಟ್ಸ್ಆ್ಯಪ್ ವಿಡಿಯೋ ಕಾಲ್ ಮಾಡಿದ್ದಾರೆ. ಪೆಹಲ್ಗಾಂ ದಾಳಿಯ ಆರೋಪಿ ಉಗ್ರ ಆದಿಲ್ ಗೋರಿ ಎಂಬಾತ ನಿಮ್ಮ ಆಧಾರ ಕಾರ್ಡ್ ಬಳಸಿಕೊಂಡು ಬ್ಯಾಂಕ್ ಖಾತೆ ತೆರೆದು ಅದರ ಮೂಲಕ ಹಣ ವರ್ಗಾವಣೆ ಮಾಡಿದ್ದಾರೆ. ಅದರಲ್ಲಿ ನೀವು ಶೇ.15ರಷ್ಟು ಲಾಭ ಪಡೆದಿದ್ದೀರಿ. ಬ್ಯಾಂಕ್ ಖಾತೆ ತೆರೆಯಲು ಆಧಾರ್ ಕಾರ್ಡ್ ನೀಡಿದ್ದು, ಅದಕ್ಕೆ ಸಹಿ ಮಾಡಿದ ಬಗ್ಗೆ ಉಗ್ರ ಆದಿಲ್ ಗೋರಿ ತೋರಿಸಿದ್ದಾನೆ.

ಅಕ್ರಮ ಹಣ ವರ್ಗಾವಣೆ ಮಾಡಿದ್ದೀರಿ ಎಂದು ಬೆದರಿಸಿ ವಿವಿಧ ಖಾತೆಗಳಿಂದ ಹಂತ ಹಂತವಾಗಿ ಸುಮಾರು 21.50ಲಕ್ಷ ರೂಪಾಯಿ ಹಣವನ್ನು ಹಾಕಿಸಿಕೊಂಡು ವಂಚಿಸಿದ್ದಾರೆ ಎಂದು ನಾಗಭೂಷಣ ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ಹಾವೇರಿ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೆಂಜ್ ಕ್ಯಾಪ್	ಪರ್ಪಲ್ ಕ್ಯಾಪ್
ವೈಭವ್ (ಗುಜರಾತ್)	ರಬಾಡ (ಗುಜರಾತ್)
776 ರನ್	28 ವಿಕೆಟ್



ಕಿರುಸುದ್ದಿ

ಏಷ್ಯನ್ ಗೇಮ್ಸ್ ಆಯ್ಕೆ: ವಿನೇಶ್‌ಗೆ ಸೋಲು



◆**ಹೊಸದಿಲ್ಲಿ:** ಇಲ್ಲಿ ನಡೆದ ಏಷ್ಯನ್ ಗೇಮ್ಸ್ 2026 ಆಯ್ಕೆ ಟ್ರಯಲ್‌ನಲ್ಲಿ ಭಾರತದ ಖ್ಯಾತ ಕುಸ್ತಿಪಟು ವಿನೇಶ್ ಫೋಗಟ್ ಅವರ ಅಭಿಯಾನ ಸೆಮಿಫೈನಲ್ ಹಂತದಲ್ಲೇ ಅಂತ್ಯಗೊಂಡಿದೆ. ಮಹಿಳೆಯರ 53 ಕೆ.ಜಿ. ವಿಭಾಗದ ಸೆಮಿಫೈನಲ್‌ನಲ್ಲಿ ಮೀನಾಕ್ಷಿ ಗೋಯತ್ ವಿರುದ್ಧ 4-6 ಅಂತರದಲ್ಲಿ ಸೋಲು ಅನುಭವಿಸಿದ ವಿನೇಶ್, ಏಷ್ಯನ್ ಗೇಮ್ಸ್ ತಂಡದಲ್ಲಿ ಸ್ಥಾನ ಪಡೆಯುವ ಅವಕಾಶ ಕಳೆದುಕೊಂಡರು.ಎರಡು ಬಾರಿ ವಿಶ್ವ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತೆಯಾಗಿರುವ ವಿನೇಶ್, ಮೊದಲ ಸುತ್ತಿನಲ್ಲಿ ಜ್ಯೋತಿ ಅವರನ್ನು 7-1 ಅಂತರದಲ್ಲಿ ಮಣಿಸಿದ್ದರು. ಬಳಿಕ ನಿಶು ವಿರುದ್ಧದ ಕಠಿಣ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಮಬಲದ ಹೋರಾಟದ ಬಳಿಕ ಮಾನದಂಡದ ಆಧಾರದ ಮೇಲೆ ಗೆದ್ದು ಸೆಮಿಫೈನಲ್‌ಗೆ ಪ್ರವೇಶಿಸಿದ್ದರು. ಆದರೆ ಮೀನಾಕ್ಷಿ ವಿರುದ್ಧ ಗೆಲುವು ಸಾಧಿಸಲು ವಿಫಲರಾದರು. ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸುವ ವಿಚಾರಕ್ಕೆ ಸಂಬಂಧಿಸಿದಂತೆ ತೀವ್ರ ಗೊಂದಲ ಮಾಡಿಕೊಂಡಿದ್ದ ವಿನೇಶ್ ಶುಕ್ರವಾರವಷ್ಟೇ ಸುಪ್ರೀಂ ಕೋರ್ಟ್‌ನಿಂದ ಅವಕಾಶ ಪಡೆದಿದ್ದರು.

ಹಾಕಿ: ಆಸ್ಟ್ರೇಲಿಯಾ ಸರಣಿ ಡ್ರಾ ಕೊನೆ ಪಂದ್ಯದಲ್ಲಿ ಭಾರತ ಸೋಲು



◆**ಪರ್ಥ್:** ಪರ್ಥ್‌ನಲ್ಲಿ ನಡೆದ ನಾಲ್ಕನೇ ಹಾಗೂ ಅಂತಿಮ ಸ್ನೇಹಪೂರ್ಣ ಪಂದ್ಯದಲ್ಲಿ ಭಾರತೀಯ ಮಹಿಳಾ ಹಾಕಿ ತಂಡ 2-3 ಅಂತರದಿಂದ ಆಸ್ಟ್ರೇಲಿಯಾ ವಿರುದ್ಧ ಸೋಲು ಅನುಭವಿಸಿದೆ. ಆದರೆ ನಾಲ್ಕು ಪಂದ್ಯಗಳ ಸರಣಿ 2-2ರಿಂದ ಸಮಬಲದಲ್ಲಿ ಅಂತ್ಯಗೊಂಡಿದ್ದು, ಭಾರತ ಉತ್ತಮ ಪ್ರದರ್ಶನದೊಂದಿಗೆ ಪ್ರವಾಸ ಮುಗಿಸಿದೆ.ಪಂದ್ಯದ ಎರಡನೇ ನಿಮಿಷದಲ್ಲೇ ನವ್ನೀತ್ ಕೌರ್ ಪೆನಾಲ್ಟಿ ಕಾರ್ನರ್ ಅನ್ನು ಗೋಲಾಗಿ ಪರಿವರ್ತಿಸಿ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. ಬಳಿಕ ಎರಡನೇ ಕ್ವಾರ್ಟರ್‌ನಲ್ಲಿ ದೀಪಿಕಾ ಸೊರೆಂಗ್ 23ನೇ ನಿಮಿಷದಲ್ಲಿ ಮತ್ತೊಂದು ಗೋಲು ಬಾರಿಸಿ ಭಾರತದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಮೊದಲಾರ್ಧದ ಅಂತ್ಯಕ್ಕೆ ಭಾರತ ಭದ್ರ ಸ್ಥಿತಿಯಲ್ಲಿತ್ತು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾ ಭರ್ಜರಿ ಪುನರಾಗಮನ ಮಾಡಿತು. ಅಬ್ಬಿ ವಿಲ್ಸನ್ 42ನೇ ನಿಮಿಷದಲ್ಲಿ ಹಾಗೂ ಒಲಿವಿಯಾ ಡೌನ್ಸ್ 44ನೇ ನಿಮಿಷದಲ್ಲಿ ಗೋಲು ಬಾರಿಸಿ ಪಂದ್ಯವನ್ನು 2-2ರಿಂದ ಸಮಬಲಕ್ಕೆ ತಂದರು. ಪಂದ್ಯ ಡ್ರಾದತ್ತ ಸಾಗುತ್ತಿದ್ದ ವೇಳೆ 58ನೇ ನಿಮಿಷದಲ್ಲಿ ಕೋರ್ಟ್‌ನಿ ಶೊನೆಲ್ ನಿರ್ಣಾಯಕ ಗೋಲು ದಾಖಲಿಸಿ ಆಸ್ಟ್ರೇಲಿಯಾಗೆ 3-2 ಅಂತರದ ಗೆಲುವು ತಂದುಕೊಟ್ಟರು. ಮೊದಲ ಪಂದ್ಯದಲ್ಲಿ ಸೋತಿದ್ದ ಭಾರತ ನಂತರದ ಎರಡು ಪಂದ್ಯಗಳಲ್ಲಿ ಗೆಲುವು ಸಾಧಿಸಿ ಸರಣಿಯಲ್ಲಿ ಮೇಲುಗೈ ತೋರಿಸಿತ್ತು. ಅಂತಿಮ ಪಂದ್ಯದಲ್ಲಿ ಸೋಲು ಕಂಡರೂ, ಸರಣಿಯನ್ನು 2-2ರಿಂದ ಸಮಬಲಗೊಳಿಸುವ ಮೂಲಕ ತಂಡದ ಹೋರಾಟದ ಮನೋಭಾವ, ತಾಂತ್ರಿಕ ಶಿಸ್ತು ಹಾಗೂ ಆಕ್ರಮಣಕಾರಿ ಆಟ ಗಮನ ಸೆಳೆಯಿತು.

ಏಷ್ಯನ್ ಅಂಡರ್-20 ಅಥ್ಲೆಟಿಕ್: ಭಾರತಕ್ಕೆ ಮೂರು ಚಿನ್ನ

◆**ಹೊಸದಿಲ್ಲಿ:** ಹಾಂಗ್ ಕಾಂಗ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಅಂಡರ್-20 ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತೀಯ ಅಥ್ಲೀಟ್‌ಗಳು ಪದಕ ಬೇಟೆಯನ್ನು ಮುಂದುವರಿಸಿದ್ದು, ಶನಿವಾರ ಮೂರು ಚಿನ್ನದ ಪದಕಗಳನ್ನು ಗೆದ್ದು ಮಿಂಚಿದ್ದಾರೆ. ಅದರಲ್ಲೂ ಪುರುಷರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಭಾರತ ಮೊದಲ ಎರಡು ಸ್ಥಾನಗಳನ್ನು ತನ್ನದಾಗಿಸಿಕೊಂಡಿದೆ. ಶಹ್ನವಾಜ್ 7.84 ಮೀಟರ್ ದೂರ ಜಿಗಿದು ಚಿನ್ನದ ಪದಕ ಗೆದ್ದರೆ, ಮತ್ತೊರ್ವ ಭಾರತೀಯ ಅಥ್ಲೀಟ್ ಜಿತಿನ್ 7.66 ಮೀಟರ್ ಜಿಗಿತದೊಂದಿಗೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.ಪುರುಷರ ಹೈಜಂಪ್ ಸ್ಪರ್ಧೆಯಲ್ಲಿ ಬಸಂತ್ 2.20 ಮೀಟರ್ ಎತ್ತರ ದಾಟಿ ಚಿನ್ನದ ಪದಕ ಜಯಿಸಿದರು. ಇದೇ ವೇಳೆ ಪುರುಷರ 3000 ಮೀಟರ್ ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ನಿಖಿಲ್ ಚಂದ್ರಶೇಖರ್ 9 ನಿಮಿಷ 25.44 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದು ಭಾರತದ ಪದಕ ಸಂಗ್ರಹ ಹೆಚ್ಚಿಸಿದರು.

ಮತ್ತೆ ಕಪ್ ಗೆಲ್ಲಲಿ ಆರ್‌ಸಿಬಿ

ಸತತ 2ನೇ ಟ್ರೋಫಿಗಾಗಿ ಫೈನಲ್‌ನಲ್ಲಿ ಫೈಟ್ ರಜತ್ ಪಡೆಗೆ ಗುಜರಾತ್ ಸವಾಲು

◆**ಹಮದಾಬಾದ್:** ಸಮಸ್ತ ಕ್ರಿಕೆಟ್ ಅಭಿಮಾನಿಗಳಿಗೆ ಈ ಒಂದೇ ಪ್ರಶ್ನೆ. ಸತತ ಎರಡನೇ ಬಾರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಚಾಂಪಿಯನ್ ಪಟ್ಟ ಅಲಂಕರಿಸಲಿದೆಯಾ ಅಥವಾ ಗುಜರಾತ್ ಮೂರು ವರ್ಷದ ಬಳಿಕ ಕಿರೀಟ ಮುಡಿಗೇರಿಸಿಕೊಳ್ಳಲಿದೆಯಾ ಎಂಬ ಕುತೂಹಲ. 73 ಪಂದ್ಯದಲ್ಲಿ ಸಾವಿರಾರು ರನ್ ಹರಿದಿವೆ. ಸಹಸ್ರಾರು ಸಿಕ್ಸರ್‌ಗಳು ಸುರಿದಿವೆ. ಹತ್ತಾರು ಟ್ವಿಸ್ಟ್, ನೂರಾರು ಬೌಂಡರಿಗಳು ಮೂಡಿವೆ. ವಿದೇಶಿ ಕ್ರಿಕೆಟಿಗರ ಅಬ್ಬರದ ಜತೆಗೆ ದೇಶಿ ಕ್ರಿಕೆಟಿಗರ ಮಿಂಚಿನಾಟ. ಹೊಚ್ಚ ಹೊಸ ಕ್ರಿಕೆಟಿಗರ ಮೆರೆದಾಟ. ಬಂದ ಬಾಲ್‌ಗಳನ್ನು ಬೌಂಡರಿಗಟ್ಟುವ ಛಲ ಬ್ಯಾಟರ್‌ಗಳಿಗಾದರೆ, ಮೂರು ಸ್ಟಂಪ್‌ಗಳನ್ನು ಕಿತ್ತುವ ಉತ್ಸಾಹ ಬೌಲರ್‌ಗಳಿಗೆ. ಇದೆಲ್ಲಾ ಆಟ, ಪಾಠ ಮತ್ತು ಮಹಾಕೂಟ ಭಾನುವಾರದಂದು ಅಂತ್ಯಗೊಳ್ಳಲಿದೆ. ಫೈನಲ್‌ಗೇರಿರುವ ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ತಂಡಗಳು ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಎದುರಾಗಲಿವೆ. ಎರಡೂ ತಂಡಕ್ಕೂ ಎರಡನೇ ಕಪ್‌ನ ಹಂಬಲ. ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೊದಲ ಕ್ವಾಲಿಫೈಯರ್ ಪಂದ್ಯದಲ್ಲೇ ಗೆಲುವು ಸಾಧಿಸಿ ಫೈನಲ್‌ಗೇರಿದೆ. ಅಲ್ಲಿ ಸೋತಿದ್ದ ಗುಜರಾತ್ ಟೈಟಾನ್ಸ್ ರಾಜಸ್ಥಾನ ವಿರುದ್ಧದ ಕ್ವಾಲಿಫೈಯರ್-2 ಪಂದ್ಯದಲ್ಲಿ ಫೈನಲ್‌ಗೇರಿದೆ.

ಗೆದ್ದವರಿಗೆ ಎರಡನೇ ಕಿರೀಟ

ಕಳೆದ ಕೂಟ ಅಂದರೆ 2025ರಲ್ಲಿ ಬೆಂಗಳೂರು ತಂಡ ಚಾಂಪಿಯನ್ ಪಟ್ಟಕ್ಕೇರಿತು. ತನ್ನ ಟ್ರೋಫಿ ತನ್ನ ಬಳಿಯೇ ಉಳಿಸಿಕೊಳ್ಳಲು ಹೋರಾಡಲಿದೆ. ಇತ್ತ 2022ರಲ್ಲಿ ತನ್ನ ಅಭಿಯಾನ ಶುರು ಮಾಡಿರುವ ಗುಜರಾತ್ ಲಾಂಚ್ ಆದ ವರ್ಷವೇ ಹಾರ್ದಿಕ್ ಪಾಂಡ್ಯ ಅವರ ನೇತೃತ್ವದಲ್ಲಿ ಚಾಂಪಿಯನ್ ಪಟ್ಟಕ್ಕೇರಿತ್ತು. 2023ರಲ್ಲಿ ಫೈನಲ್ ಗೇರಿದ್ದರೂ ಕಪ್ ಗೆದ್ದಿರಲಿಲ್ಲ.

ಜಿಟಿ-ಆರ್‌ಸಿಬಿ-ಸಮಬಲದ ಹೋರಾಟ

ಗುಜರಾತ್ ಟೈಟಾನ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಸಮಬಲದ ಹೋರಾಟ ನಡೆಸಿವೆ. ಇಲ್ಲಿಯವರೆಗೆ ಇತ್ತಂಡಗಳು 8 ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಆರ್ ಸಿಬಿ, ಗುಜರಾತ್ ಸಮಾನ ಗೆಲುವು ಸಾಧಿಸಿವೆ. ಹೀಗಾಗಿ ಫೈನಲ್ ಪಂದ್ಯದಲ್ಲಿ ಗೆದ್ದವರು ಮುಖಾಮುಖಿಯ ಸಮಬಲ ಮುರಿದು ವಿನ್ನರ್ ಆಗಲಿರುವುದು ವಿಶೇಷ.

ಪಿಚ್ ರಿಪೋರ್ಟ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಗುಜರಾತ್‌ನ ತವರು ಪಿಚ್‌ನಲ್ಲಿ ಪಂದ್ಯ ನಡೆಯಲಿರುವುದು ಅಲ್ಪ ಲಾಭ ಪಡೆಯಬಹುದು. ಸ್ಪಿನ್ನರ್‌ಗಳಿಗೆ ಅಲ್ಪ ಸಹಾಯಕವಾಗಿರಲಿದೆ. ಹೆಚ್ಚಿನ ಬೌನ್ಸ್ ಕೂಡ ಇರಲಿದೆ. ಮಳೆ ಸಾಧ್ಯತೆ ಕಡಿಮೆ.

ಪಂದ್ಯದ ವಿವರ
ಯಾವಾಗ: ಭಾನುವಾರ, ಎಲ್ಲಿ: ಅಹಮದಾಬಾದ್,
ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್,
ಜಿಯೋ ಹಾಟ್‌ಸ್ಟಾರ್

ಒಂದು ವಿಚಿತ್ರ ದಾಖಲೆ

ಗುಜರಾತ್ ಹಾಗೂ ಆರ್‌ಸಿಬಿ ನಡುವೆ ನಡೆದಿರುವ ಎಲ್ಲ 8 ಪಂದ್ಯಗಳಲ್ಲೂ ಚೇಸಿಂಗ್ ಮಾಡಿದ ತಂಡವೇ ಗೆದ್ದಿದೆ. ಯಾವುದೇ ಪಂದ್ಯದಲ್ಲೂ ಡಿಫೆಂಡ್ ಮಾಡುವ ತಂಡ ಗೆದ್ದಿಲ್ಲ. ಇದು ಫೈನಲ್ ಪಂದ್ಯದ ಟಾಸ್ ವೇಳೆ ತಂಡದ ನಾಯಕರುಗಳಿಗೆ ಒತ್ತಡ ಹೇರಲಿದೆ.

ಕೊಹ್ಲಿಯೇ ಕಿಂಗ್


ಗುಜರಾತ್ ವಿರುದ್ಧ ಕೊಹ್ಲಿ
- 460 ರನ್
- ಸರಾಸರಿ 76.66
- 1 ಶತಕ
- ಸ್ಟ್ರೈಕ್ ರೇಟ್ 152+

ಗುಜರಾತ್ ಪರ ಸುದರ್ಶನ್ ಬೆಸ್ಟ್
- ಸುಮಾರು 265 ರನ್
- 2026ರಲ್ಲಿ 58 ಎಸೆತಗಳಲ್ಲಿ ಶತಕ
- ಆರ್‌ಸಿಬಿ ವಿರುದ್ಧ ಹೆಚ್ಚಿನ ರನ್



ಕೂಟದಲ್ಲಿ ಆರ್‌ಸಿಬಿ

2024ರ ಡಿಸೆಂಬರ್‌ನಲ್ಲಿ ನಡೆದಿದ್ದ ಮೆಗಾ ಹರಾಜಿನಲ್ಲೇ ಬೆಂಗಳೂರು ತಂಡದ ನಾಗಾಲೋಟ ಶುರುವಾಗಿದ್ದು. ಅಂದಿನ ದಿನ ಮಾತನಾಡಿದ್ದ ನಿರ್ದೇಶಕ ಮೊ ಬೋಬಾಟ್ ಮತ್ತು ಮುಖ್ಯ ತರಬೇತುದಾರ ಆ್ಯಂಡಿ ಫ್ಲವರ್ ನಾವು ಸ್ಟಾರ್ ಆಟಗಾರರಗಿಂತಲೂ ಗೆಲುವಿನಲ್ಲಿ ಮಿಂಚುವ ದೇಶಿ ಕ್ರಿಕೆಟಿಗರ ಮೊರೆ ಹೋದೆವು. ಬೇಕಾದ ಆಟಗಾರರನ್ನು ಖರೀದಿಸಿದೇವು ಎಂದು ಹೇಳಿದ್ದರು. ಆ ಹೇಳಿಕೆ ಬಂದಿದ್ದೆ ತಡ ಆರ್‌ಸಿಬಿ ಇತಿಹಾಸವೇ ಬದಲಾಯಿತು. ಪಂದ್ಯಾವಳಿಯಲ್ಲಿ ಸದೃಢ ತಂಡವಾಗಿ ಮೆರೆದಾಡಿತು. 2025ರ ಐಪಿಎಲ್ ಗೆದ್ದ ನಂತರ ಹೆಚ್ಚಿನ ಬದಲಾವಣೆ ಮಾಡಿಕೊಳ್ಳದ ಆರ್ ಸಿಬಿ ಯಶ್ ದಯಾಳ್ ಅವರನ್ನು ಬಿಟ್ಟು ಆಡಿದರೆ,



ಜೋಶ್ ಹ್ಯಾಜೆಲ್ವುಡ್ ಕೆಲವು ಪಂದ್ಯಗಳಲ್ಲಿ ಆಡಲ್ಲ ಎಂಬ ಆಘಾತ ಎದುರಿಸಿತು. ಜೇಕಬ್ ಡಫಿ, ಭುವನೇಶ್ವರ್ ಕುಮಾರ್ ಮತ್ತು ಯುವ ಆಲ್ ರೌಂಡರ್ ರಸೀಖ್ ಸಲಾಂ ಧಾರ್ ಅವರ ಬಲದೊಂದಿಗೆ ಆಡಿದ ಆರ್‌ಸಿಬಿ ಬೌಲಿಂಗ್‌ನಲ್ಲಿ ಮೊದಲಿನಿಂದಲೂ ನಂಬರ್.1 ಆಗಿರುವುದೇ ವಿಶೇಷ. ಈಗ ತಂಡದಲ್ಲಿ ರಸೀಖ್, ಭುವನೇಶ್ವರ್ ಕುಮಾರ್, ಡಫಿ ಹಾಗೂ ಶೇಫರ್ಡ್ ಎಲ್ಲರೂ ಮಿಂಚುತ್ತಿದ್ದಾರೆ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ ತಂಡಕ್ಕಿರುವ ದೊಡ್ಡ ಶಕ್ತಿಯೇ ವಿರಾಟ್ ಕೊಹ್ಲಿ. ಮೊದಲ ಪಂದ್ಯದಿಂದಲೂ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಅತ್ತ ನಾಯಕ ಪಾಟಿದಾರ್ ತಂಡಕ್ಕೆ ಆನೆ ಬಲ ತಂದಿದ್ದಾರೆ. ಸಾಲ್ಟ್ ತಂಡದಲ್ಲಿ ಕೆಲವು ಪಂದ್ಯದ ಮಟ್ಟಿಗೆ ಇಲ್ಲದಿದ್ದರೂ ಅವರ ಬದಲಿಗೆ ಆರಂಭಿಕರಾಗಿ ಆಡುತ್ತಿರುವ ವೆಂಕಟೇಶ್ ಅಯ್ಯರ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಈ ನಡುವೆ ಮೂರನೇ ಕ್ರಮಾಂಕದಲ್ಲಿ ಆಡುವ ದೇವದತ್ತ ಪಡಿಕ್ಕಲ್ ಪಂದ್ಯದ ಗತಿಯೇ ಬದಲಿಸುತ್ತಿರುವುದು ಆರ್‌ಸಿಬಿಯ ಭರವಸೆ.

ಜಿಟಿ ದಾಳಿ ಎದುರಿಸಬೇಕಿದೆ ಆರ್‌ಸಿಬಿ

ಆದಾಗ್ಯೂ ಬೆಂಗಳೂರು ಗುಜರಾತ್ ಟೈಟಾನ್ಸ್ ಬೌಲಿಂಗ್ ಪಡೆಯನ್ನು ಸಮರ್ಥವಾಗಿ ಎದುರಿಸುವ ಸವಾಲನ್ನು ಹೊಂದಿದೆ. ಕ್ವಾಲಿಫೈಯರ್ ಪಂದ್ಯದಲ್ಲಿ ದಂಡಿಸಿರುವ ಆರ್‌ಸಿಬಿ, ರಬಾಡ, ಸಿರಾಜ್, ಹೋಲ್ಡರ್ ದಾಳಿಯನ್ನು ಎದುರಿಸಬೇಕಿದೆ. ಮುಖ್ಯವಾ ಆಡಿರುವ ಎರಡೂ ಪಂದ್ಯಗಳಲ್ಲಿ ಆರ್‌ಸಿಬಿಗೆ ಹೋಲ್ಡರ್ ಅಲ್ಪ ಕಾಟ ಕೊಟ್ಟಿದ್ದಾರೆ. ಎರಡು ಬಾರಿಯೂ ವಿರಾಟ್ ಕೊಹ್ಲಿ ವಿಕೆಟ್ ಪಡೆದಿರುವ ಜೇಸನ್ ಆರ್‌ಸಿಬಿ ವಿರುದ್ಧ ಉತ್ತಮ ಅಂಕಿ-ಸಂಖ್ಯೆಗಳನ್ನು ಅವರ ಹೊಂದಿರುವುದು ಸವಾಲನ್ನು ಎದುರಿಸಬೇಕಿದೆ.

ಪ್ರಮುಖ ಆಟಗಾರರು(ಆರ್‌ಸಿಬಿ)

ಬ್ಯಾಟಿಂಗ್
- ಕೊಹ್ಲಿ: 600 ರನ್
- ಪಾಟಿದಾರ್: 486ರನ್
- ಪಡಿಕ್ಕಲ್: 463ರನ್
- ಕೃಣಾಲ್ : 281ರನ್, 13 ವಿಕೆಟ್

ಬೌಲಿಂಗ್
- ಭುವನೇಶ್ವರ್ : 26 ವಿಕೆಟ್
- ರಸೀಖ್ : 16 ವಿಕೆಟ್
- ಹ್ಯಾಜೆಲ್ವುಡ್: 18 ವಿಕೆಟ್
- ಸುಯಶ್: 9 ವಿಕೆಟ್

ಕೂಟದಲ್ಲಿ ಪ್ರದರ್ಶನ
- ಪಂದ್ಯ: 15
- ಗೆಲುವು: 10
- ಸೋಲು: 5



ಕಳೆದ ಪಂದ್ಯದ ಫಲಿತಾಂಶ
ಗುಜರಾತ್ ವಿರುದ್ಧ 47 ರನ್ ಗೆಲುವು

ಗುಜರಾತ್ ಬಳಗಕ್ಕೂ ತಪ್ಪದ ಸವಾಲು

ಗುಜರಾತ್ ಹಾದಿ ನೋಡುತ್ತಾ ಬಂದರೆ ವಿಶೇಷ ಕಾರಣ, ವಿಶೇಷ ಮೈಲಿಗಲ್ಲುಗಳು ಸಿಗುತ್ತವೆ. ದೊಡ್ಡ ಪ್ಲೇಯರ್‌ಗಳ ಲಿಸ್ಟ್‌ನಲ್ಲಿ ಸಿಗುವುದು ಶುಭಮನ್ ಗಿಲ್ ಮತ್ತು ಜಾಸ್ ಬಟ್ಲರ್ ಹೆಸರು. ಇನ್ನುಳಿದವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿದ್ದರೂ ಅಷ್ಟೊಂದು ಪ್ರಭಾವಿಯಾಗಿ ಕಂಡವರಲ್ಲ. ಯಥಾವತ್ತಾಗಿ ಸಾಯಿ ಸುದರ್ಶನ್ ಮತ್ತೊಮ್ಮೆ ಮಿಂಚಿದರು. ಶುಭಮನ್ ಗಿಲ್ ತಮ್ಮ ಕರಾರುವಾಕ್ ಪ್ರದರ್ಶನದೊಂದಿಗೆ ಈವರೆಗೂ ಮಿಂಚಿದ್ದಾರೆ. ಅವರ ಕಳೆದ ಪಂದ್ಯದಲ್ಲಿನ ಅವರ ಶತಕ ಬಲ ತಂದಿದೆ. ಮಧ್ಯಮ ಕ್ರಮಾಂಕದಲ್ಲಿ ವಾಷಿ, ಬಟ್ಲರ್ ಮಿಂಚಿರುವುದು ತಂಡಕ್ಕೆ ದೊಡ್ಡ ಬಲ. ಬೌಲಿಂಗ್ ವಿಭಾಗವನ್ನೇ ಶಕ್ತಿಯಾಗಿರಿಸಿರುವ ಗುಜರಾತ್ ಗೆಲುವಿನ ನಾಗಾಲೋಟದಲ್ಲಿದೆ. ಸಿರಾಜ್, ರಬಾಡ, ಹೋಲ್ಡರ್, ಕೃಷ್ಣ ಹೀಗೆ ಬಂದವರೆಲ್ಲಾ ಅತ್ಯುತ್ತಮ ಬೌಲರ್‌ಗಳೇ ಹೌದು. ಆದಾಗ್ಯೂ ಆರ್ ಸಿಬಿ ಪಡೆ ವಿರುದ್ಧ ಕ್ವಾಲಿಫೈಯರ್‌ನಲ್ಲಿ ದೊಡ್ಡ ಹಿನ್ನಡೆಯೊಂದನ್ನು ಅನುಭವಿಸಿದೆ. ಬ್ಯಾಟಿಂಗ್‌ನಲ್ಲೂ ಭುವನೇಶ್ವರ್ ದಾಳಿಗೆ ಉತ್ತರ ಕೊಡುವುದೇ ತಂಡಕ್ಕಿರುವ ದೊಡ್ಡ ಸವಾಲು.

ಪ್ರಮುಖಆಟಗಾರರು(ಗುಜರಾತ್)

ಬ್ಯಾಟಿಂಗ್
- ಗಿಲ್: 722 ರನ್
- ಸುದರ್ಶನ್: 710 ರನ್
- ಬಟ್ಲರ್: 507 ರನ್
- ಸುಂದರ್: 327ರನ್

ಬೌಲಿಂಗ್
- ರಬಾಡ: 28 ವಿಕೆಟ್
- ರಶೀದ್: 19 ವಿಕೆಟ್
- ಸಿರಾಜ್: 18 ವಿಕೆಟ್
- ಹೋಲ್ಡರ್: 17 ವಿಕೆಟ್

ಕೂಟದಲ್ಲಿ ಪ್ರದರ್ಶನ:
- ಪಂದ್ಯ: 16
- ಗೆಲುವು: 10
- ಸೋಲು: 6



ಕಳೆದ ಪಂದ್ಯದ ಫಲಿತಾಂಶ
ರಾಜಸ್ಥಾನ ವಿರುದ್ಧ 7 ವಿಕೆಟ್ ಜಯ

ಏಷ್ಯನ್ ಗೇಮ್ಸ್‌ಗೆ ವೈಭವ್!

◆**ಮುಂಬೈ:** ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಕ್ರಿಕೆಟ್ ಸ್ಪರ್ಧೆಗಾಗಿ ಸಂಭಾವ್ಯ ಪಟ್ಟಿಯಲ್ಲಿ ವೈಭವ್ ಸೂರ್ಯವಂಶಿ ಅವರನ್ನು ಸೇರಿಸಲಾಗಿದೆ. ಬಹು ವರ್ಷಗಳ ನಂತರ ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ಮರಳಿದೆ. ಇದೇ ಪಂದ್ಯಾವಳಿಗಾಗಿ ಭಾರತ ತಂಡವನ್ನು ಪ್ರತಿನಿಧಿಸಲಿರುವ 30 ಜನರ ಸಂಭಾವ್ಯ ಪಟ್ಟಿಯನ್ನು ಬಿಸಿಸಿಐ ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಗೆ ಸಲ್ಲಿಸಿದೆ.

ಟೆಸ್ಟ್ ಮತ್ತು ಏಕದಿನನಾಯಕ ಶುಭಮನ್ ಗಿಲ್, ಹಾಲಿ ವಿಶ್ವಕಪ್ ಚಾಂಪಿಯನ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರ ಹೆಸರು ಇದರಲ್ಲಿಲ್ಲ. ಏಷ್ಯನ್ ಗೇಮ್ಸ್ ನಡೆಯುವ ಸಮಯದಲ್ಲೇ ವೆಸ್ಟ್ ಇಂಡೀಸ್‌ನೊಂದಿಗೆ ದೊಡ್ಡ ಸರಣಿ ಆಡಬೇಕಿದೆ. ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಟಿ20 ಮಾದರಿಯಲ್ಲಿ ನಡೆಯುತ್ತದೆ. ಪರಿಣಾಮ ವಿಂಡೀಸ್ ಸರಣಿಗಾಗಿ ಬೇರೆ ತಂಡ ಮತ್ತು ಏಷ್ಯನ್ ಗೇಮ್ಸ್ ಸರಣಿಗಾಗಿ ಬೇರೆ ತಂಡವನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಲಾಗುತ್ತಿದೆ.

ವಿಂಡೀಸ್ ವಿರುದ್ಧ ಭಾರತ 8 ವೈಟ್ ಬಾಲ್ ಪಂದ್ಯಗಳನ್ನಾಡಲಿದೆ. ಹೀಗಿರುವಾಗಿ



- 30 ಜನ ಕ್ರಿಕೆಟಿಗರ ಸಂಭಾವ್ಯ ಪಟ್ಟಿಯಲ್ಲಿ ಸೂರ್ಯವಂಶಿ
- ಗಿಲ್-ಸೂರ್ಯಗಿಲ್ಲ ಅವಕಾಶ
- ಒಲಿಂಪಿಕ್ಸ್ ಸಮಿತಿ ಕೈಗೆ ಪಟ್ಟಿ

ಶುಭಮನ್ ಗಿಲ್ ಏಕದಿನ ತಂಡವನ್ನು ಮುನ್ನಡೆಸಲಿದ್ದಾರೆ ಎನ್ನಲಾಗಿದೆ. ಟಿ20 ವಿಚಾರಕ್ಕೆ ಬಂದರೆ ಸೂರ್ಯಕುಮಾರ್ ಯಾದವ್ ಅವರನ್ನು ಒಲಿಂಪಿಕ್ಸ್ ಮುಂದಿನ ಟಿ20 ವಿಶ್ವಕಪ್ ಪಂದ್ಯಾವಳಿಯ ಯೋಜನೆಗಳಲ್ಲಿ ಪರಿಗಣಿಸಲಾಗಿಲ್ಲ ಎಂಬ ವಿಚಾರವೂ ಮುನ್ನೆಲೆಗೆ ಬಂದಿದೆ.

ಯಾರ್‍ಯಾರಿಗೆ ಅವಕಾಶ

ಮುಖ್ಯವಾಗಿ ಈ ಬಾರಿಯ ಐಪಿಎಲ್‌ನಲ್ಲಿ ಮಿಂಚಿ ವಿಶ್ವ ಕ್ರಿಕೆಟ್‌ನ ಪ್ರಮುಖ ಆಕರ್ಷಣೆಯಾಗಿರುವ ವೈಭವ್ ಸೂರ್ಯವಂಶಿ ಅವರನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ರಾಜಸ್ಥಾನ ತಂಡದ ಯಶಸ್ವಿ ಜೈಸ್ವಾಲ್, ಧ್ರುವ್ ಜುರೇಲ್ ಅವರನ್ನು ಆಯ್ಕೆ ಮಾಡಲಾಗಿದೆ. ಆಯುಷ್ ಬದೋನಿ, ಹರ್ಷ ದುಬೆ, ಶೆಹಬಾಜ್ ಅಹ್ಮದ್, ಅನುಕುಲ್ ರಾಯ್, ಗಮನಾರ್ಹವಾಗಿ ರುತುರಾಜ್ ಗಾಯಕ್ವಾಡ್ ಅವರನ್ನು ಆಯ್ಕೆ ಮಾಡಲಾಗಿದೆ. ವಿಕೆಟ್ ಕೀಪರ್ ರಿಷಭ್ ಪಂತ್ ಅವರನ್ನೂ ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

30 ಜನರ ಪಟ್ಟಿ

ಯಶಸ್ವಿ ಜೈಸ್ವಾಲ್, ಅಭಿಷೇಕ್ ಶರ್ಮಾ, ವೈಭವ್ ಸೂರ್ಯವಂಶಿ, ಇಶಾನ್ ಕಿಶನ್, ಸಂಜು ಸ್ಯಾಮ್ಸನ್ (ವಿ.ಕಿ), ಶ್ರೇಯಸ್ ಅಯ್ಯರ್, ರಿಷಭ್ ಪಂತ್ (ವಿ.ಕಿ), ಹಾರ್ದಿಕ್ ಪಾಂಡ್ಯ, ರಿಂಕು ಸಿಂಗ್, ತಿಲಕ್ ವರ್ಮಾ, ಜಸ್‌ಪ್ರೀತ್ ಬುಮ್ರಾ, ಅಕ್ಷರ್ ಪಟೇಲ್, ಅರ್ಷದೀಪ್ ಸಿಂಗ್, ಕುಲದೀಪ್ ರೆಡ್ಡಿ, ಕುಲದೀಪ್ ರೆಡ್ಡಿ, ಕುಲದೀಪ್ ಯಾದವ್, ಕುಲದೀಪ್ ಯಾದವ್ ಅನುಕೂಲ್ ರಾಯ್, ಆಯುಷ್ ಬದೋನಿ, , ಹರ್ಷ್ ದುಬೆ, ಧ್ರುವ್ ಜುರೆಲ್, ಖಲೀಲ್ ಅಹ್ಮದ್, ರುತುರಾಜ್ ಗಾಯಕ್ವಾಡ್, ರವಿ ಬಿಷ್ಣೋಯ್, ಶಹಬಾಜ್ ಅಹ್ಮದ್, ಶಿವಂ ದುಬೆ, ವಿಪ್ರಜ್ ನಿಗಮ್, ಹರ್ಷಿತ್ ರಾಣಾ, ಯಶ್ ಠಾಕೂರ್, ವಾಷಿಂಗ್ಟನ್ ಸುಂದರ್.

ಫ್ರೆಂಚ್ ಓಪನ್: ಜೋಕೊವಿಚ್ ಹೊರಕ್ಕೆ ಪ್ರಿಕ್ವಾರ್ಟರ್‌ಗೆ ಜ್ವೇರೆವ್, ಸಬಲೆಂಕಾ

◆**ಪ್ಯಾರಿಸ್:** ಪ್ರತಿಷ್ಠಿತ ಫ್ರೆಂಚ್ ಓಪನ್ ಪಂದ್ಯಾವಳಿ ಪ್ರಿಕ್ವಾರ್ಟರ್‌ಫೈನಲ್‌ಗೆ ಆಲೆಕ್ಸಾಂಡರ್ ಜ್ವೆರೆವ್ ತಲುಪಿದ್ದಾರೆ. ಪಂದ್ಯಾವಳಿಯ ಮೊದಲಪಂದ್ಯದಿಂದಲೂ ಅತ್ಯುತ್ತಮ ಪ್ರದರ್ಶನ ನೀಡುತ್ತಿರುವ ಅವರು, ಗೆಲುವಿನ ನಾಗಾಲೋಟವನ್ನು ಮೂರನೇ ಸುತ್ತಿಗೆ ವಿಸ್ತರಿಸಿದರು. ಕ್ವೆಂಟಿನ್ ಹಾಲ್ಸ್ ಅವರೊಂದಿಗೆ ಕಠಿಣ ಪೈಪೋಟಿಯಲ್ಲಿ ಅವರು, 6-4, 6-3, 5-7, 6-2ರಿಂದ ಗೆಲುವು ಸಾಧಿಸಿದರು.

ಶುಕ್ರವಾರದ ಪ್ರಮುಖ ಪಂದ್ಯದಲ್ಲಿ ನೋವಾಕ್ ಜೋಕೊವಿಚ್ ಸೋಲನುಭವಿಸಿದ್ದರು. ಬ್ರೆಜಿಲ್‌ನ ಜೊವಾವೊ ಫೊನ್ಸಿಕಾ ವಿರುದ್ಧ ಆಡಿದ್ದ ಅವರು, 6-4, 6-4, 3-6, 5-7, 5-7ರಿಂದ ಸೋತು ಹೊರಬಿದ್ದರು. ಮೊದಲಿಗೆ ಮುನ್ನಡೆ ಸಾಧಿಸಿದ್ದ ಅವರು, ಬಳಿಕ ಅಚ್ಚರಿಯ ಸೋಲು ಕಂಡರು. ಈ ಹಿಂದೆ ಪಂದ್ಯಾವಳಿಯಿಂದ ಯಾನಿಕ್ ಸಿನ್ನರ್ ಸೋತು ಹೊರ ಬಿದ್ದಿದ್ದರು. ಈ ನಿಟ್ಟಿನಲ್ಲಿ ಪುರುಷರ ಸಿಂಗಲ್ಸ್‌ನಲ್ಲಿ ಸ್ಟಾರ್ ಆಟಗಾರರು ಬಹುತೇಕ ಹೊರಬಿದ್ದಂತಿದೆ. ಜ್ವೇರೆವ್ ಮಾತ್ರವೇ ಉಳಿದಿದ್ದಾರೆ.

ಸಬಲೆಂಕಾ ಮುನ್ನಡೆ: ಮಹಿಳೆಯ ವಿಭಾಗದಲ್ಲಿ ತಮ್ಮ ಭರ್ಜರಿ ಪ್ರದರ್ಶನ



ಮುಂದುವರಿಸಿರುವ ಅರಿನಾ ಸಬಲೆಂಕಾ ಡಾರಿಯಾ ಅವರೊಂದಿಗೆ 6-4, 7-5ರಿಂದ ಗೆಲುವುಸಾಧಿಸಿದ್ದು,ಪ್ರಿ-ಕ್ವಾರ್ಟರ್‌ಗೇರಿದ್ದಾರೆ. ಅಚ್ಚರಿಯ ಫಲಿತಾಂಶದಲ್ಲಿ ಜೋವಿಕ್ ನಾವೊಮಿ ಒಸಾಕಾ ಅವರೊಂದಿಗೆ ಸೋತು ಹೊರನಡೆದಿದ್ದಾರೆ. ಶುಕ್ರವಾರದಂದು ತಮ್ಮ ಅತ್ಯುತ್ತಮ ಪ್ರದರ್ಶನದೊಂದಿಗೆ ಮಿಂಚಿರುವ ಈಗಾ ಸ್ವಿಯಾಟೆಕ್, ಮಾಗ್ದಾ ಅವರೊಂದಿಗೆ ಗೆಲುವು ಸಾಧಿಸಿದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಈಗಾ 6-4, 6-4ರಿಂದ ಗೆದ್ದು ಬೀಗಿದ್ದಾರೆ.

ಸಿಂಗಾಪುರ ಓಪನ್: ವಿಶ್ವ ನಂ.1 ಜೋಡಿಗೆ ಶಾಕ್ ನೀಡಿದ ಭಾರತೀಯರು

ಫೈನಲ್‌ಗೆ ಸಾತ್ವಿಕ್-ಚಿರಾಗ್ ಲಗ್ಗೆ

◆**ಸಿಂಗಾಪುರ:** ಸಿಂಗಾಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ತಾರಾ ಜೋಡಿಯಾದ ಸಾತ್ವಿಕ್‌ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಫೈನಲ್‌ಗೆ ಪ್ರವೇಶಿಸಿದ್ದಾರೆ. ಶನಿವಾರ ನಡೆದ ಪುರುಷರ ಡಬಲ್ಸ್ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಭಾರತೀಯ ಜೋಡಿ, ಅಗ್ರ ಶ್ರೇಯಾಂಕದ ಹಾಗೂ ವಿಶ್ವ ನಂ.1 ದಕ್ಷಿಣ ಕೊರಿಯಾದ ಕಿಮ್ ವೋನ್ ಹೋಸಿಯೊ ಸೆಯುಂಗ್ ಜೇ ಜೋಡಿಯನ್ನು ನೇರ ಗೇಮ್‌ಗಳಲ್ಲಿ ಮಣಿಸಿ ಸಂಚಲನ ಮೂಡಿಸಿತು. 52 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಸಾತ್ವಿಕ್-ಚಿರಾಗ್ 21-19, 21-18 ಅಂತರದಲ್ಲಿ ಗೆಲುವು ಸಾಧಿಸಿದರು. ಹಾಲಿ ವಿಶ್ವ ಚಾಂಪಿಯನ್‌ಗಳ ವಿರುದ್ಧ ಒತ್ತಡದ ಕ್ಷಣಗಳಲ್ಲೂ ಸಮಾಧಾನ ಕಾಪಾಡಿಕೊಂಡ ಭಾರತೀಯ ಜೋಡಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು. ಮೊದಲ ಗೇಮ್‌ನಲ್ಲಿ ವಿರಾಮದ ವೇಳೆಗೆ ಕೊರಿಯಾ




ಜೋಡಿ 13-11ರಿಂದ ಮುನ್ನಡೆಯಲ್ಲಿತ್ತು. ಆದರೆ ಸಾತ್ವಿಕ್-ಚಿರಾಗ್ ಅದ್ಭುತ ಪುನರಾಗಮನ ಮಾಡಿ ಪ್ರಮುಖ ಅಂಕಗಳನ್ನು ಗಳಿಸುವ ಮೂಲಕ ಗೇಮ್ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲೂ ಭಾರತೀಯಜೋಡಿ 11-14ರಿಂದಹಿನ್ನಡೆಯಲ್ಲಿತ್ತು. ಆದರೂ ಆತ್ಮವಿಶ್ವಾಸ ಕಳೆದುಕೊಳ್ಳದೆ ಹೋರಾಡಿದ ಸಾತ್ವಿಕ್-ಚಿರಾಗ್ ಸತತ ಅಂಕಗಳನ್ನು ಗಳಿಸಿ ಪಂದ್ಯವನ್ನು ಮುಗಿಸಿದರು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಸಾತ್ವಿಕ್- ಚಿರಾಗ್, ಇಂಡೋನೇಷ್ಯಾದ ಫಜರ್ ಅಲ್ಫಿಯನ್-ಮುಹಮ್ಮದ್ ಶೋಹಿಬುಲ್ ಫಿಕ್ರಿ ಜೋಡಿ ಹಾಗೂ ಚೀನಾದ ಲಿಯಾಂಗ್ ವೇ ಕಾಂಗ್‌ವಾಂಗ್ ಚಾಂಗ್ ಜೋಡಿ ನಡುವಿನ ಇನ್ನೊಂದು ಸೆಮಿಫೈನಲ್ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ. ಇನ್ನೊಂದೆಡೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೊ ಅವರ ಅಭಿಯಾನ ಅಂತ್ಯಗೊಂಡಿತು. ಸೆಮಿಫೈನಲ್‌ನಲ್ಲಿ ಜಪಾನ್‌ನ ಯುಯಿಚಿ ಶಿಮೊಗಾ-ಮಿಸಯಾಕಾ ಹೋಬರಾ ಜೋಡಿಗೆ 16-21, 21-17, 13-21 ಅಂತರದಲ್ಲಿ ಸೋತು ಅವರು ಟೂರ್ನಿಯಿಂದ ಹೊರಬಿದ್ದರು.

ಪದಬಂಧ

▶ ರಾಜಾ ಸಂಗಮೇಶ ಹಿರೇಮಠ



6000

5999 ಉತ್ತರ

ಎಡದಿಂದ ಬಲಕ್ಕೆ:
2.ಆತ್ಮರತಿ 4.ತುಡಿತ
6.ದಿಟ್ಟಿಗಿಡಿಯ 9.ನವರಸ
10.ನವರಸ 13.ಹಣದೊಡತಿ
15.ಮಾಳಿಗೆ 17.ಬಾಕಿ
18.ತಾಲಮಾನ
ಮೇಲಿನಿಂದ ಕೆಳಕ್ಕೆ : 1.ಪಾತ
2.ಆತುರಗಾರ 3.ರಜಾದಿನ
4.ಗಾರುಡಿ 7.ಯಶೋಮತಿ
8.ಜ್ಞಾನದಾಹ
11.ಮಾನಾಪಮಾನ
12.ಅತಿಬಲ 14.ಕಿರಣ
16.ಗೆಡ್ಡೆ

ಎಡದಿಂದ ಬಲಕ್ಕೆ
2.ವಿಮಾನವನ್ನೊಳಗೊಂಡ ವಸ್ತುಸ್ಥಿತಿ (4)
4.ಅದೃಷ್ಟ-ಸುದೈವದ ಸಮಾನಪದ (2)
5.ವಿಶ್ವದ ಅತಿದೊಡ್ಡ ಮರುಭೂಮಿ (3)
6.ಅವರು ಭಯದಿಂದ ಪಡೆದ ಆಶ್ವಾಸನೆ (4)
8.ಕುಚೇಷ್ಟೆ-ಅಧಿಕಪ್ರಸಂಗವಿದು (4)
10.ತಲೆ ರಕ್ಷಿಸಲು ಹಾಕಿಕೊಳ್ಳುವ ಸಾಧನ (4)
12.ಮೊಬಲಗಿನಲ್ಲಿ ಕೊಡುವ ಸೋಡಿ (4)
14.ಹರನ ಜಟೆಯ ಬಗೆಗಿನ ವ್ಯಥಾ ಮಾತುಕತೆ (3)
16.ದನ-ಜಾನುವಾರು ಇದು (2)
17.ಮರಣ ವಿರಸವಾದರೆ ಜೀವನ? (4)

ಮೇಲಿನಿಂದ ಕೆಳಕ್ಕೆ
1.ಉದಾಸನಾಗಿ ಕುಳಿತ ಸೇವಕ (2)
2.ಹೊಳೆಯುವ-ವೈಭವದಿಂದ ಕೂಡಿದ್ದು (4)
3.ಮನುಷ್ಯರ ಬಗ್ಗೆ ಇರುವ ಅಂಜಿಕೆ (4)
4.ಭಾವನ ಗರ್ವ ಮುರಿದ ಪರಶುರಾಮ (3)
7.ಇದು ಆಕರ್ಷಿಸುವ ಸ್ವಭಾವ (4)
8.ಈಕೆ ರಾವಣನ ಪತ್ನಿ (4)
9.ಪೂರ್ವಕಥೆ-ಚರಿತ್ರೆಯಿದು(4)
11. ನೆರವನ್ನು ಉಲ್ಟಾ ನೀಡುತ್ತಿದ್ದಾರೆ (4)
13.ದಯನೀಯವಾಗಿ ಬೇಡು (3)
15.ಬಲವಾದ ಸುತ್ತುಗೋಡೆ ತಲೆಕೆಳಗಾಗಿದೆ (2)

ಹೊಸ ದಿಗಂತ
ಭಾನುವಾರ, 31 ಮೇ 2026
ಹುಬ್ಬಳ್ಳಿ

ವಿದ್ಯಾರ್ಥಿ ರಾಜಕೀಯದಿಂದ ಸಿಎಂ ಕುರ್ಚಿಯವರೆಗೆ

ಡಿ.ಕೆ. ಶಿವಕುಮಾರ್



ದೊಡ್ಡಆಲಹಳ್ಳಿ ಕೆಂಪೇಗೌಡ ಶಿವಕುಮಾರ್ ಆದ ನಾನು...

– ಹೀಗೆ ಕರ್ನಾಟಕದ 32ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿರುವ ಡಿ.ಕೆ. ಶಿವಕುಮಾರ್ ಅವರು ರಾಜಕೀಯ ಜೀವನವೇ ಒಂದು ಕುಲುಮೆಯಲ್ಲಿ ಬೆಂದ ಲೋಹದಂತೆ. ಬಲು ಗಟ್ಟಿ. ನೂರಾರು ಸವಾಲುಗಳು, ಅವಮಾನ, ಅಡೆತಡೆಗಳು ಎದುರಾದರೂ ಜೀವನದುದ್ದಕ್ಕೂ ಅವರ ತಾಳ್ಮೆಯೇ ಮೇಲುಗೈ ಸಾಧಿಸುತ್ತದೆ.

ಶಿವಕುಮಾರ್ ತಮ್ಮ ಬಾಲ್ಯವನ್ನು ರಾಜಾಜಿನಗರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ವಿಠಲ ಶಾಖೆಯಲ್ಲಿ ಭಾಗವಹಿಸುತ್ತಾ ಕಳೆದರು. ಆದರೆ, ಈ ಒಡನಾಟವೂ ದೀರ್ಘಾವಧಿಯವರೆಗೆ ಮುಂದುವರಿಯಲಿಲ್ಲ. ಆರ್‌ಎಸ್‌ಎಸ್ (ಸಂಘ) ಜೊತೆಗಿನ ಅಲ್ಪಾವಧಿಯ ಒಡನಾಟದಲ್ಲಿ ಅದರ ಅನೇಕ ಕಾರ್ಯಕ್ರಮಗಳಿಗೆ ಹಾಜರಾಗಿದ್ದರು. ಸಂಘದ ಗಣವೇಷ(ಸಮವಸ್ತ್ರ)ವನ್ನೂ ಧರಿಸಿದ್ದರು. ಶಿವಕುಮಾರ್ 1985ರಲ್ಲಿ ವಿಧಾನಸಭಾ ಚುನಾವಣೆಗೆ ಪಾದಾರ್ಪಣೆ ಮಾಡುವ ಮೊದಲು, ಕಾಂಗ್ರೆಸ್ ಬೆಂಬಲಿತ ನ್ಯಾಷನಲ್ ಸ್ಟೂಡೆಂಟ್ಸ್ ಯೂನಿಯನ್ ಆಫ್ ಇಂಡಿಯಾ (ಎನ್‌ಎಸ್‌ಯುಐ) ಅವರಿಗೆ ವಿದ್ಯಾರ್ಥಿ ಚುನಾವಣಾ ಟಿಕೆಟ್ ನಿರಾಕರಿಸಿತ್ತು. ಆ ಸಮಯದಲ್ಲಿ, ಬಿಜೆಪಿಯ ಅನಂತ್ ಕುಮಾರ್ ಅವರು ಶಿವಕುಮಾರ್ ಅವರನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ)ಗೆ ಕರೆತರಲು ಪ್ರಯತ್ನಿಸಿದ್ದರು.



ಕಾಂಗ್ರೆಸ್‌ನಿಂದ ಗೆಲುವು-ಟಿಕೆಟ್ ನಿರಾಕರಣೆ

ಶಿವಕುಮಾರ್ 1989ರಲ್ಲಿ ಮೊದಲ ಬಾರಿಗೆ ಸಾತನೂರು ವಿಧಾನಸಭಾ ಕ್ಷೇತ್ರದಿಂದ ವಿಜಯ ಸಾಧಿಸುವ ಮೂಲಕ ರಾಜ್ಯ ಆಡಳಿತ ಶಕ್ತಿಕೇಂದ್ರವಾಗಿರುವ ವಿಧಾನಸೌಧವನ್ನು ಪ್ರವೇಶಿಸಿದರು. ಈ ಚುನಾವಣೆಯಲ್ಲಿ ಸುಮಾರು ಶೇ. 49 ರಷ್ಟು ಮತಗಳನ್ನು ಗಳಿಸಿದರು. ಮೊದಲ ಬಾರಿ ವಿಧಾನಸಭೆ ಪ್ರವೇಶಿಸುವಾಗ ಅವರ ವಯಸ್ಸು ಕೇವಲ 27 ವರ್ಷ. ತರುವಾಯ 1994ರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಗೆ ಅವರಿಗೆ ಕಾಂಗ್ರೆಸ್ ಪಕ್ಷದ ಟಿಕೆಟ್ ನಿರಾಕರಿಸಲಾಯಿತು. ಹೀಗಾಗಿ, ಅವರು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ಸಾತನೂರು ಕ್ಷೇತ್ರದಿಂದ ಎರಡನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು. ಅವರ ಮತ ಹಂಚಿಕೆ ಶೇ. 46ರಷ್ಟಿತ್ತು. ಶಿವಕುಮಾರ್ ಅವರ ಈ ಗೆಲುವು ಕಾಂಗ್ರೆಸ್ ಹೈಕಮಾಂಡ್‌ಗೆ ಒಂದು ಪ್ರಮುಖ ವಿಷಯ ಮನವರಿಕೆ ಮಾಡಿತು. ಅದು ಬೇರ್‍ಯಾವುದೂ ಅಲ್ಲ, ಡಿ.ಕೆ. ಶಿವಕುಮಾರ್ ಅವರ ರಾಜಕೀಯ ಮುನ್ನಡೆಗೆ ಪಕ್ಷದ ಹಣೆಪಟ್ಟಿಯ ಅಗತ್ಯವಿಲ್ಲ ಎಂಬುದಾಗಿತ್ತು.

ಆರಂಭಿಕ ವರ್ಷಗಳು

ಬೆಂಗಳೂರಿನ ವಿದ್ಯಾರ್ಥಿ ರಾಜಕೀಯದಿಂದ ಹಿಡಿದು ಕರ್ನಾಟಕದ ಕಾಂಗ್ರೆಸ್‌ನ ಅತ್ಯಂತ ಶಕ್ತಿಶಾಲಿ ನಾಯಕರಲ್ಲಿ ಒಬ್ಬರಾಗುವವರೆಗೆ, ಶಿವಕುಮಾರ್ ಅವರ ಏಳಿಗೆಯು ಎಂಟು ವಿಧಾನಸಭಾ ಚುನಾವಣೆ ಗೆಲುವುಗಳು, ದಶಕಗಳ ಸರ್ಕಾರದಲ್ಲಿ, ಜೈಲಿನಲ್ಲಿ ಮತ್ತು ತಳಮಟ್ಟದ ರಾಜಕೀಯದ ಮೇಲಿನ ಬಲವಾದ ಹಿಡಿತದಿಂದ ರೂಪುಗೊಂಡಿದೆ. ಶಿವಕುಮಾರ್ 1981ರಲ್ಲಿ ಎನ್‌ಎಸ್‌ಯುಐ ಸೇರಿದಾಗ ಅವರಿಗೆ ಕೇವಲ 18 ವರ್ಷ. ಅವರು ರಾಮ್ ನಾರಾಯಣ್ ಚೆಲ್ಲಾರಂ ಕಾಲೇಜಿನಲ್ಲಿ ಓದುತ್ತಿರುವಾಗಲೇ ಎನ್‌ಎಸ್‌ಯುಐನ ಬೆಂಗಳೂರು ಜಿಲ್ಲಾಧ್ಯಕ್ಷರಾಗಿ ಮತ್ತು ನಂತರ ಕರ್ನಾಟಕ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ ಬೆಳೆದರು. 1985 ರಲ್ಲಿ ಅವರಿಗೆ ಮೊದಲ ನಿಜವಾದ ಪರೀಕ್ಷೆ ಎದುರಾಯಿತು, ಕಾಂಗ್ರೆಸ್ ಪಕ್ಷವು ಯುವ ನಾಯಕನನ್ನು ಜನತಾದಳದ ಅತ್ಯಂತ ಪ್ರಭಾವಿ ವ್ಯಕ್ತಿಗಳಲ್ಲಿ ಒಬ್ಬರಾದ ಎಚ್.ಡಿ. ದೇವೇಗೌಡ ಅವರ ವಿರುದ್ಧ ಸಾತನೂರಿನಲ್ಲಿ ಕಣಕ್ಕಿಳಿಸಿತು. ಆದರೆ ಅವರು ಅಲ್ಪ ಮತಗಳ ಅಂತರದಲ್ಲಿ ಸೋತರು. ಶಿವಕುಮಾರ್ ಅವರು ಕ್ಷೇತ್ರದ ಜನರಿಗೆ ಹೆಚ್ಚು ಪರಿಚಿತರಲ್ಲದಿದ್ದರೂ ಭವಿಷ್ಯದ ಪ್ರಧಾನಿಗೆ ಸೆಡ್ಡು ಹೊಡೆದದ್ದು ಎಲ್ಲರ ದೃಷ್ಟಿ ಅವರತ್ತ ನೆಟ್ಟಿತು. ಅವರು 1987 ರ ಹೊತ್ತಿಗೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದರು. ಶಿವಕುಮಾರ್ ಅವರ ಗೆಲುವಿನ ನಾಗಾಲೋಟಕ್ಕೆ ಅದು ಅಡಿಪಾಯವಾಗಿತ್ತು.





ಟ್ರಬಲ್ ಶೂಟರ್

ಕಾಂಗ್ರೆಸ್ ಪಕ್ಷದಲ್ಲಿ ಡಿ.ಕೆ. ಶಿವಕುಮಾರ್ ತಮ್ಮನ್ನು ತಾವು ಟ್ರಬಲ್ ಶೂಟರ್ ಎಂಬುದನ್ನು ಸಾಬೀತು ಪಡಿಸುವ ಮೂಲಕ ಉನ್ನತ ಹುದ್ದೆಗೆ ಏರಿದರು. 2002ರಲ್ಲಿ, ಆಗಿನ ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್ ಅವರ ಸರ್ಕಾರ ಬೀಳದಂತೆ ತಮ್ಮ ಶಾಸಕರ ಖರೀದಿ ಭಯದಿಂದ ಅವರನ್ನು ರಕ್ಷಿಸಲು ಆಗಿನ ಕರ್ನಾಟಕ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸಹಾಯ ಕೋರಿದರು. ಆ ಸಮಯದಲ್ಲಿ, ಶಿವಕುಮಾರ್ ಅವರೇ ರಕ್ಷಣೆಗೆ ಬಂದು ಶಾಸಕರನ್ನು ಬಿಡದಿಯ ರೆಸಾರ್ಟ್‌ನಲ್ಲಿ ಇರಿಸಿದ್ದರು. ಅದೇ ರೀತಿ, 2017ರಲ್ಲಿ ಗುಜರಾತ್‌ನ 44 ಶಾಸಕರನ್ನು ಬಿಜೆಪಿ ಹೈಜಾಕ್ ಮಾಡಲು ಯತ್ನಿಸಿದಾಗ ಅವರನ್ನು ಕರ್ನಾಟಕಕ್ಕೆ ಕರೆ ತಂದು ರಕ್ಷಿಸಿದವರು ಇದೇ ಶಿವಕುಮಾರ್. ಅದಕ್ಕಾಗಿಯೇ ಅವರು ಈಗಲ್‌ಟನ್ ರೆಸಾರ್ಟ್‌ನಲ್ಲಿ ಇದ್ದಾಗಲೇ ಐಟಿ ದಾಳಿ ಎದುರಿಸಬೇಕಾಯಿತು.

ಮೂರನೇ ಬಾರಿಗೆ, 2018ರ ಕರ್ನಾಟಕ ವಿಧಾನಸಭಾ ಚುನಾವಣೆಯ ನಂತರ ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರ ರಚನೆಗೆ ಶಾಸಕರನ್ನು ಕುದುರೆ ವ್ಯಾಪಾರದಿಂದ ರಕ್ಷಿಸುವ ಕಾರ್ಯವನ್ನು ಕೈಗೆತ್ತಿಕೊಂಡರು. ರಾಜ್ಯ ರಾಜಕಾರಣದಲ್ಲಿ ಅತಂತ್ರ ಸನ್ನಿವೇಶ ಎದುರಾದಾಗ ಹೈಕಮಾಂಡ್ ಸೂಚನೆಗೆ ತಲೆಬಾಗಿ ದೇವೇಗೌಡ ಕುಟುಂಬದೊಂದಿಗಿನ ರಾಜಕೀಯ ವೈಷಮ್ಯವನ್ನು ಬದಿಗಿರಿಸಿ, ಮೈತ್ರಿ ಸರ್ಕಾರದ ರಚನೆಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. 2024ರ ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ಹಿಮಾಚಲ ಪ್ರದೇಶದ ಕಾಂಗ್ರೆಸ್ ಪಕ್ಷದ ಆರು ಶಾಸಕರು ಬಿಜೆಪಿಗೆ ಮತ ಚಲಾಯಿಸುವುದರೊಂದಿಗೆ ಭಿನ್ನಮತ ಇನ್ನಷ್ಟು ಜೋರಾಯಿತು. ಆಗಲೂ ಈ ಸಮಸ್ಯೆಯನ್ನು ಬಗೆಹರಿಸಲು ಹೋಗಿದ್ದು ಇದೇ ಡಿ.ಕೆ. ಶಿವಕುಮಾರ್. 2004ರಲ್ಲಿ ಪ್ರಥಮ ಬಾರಿಗೆ ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ರೂಪುಗೊಂಡಾಗ ಎಸ್.ಎಂ. ಕೃಷ್ಣ ಅವರನ್ನು ಕಡೆಗಣಿಸಿ ಎಚ್.ಡಿ. ದೇವಗೌಡರ ಒಪ್ಪಿಗೆಯಂತೆ ಧರ್ಮಸಿಂಗ್ ಅವರನ್ನು ಮುಖ್ಯಮಂತ್ರಿ ಮಾಡಬೇಕಾಗಿ ಬಂದಾಗ ಎಸ್.ಎಂ. ಕೃಷ್ಣ ಅವರಿಗೆ ಬದಲಿಯಾಗಿ ಯಾವುದಾದರೊಂದು ಸ್ಥಾನ ಕೊಡಲೇಬೇಕೆಂದು ಪಕ್ಷದ ವರಿಷ್ಠರ ಮನವೊಲಿಸಿ ಕೃಷ್ಣ ಅವರು ಮಹಾರಾಷ್ಟ್ರದ ರಾಜ್ಯಪಾಲರಾಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಮತ್ತೆ ಅವರನ್ನು ರಾಜ್ಯ ರಾಜಕಾರಣಕ್ಕೆ ಕರೆತಂದು ರಾಜ್ಯಸಭಾ ಸದಸ್ಯರಾಗುವಂತೆ ನೋಡಿಕೊಂಡರು.











ಕಿಂಗ್‌ಮೇಕರ್ ಆದ ಶಿವಕುಮಾರ್

ಶಿವಕುಮಾರ್ 1999ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮರಳಿದರು. ಎಸ್.ಎಂ. ಕೃಷ್ಣ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವನ್ನು 139 ಸ್ಥಾನಗಳೊಂದಿಗೆ ಅಧಿಕಾರಕ್ಕೆ ತಂದ ಐತಿಹಾಸಿಕ ಪ್ರಚಾರ ಯಾತ್ರೆ ಆಯೋಜಿಸಲು ಡಿ.ಕೆ. ಶಿವಕುಮಾರ್ ಸಹಾಯ ಮಾಡಿದರು. ಆ ವರ್ಷ ಅವರು ಸಾತನೂರಿನಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸೋಲಿಸಿದರು. ಇದು 15 ವರ್ಷಗಳ ಹಿಂದೆ ತಮ್ಮನ್ನು ಸೋಲಿಸಿದ್ದ ಗೌಡ ಕುಟುಂಬದ ವಿರುದ್ಧ ಸಾಂಕೇತಿಕ ಗೆಲುವಾಗಿತ್ತು. ಕಾಂಗ್ರೆಸ್‌ನ ಅಭೂತಪೂರ್ವ ಗೆಲುವಿಗೆ ಕಾರಣರಾದ ಶಿವಕುಮಾರ್ ಅವರು ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಸಹಕಾರ ಖಾತೆಯನ್ನು ಮತ್ತು ನಂತರ ನಗರಾಭಿವೃದ್ಧಿ ಹಾಗೂ ರಾಜ್ಯ ಯೋಜನಾ ಮಂಡಳಿಯನ್ನು ನಿರ್ವಹಿಸಿದರು.

ಸಾತನೂರಿನಿಂದ ಕನಕಪುರಕ್ಕೆ ಸ್ಥಳಾಂತರ

ಸತತ ನಾಲ್ಕು ಬಾರಿ ಗೆದ್ದಿದ್ದ ಸಾತನೂರು ಕ್ಷೇತ್ರದಿಂದ ಡಿ.ಕೆ. ಶಿವಕುಮಾರ್ ಅವರು 2008ರಲ್ಲಿ ಕನಕಪುರಕ್ಕೆ ಸ್ಥಳಾಂತರಗೊಂಡರು. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಸಾತನೂರು ವಿಧಾನಸಭಾ ಕ್ಷೇತ್ರಗಳ ಪಟ್ಟಿಯಿಂದಲೇ ಹೊರಗುಳಿಯಿತು. ಈ ಲೆಕ್ಕಾಚಾರ ತಪ್ಪಾಗಲಿಲ್ಲ, ಅವರು ಅಲ್ಲಿಯೂ ಗೆದ್ದರು. ಆ ಚುನಾವಣೆಯಲ್ಲಿ ಶೇ.48 ರಷ್ಟು ಮತ ಹಂಚಿಕೆಯಾಗಿತ್ತು. ತರುವಾಯ 2013 ರಲ್ಲಿ ಶೇ. 57ಕ್ಕೆ ಏರಿಕೆಯಾಗಿತ್ತು. ನಂತರ 2018ರಲ್ಲಿ ಅದು ಶೇ. 69ರಷ್ಟು ಆಗಿತ್ತು. 2023ರಲ್ಲಿ ಅದು ಶೇ. 75ಕ್ಕೆ ಹೆಚ್ಚಳವಾಗಿತ್ತು. ಪ್ರತಿ ವಿಧಾನಸಭಾ ಚುನಾವಣೆಯಲ್ಲೂ ಅವರ ಮತ ಹಂಚಿಕೆ ನಿರಂತರವಾಗಿ ಬೆಳೆಯುತ್ತಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷದ ಸಂಘಟನೆ

ಡಿ.ಕೆ. ಶಿವಕುಮಾರ್ ಅವರನ್ನು 2020ರ ಮಾರ್ಚ್ 11ರಂದು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಸೋನಿಯಾ ಗಾಂಧಿ ಅವರು ನೇಮಿಸಿದರು. ಈ ನೇಮಕವಾದ ಕೆಲವೇ ದಿನಗಳಲ್ಲಿ ಕೋವಿಡ್ ಮಹಾಮಾರಿ ದೇಶದೆಲ್ಲೆಡೆ ಆವರಿಸಿತು. ಈ ಸಂದರ್ಭದಲ್ಲಿ ಮನೆಯಲ್ಲಿ ಕೂರದ ಶಿವಕುಮಾರ್ ಅವರು ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಿಗೆ ಉತ್ತೇಜನ ನೀಡಿ ಅವರು ಕೂಡ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಸಹಾಯ ಮಾಡಲು ಕರೆ ನೀಡಿದರು.



ನಂತರ ಮೂರು ವರ್ಷಗಳ ಅವಧಿಯಲ್ಲಿ ಕರ್ನಾಟಕದಲ್ಲಿ ಶಿವಕುಮಾರ್ ಪಕ್ಷವನ್ನು ಸಂಘಟಿಸಿದ ರೀತಿ ಎಲ್ಲಾ ರಾಜಕೀಯ ನಾಯಕರಿಗೆ ಮಾದರಿಯಾಗಿ ಉಳಿದಿದೆ ಎಂದರೆ ತಪ್ಪಾಗುವುದಿಲ್ಲ. ಕೋವಿಡ್ ಸಮಯದಲ್ಲಿ ಹಗಲಿರುಳು ತಾವೂ ಕೆಲಸ ಮಾಡಿ, ತಮ್ಮ ಪಕ್ಷದ ಕಾರ್ಯಕರ್ತರು ಜನರ ಬಳಿ ಹೋಗಿ ಕೆಲಸ ಮಾಡಿ ಅವರ ವಿಶ್ವಾಸ ಗೆಲ್ಲುವಂತೆ ಸೂಚನೆ ನೀಡಿದರು. ಲಾಕ್ ಡೌನ್, ಆದಾಯವಿಲ್ಲದೆ, ಮಾರುಕಟ್ಟೆ ಇಲ್ಲದೆ ಕಂಗಾಲಾಗಿದ್ದ ರೈತರು, ಕಾರ್ಮಿಕರು, ಬಡವರು, ಅಸಂಘಟಿತ ಕಾರ್ಮಿಕರ ಸಂಕಷ್ಟಗಳಿಗೆ ಸ್ಪಂದಿಸಿದರು.

ಅವರ ಪರವಾಗಿ ಧ್ವನಿಯಾಗಿ ಸರ್ಕಾರದ ಗಮನ ಸೆಳೆದರು. ಕೋವಿಡ್ ಸಮಯದಲ್ಲಿ ತಮ್ಮ ಊರುಗಳಿಗೆ ಮರಳಲು ಮುಂದಾದ ವಲಸೆ ಕಾರ್ಮಿಕರಿಂದ ಸರ್ಕಾರವೇ ಮೂರು ಪಟ್ಟು ಟಿಕೆಟ್ ದರ ವಸೂಲಿಗೆ ನಿಂತಾಗ ಅದರ ವಿರುದ್ಧ ಹೋರಾಡಿ ಪಕ್ಷದಿಂದ 1 ಕೋಟಿ ರೂ. ಚೆಕ್ ನೀಡಲು ಮುಂದಾದರು. ಆಗ ಸರ್ಕಾರ ಎಚ್ಚೆತ್ತು ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿತು. ನಂತರ ಇದು ಇಡೀ ದೇಶಕ್ಕೆ ಮಾದರಿಯಾಯಿತು.

ಇನ್ನು ರಾಷ್ಟ್ರೀಯ ಕಾಂಗ್ರೆಸ್ ವತಿಯಿಂದ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ ಆರಂಭಿಸಿದಾಗ, ಮತ್ತೆ ತಮ್ಮ ಕಾರ್ಯಕರ್ತರನ್ನು ಜನರತ್ತ ಕಳುಹಿಸಿ ರಾಜ್ಯದಲ್ಲಿ ಯಶಸ್ವಿಯಾಗಿ ಸದಸ್ಯತ್ವ ನೋಂದಣಿ ಅಭಿಯಾನ ಮಾಡಿದರು. ಪಕ್ಷದ ಸದಸ್ಯತ್ವ ಅಭಿಯಾನ ಯಶಸ್ವಿ ಜಾರಿ ಹಾಗೂ ರಾಜ್ಯದಲ್ಲಿ 78 ಲಕ್ಷ ಸದಸ್ಯತ್ವ ನೋಂದಣಿ ಮೂಲಕ ದೇಶದಲ್ಲಿ ಪ್ರಥಮ ಸ್ಥಾನ ಪಡೆದು ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬಿದರು.



ಕಾವೇರಿ ಜಲಾನಯನ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಉತ್ಪಾದನೆ ಸೇರಿದಂತೆ ಹಲವು ಪ್ರಯೋಜನಗಳನ್ನು ಹೊಂದಿರುವ ಮೇಕೆದಾಟು ಯೋಜನೆಗೆ ಸರ್ಕಾರ ನಿರ್ಲಕ್ಷ್ಯ ವಹಿಸಿದಾಗ ಈ ಯೋಜನೆ ಆಗ್ರಹಿಸಿ, ಈ ಭಾಗದಲ್ಲಿ 160 ಕಿ.ಮೀ. ಪಾದಯಾತ್ರೆ ಮಾಡಿದರು. ಈ ಹಂತದಲ್ಲಿ ಸರ್ಕಾರ ಸುಳ್ಳು ಕೇಸ್ ದಾಖಲಿಸಿ ಹೋರಾಟ ಹತ್ತಿಕ್ಕಲು ಪ್ರಯತ್ನಿಸಿತಾದರೂ ಕೆಚ್ಚೆದೆಯಿಂದ ತಾವು ಹಾಗೂ ಪಕ್ಷದ ನಾಯಕರು ಕಾರ್ಯಕರ್ತರನ್ನು ಸಂಘಟಿಸಿ ಪಾದಯಾತ್ರೆ ಯಶಸ್ವಿ ಮಾಡಿದರು.

ರಾಹುಲ್ ಗಾಂಧಿ ಅವರು ಭಾರತ ಜೋಡೋ ಯಾತ್ರೆ ಆರಂಭಿಸಿದ ನಂತರ ಕರ್ನಾಟಕದಲ್ಲಿ 21 ದಿನಗಳ ಕಾಲ 550 ಕಿ.ಮೀ ಉದ್ದದ ಭಾರತ ಜೋಡೋ ಯಾತ್ರೆ ಯಶಸ್ವಿ ಆಯೋಜನೆ ಮಾಡಿದರು. ಈ ಯೋಜನೆ ಹಾದುಹೋದ ಮಾರ್ಗದಲ್ಲಿ ಕಾಂಗ್ರೆಸ್ ಪಕ್ಷ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವಲ್ಲಿ ಪ್ರಮುಖ ಕಾರಣವಾಯಿತು. ಪ್ರಜಾಧ್ವನಿ ಯಾತ್ರೆ ಮೂಲಕ ರಾಜ್ಯದ ಮೂಲೆ ಮೂಲೆ ಪ್ರವಾಸ ಮಾಡಿ ಎಲ್ಲ ವರ್ಗಗಳ ಜನರ ಸಂಕಷ್ಟ ಆಲಿಸಿದರು. ಅವುಗಳಿಗೆ ಪರಿಹಾರ ಕಂಡುಕೊಳ್ಳು ಯೋಜನೆಗಳನ್ನು ರೂಪಿಸಲು ನೆರವಾದರು. ಮೀನುಗಾರರು, ನೇಕಾರರು, ತಿಗಲರು, ಮಡಿವಾಳ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳ ಕಷ್ಟ ಆಲಿಸಿದರು.

ಕಾಂಗ್ರೆಸ್ ಪಕ್ಷದ ಬಗ್ಗೆ ಜನರ ವಿಶ್ವಾಸ ಹೆಚ್ಚಿಸಿ, ಅನ್ಯ ಪಕ್ಷದ ನಾಯಕರನ್ನು ಪಕ್ಷಕ್ಕೆ ಕರೆ ತಂದರು. ಜೆಡಿಎಸ್ ಪಕ್ಷದ ಅನೇಕ ಶಾಸಕರು, ವಿಧಾನಸಭಾ ಸದಸ್ಯರು, ಬಿಜೆಪಿಯ ಶಾಸಕರು ಹಾಗೂ ಪರಿಷತ್ ಸದಸ್ಯರುಗಳನ್ನು ಪಕ್ಷಕ್ಕೆ ಸೇರಿಸಿಕೊಂಡು ಪಕ್ಷದ ಬಲವರ್ಧನೆ ಮಾಡಿದರು. ನಾ ನಾಯಕಿ ಕಾರ್ಯಕ್ರಮದ ಮೂಲಕ ಮಹಿಳೆಯರಿಗೆ ಉತ್ತೇಜನ ನೀಡಿ ಮಹಿಳೆಯರನ್ನು ಕಾಂಗ್ರೆಸ್ ಪಕ್ಷದ ಕಡೆ ಸೆಳೆಯುವಲ್ಲಿ ಯಶಸ್ವಿಯಾದರು. ಎಲ್ಲಾ ಸಮುದಾಯ, ಧರ್ಮಗಳ ಧರ್ಮಗುರುಗಳು, ಮಠಾಧೀಶರ ವಿಶ್ವಾಸ ಪಡೆದಿದ್ದು, ಅವರ ಬೆಂಬಲ ಪಡೆದು ಪಕ್ಷವನ್ನು ಸಂಘಟಿಸಿ ಶಕ್ತಿ ತುಂಬಿದರು. ಡಿ.ಕೆ. ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಪಕ್ಷ 2023ರ ವಿಧಾನಸಭೆ ಚುನಾವಣೆಯಲ್ಲಿ 136 ಕ್ಷೇತ್ರಗಳಲ್ಲಿ ಗೆದ್ದು ಭರ್ಜರಿ ಬಹುಮತದೊಂದಿಗೆ ಸರ್ಕಾರ ರಚನೆ ಮಾಡಿತು.





ಬಂದೀಖಾನೆ ಮಂತ್ರಿಯಿಂದ ಸಿಎಂವರೆಗೆ

1991ರಲ್ಲಿ ಅಂದಿನ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಅನಾರೋಗ್ಯದ ಕಾರಣ ಮುಖ್ಯಮಂತ್ರಿ ಪದವಿಯನ್ನು ತ್ಯಜಿಸಬೇಕಾಗಿ ಬಂದಾಗ ಅವರ ಉತ್ತರಾಧಿಕಾರಿಯನ್ನಾಗಿ ಸೋರೆಕೊಪ್ಪ ಬಂಗಾರಪ್ಪ ಅವರು ಸರ್ವಾನುಮತದಿಂದ ಆಯ್ಕೆಯಾಗುವಂತೆ ಮಾಡುವಲ್ಲಿ ಡಿ.ಕೆ. ಶಿವಕುಮಾರ್ ಅತ್ಯಂತ ಪ್ರಮುಖ ಪಾತ್ರ ವಹಿಸಿದ್ದರು. ಇದಕ್ಕೆ ಬಹುಮಾನದ್ಯೋತಕವಾಗಿ ಬಂಗಾರಪ್ಪ ಅವರು ಈ ಯುವಕನನ್ನು ರಾಜ್ಯಮಟ್ಟದ ಸಚಿವರನ್ನಾಗಿ ಮಾಡಿ ಬಂದೀಖಾನೆ ಖಾತೆ ನೀಡಿದರು. 1999ರಲ್ಲಿ ಎಸ್.ಎಂ. ಕೃಷ್ಣ ಅವರ ಸರ್ಕಾರ ರಚನೆಯಾದಾಗ ಅವರು ಸಂಪುಟ ದರ್ಜೆ ಸಚಿವರನ್ನಾಗಿ ನೇಮಿಸಿ ಮಹತ್ವದ ಸಹಕಾರ ಖಾತೆ (1999–2002) ನೀಡುವ ಮೂಲಕ ಡಿ.ಕೆ. ಶಿವಕುಮಾರ್ ಅವರ ಶ್ರಮಕ್ಕೆತಕ್ಕ ಮನ್ನಣೆ ನೀಡಿದರು. 2002ರಲ್ಲಿ ನಗರಾಭಿವೃದ್ಧಿ ಖಾತೆ ಸಚಿವರಾಗಿ ರಾಜ್ಯ ನಗರಯೋಜನಾ ಮಂಡಳಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ ಯುವಕರನ್ನು ಸಂಘಟಿಸಿ ಜೀವನದಲ್ಲಿ ನೆಲೆಗೊಳಿಸುವ ರಾಜೀವ್ ಯುವ ಶಕ್ತಿ ಸಂಘಟನೆಗಳು ರಾಜ್ಯದಲ್ಲಿ ತಲೆಎತ್ತಲು ಕಾರಣೀಭೂತರಾದರು. ವಿಶ್ವದಲ್ಲಿಯೇ ಮೊದಲನೆಯದು ಎನ್ನಿಸಿದ ಸ್ತ್ರೀ ಶಕ್ತಿ ಸಂಘಟನೆಗಳನ್ನು ಆರಂಭಿಸುವಲ್ಲಿ ಶಿವಕುಮಾರ್ ಅವರ ಪಾಲು ಮಹತ್ವದ್ದು.

2013ರಲ್ಲಿ ಕಾಂಗ್ರೆಸ್ ಪಕ್ಷ ಮತ್ತೆ ಅಧಿಕಾರಕ್ಕೇರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿ ಆಯ್ಕೆಯಾದಾಗ ಪಕ್ಷದಲ್ಲಿನ ವಿರೋಧಿಗಳು ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿ ಅವರಿಗೆ ಸಚಿವ ಸ್ಥಾನ ತಪ್ಪುವಂತೆ ಮಾಡಿದರು. ಆದರೆ, ಈ ಸುಳ್ಳು ಆರೋಪದಿಂದ ಮುಕ್ತರಾದ ಶಿವಕುಮಾರ್ ಏಳು ತಿಂಗಳ ಬಳಿಕ ಸಿದ್ಧರಾಮಯ್ಯ ಸಂಪುಟದಲ್ಲಿ ಸಚಿವ ಸ್ಥಾನ ಪಡೆದುಕೊಂಡರು. ಇಂಧನ ಖಾತೆಯಂತಹ ಪ್ರಮುಖ ಖಾತೆ ನಿಭಾಯಿಸಿದರು. ಇಂಧನ ಇಲಾಖೆಯನ್ನು ಆಮೂಲಾಗ್ರ ಸುಧಾರಣೆ ಮಾಡಿದರು. ರೈತ ಸೂರ್ಯ ಯೋಜನೆಯನ್ನು ರೂಪಿಸಿ ಭೂ ಮಾಲೀಕರಾದ ರೈತರು ಸ್ವಯಂ 1 ರಿಂದ 3 ಮೆ.ವ್ಯಾ. ಸೌರವಿದ್ಯುತ್ ಉತ್ಪಾದನೆ ಮಾಡುವಂತೆ ಅವಕಾಶ ಕಲ್ಪಿಸಿದರು.

2018ರಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಮೊದಲಿಗೆ ಜಲಸಂಪನ್ಮೂಲ ನಂತರ ಹೆಚ್ಚುವರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಖಾತೆಯನ್ನು ಪಡೆದ ಡಿ.ಕೆ.ಶಿವಕುಮಾರ್ ಅವರು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರು. ಮಹದಾಯಿ ಸಮಸ್ಯೆ ಪರಿಹಾರ, ಎತ್ತಿನಹೊಳೆ, ಮೇಕೆದಾಟು ಯೋಜನೆಗಳ ಪ್ರಗತಿಗೆ ತಮ್ಮದೇ ಆದ ಕೊಡುಗೆ ನೀಡಿದ ಅವರು ರಾಜ್ಯದಲ್ಲಿ ಅತೀ ಹೆಚ್ಚು ಪ್ರಮಾಣದ ಚೆಕ್ ಡ್ಯಾಮ್‌ಗಳ ನಿರ್ಮಾಣಕ್ಕೆ ಪ್ರೋತ್ಸಾಹ ಧನ ನೀಡಿಕೆ ಮೂಲಕ ಉತ್ತೇಜಿಸಿದರು.

2023ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ಪೀಠಕ್ಕೇರಿದಾಗ ಉಪ ಮುಖ್ಯಮಂತ್ರಿಯಾಗಿ, ಜಲಸಂಪನ್ಮೂಲ ಇಲಾಖೆ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ನಡೆಸಿದರು. ಜಲಸಂಪನ್ಮೂಲ ಸಚಿವರಾಗಿ ಎತ್ತಿನ ಹೊಳೆ ಯೋಜನೆಗೆ ಇದ್ದ ಅಡೆತಡೆಗಳನ್ನು ನಿವಾರಿಸಿ ನೀರನ್ನು ಆ ಭಾಗದಿಂದ ಹೊರಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬೆಂಗಳೂರಿನ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸುವ ಕಾವೇರಿ 5ನೇ ಹಂತದ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣಗೊಳಿಸಿದ ಹೆಗ್ಗಳಿಕೆ ಇವರದ್ದಾಗಿದೆ. ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಕಾರ್ಯಕ್ರಮ, ಬೆಂಗಳೂರಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸ್ಯಾಂಕಿ ಕೆರೆಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಿದರು. ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ಮಾಡಲು ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಯನ್ನು ಪರಿಚಯಿಸಿದರು. ಟನಲ್ ರಸ್ತೆ, ಡಬಲ್ ಡೆಕ್ಕರ್ ಮೇಲ್ಸೇತುವೆ, ಎಲಿವೇಟೆಡ್ ಕಾರಿಡಾರ್, 300 ಕಿ.ಮೀ ಬಫರ್ ರಸ್ತೆಗಳ ನಿರ್ಮಾಣ, ಮೆಟ್ರೋ 3ನೇ ಹಂತದ ಯೋಜನೆ ಡಿಪಿಆರ್, ಬೆಂಗಳೂರಿನ ನಾಲ್ಕು ದಿಕ್ಕಿನಲ್ಲಿ ಹೊರ ವಲಯಗಳಲ್ಲಿ ಕಸ ವಿಲೇವಾರಿ ಘಟಕ ಸ್ಥಾಪನೆ, ಪ್ರವಾಸಿಗರ ಆಕರ್ಷಣೆಗೆ ಸ್ಕೈ ಡೆಕ್ ನಿರ್ಮಾಣದಂತಹ ಯೋಜನೆಗಳನ್ನು ರೂಪಿಸಿದರು. ಇನ್ನು ಪಾಲಿಕೆ ಪರಿಣಾಮಕಾರಿ ಆಡಳಿತಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿದ್ದಾರೆ.

ಕಿರುಸುದ್ದಿ

ಸೇವಾ ನಿವೃತ್ತಿ ಇಂದು



•**ಮುಂಡರಗಿ:** ಸ್ಥಳೀಯ ಜಗದ್ಗುರು ಅನ್ನದಾನೀಶ್ವರ ವಿದ್ಯಾ ಸಮಿತಿಯ ಜಗದ್ಗುರು ಅನ್ನದಾನೀಶ್ವರ ಸಂಯುಕ್ತ ಪ್ರೌಢಶಾಲೆಯ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿರುವ ಎಸ್.ಸಿ.ಚಕ್ಕಡಿಮಠ ಅವರು ಮೇ 31ರಂದು ವೃತ್ತಿಯಿಂದ ನಿವೃತ್ತಿ ಹೊಂದಲಿದ್ದಾರೆ. ಜಗದ್ಗುರು ಅನ್ನದಾನೀಶ್ವರ ಸಂಯುಕ್ತ ಪ್ರೌಢಶಾಲೆಯ ವಿದ್ಯಾರ್ಥಿಯಾಗಿ, ಶ್ರೀ ಜ.ಅ.ವಿ.ಸಮಿತಿಯಲ್ಲಿಯೇ ಶಿಕ್ಷಕರಾಗಿ 36 ವರ್ಷಗಳ ಕಾಲ ಸೇವೆಸಲ್ಲಿಸಿ ನಂತರ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತಿಗೊಳ್ಳುತ್ತಿದ್ದಾರೆ. ಇಂದು ಬೆಳಗ್ಗೆ 10 ಗಂಟೆಗೆ ಈ ನಿಮಿತ್ತ ಕಾಲೇಜು ಸಭಾ ಭವನದಲ್ಲಿ ಗುರುವಂದನೆ ಹಾಗೂ ಪ್ರಭಾ ಪುರಸ್ಕಾರ ಕಾರ್ಯಕ್ರಮ ಜರುಗಲಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ನಾಡೋಜ ಡಾ. ಅನ್ನದಾನೀಶ್ವರ ಮಹಾಶಿವಯೋಗಿಗಳು ವಹಿಸುವರು. ನೇತೃತ್ವವನ್ನು ಜ. ಅ. ಸುಜ್ಞಾನಮಠ ಉತ್ತರಾಧಿಕಾರಿ ಡಾ. ಮಲ್ಲಿಕಾರ್ಜುನ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ಶಾಲೆಯ ಸ್ಥಾನಿಕ ಮೇಲ್ವಿಚಾರಣಾ ಕಮಿಟಿ ಕಾರ್ಯಾಧ್ಯಕ್ಷ ಕೆ. ವಿ. ಹಂಚಿನಾಳ ವಹಿಸುವರು. ಮುಖ್ಯ ಅತಿಥಿಗಳಾಗಿ ಆರ್.ಎಚ್. ಹಗ್ಗಣ, ಡಾ. ಬಿ. ಜಿ. ಜವಳಿ, ಎಂ.ಐ. ರಡ್ಡೇರ, ಜಿ.ಎಸ್. ಅಣ್ಣಿಗೇರಿ ಮುಂತಾದವರು ಉಪಸ್ಥಿತರಿರುವರು.

ಕಸ ವಿಂಗಡಣೆ ಕಡ್ಡಾಯ

•**ಗದಗ:** ಶಿರಹಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರು ಮನೆಯ ಕಸವನ್ನು ಕಡ್ಡಾಯವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಿ ಪಟ್ಟಣ ಪಂಚಾಯಿತಿ ಕಸದ ವಾಹನಗಳಿಗೆ ನೀಡಬೇಕು ಎಂದು ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಸಿಕಸವನ್ನು ಹಸಿರು ಬಕೆಟ್‌ನಲ್ಲಿ, ಒಣಕಸವನ್ನು ನೀಲಿ ಬಕೆಟ್‌ನಲ್ಲಿ, ನೈರ್ಮಲ್ಯ ಕಸವನ್ನು ಪತ್ರಿಕೆಯಲ್ಲಿ ಸುತ್ತಿ ಕೆಂಪು ಗುರುತು ಮಾಡಿ ಕೆಂಪು ಬಕೆಟ್‌ನಲ್ಲಿ ಹಾಗೂ ವಿಶೇಷ ಕಸವನ್ನು ಕಪ್ಪು ಬಕೆಟ್‌ನಲ್ಲಿ ಪ್ರತ್ಯೇಕವಾಗಿ ನೀಡಬೇಕು. ಬಳಸಿದ ಡೈಪರ್, ಸ್ಯಾನಿಟರಿ ನ್ಯಾಪ್ಕಿನ್, ವೈದ್ಯಕೀಯ ತ್ಯಾಜ್ಯ, ಹಳೆಯ ಬ್ಯಾಟರಿ, ಸಿಎಫ್‌ಎಲ್ ಬಲ್ಬ್ ಸೇರಿದಂತೆ ವಿವಿಧ ತ್ಯಾಜ್ಯಗಳನ್ನು ನಿಗದಿತ ವಿಭಾಗದಲ್ಲಿ ವಿಲೇವಾರಿ ಮಾಡಬೇಕು. ನಾಲ್ಕು ವಿಭಾಗಗಳಲ್ಲಿ ವಿಂಗಡಿಸದ ಮಿಶ್ರ ಕಸವನ್ನು ಸ್ವೀಕರಿಸಲಾಗುವುದಿಲ್ಲ. ನಿಯಮ ಉಲ್ಲಂಘಿಸುವವರ ವಿರುದ್ಧ ದಂಡ ವಿಧಿಸುವುದರ ಜೊತೆಗೆ ನೀರು ಮತ್ತು ವಿದ್ಯುತ್ ಸರಬರಾಜು ಸ್ಥಗಿತಗೊಳಿಸುವ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಇಂದು ಗುರುವಂದನೆ

•**ನರಗುಂದ:** ತಾಲೂಕಿನ ಚಿಕ್ಕನರಗುಂದ ಗ್ರಾಮದ ಡಿ.ಎಸ್. ಕೆಂಚನಗೌಡ್ರ ಸರ್ಕಾರಿ ಪ್ರೌಢಶಾಲೆಯಲ್ಲಿ ಮೇ 31ರಂದು ಬೆಳಗ್ಗೆ 10 ಗಂಟೆಗೆ 2002–03 ನೇ ಸಾಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ ನಡೆಯಲಿದೆ.

ಇದರ ಸಾನ್ನಿಧ್ಯವನ್ನು ಪತ್ರಿವನಮಠದ ಗುರುಸಿದ್ಧವೀರ ಶಿವಯೋಗಿ ಶಿವಾಚಾರ್ಯರು, ನಿವೃತ್ತ ಮುಖ್ಯ ಶಿಕ್ಷಕ ಎಸ್. ಎಸ್.ಕಂದಗಲ್ ಅಧ್ಯಕ್ಷತೆ ವಹಿಸುವರು. ಉದ್ಘಾಟಕರಾಗಿ ಉಪನ್ಯಾಸಕ ಎಸ್.ಎಚ್.ದಂಡಿನಾಯ್ಕರ, ಮುಖ್ಯಅತಿಥಿ ಬಾಪಟ, ಶರಣಬಸವ ಹಳೆಮನಿ, ಪ್ರಾಚಾರ್ಯ ಇಂದಿರಾಣಿ ಎಸ್., ಮುಖ್ಯಶಿಕ್ಷಕ ಆರ್.ಐ.ಕುರ್ತಕೋಟಿ ಭಾಗವಹಿಸುವರು ಎಂದು ಗ್ರಾಮ ಪಂ ಅಧ್ಯಕ್ಷ ಮಲ್ಲು ರಾಯರೆಡ್ಡಿ ತಿಳಿಸಿದ್ದಾರೆ.

ಹರಿನಾಮ ಕೀರ್ತನೆ, ಭಜನೆ ಇಂದು

•**ನರಗುಂದ:** ಶಿರೋಳ ಗ್ರಾಮದ ಶ್ರೀ ಯಚ್ಚರೇಶ್ವರ ಗವಿಮಠದಲ್ಲಿ ಮೇ 31 ರಂದು ಸಂಜೆ 7.30ಕ್ಕೆ 32ನೇ ಮಾಸಿಕ ಶಿವಾನುಭವ ಹಾಗೂ ಅಧಿಕ ಮಾಸದ ಅಂಗವಾಗಿ ಹರಿನಾಮ ಕೀರ್ತನೆ ಹಾಗೂ ಭಜನೆ ನಡೆಯಲಿದೆ. ಸಾನ್ನಿಧ್ಯ ಅಭಿನವ ಯಚ್ಚರೇಶ್ವರ ಶ್ರೀಗಳು ವಹಿಸುವರು. ಶಿಗ್ಗಟ್ಟಿಯ ಗುರುನಾಥ ತಿಲ್ಲಾಪುರ ಅವರಿಂದ ಕೀರ್ತನೆ ನಡೆಯಲಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	7877-6991
ಅಜವಾನ	10331-10306
ಅಲಸಂದಿ	6519-4342
ಕಡಲೆ	6239-5766
ಉದ್ದು	5814-5045
ಹವೀಜ	10109-10109
ಹೆಸರು	8814-4423
ಹುರಳಿ	4446-4362
ಜೋಳ	4457-3896
ಗೋವಿನಜೋಳ	2011-1834
ಕುಸಬಿ	5412-5060
ಸೂರ್ಯಕಾಂತಿ	7419-7177
ತೊಗರಿ	5644-5525
ಗೋಧಿ	6169-2570
ಬಿಳಿ ಒಟಾಣಿ	5525-5167
ಕಡಲೆ ಬ್ಯಾಳಿ	6550-6525
ಗುರೆಳ್ಳು	12220-11800
ಶೇಂಗಾ ಬೀಜ	12650-12650



ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು ಬೆಂಗಳೂರು ಜಿಲ್ಲಾ ಘಟಕ ಗದಗ, ಕುಮಾರವ್ಯಾಸ ಪ್ರತಿಷ್ಠಾನ ಗದಗ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ತೋಂಟದ ಸಿದ್ದಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯ ಗದಗ ಇಲ್ಲಿ ಜರುಗಿದ ಕುಮಾರವ್ಯಾಸ ಭಾರತದ ಗಮಕ ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮ.

ರೋಗಗಳು ಬಾರದಂತೆ ಮುನ್ನೆಚ್ಚರಿಕೆ ವಹಿಸಿ: ಡಿಸಿ

•**ಗದಗ:** ಜಿಲ್ಲೆಯಲ್ಲಿ ಡೆಂಘೀ ಹಾಗೂ ಇತರೆ ಕೀಟಜನ್ಯ ರೋಗಗಳು ಹರಡದಂತೆ ಮುಂಜಾಗ್ರತಾ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ರಾಷ್ಟ್ರೀಯ ಡೆಂಘೀ ದಿನ ಮತ್ತು ಜಿಲ್ಲಾ ಮಟ್ಟದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಾರ್ವಜನಿಕ ನಲ್ಲಿಗಳು ಹಾಗೂ ಕೊಳವೆ ಬಾವಿಗಳಿರುವ ಪ್ರದೇಶಗಳಲ್ಲಿ ನೀರು ಸರಾಗವಾಗಿ ಹರಿದು ಹೋಗುವಂತೆ ಸೂಕ್ತ ವ್ಯವಸ್ಥೆ ಮಾಡಿರುವ ಕುರಿತು ಪರಿಶೀಲನೆ ನಡೆಸಬೇಕು. ಸೊಳ್ಳೆ ನಾಶಕ ದ್ರಾವಣವನ್ನು ಸೊಳ್ಳೆ ಉತ್ಪತ್ತಿಯಾಗುತ್ತಿರುವ ಸ್ಥಳದಲ್ಲಿ ಸಿಂಪಡಿಸುವ ಕ್ರಮ ಕೈಗೊಳ್ಳಬೇಕು. ಟಸ್ ಡಿಪೋಗಳಲ್ಲಿ ಖಾಲಿ ಟಾಯರ್‌ಗಳಲ್ಲಿ ಹಾಗೂ ಘನ ತ್ಯಾಜ್ಯಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಖಾಲಿ ಟಾಯರ್ ಮೇಲೆ ಟಾರ್ಪಾಲನ್ನು ಹಾಕಿ ತಕ್ಷಣ ವಿಲೇವಾರಿಗೆ ಕ್ರಮ ವಹಿಸಬೇಕು ಎಂದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ವೆಂಕಟೇಶ ರಾಠೋಡ ಮಾತನಾಡಿ, ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳಿಗೆ ಸಂಬಂಧಿಸಿದಂತೆ 2026 ಜನವರಿಯಿಂದ ಏಪ್ರಿಲ್ ವರೆಗೆ 120029 ರಕ್ತ ಲೇಪನ ಪರೀಕ್ಷೆಗಳನ್ನು ಕೈಗೊಳ್ಳಲಾಗಿದ್ದು 2 ಮಲೇರಿಯಾ ಪ್ರಕರಣಗಳು ಖಚಿತಪಟ್ಟಿವೆ. ಡೆಂಘೀ ಪ್ರಕರಣಗಳಿಗೆ ಸಂಬಂಧಿಸಿದಂತೆ 2026 ಜನವರಿಯಿಂದ ಏಪ್ರಿಲ್‌ವರೆಗೆ 607 ರಕ್ತದ ಮಾದರಿಗಳನ್ನು ಪರೀಕ್ಷೆಸಲಾಗಿದ್ದು 17 ಡೆಂಘೀ ಪ್ರಕರಣಗಳು ಖಚಿತಪಟ್ಟಿವೆ. ಚಿಕೂನ್ ಗುನ್ಯಾ ಪ್ರಕರಣಗಳಿಗೆ ಸಂಬಂಧಿಸಿದಂತೆ 2026 ಜನವರಿಯಿಂದ ಏಪ್ರಿಲ್‌ವರೆಗೆ 109 ರಕ್ತದ ಮಾದರಿ ಪರೀಕ್ಷಿಸಲಾಗಿದ್ದು 7 ಚಿಕೂನ್ ಗುನ್ಯಾ ಪ್ರಕರಣಗಳು ಖಚಿತಪಟ್ಟಿವೆ ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಎಸ್.ನೀಲಗುಂದ ಸ್ವಾಗತಿಸಿದರು.



ಗದಗ: ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ರಾಷ್ಟ್ರೀಯ ಡೆಂಘೀ ದಿನ ಮತ್ತು ಜಿಲ್ಲಾ ಮಟ್ಟದ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ಡೆಂಘೀ ಜ್ವರ ನಿಯಂತ್ರಣ ಮತ್ತು ಮುಂಜಾಗ್ರತಾ ಕ್ರಮಗಳ ಕುರಿತು ಭಿತ್ತಿಪತ್ರವನ್ನು ಬಿಡುಗಡೆಗೊಳಿಸಲಾಯಿತು.

ಭಾರೀ ಗಾಳಿ, ಮಳೆ ಅಬ್ಬರಕ್ಕೆ ವ್ಯಾಪಕ ಹಾನಿ | ₹90.59 ಲಕ್ಷಕ್ಕೂ ಅಧಿಕ ನಷ್ಟ

ತೋಟಗಾರಿಕಾ ಬೆಳೆಗಳಿಗೆ ಅಪಾರ ಹಾನಿ

▸ರುದ್ರಗೌಡ ಪಾಟೀಲ

•**ಗದಗ:** ಜಿಲ್ಲೆಯಲ್ಲಿ ಮುಂಗಾರು ಪೂರ್ವ ಸುರಿದ ಭಾರೀ ಗಾಳಿ, ಮಳೆಯ ಅಬ್ಬರದಿಂದ ವ್ಯಾಪಕ ಹಾನಿ ಸಂಭವಿಸಿದೆ. ಜಿಲ್ಲಾಡಳಿತದ ಪ್ರಾಥಮಿಕ ಅಂದಾಜು ಪ್ರಕಾರ ಒಟ್ಟು 90.59 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ. ವ್ಯಕ್ತಿ, ಜಾನುವಾರುಗಳ ಸಾವು, ಮನೆಗಳಿಗೆ ಹಾನಿ, ವಿದ್ಯುತ್ ಸೌಕರ್ಯ ಧ್ವಂಸ, ಶಾಲೆಗಳು ಹಾಗೂ ತೋಟಗಾರಿಕಾ ಬೆಳೆಗಳಿಗೆ ಅಪಾರ ಹಾನಿ ಸಂಭವಿಸಿದೆ.

ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸುರಿದ ಮಳೆ ಹಾಗೂ ಬಿರುಗಾಳಿಯಿಂದ ಇಬ್ಬರು ಮೃತಪಟ್ಟಿದ್ದಾರೆ. ಗದಗ ಮತ್ತು ಲಕ್ಷ್ಮೇಶ್ವರ ತಾಲೂಕಿನಲ್ಲಿ ತಲಾ ಒಬ್ಬರು ಸಾವನ್ನಪ್ಪಿರುವುದಾಗಿ ವರದಿಯಾಗಿದೆ. ಅಲ್ಲದೆ 31 ಜಾನುವಾರುಗಳು ಮೃತಪಟ್ಟಿದ್ದು, ಅದರಲ್ಲಿ ಒಂದು ದೊಡ್ಡ ಜಾನುವಾರು ಹಾಗೂ 30 ಸಣ್ಣ ಜಾನುವಾರುಗಳು ಸೇರಿವೆ. ಶಿರಹಟ್ಟಿ ತಾಲೂಕಿನಲ್ಲಿ 100 ಕೋಳಿಗಳು ಸಾವನ್ನಪ್ಪಿರುವುದು ದಾಖಲಾಗಿದೆ.



ನೆಲಕ್ಕುರುಳಿದ 567 ವಿದ್ಯುತ್ ಕಂಬ

ಮಳೆಯಿಂದ ವಿದ್ಯುತ್ ವ್ಯವಸ್ಥೆಗೂ ಭಾರೀ ಹೊಡೆತ ಬಿದ್ದಿದೆ. ಜಿಲ್ಲೆಯಾದ್ಯಂತ 567 ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಗದಗದಲ್ಲಿ ಅತೀ ಹೆಚ್ಚು 258, ಗಜೇಂದ್ರಗಡದಲ್ಲಿ 16, ಲಕ್ಷ್ಮೇಶ್ವರದಲ್ಲಿ 63, ಮುಂಡರಗಿಯಲ್ಲಿ 53, ನರಗುಂದದಲ್ಲಿ 62, ರೋಣದಲ್ಲಿ 98 ಹಾಗೂ ಶಿರಹಟ್ಟಿಯಲ್ಲಿ 17 ಕಂಬಗಳು ಹಾನಿಗೊಳಗಾಗಿವೆ. ಐದು ವಿದ್ಯುತ್ ಪರಿವರ್ತಕಗಳಿಗೂ ಹಾನಿಯಾಗಿದೆ.

ದಿಗಂತ ವಿಶೇಷ

- ಮಳೆ ಮತ್ತು ಆದರೊಟ್ಟಿಗೆ ಬೀಸಿದ ಅಬ್ಬರ ಬಿರುಗಾಳಿಯೂ ಎಲ್ಲಕ್ಕಿಂತಲೂ ಅತೀ ಹೆಚ್ಚು ಹಾನಿ ಮಾಡಿರುವುದು ತೋಟಗಾರಿಕಾ ಬೆಳೆಗಳಿಗೆ
- ಒಟ್ಟು 34.58 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ನಷ್ಟ
- ಗದಗದಲ್ಲಿ 17.30 ಹೆಕ್ಟೇರ್, ಲಕ್ಷ್ಮೇಶ್ವರದಲ್ಲಿ 4.18 ಹೆಕ್ಟೇರ್, ಮುಂಡರಗಿಯಲ್ಲಿ 3.60 ಹೆಕ್ಟೇರ್ ಹಾಗೂ ಶಿರಹಟ್ಟಿಯಲ್ಲಿ 9.50 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿ

"ಎನ್‌ಡಿಆರ್‌ಎಫ್ ನಿಯಮಾವಳಿಗಳ ಪ್ರಕಾರ ಹಾನಿಗೆ ಒಟ್ಟು 90.59 ಲಕ್ಷ (1 ಕೋಟಿ) ಅಂದಾಜು ಮಾಡಲಾಗಿದೆ. ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದೆ. ತುರ್ತು ಪರಿಹಾರ ಕಾರ್ಯಗಳನ್ನು ಕೈಗೊಂಡಿದ್ದಾರೆ. ಮಳೆ ಹಾಗೂ ಗಾಳಿಯ ಅಬ್ಬರದಿಂದ ಗ್ರಾಮೀಣ ಪ್ರದೇಶಗಳಲ್ಲಿ ಜನಜೀವನಕ್ಕೆ ತೊಂದರೆಯಾಗಿದೆ.

■ ಡಾ.ದುರಗೇಶ, ಅಪರ ಜಿಲ್ಲಾಧಿಕಾರಿ

14 ಮನೆಗಳಿಗೆ ಹಾನಿ

ಜಿಲ್ಲೆಯಾದ್ಯಂತ 14 ಮನೆಗಳು ಭಾಗಶಃ ಹಾನಿಗೊಳಗಾಗಿದ್ದು, ಗದಗದಲ್ಲಿ 2, ಶಿರಹಟ್ಟಿಯಲ್ಲಿ 5 ಹಾಗೂ ರೋಣದಲ್ಲಿ 7 ಮನೆಗಳಿಗೆ ಹಾನಿಯಾಗಿದೆ. ಇದೇ ವೇಳೆ 161 ಗುಡಿಸಲುಗಳು ಮತ್ತು ಶೆಡ್‌ಗಳು ಸಂಪೂರ್ಣ ನೆಲಕಚ್ಚಿದ್ದು, ಗದಗನಲ್ಲೇ 133 ಪ್ರಕರಣಗಳು ದಾಖಲಾಗಿವೆ. ಲಕ್ಷ್ಮೇಶ್ವರದಲ್ಲಿ 14, ಮುಂಡರಗಿಯಲ್ಲಿ 5 ಹಾಗೂ ರೋಣದಲ್ಲಿ 9 ಶೆಡ್‌ಗಳು ಹಾನಿಗೊಳಗಾಗಿವೆ. 11 ಜಾನುವಾರು ಶೆಡ್‌ಗಳು ಕುಸಿದಿದ್ದು, ಗದಗದಲ್ಲಿ 7 ಹಾಗೂ ಶಿರಹಟ್ಟಿಯಲ್ಲಿ 4 ಪ್ರಕರಣಗಳು ದಾಖಲಾಗಿವೆ. ಅಲ್ಲದೇ ಮಳೆಯಿಂದ ಬಟ್ಟೆ ಮತ್ತು ಗೃಹೋಪಯೋಗಿ ವಸ್ತುಗಳನ್ನು ಕಳೆದುಕೊಂಡ 96 ಕುಟುಂಬಗಳಿಗೆ ಪರಿಹಾರ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ.

10 ಶಾಲೆಗಳಿಗೆ ಹಾನಿ

ಮುಂಗಾರು ಪೂರ್ವ ಮಳೆಯು ಜಿಲ್ಲೆಯ ಶೈಕ್ಷಣಿಕ ವಲಯಕ್ಕೆ ತೀವ್ರ ಹೊಡೆತ ನೀಡಿದೆ. ಜಿಲ್ಲೆಯ 10 ಶಾಲೆಗಳು ಹಾನಿಗೊಳಗಾಗಿವೆ. ಗದಗದಲ್ಲಿ 4 ಹಾಗೂ ರೋಣದಲ್ಲಿ 6 ಶಾಲೆಗಳಿಗೆ ಹಾನಿಯಾಗಿದೆ. ಜಿಲ್ಲೆಯ ಶಾಲೆಗಳು ದುರಸ್ತಿ ಮಾಡದೇ ಇರುವುದರ ಬಗ್ಗೆ ತಾಲೂಕಿನ ಹಲವಾರು ಗ್ರಾಮಗಳ ಜನರು ಆತಂಕ ವ್ಯಕ್ತ ಪಡಿಸಿದ್ದಾರೆ.

"ಜಿಲ್ಲೆಯಾದ್ಯಂತ ಕಟಾವು ಹಂತಕ್ಕೆ ಬಂದಿದ್ದ ವಿವಿಧ ಬೆಳೆಗಳು ಮಳೆಯ ಅಬ್ಬರಕ್ಕೆ ಸಂಪೂರ್ಣ ನೆಲಕಚ್ಚಿವೆ. ಜಿಲ್ಲಾಡಳಿತ ಕೂಡಲೇ ಇದನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರಕ್ಕೆ ವರದಿ ನೀಡಿ ರೈತರಿಗೆ ಪರಿಹಾರ ನೀಡಬೇಕು.

■ ನಜೀರ್ ಅಹ್ಮದ, ಕಳಸಾಪೂರ ಗ್ರಾಮದ ರೈತ

ತಿಂಗಳಿನಿಂದ ಪೂರೈಕೆ ಆಗದ ನೀರು ಸರಬರಾಜು

•**ಲಕ್ಷ್ಮೇಶ್ವರ:** ಲಕ್ಷ್ಮೇಶ್ವರ ಪಟ್ಟಣ 50 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ್ದು, ಒಟ್ಟು 23 ವಾರ್ಡ್‌ಗಳಿವೆ. ಹೊಸ ಬಡಾವಣೆಗಳೂ ನಿರ್ಮಾಣವಾಗುತ್ತಿವೆ. ಹೀಗಿದ್ದರೂ ಮಳೆಗಾಲ ಪ್ರಾರಂಭಗೊಂಡೂ ಪಟ್ಟಣಕ್ಕೆ ಕಳೆದ ಒಂದು ತಿಂಗಳಿನಿಂದ ನೀರು ಸರಬರಾಜಗದೇ ಜನ ಕಂಗಾಲಾಗಿದ್ದಾರೆ. ನೀರಿಗೆ ಹಾಹಾಕಾರ ಉಂಟಾಗಿದ್ದು ಬೋರವೆಲ್ ಸವಳು ನೀರು ಗತಿಯಾಗಿದೆ.

40 ಕಿಮೀ ದೂರದಲ್ಲಿರುವ ಹಾವೇರಿ ಜಿಲ್ಲೆಯ ಮೇವುಂಡಿ ಗ್ರಾಮದಿಂದ ತುಂಗಭದ್ರಾ ನದಿಯಿಂದ ನೀರು ಸರಬರಾಜು ಆಗುತ್ತದೆ. ಸೂರಣಗಿ ಗ್ರಾಮದ ಹೊರವಲಯದಲ್ಲಿ ನೀರು ಶುದ್ಧೀಕರಣ ಹೊಂದಿ ಪಟ್ಟಣಕ್ಕೆ ಸರಬರಾಜಾಗುತ್ತದೆ. ನೀರಿನ ಸಮಸ್ಯೆಗಳ ಬಗ್ಗೆ ಅಧಿಕಾರಿಗಳನ್ನು ಕೇಳಿದರೆ ವಿದ್ಯುತ್ ಸಮಸ್ಯೆ, ಯಂತ್ರಗಳ ಸಮಸ್ಯೆ, ಪೈಪ್‌ಲೈನ್ ಸಮಸ್ಯೆ ಎನ್ನುತ್ತಿದ್ದಾರೆ. ವರ್ಷಕ್ಕೆ ಲಕ್ಷಗಟ್ಟಲೆ ದುರಸ್ತಿಗೆ ಖರ್ಚು ಮಾಡಿದರೂ ಸಮಸ್ಯೆ ಮಾತ್ರ ಬಗೆಹರಿಯುತ್ತಿಲ್ಲ ಎಂಬುದು ಜನರ ಆರೋಪ.

ನೀರಿನ ಸಮಸ್ಯೆಯಿಂದ ಹಳೇ ಬಸ್ ಸ್ಟಾಂಡ್ ಹತ್ತಿರ ಸಾರ್ವಜನಿಕರು ಪಬ್ಲಿಕ್ ನಳದ ಸವಳು ನೀರಿಗೆ ಕೊಡಪಾನ್ ಬಕೆಟ್, ಬುಟ್ಟಿಗಳನ್ನು ಪಾಳೆ ಹಚ್ಚಿದ್ದು ದಿನನಿತ್ಯ ವಿವಿಧ ವಾರ್ಡಗಳಲ್ಲಿ ಸವಳು ನೀರಿಗಾಗಿ ಜನರ ಮಧ್ಯ ತಂಟೆ ತಕರಾರು ಸರ್ವೇ ಸಾಮಾನ್ಯವಾಗಿದೆ .

"ಮೇವುಂಡಿ ಜಾಕ್ ವೆಲ್‌ನಿಂದ ಸೂರಣಗಿ ಜಲಶುದ್ಧೀಕರಣ ಘಟಕದವರೆಗೆ ಇರುವ ನೀರು ಸರಬರಾಜು ಪೈಪ್‌ಲೈನ್‌ನಲ್ಲಿ ಸೋರಿಕೆ ಉಂಟಾಗಿದೆ. ಟಿಸಿ ಸುಟ್ಟಿದ್ದು ಅಮೃತ್ 2.0 ಯೋಜನೆಯಡಿ ದುರಸ್ತಿ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿಯಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ಇನ್ನು 4–5 ದಿನಗಳ ಒಳಗಡೆ ಸಮಸ್ಯೆ ಬಗೆಹರಿಯುತ್ತದೆ. 10 ದಿನಗಳ ಒಳಗಡೆ ನೀರು ಕೊಡಲು ಪ್ರಯತ್ನಿಸುತ್ತೇವೆ.

■ ಪರಶುರಾಮ ಗುಡದಾರಿ, ಪುರಸಭೆ ಮುಖ್ಯಾಧಿಕಾರಿ

ಟ್ಯಾಂಕರ್ ನೀರಿಗೆ ಮೊರೆ

ನೀರಿನ ಬಿಲ್ ಸರಿಯಾಗಿ ಕಟ್ಟಿಸಿ ಕೊಳ್ಳುತ್ತಾರೆ. ಆದರೆ ತಿಂಗಳಾದರೂ ನೀರು ಬಿಡುವುದಿಲ್ಲ. 350ರಿಂದ 400 ರೂ. ಕೊಟ್ಟು ಟ್ಯಾಂಕರ್ ನೀರು ಹಾಕಿಸಿಕೊಳ್ಳುವ ಪರಿಸ್ಥಿತಿ. ಒಂದು ಕೊಡಪಾನ ನೀರಿಗಾಗಿ ಜಗಳ ಆಡುವ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಗುರುರಾಜ ಕೂಸನೂರ ಮಠ ಹಾಗೂ ಮಂಜುಳಾ ಕೂಸನೂರಮಠ ಬೇಸರಿಸಿದ್ದಾರೆ.



ಕುಮಾರವ್ಯಾಸ ಭಾರತದ ಗಮಕ ವಾಚನ, ವ್ಯಾಖ್ಯಾನ

•**ಗದಗ:** ಕುಮಾರವ್ಯಾಸನು ಹಾಡಿದನೆಂದರೆ ಕಲಿಯುವ ದ್ವಾಪರವಾಗುವದು ಎಂಬ ಕುವೆಂಪು ಅವರ ಸಾಲುಗಳು ಗದುಗಿನ ಭಾರತ ಕಾವ್ಯದ ಹಿರಿಮೆಯನ್ನು ಸಾರುತ್ತದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು ಬೆಂಗಳೂರು ಜಿಲ್ಲಾ ಘಟಕ ಗದಗ, ಕುಮಾರವ್ಯಾಸ ಪ್ರತಿಷ್ಠಾನ ಗದಗ ಹಾಗೂ ಕನ್ನಡಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ತೋಂಟದ ಸಿದ್ಧಲಿಂಗ ಶ್ರೀಗಳ ಕನ್ನಡ ಭವನ, ಕಸಾಪ ಕಾರ್ಯಾಲಯ ಗದಗ ಇಲ್ಲಿ ಜರುಗಿದ ಕುಮಾರವ್ಯಾಸ ಭಾರತದ ಗಮಕ ವಾಚನ ಮತ್ತು ವ್ಯಾಖ್ಯಾನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಡಾ.ದತ್ತಪ್ರಸನ್ನ ಪಾಟೀಲ ಮಾತನಾಡಿದರು. ರಾಹುಲ ಗಿಡ್ನಂದಿ ನಿರೂಪಿಸಿದರು. ಡಿ.ಎಸ್ .ಬಾಪುರಿ ಸ್ವಾಗತಿಸಿದರು. ಸುಮನ ಪಾಟೀಲ ವಂದಿಸಿದರು. ಚಂದ್ರಶೇಖರ ವಸ್ತ್ರದ, ಅಂದಾನಪ್ಪ ವಿಭೂತಿ, ವಿ.ಎಸ್.ದಲಾಲಿ, ಎಸ್ .ಪಿ.ಹೊಂಬಳ, ರವೀಂದ್ರ ಜೋಶಿ, ಈಶ್ವರಪ್ಪ ಕುಬುಸದ, ರಾಜೇಂದ್ರ ಕುಲಕರ್ಣಿ, ಜೆ. ಎ. ಪಾಟೀಲ, ಯಲ್ಲಪ್ಪ ಹಂದ್ರಾಳ, ಬೂದೇಶ ಮಜ್ಜಿಗುಡ್ಡ, ಮಲ್ಲಿಕಾರ್ಜುನ ಬಾರಕೇರ, ರತ್ನಕ್ಕ ಪಾಟೀಲ, ಶಾಂತಾಬಾಯಿ ಕುಲಕರ್ಣಿ ಇತರರಿದ್ದರು.

ಬಾಕಿ ಮ್ಯಾಪಿಂಗ್ ಕಾರ್ಯ ಶೀಘ್ರ ಪೂರ್ಣಗೊಳಿಸಿ

•**ಗದಗ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತಂತೆ ಪಾರದರ್ಶಕ ಮತದಾರರ ಪಟ್ಟಿ ತಯಾರಿಕೆಗೆ ಬಿ.ಎಲ್.ಒಗಳ ಪಾತ್ರ ಪ್ರಮುಖವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಹೇಳಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ –2026 ರ ಮ್ಯಾಪಿಂಗ್ ಕುರಿತು ಜರುಗಿದ ಸಭೆಯಲ್ಲಿ ಮಾತನಾಡಿದರು. ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧಿಸಿದಂತೆ ಮನೆ ಮನೆಗೆ ಭೇಟಿ ನೀಡಿ ಸಮಗ್ರ ವಿಷಯಗಳ ಪರಿಶೀಲನೆ ನಡೆಸಬೇಕು. ಸ್ಥಳಾಂತರಗೊಂಡ, ಮರಣ ಹೊಂದಿದ ಮತದಾರರ ಹೆಸರುಗಳ ಕಡೆ ವಿಶೇಷ ಗಮನ ಹರಿಸಬೇಕು. ಸಾಹಿತಿ, ಕ್ರೀಡಾಪಟು, ಪ್ರಶಸ್ತಿ ವಿಜೇತರು, ಎಂ.ಪಿ, ಎಂ.ಎಲ್, ಎ, ತಾ.ಪಂ. ಮಾಜಿ ಅಧ್ಯಕ್ಷ, ಗ್ರಾ.ಪಂ. ಸದಸ್ಯರು ಹೀಗೆ ವಿಐಪಿ ಹಾಗೂ ವಿವಿಐಪಿ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟು ಹೋಗಬಾರದು. ಈ ಕಾರ್ಯದಲ್ಲಿ ಯಾವುದೇ ಲೋಪದೋಷಗಳಾಗದಂತೆ ಎಚ್ಚರಿಕೆಯಿಂದ ಕೆಲಸ ಮಾಡಬೇಕು ಮತ್ತು ಬಿ.ಎಲ್.ಎ ಗಳೊಂದಿಗೆ ಸಹಕರಿಸಿಕೊಂಡು ಕಾರ್ಯನಿರ್ವಹಿಸಬೇಕು ಎಂದರು. ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಾಕಿ ಉಳಿದಿರುವ ಮ್ಯಾಪಿಂಗ್ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸಬೇಕು. ಜಿಲ್ಲೆಯಮತದಾರರಪಟ್ಟಿ ಸಮಗ್ರ ಪರಿಷ್ಕಣೆ ಯಶಸ್ವಿಗೊಳಿಸಬೇಕೆಂದು ತಿಳಿಸಿದರು. ಚುನಾವಣಾ ತಹಶೀಲ್ದಾರ ಸಂತೋಷ ಹಿರೇಮಠ ಹಾಗೂ ಜಿಲ್ಲಾ ಮಟ್ಟದ ಮಾಸ್ಟರ್ ತರಬೇತುದಾರ ಬಿ.ಜಿ.ಗಿರಿತಮ್ಮಣ್ಣವರ ಮಾತನಾಡಿದರು. ಮತದಾರರ ನೋಂದಣಾಧಿಕಾರಿಯಾದ ಉಪವಿಭಾಗಾಧಿಕಾರಿ ಗಂಗಪ್ಪ ಎಂ., ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕ ಎಸ್.ಡಿ.ಪಾಟೀಲ ಇತರರಿದ್ದರು.

ಸೌಲಭ್ಯ ಫಲಾನುಭವಿಗಳಿಗೆ ತಲುಪಲಿ

•**ಗದಗ:** ಸರ್ಕಾರದಿಂದ ಅನುಷ್ಠಾನಗೊಂಡ ಯೋಜನೆಗಳ ಸೌಲಭ್ಯ ಫಲಾನುಭವಿಗಳಿಗೆ ಸಮರ್ಪಕ ಹಂಚಿಕೆಯಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು. ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಇತ್ತೀಚೆಗೆ ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಜನರ ಯೋಜನೆ ರೂಪಿಸಲು ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್ .ಪಾಟೀಲ ಮಾತನಾಡಿ, ಸರ್ಕಾರದ ಮುಂದಿನ ಯೋಜನೆಗಳು ಜನರಿಂದಲೇ ರೂಪುಗೊಳ್ಳಲಿವೆ. ಆಯಾ ಗ್ರಾಮದ ಜನರು ತಮ್ಮ ಗ್ರಾಮಗಳಲ್ಲಿನ ಯೋಜನೆಗಳನ್ನು ಗ್ರಾಮ ಸಭೆಗಳಲ್ಲಿ ನಿರ್ಣಯಿಸಿ ರೂಪಿಸಬೇಕು. ಗ್ರಾಮ ಪಂಚಾಯತ್ ಆದ್ಯತೆಯ ಪಟ್ಟಿಯು ಸರ್ಕಾರದಲ್ಲಿ ಅನುಷ್ಠಾನಗೊಳ್ಳಲಿದೆ. ಯೋಜನೆಗಳಲ್ಲ ಏನಾದರೂ ಬದಲಾವಣೆಯನ್ನು ತರುವುದಿದ್ದರೂ ಸಹಿತ ಗ್ರಾಮಸಭೆಯ ಮುಂದಿಟ್ಟು ನಂತರ ಬದಲಾವಣೆಗಳಾಗಬೇಕು ಎಂದರು. ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ರಾಮನ್ ಮ್ಯಾಗೆಸೆ ಪ್ರಶಸ್ತಿ ಪುರಸ್ಕೃತ ಮತ್ತು ಸ್ಟಾಕ್ ಹೋಂ ಜಲ ಪ್ರಶಸ್ತಿ ಪುರಸ್ಕೃತ ರಾಜೇಂದ್ರ ಸಿಂಗ್, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್, ಆರೋಗ್ಯ ಮತ್ತು ಆಹಾರ ತಜ್ಞ ಡಾ.ಖಾದರ್ ಮಾತನಾಡಿದರು. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ ಸ್ವಾಗತಿಸಿದರು. ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಶೋಕ ಮಂದಾಲಿ ಇತರರಿದ್ದರು.





ಶಿರಹಟ್ಟಿ: ಬಕ್ರೀದ್ ಹಬ್ಬವನ್ನು ಮುಸ್ಲಿಂ ಬಾಂಧವರು ಶ್ರದ್ಧಾ ಭಕ್ತಿಯಿಂದ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಆಚರಿಸಿದರು.

ಬೃಹತ್ ಹಿಂದೂ ಸಮಾವೇಶ ಇಂದು



•**ಗದಗ:** ಹಿಂದು ಸಂಸ್ಕೃತಿಯ ಉಳಿವಿಗಾಗಿ ಎಲ್ಲ ಸಮಾಜದವರು ಒಗ್ಗೂಡಿಕೊಂಡು ಮೇ 31ರಂದು ಹಮ್ಮಿಕೊಂಡಿರುವ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶದಲ್ಲಿ ಬಂಜಾರಾ ಸಮಾಜದವರೆಲ್ಲರೂ ಭಾಗಿಯಾಗಿ ಯಶಸ್ವಿಗೊಳಿಸೋಣ ಎಂದು ವಿಜಯಪುರದ ಕೆಸರಟ್ಟಿಯ ಬಂಜಾರಾ ಸಮುದಾಯದ ಸೋಮಲಿಂಗ ಸ್ವಾಮೀಜಿ ಹೇಳಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದು ನಗರದ ವಿಡಿಎಸ್‌ಟಿ ಮೈದಾನದಲ್ಲಿ ಜರುಗುವ ಬೃಹತ್ ಹಿಂದೂ ಸಮಾವೇಶದಲ್ಲಿ ಹಿಂದೂ ಧರ್ಮವನ್ನು, ದೇಶದ ಕೃಷಿಯನ್ನು ಉಳಿಸಲು, ರೈತರ ಬೆನ್ನೆಲುಬಾಗಿ ನಿಂತಿರುವ ಕೃಷಿ ಸಂತ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ 300ಕ್ಕೂ ಹೆಚ್ಚು ಮಠಾಧೀಶರು ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಸಮಾವೇಶದ ಸಂಚಾಲಕ ರಾಜು ಖಾನಪ್ಪನವರ, ಮುಖಂಡರಾದ ಕಿಶನ್ ಮೇರವಾಡೆ, ಮಂಜುನಾಥ ಹಳ್ಳೂರಮಠ, ಪರಮೇಶ ನಾಯಕ, ಭೀಮಪ್ಪ ತೋಟದ, ಟಿ.ಡಿ. ಪೂಜಾರ, ಕೆ.ಸಿ. ನಭಾಪೂರ, ಕಾಳು ತೋಟದ, ವಿಠಲ ತೋಟದ, ಸೋಮಲಪ್ಪ ತೋಟದ, ಸೋಮೇಶ ಲಮಾಣಿ ಸೇರಿ ಅನೇಕರು ಇದ್ದರು.



ಗದಗ: ಬಕ್ರೀದ್ ಹಬ್ಬವನ್ನು ಜಿಲ್ಲೆಯಾದ್ಯಂತ ಮುಸ್ಲಿಂ ಸಮುದಾಯದವರು ಶ್ರದ್ಧೆ, ಭಕ್ತಿಯಿಂದ ಆಚರಿಸಿದರು. ಈದ್ಗಾ ಮೈದಾನದಲ್ಲಿ ನಮಾಜ್ ಸಲ್ಲಿಸಿದ ಮುಸ್ಲಿಂ ಸಮುದಾಯದವರು ರಾಜ್ಯದಲ್ಲಿ ಉತ್ತಮ ಮಳೆಯಾಗಬೇಕು ಎಂದು ಪ್ರಾರ್ಥಿಸಿದರು.

ಶಾಲಾ ಬಸ್‌ನಲ್ಲಿ ಸಿಸಿ ಟಿವಿ ಅಳವಡಿಸಿ



•**ಲಕ್ಷ್ಮೇಶ್ವರ:** ಶಾಲಾ ಕಾಲೇಜು ಬಸ್ ಚಾಲಕರು ಸಂಚಾರ ನಿಯಮ ಪಾಲಿಸಬೇಕು. ಇಲ್ಲವಾದರೆ ಕ್ರಮ ಕೈಗೊಳ್ಳಲಾಗುವುದು. ಪ್ರತಿ ಶಾಲಾ ಬಸ್‌ನಲ್ಲಿ ಸಿಸಿ ಟಿವಿ ಅಳವಡಿಸಬೇಕು ಎಂದು ಪಿಎಸ್‌ಐ ನಾಗರಾಜ ಗಡದ ಸೂಚಿಸಿದರು.

ಅವರು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶಾಲಾ ಕಾಲೇಜು ಆಡಳಿತ ಮಂಡಳಿಯವರ ಹಾಗೂ ಶಾಲಾ ಬಸ್ ಚಾಲಕರು ಮತ್ತು ಕ್ಲೀನರ್ ಜೊತೆಗೆ ಸಭೆ ನಡೆಸಿ ಮಾತನಾಡಿ, ಶಾಲಾ ಬಸ್ ದಾಖಲಾತಿಗಳು, ಪೊಲೀಷನ್, ಪಾಸಿಂಗ್ ಸರಿಯಾಗಿ ಇರಬೇಕು. ಬೇರೆಯವರ ಹೆಸರಿನ ಮೇಲೆ ವಾಹನವಿದ್ದರೆ ಆಡಳಿತ ಮಂಡಳಿಯವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ವಾಹನದ ಎಲ್ಲಾ ಕಾಗದಪತ್ರಗಳು ಸರಿಯಾಗಿ ಇರಬೇಕು. ದಾಖಲಾತಿಗಳನ್ನು ಬಸ್‌ನಲ್ಲಿಡಬೇಕು. ಚಾಲಕ ಜೊತೆಗೆ ಕ್ಲೀನರ್ ಇರಬೇಕು. ಚಾಲಕನ ಡಿಎಲ್ ಇನ್ಶೂರೆನ್ಸ್ ಚಾಲನೆಯಲ್ಲಿ ಇರಬೇಕು, ಮಕ್ಕಳ ಜಾಗೂರತೆಗಾಗಿ ಬಸ್ ನಲ್ಲಿ ಮಹಿಳಾ ಸಿಬ್ಬಂದಿ ನೇಮಿಸಿಕೊಳ್ಳಿ, ಕುಡಿದು, ಅಡ್ಡಾದಿಡ್ಡಿ ವಾಹನ, ವೇಗದ ಮಿತಿ ಹೆಚ್ಚಾದರೆ ಕ್ರಮ ಕೈಗೊಳ್ಳಲಾಗುವದು. ಬಸ್‌ನಿಂದ ವಿದ್ಯಾರ್ಥಿಗಳನ್ನು ಇಳಿಸುವಾಗ ಸುರಕ್ಷಿತ ಜಾಗದಲ್ಲಿ ನಿಲ್ಲಿಸಿ ಎಂದರು.

ಕೆ.ಎಸ್. ಕೊಷ್ಟಿ ಕೆ.ಎಂ. ಹಿರೇಮಠ, ಪಿಕರುಸಾಬ್ ಮುಲ್ಲಾ, ಆರ್.ಜಿ. ಸೂರಗಿಮಠ, ಗುಡ್ಡಪ್ಪ ಕಳಸೂರ, ಪೊಲೀಸ್ ಸಿಬ್ಬಂದಿ ಎಚ್.ಐ. ಕಲ್ಲಣ್ಣವರ, ಬಸವರಾಜ ದಾಸಪ್ಪನವರ, ಅನೇಕರು ಇದ್ದರು.

ಇಂದು ಪ್ರತಿಭಾ ಪುರಸ್ಕಾರ

•**ಲಕ್ಷ್ಮೇಶ್ವರ:** ತಾಲೂಕು ಬಣಜಿಗ ಸಮಾಜದಿಂದ ಮೇ 31ರಂದು ಬೆಳಗ್ಗೆ 10ಕ್ಕೆ ಪಟ್ಟಣದ ಬಿಸಿಎನ್ ಪಾಲಿಟೆಕ್ನಿಕ್ ಸಭಾ ಭವನದಲ್ಲಿ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಮುಕ್ತಿಮಂದಿರ ಧರ್ಮಕ್ಷೇತ್ರದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು. ಬಣಜಿಗ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷ ಲೋಹಿತ ನೆಲವಗಿ ಅಧ್ಯಕ್ಷತೆ ವಹಿಸುವರು. ಹಂಪಿ ಕನ್ನಡ ವಿವಿಯ ವಿ.ಕುಲಪತಿ ಎ.ಮುರಿಗೆಪ್ಪ ಉಪನ್ಯಾಸ ನೀಡುವರು. ಅತಿಥಿಗಳಾಗಿ ರತ್ನಾ ಕರ್ಕಿ, ಬಸವರಾಜ ಹತ್ತಿಕಾಳ, ಪ್ರತಿಮಾ ಮಹಾಜನಶೆಟ್ಟರ ಸೇರಿ ಗಣ್ಯಮಾನ್ಯರು, ಹಿರಿಯರು ಉಪಸ್ಥಿತರಿರುವರು.

ಕೆ.ಎಚ್.ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಿ

•**ಶಿರಹಟ್ಟಿ:** ಕಳೆದ ಐದು ದಶಕದಿಂದ ಪಕ್ಷ ನಿಷ್ಠೆ, ಶಿಸ್ತು, ಬದ್ಧತೆಯಿಂದ ಕೆಲಸ ಮಾಡುತ್ತಿರುವ ಹಿರಿಯ ರಾಜಕಾರಣಿ ಕೆ.ಎಚ್. ಮುನಿಯಪ್ಪ ಅವರಿಗೆ ಈ ಬಾರಿ ಉಪಮುಖ್ಯಮಂತ್ರಿ ಹುದ್ದೆ ನೀಡಬೇಕು ಎಂದು ಕರ್ನಾಟಕ ಮಾದರ ಮಹಾಸಭಾ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಹುಯಿಲಗೋಳ ಆಗ್ರಹಿಸಿದರು.



ಏಳು ಬಾರಿ ಲೋಕಸಭೆಗೆ ಆಯ್ಕೆಯಾಗಿ, ಹತ್ತು ವರ್ಷ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. ಮುನಿಯಪ್ಪ ಅವರು ರಾಜ್ಯ ರಾಜಕಾರಣಕ್ಕೆ ಬಂದಾಗಿನಿಂದ ಲಕ್ಷಾಂತರ ಮಾದಿಗ ಸಮುದಾಯದವರು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುತ್ತಿದ್ದಾರೆ. ಮಾದಿಗ ಸಮುದಾಯಕ್ಕೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯಡಿ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಎಐಸಿಸಿ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲಾ ಅವರಿಗೆ ಪ್ರಕಟಣೆ ಮೂಲಕ ಆಗ್ರಹಿಸಿದ್ದಾರೆ.

ಮಟ್ಕಾ ಆರೋಪಿತರು ಗಡಿಪಾರು

•**ಗದಗ:** ಜಿಲ್ಲೆಯಲಿ ಮಟ್ಕಾ ಪ್ರಕರಣಗಳಲ್ಲಿ ಭಾಗಿಯಾಗುವವರ ಮೇಲೆ ಕಾನೂನು ರೀತಿಯಾಗಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ದಲ್ಲಿ ಜರುಗಿದ ಪ್ರಸಕ್ತ ಸಾಲಿನ ನಾಲ್ಕನೇ ತ್ರೈಮಾಸಿಕ ಫ್ಲೈಯಿಂಗ್ ಸ್ಕ್ವಾಡ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಟ್ಕಾ ಪ್ರಕರಣಗಳಲ್ಲಿ ಬಾಕಿ ಇರುವ ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದು, ಅವುಗಳನ್ನು ಶೀಘ್ರ ಇತ್ಯರ್ಥಪಡಿಸಬೇಕು. ವಾಣಿಜ್ಯ ತೆರಿಗೆ ಇಲಾಖೆಯು ಜಿಎಸ್‌ಟಿ ಕಾಯ್ದೆಯಡಿ ಕಾರ್ಯನಿರ್ವಹಿಸುತ್ತಿದ್ದು ಗಡಿಪಾರು ಮಾಡಿರುವ ಆರೋಪಿತರ ಆರ್ಥಿಕ ಸ್ಥಿತಿಗತಿಯ ಬಗ್ಗೆ ಪರಿಶೀಲನೆ ನಡೆಸಿ ತಮ್ಮ ಕಾರ್ಯವ್ಯಾಪ್ತಿಯಡಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಡಿವೈಎಸ್‌ಪಿ ಮಹಾಂತೇಶ ಸಜ್ಜನ ಮಾತನಾಡಿ, ಜನವರಿಯಲ್ಲಿ ಮುಂಡರಗಿ ಪೊಲೀಸ್ ಠಾಣೆ ವ್ಯಾಪ್ತಿಯ ಬಸವರಾಜ ಮೈಲಪ್ಪ ದೊಡ್ಡಮನಿ ಅವರನ್ನು ವಿಜಯನಗರ ಜಿಲ್ಲೆ ಕೂಡ್ಲಿಗಿ ಪೊಲೀಸ್ ಠಾಣೆಗೆ ಮತ್ತು ಶಿರಹಟ್ಟಿ ಪೊಲೀಸ್ ಠಾಣೆ ವ್ಯಾಪ್ತಿಯ ವಿರೂಪಾಕ್ಷಪ್ಪ ಶೆಟ್ಟರ ಅವರನ್ನು ವಿಜಯನಗರ ಜಿಲ್ಲೆ ಕೊಟ್ಟೂರು ಪೊಲೀಸ್ ಠಾಣೆಗೆ ಗಡಿಪಾರು ಮಾಡಿ ಆದೇಶಿಸಿರುವ ಬಗ್ಗೆ ಸಭೆಗೆ ಮಾಹಿತಿ ಸಲ್ಲಿಸಿದರು. ಮೂರಕ್ಕಿಂತ ಹೆಚ್ಚು ಮಟಕಾ ಪ್ರಕರಣಗಳಲ್ಲಿ ಭಾಗಿಯಾದ ಆರೋಪಿತರನ್ನು ಗಡಿಪಾರು ಶಿಕ್ಷೆಗೆ ಒಳಪಡಿಸುತ್ತಿರುವ ಹಿನ್ನೆಲೆಯಲ್ಲಿ ಮಟಕಾ ಪ್ರಕರಣಗಳು ಇಳಿಮುಖವಾಗುತ್ತಿವೆ ಎಂದರು.



ಸನಾತನ ಧರ್ಮ ಸಂಸ್ಕೃತಿ ಉಳಿವಿಗೆ ಬದ್ಧ



•**ಮುಂಡರಗಿ:** ದೇಶದಲ್ಲಿ ಹಿಂದು ಧರ್ಮ, ಸಂಸ್ಕೃತಿ ಪರಂಪರೆ ಉಳಿಯಲು ಮಠಮಾನ್ಯಗಳ ಆದರಲ್ಲಿಯೂ ಸ್ವಾಮಿಗಳ ಪಾತ್ರ ಪ್ರಮುಖವಾಗಿದೆ. ಹಿಂದು ಧರ್ಮವನ್ನು ಬೆಳೆಸುವುದು ಸ್ವಾಮಿಗಳಾದವರ ಧರ್ಮ. ಸರ್ವಧರ್ಮದವರು ಒಂದಾಗಿ ದೇಶರಕ್ಷಣೆ ಜಾಗೃತಿ ಮೂಡಿಸಲು ಮತ್ತು ಬಸವಣ್ಣನವರ ಸಮಾನತೆ ಬೀರಲು ಬಸವಾದಿ ಶಿವಶರಣರ ಹಿಂದೂ ಸಮಾವೇಶ ಗದಗನಲ್ಲಿ ಮೇ 31ರಂದು ನಡೆಯಲಿದೆ ಎಂದು ವಿಜಯಪುರದ ಶಂಕರಲಿಂಗ ಗುರುಪೀಠದ ಕೇಶರಟ್ಟಿ ಸೋಮಲಿಂಗ ಸ್ವಾಮೀಜಿ ಹೇಳಿದರು.

ಈ ಕುರಿತು ಹಿಂದು ಸಮಾವೇಶದ ಕರಪತ್ರವನ್ನು ಶನಿವಾರ ಬಿಡುಗಡೆಗೊಳಿಸಿ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಖಂಡ ಹಿಂದೂ ಧರ್ಮವನ್ನು ಜಾತಿ ಆಧಾರದ ಮೇಲೆ ಬೇರ್ಪಡಿಸುವ ಷಡ್ಯಂತರವನ್ನು ನಿರಂತರವಾಗಿ ಅನೇಕರು ಮಾಡುತ್ತಾ ಬಂದಿದ್ದಾರೆ. ಕೆಲವು ಸ್ವಾಮಿಗಳು ಈ ಸಮಾವೇಶವನ್ನು ವಿರೋಧಿಸುತ್ತಿದ್ದರೂ ಸಮಾವೇಶದಲ್ಲಿ 300ಕ್ಕೂ ಹೆಚ್ಚು ಸ್ವಾಮಿಗಳು ಈ ಸಮಾವೇಶದಲ್ಲಿ ಪಾಲ್ಗೊಂಡು ಹಿಂದೂ ಜಾಗೃತಿ ಮೂಡಿಸಿ ಭಾರತೀಯ ಸನಾತನ ಧರ್ಮ ಸಂಸ್ಕೃತಿಯನ್ನು ಉಳಿಸಲು ಬದ್ಧರಾಗಿದ್ದಾರೆ. ಸಮಾವೇಶ ಕನ್ನೇರಿ ಮಠದ ಅದೃಶ್ಯ ಕಾಡು ಸಿದ್ದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ನಡೆಯುತ್ತಿದೆ ಎಂದರು. ಯುವ ಮುಖಂಡ ರವಿಕಾಂತ ಅಂಗಡಿ, ಸುಭಾಷ ಗುಡಿಮನಿ, ಬೆನಕರಾಜ ಪೂಜಾರ, ವಸಂತ ನಾಯ್ಕ್, ಪರಮೇಶ ನಾಯಕ, ಬಸವರಾಜ ಕರಿ, ಚನ್ನಪ್ಪ ಮುರಡಿ, ತುಕಾರಾಮ ಲಮಾಣಿ, ಸುರೇಶ ಲಮಾಣಿ, ಅನಿಲಮುರಡಿ, ಕೃಷ್ಣ ಕಾರಬಾರಿ, ಗುರಪ್ಪ ನಾಯಕ ಸೇರಿದಂತೆ ಅನೇಕರಿದ್ದರು.

ಧಾರವಾಡ ಐಐಐಟಿ 8ನೇ ಘಟಿಕೋತ್ಸವ | ಸಚಿವ ಪ್ರಹ್ಲಾದ ಜೋಶಿ ಅಭಿಮತ

ವಿಕಸಿತ ಭಾರತಕ್ಕೆ ಯುವಶಕ್ತಿ ದಿಕ್ಸೂಚಿ

ಧಾರವಾಡ: ಒಂದೊಮ್ಮೆ ತಂತ್ರಜ್ಞಾನಕ್ಕೆ ಅನ್ಯ ದೇಶಗಳತ್ತ ಮುಖ ಮಾಡುತ್ತಿದ್ದ ಭಾರತ, ಇಂದು ವಿಜ್ಞಾನಿಗಳ ಪರಿಶ್ರಮದಿಂದ ಜಗತ್ತೇ ಭಾರತದ ಕಡೆಗೆ ತಿರುಗಿ ನೋಡುವಂತೆ ಮಾಡಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅಭಿಪ್ರಾಯ ವ್ಯಕ್ತಪಡಿಸಿದರು.

ಧಾರವಾಡ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ)ಯ 8ನೇ ಘಟಿಕೋತ್ಸವದಲ್ಲಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಭಾರತದ ತಾಂತ್ರಿಕ ಸಾಮರ್ಥ್ಯ, ಬಾಹ್ಯಾಕಾಶ ಹಾಗೂ ವೈದ್ಯಕೀಯ ರಂಗದ ಸಾಧನೆ ಪದವೀಧರರ ಮುಂದೆ ಎಳೆ ಎಳೆಯಾಗಿ ಬಿಚ್ಚಿಟ್ಟರು.

ಕೊರೋನಾ ಸಂಕಷ್ಟದ ಸಮಯದಲ್ಲಿ ಜಗತ್ತಿನ ದೊಡ್ಡ ಲಸಿಕಾ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿ, ನೂರಕ್ಕೆ ಹೆಚ್ಚು ದೇಶಗಳಿಗೆ ಲಸಿಕೆ ಪೂರೈಸುವ ಮೂಲಕ ಭಾರತದ ವೈದ್ಯಕೀಯ ಮತ್ತು ತಾಂತ್ರಿಕ ಬಲವನ್ನು ಸಾಬೀತುಪಡಿಸಿದಕ್ಕೆ ಹೆಮ್ಮೆ ವ್ಯಕ್ತಪಡಿಸಿದರು.

ದೇಶದಕ್ಕೆ ಸ್ವಾತಂತ್ರ್ಯ ಬಂದು 100 ವರ್ಷ ತುಂಬುವ 2047ರ ಹೊತ್ತಿಗೆ ನಮ್ಮ ಭಾರತ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿದೆ. ಪದವಿ ಪಡೆದಿರುವ ಯುವಕರು 'ವಿಕಸಿತ ಭಾರತ'ಕ್ಕೆ ಯುವಶಕ್ತಿ ದಿಕ್ಸೂಚಿಯಾಗಬೇಕು ಎಂದು ಸಲಹೆ ನೀಡಿದರು.

ಘಟಿಕೋತ್ಸವ ಭಾಷಣ ಮಾಡಿದ ದೆಹಲಿಯ ಐಐಟಿ ನಿರ್ದೇಶ ಪ್ರೊ.ರಂಗನ್ ಬ್ಯಾನರ್ಜಿ, ಭಾರತದ ಯುವಶಕ್ತಿ ಮತ್ತು ಐಟಿ ಪ್ರತಿಭೆಗಳು ಜಾಗತಿಕ ತಂತ್ರಜ್ಞಾನದ ರಂಗದ ಚುಕ್ಕಾಣಿ ಹಿಡಿದು, ಇಂದಿನ ತಂತ್ರಜ್ಞಾನ ಯುಗ ಭಾರತ ಮುನ್ನಡೆಸುತ್ತಿದೆ ಎಂದರು.

ಕೃತಕ ಬುದ್ಧಿಮತ್ತೆ ಮತ್ತು ಕ್ವಾಂಟಮ್ ಕಂಪ್ಯೂಂಟಿಗ್ ನಂತಹ ಉದಯೋನ್ಮುಖ ತಂತ್ರಜ್ಞಾನಗಳಿಂದ ಭಾರತ, ಜಗತ್ತನ್ನಾಳುವ ಸಾಮರ್ಥ್ಯ ಹೊಂದಿದೆ. ಯುವಕರ ಸಂಶೋಧನೆ, ಆವಿಷ್ಕಾರ ದೇಶವನ್ನು ಪರಮ ವೈಭವದ ಸ್ಥಿತಿ ತಲುಪಲಿ ಎಂದು ಹೇಳಿದರು.

ಘಟಿಕೋತ್ಸವದಲ್ಲಿ ಧಾರವಾಡ ಐಐಐಟಿ ಆಡಳಿತ ಮಂಡಳಿ ಅಧ್ಯಕ್ಷ ಅಶ್ರಿ ಜಲಜ್ ದಾನಿ, ಸಂಸ್ಥೆಯ ನಿರ್ದೇಶಕ ಪ್ರೊ.ಮಹಾದೇವ್ ಪ್ರಸನ್ನ, ಸಿಂಡಿಕೇಟ್ ಹಾಗೂ ಸೆನೆಟ್ ಸದಸ್ಯರು, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಸ್ಥರು ಪಾಲ್ಗೊಂಡಿದ್ದರು.



ಪದವಿ ಪ್ರದಾನ

ಘಟಿಕೋತ್ಸವದಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಎಂಜನಿಯರಿಂಗ್ ವಿಭಾಗದ 136, ಡೇಟ್ ಸೈನ್ಸ್ ಮತ್ತು ಆರ್ಟಿಫಿಷಿಯಲ್ ಇಂಟೆಲಜೆನ್ಸ್ ವಿಭಾಗದ 66 ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜನಿಯರಿಂಗ್ ವಿಭಾಗದ 51 ವಿದ್ಯಾರ್ಥಿಗಳು ಸೇರಿ ಒಟ್ಟು 253 ವಿದ್ಯಾರ್ಥಿಗಳಿಗೆ ವಿವಿಧ ಪದವಿಗಳನ್ನು ಪ್ರದಾನ ಮಾಡಲಾಯಿತು.

ಚಿನ್ನದ ಪದಕಕ್ಕೆ ಭಾಜನ

ಘಟಿಕೋತ್ಸವದಲ್ಲಿ 9.93 ಸಿಪಿಐ ಗಳಿಸಿದ ಶಿವ ಶಂಕರ ಬಿ ರಾಷ್ಟ್ರಪತಿ ಚಿನ್ನದ ಪದಕ ಹಾಗೂ ಇನ್ಸ್ಟಿಟ್ಯೂಟ್ ಚಿನ್ನದ ಪದಕ ಪಡೆದರು. ಇನ್ನು 9.84 ಸಿಪಿಐ ಗಳಿಸಿದ ಆದಿತ್ಯ ರಾಜ್ ಇನ್ಸ್ಟಿಟ್ಯೂಟ್ ಚಿನ್ನದ ಪದಕ ಮತ್ತು ನಿರ್ದೇಶಕರ ಚಿನ್ನದ ಪದಕ, ಹಾಗೂ ಶ್ರೀಜನ್ ಶುಕ್ಲಾ ಇನ್ಸ್ಟಿಟ್ಯೂಟ್ ಚಿನ್ನದ ಪದಕ ಪಡೆದರು.

ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಅಭಿಪ್ರಾಯ

ಕಾರ್ಯಕರ್ತರಿಗೆ ದೇಶಭಕ್ತಿ ಕಲಿಸುವ ಪಕ್ಷ ಬಿಜೆಪಿ

ಯಾದಗಿರಿ: ಪ್ರಶಿಕ್ಷಣ ವರ್ಗದ ಮೂಲಕ ದೇಶ, ವಿದೇಶಗಳ ಅನೇಕ ಪ್ರಚಲಿತ ವಿದ್ಯಮಾನಗಳನ್ನು ತಿಳಿಸುವ ಮೂಲಕ ಕಾರ್ಯಕರ್ತರನ್ನು ಸಂಘಟಿಸಿ ಆ ಮೂಲಕ ಪಕ್ಷವನ್ನು ಗಟ್ಟಿಯಾಗಿ ಬೆಳೆಸುವ ಪ್ರಕ್ರಿಯೆ ಪಂ. ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಹೇಳಿದರು.

ಇಲ್ಲಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಪ್ರಶಿಕ್ಷಣ ವರ್ಗದ ಎರಡು ದಿನಗಳ ಬೈಠಕ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಪಕ್ಷಕ್ಕೆ ಅತ್ಯಂತ ನಿಷ್ಠೆ ಮತ್ತು ಸಮಯ ಕೊಟ್ಟು ಕೆಲಸ ಮಾಡುವ 160 ಜನರಿಗೆ ಇಲ್ಲಿ 12 ಅಧ್ಯಾಯಗಳ ಮೂಲಕ ತರಬೇತಿ ನೀಡಲಾಗುತ್ತಿದೆ ಎಂದರು.

ದೇಶದಲ್ಲಿ 130ಕ್ಕೂ ಅಧಿಕ ರಾಜಕೀಯ ಪಕ್ಷಗಳಿವೆ. ಕಾಂಗ್ರೆಸ್ ಸೇರಿದಂತೆಯೇ ಯಾವ ಪಕ್ಷಗಳು ಸಹ ಇಂತಹ ತರಬೇತಿ ನೀಡುವುದಿಲ್ಲ, ಅವುಗಳಿಗೆ ಅಧಿಕಾರ, ಹಣಲೂಟಿ ಮಾಡುವುದೇ ಮುಖ್ಯ ಉದ್ದೇಶ ವಾಗಿರುತ್ತದೆ. ಆದರೆ ಬಿಜೆಪಿಗೆ ದೇಶಭಕ್ತಿ ಕಲಿಸುವುದರ ಜತೆಗೆ ದೇಶದ ಅಭಿವೃದ್ಧಿ ಮುಖ್ಯವಾಗಿದೆ. 13ಕೋಟಿ ಸದಸ್ಯತ್ವವನ್ನು ಹೊಂದಿರುವ ಜಗತ್ತಿನ ಏಕೈಕ ದೊಡ್ಡ ಪಕ್ಷವೆಂದರೆ ಬಿಜೆಪಿ ಎಂದು ಹೇಳಿದರು.

22 ರಾಜ್ಯಗಳಲ್ಲಿ ಪಕ್ಷ ಅಧಿಕಾರದಲ್ಲಿದೆ, 140 ಜನರಿರುವ ಭಾರತ ದೇಶದ ಪ್ರಧಾನಿಯಾಗಿ ನರೇಂದ್ರ ಮೋದಿಯವರು ಉತ್ತಮ ಕೆಲಸ ಮಾಡು ತ್ತಿದ್ದಾರೆ. ಇದು ಮುಖ್ಯವಾದ ಪ್ರಶಿಕ್ಷಣ ವರ್ಗವಾಗಿದ್ದು, ಇದರಲ್ಲಿ ಭಾಗವಹಿಸುವವರು ಮೊಬೈಲ್ ನಿಂದ ದೂರವಿದ್ದು, ಚಿತ್ತ ಇಲ್ಲಿಯೇ ಇಟ್ಟು ಎಲ್ಲವನ್ನು ಕೇಳಿಕೊಂಡು ಮುಂದೆ ಆ ರೀತಿಯಾಗಿ ಕೆಲಸ ಮಾಡುವ ಮೂಲಕ ಮುಂದಿನ ಚುನಾವಣೆಗೆ ತಯಾರಿ ಮಾಡಿಕೊಳ್ಳಬೇಕೆಂದರು.

ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿ ಜತೆಗೆ ಧರ್ಮ ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದ್ದಾರೆಂದರು. ಈಗ ದೇಶದಲ್ಲಿ ಹಿಂದೂತ್ವ, ಬಂಧುತ್ವ ಮತ್ತು ಸಿಂಧೂತ್ವದ ಅವಶ್ಯಕತೆ ಇದೆ. ಆ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡೋಣ ಎಂದರು.

ಮಾಜಿ ಎಂಎಲ್‌ಸಿ, ಕಲ್ಬುರ್ಗಿ ವಿಭಾಗ ಪ್ರಭಾರಿ ಅರುಣ ಶಹಾಪುರ, ಮಾಜಿ ಸಚಿವ ನರಸಿಂಹ ನಾಯಕ್, ಎಂಎಲ್‌ಸಿ ಡಾ. ಬಿ.ಜಿ. ಪಾಟೀಲ್, ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ,ಸಹ ಪ್ರಭಾರಿ ಶರಣಪ್ಪ ತಳವಾರ, ಪ್ರಶಿಕ್ಷಣ ರಾಜ್ಯ ಸಂಚಾಲಕ ರಾಜಶೇಖರ ನಾಗಮುರ್ತಿ, ರಾಜ್ಯ ಕಾರ್ಯದರ್ಶಿ ಲಲಿತಾ ಅನಪುರ, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶರಡ್ಡಿ ಮುದ್ನಾಳ ಮತ್ತು ರಾಜಶೇಖರ್ ಗೂಗಲ್, ಮಾಜಿ ಜಿಲ್ಲಾಧ್ಯಕ್ಷ ಅಮೀನರೆಡ್ಡಿ ಯಾಳಗಿ ಮತ್ತು ಡಾ.ಶರಣಭೂಪಾಲರಡ್ಡಿ ನಾಯ್ಕಲ್, ರಾಚನಗೌಡ ಮುದ್ನಾಳ, ದೇವಿಂದ್ರನಾಥ ನಾದ, ಚಂದ್ರಶೇಖರ ಮಾಗನೂರ, ನಾಗರತ್ನ ಕುಪ್ಪಿ, ನಫೆಡ್ ಉಪಾಧ್ಯಕ್ಷ ಸಿದ್ದಪ್ಪ ಹೊಟ್ಟಿ, ಮಲ್ಲಿಕಾರ್ಜುನ ಚಿಲ್ಲಾಳ ಇದ್ದರು.



> ಹಿಂದುತ್ವ ಎಂದರೆ ನಾಗರಿಕತೆ. ಆದರೆ, ಈ ಹೆಸರು ಕೆಲವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಆದರಲ್ಲೂ ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹಿಂದೂ ಸಮಾಜವನ್ನು ಸರ್ವ ನಾಶವಾಗುವುದನ್ನೇ ಬಯಸಿದಂತೆಯೇ ವರ್ತಿಸುತ್ತಿದ್ದಾರೆ.
> ■ ಛಲವಾದಿ ನಾರಾಯಣ ಸ್ವಾಮಿ, ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ

ಖಾಸಗಿ ಬಸ್ ಪಲ್ಟಿ: 20ಕ್ಕೂ ಹೆಚ್ಚು ಜನರಿಗೆ ಗಾಯ, ಓರ್ವ ಸಾವು

ಅಂಕೋಲಾ: ಖಾಸಗಿ ಬಸ್ ಪಲ್ಟಿಯಾಗಿ ಓರ್ವ ಮೃತಪಟ್ಟು 20ಕ್ಕೂ ಹೆಚ್ಚು ಜನ ಗಾಯಗೊಂಡ ಘಟನೆ ತಾಲೂಕಿನ ಕಂಚಿನಬಾಗಿಲ ಬಳಿ ರಾಷ್ಟ್ರೀಯ ಹೆದ್ದಾರಿ 52ರಲ್ಲಿ ಸಂಭವಿಸಿದೆ.

ಗಾಯಾಳುಗಳಲ್ಲಿ 9 ಜನರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಅಂಕೋಲಾ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಕಾರವಾರದ ಕಿಮ್ಸ್‌ಗೆ ಸಾಗಿಸಲಾಗಿದೆ.

ಆಂಧ್ರಪ್ರದೇಶದ ಅನಂತಪುರದಿಂದ ಗೋವಾಕ್ಕೆ ಸಾಗುತ್ತಿದ್ದ ಸೀ ಬರ್ಡ್ ಟ್ರಾವೆಲ್ಸ್ ಖಾಸಗಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಕಂಚಿನಬಾಗಿಲ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆಗೆ ಅಡ್ಡವಾಗಿ ಪಲ್ಟಿಯಾಗಿದ್ದು, ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಕೊಪ್ಪಳ ಇರಕಲಘಡ ನಿವಾಸಿ ಶರಣಯ್ಯ ಕಲ್ಲಮಠ (42) ಗಂಭೀರ ಸ್ವರೂಪದ ಗಾಯಗೊಂಡು ಮೃತಪಟ್ಟಿದ್ದಾರೆ.

ಬಸ್ಸಿನಲ್ಲಿ ಒಟ್ಟು 36 ಜನ ಪ್ರಯಾಣಿಕರಿದ್ದು ಹಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.



ಬಸ್ ಪಲ್ಟಿಯಾಗಿ ರಸ್ತೆಗೆ ಅಡ್ಡಲಾಗಿ ಬಿದ್ದ ಕಾರಣ ಕೆಲವು ಗಂಟೆಗಳ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿಗಳು ಘಟನಾ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದು, ಕ್ರೇನ್ ಬಳಸಿ ಪಲ್ಟಿಯಾದ ಬಸ್ಸನ್ನು ಮೇಲಕ್ಕೆತ್ತಲಾಯಿತು.

ಅಂಕೋಲಾ ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ, ಸಂಚಾರ ಘಟಕದ ಪಿಎಸ್‌ಐ ಸುನೀಲ ಹುಲ್ಲೊಳ್ಳಿ ಮತ್ತು ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ನೀಡಿ ರಕ್ಷಣಾ ಕಾರ್ಯ ಮತ್ತು ಸಂಚಾರ ಸುವ್ಯವಸ್ಥೆಗೆ ಕ್ರಮ ಕೈಗೊಂಡರು.

ಬಿವೈವಿ ನೇತೃತ್ವದಲ್ಲಿ ನಾಳೆ ಬೃಹತ್ ಪ್ರತಿಭಟನೆ: ತೇಲ್ಕೂರ

ಕಲಬುರಗಿ: ಜಿಲ್ಲೆಯ ಆಳಂದ ಪಟ್ಟಣದ ರಾಘವ ಚೈತನ್ಯ ಶಿವಲಿಂಗ ಮೂರ್ತಿ ಪೂಜೆಗೆ ಅಡ್ಡಿಪಡಿಸಿದ ಗುಂಡಾಗಳ ಮೇಲಿನ ಕೇಸ್ ವಾಪಸ್ ಪಡೆದಿರುವುದನ್ನು ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿ ಜೂನ್ 1ರಂದು ಕಲಬುರಗಿ ನಗರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು ಆಳಂದ ಪಟ್ಟಣದಲ್ಲಿ ರಾಘವ ಚೈತನ್ಯ ಶಿವಲಿಂಗ ಮೂರ್ತಿಗೆ ಪೂಜೆ ಸಲ್ಲಿಸಲು ತೆರಳುವ ಸಂದರ್ಭದಲ್ಲಿ ಆಗ ಕೇಂದ್ರದ ಸಚಿವರಾಗಿದ್ದ ಭಗವಂತ ಖೂಬಾ, ಆಂದೋಲಾ ಸಿದ್ದಲಿಂಗ ಸ್ವಾಮಿ ಸೇರಿ ಅದರಲ್ಲೂ ಜಿಲ್ಲಾಧಿಕಾರಿ ಕಾರಿನ ಮೇಲೆ ಕೆಲವು ಗುಂಡಾಗಳು ಕಲ್ಲೂ ತೂರಾಟ ನಡೆಸಿದ್ದರ ಹಿನ್ನೆಲೆಯಲ್ಲಿ 13 ಪ್ರಕರಣಗಳು ದಾಖಲಾಗಿದ್ದವು.

ಅದರಲ್ಲಿ 8 ಪ್ರಕರಣಗಳು ಸಚಿವರ, ಶಾಸಕರ ಹಾಗೂ ಇತರರ ಮೇಲೆ ಕಲ್ಲೂ ತೂರಾಟ ನಡೆಸಿದ್ದಲ್ಲದೇ ಮಾರಕಾಸ್ತ್ರದಿಂದ ಹಿಡಿದು ಭಯದ ವಾತಾವರಣ ನಿರ್ಮಾಣ ಮಾಡಿರುವ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತವಾಗಿ ದಾಖಲಾಗಿದ್ದವು. 5 ಪ್ರಕರಣಗಳು ಖಾಸಗಿಯಾಗಿ ದಾಖಲಾಗಿದ್ದವು. ಆದರೆ, ಸರ್ಕಾರ ಗೂಂಡಾಗಳಿಗೆ ಪ್ರಚೋದನೆ ನೀಡುವ ನಿಟ್ಟಿನಲ್ಲಿ ಅವರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆದಿರುವುದು ನಿಜಕ್ಕೂ ಅಕ್ಷಮ್ಯ ಅಪರಾಧವಾಗಿದೆ. ಈ ನಿಟ್ಟಿನಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದೆ ಎಂದು ಮಾಜಿ ಶಾಸಕ ರಾಜಕುಮಾರ ಪಾಟೀಲ್ ತೇಲ್ಕೂರ ತಿಳಿಸಿದ್ದಾರೆ.

ಸ್ಪೀಕರ್ ಆಗಿದ್ದ ಯು.ಟಿ.ಖಾದರ್ ಅವರ ಶಿಫಾರಸ್ಸಿನ ಮೇರೆಗೆ ಗೂಂಡಾಗಳ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ. ಡಿಸಿ ಕಾರಿನ ಮೇಲೆ ಕಲ್ಲು ಹೊಡೆದವರ ಮೇಲಿನ ಕೇಸ್‌ಗಳನ್ನು ವಾಪಸ್ ಪಡೆದಿರುವುದು ದೇಶದಲ್ಲೇ ಪ್ರಥಮವಾಗಿದೆ. ಹೀಗಿದ್ದ ಮೇಲೂ ರಾಜ್ಯ ಸರ್ಕಾರ ಕೇಸ್ ವಾಪಸ್ ಪಡೆಯುವ ಮೂಲಕ ಸಮಾಜದಲ್ಲಿ ದೊಂಬಿ, ಗಲಭೆಗಳಿಗೆ ತಮ್ಮದೇನು ತಕರಾರಿಲ್ಲ ಎಂದು ಸಂದೇಶ ನೀಡಲು ಹೊರಟಿದೆ ಎಂದು ತೇಲ್ಕೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜೂನ್ 1ರಂದು ಬೆಳಗ್ಗೆ 9ಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆಯುವ ಬೃಹತ್ ಪ್ರತಿಭಟನೆಯಲ್ಲಿ ಬಿಜೆಪಿ ಪಕ್ಷದ ಇತರ ನಾಯಕರು ಹಾಗೂ ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಯ ಬಿಜೆಪಿ ಪಕ್ಷದ ಸಂಸದರು, ಮಾಜಿ ಸಂಸದರು, ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು ಸೇರಿ ಇತರ ಮುಖಂಡರು ಪಾಲ್ಗೊಳ್ಳಲಿದ್ದಾರೆ. ಹೀಗಾಗಿ ಸಾರ್ವಜನಿಕರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕೆಂದು ತಿಳಿಸೀದರು.

ಬಿಜೆಪಿ ಸರ್ಕಾರವಿದ್ದಾಗ ಮೂರಿನಕಟ್ಟೆ ಪ್ರಕರಣ

ಏಕೆ ಇತ್ಯರ್ಥ ಪಡಿಸಲಿಲ್ಲ: ಸಚಿವ ವೈದ್ಯ

ಭಟ್ಕಳ: ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಮತ್ತು ಭಟ್ಕಳ ಕ್ಷೇತ್ರದಲ್ಲಿ ಬಿಜೆಪಿ ಶಾಸಕರು, ಈಗಿನ ಸಂಸದರೇ ಸ್ಪೀಕರ್ ಇದ್ದಾಗ ಮೂರಿನಕಟ್ಟೆ ಪ್ರಕರಣವನ್ನು ಇತ್ಯರ್ಥಗೊಳಿಸಲು ಏಕೆ ಸಾಧ್ಯವಾಗಿಲ್ಲ ಎಂದು ಮಾಜಿ ಸಚಿವ ಮಂಕಾಳ ಎಸ್ ವೈದ್ಯ ಪ್ರಶ್ನಿಸಿದ್ದಾರೆ.

ದೇವಸ್ಥಾನ, ನಂಬಿಕೆ ಸ್ಥಾನಗಳ ಕುರಿತು ತೊಂದರೆಯಾದಾಗ ಇವರು ಪಕ್ಷದ ವತಿಯಿಂದ ಪ್ರತಿಭಟನೆ ಮಾಡುವುದರ ಬದಲು ಬಿಜೆಪಿ ಪಕ್ಷಾತೀತವಾಗಿ ಪ್ರತಿಭಟನೆ ಮಾಡಬೇಕಾಗಿತ್ತು. ಇದು ರಾಜಕಾರಣ ಮಾಡುವ ವಿಷಯವಲ್ಲ ಎಂದ ಮಂಕಾಳ ವೈದ್ಯ, ಪ್ರತಿಭಟನೆಯಲ್ಲಿ ತನ್ನ ವಿರುದ್ಧ ಧಿಕ್ಕಾರ ಕೂಗಿದ್ದಕ್ಕೆ ಕೆಂಡಾಮಂಡಲವಾದ ಮಂಕಾಳ ವೈದ್ಯ ಅವರು ಇದು ಪರಶುರಾಮನ ಸೃಷ್ಟಿ. ಇಲ್ಲಿ ದೇವಸ್ಥಾನದ ಕುರಿತು ರಾಜಕೀಯ ಮಾಡಿದವರು ಸರ್ವನಾಶವಾಗಿ ಹೋಗುತ್ತಾರೆ. ನಾನು ದೇವಸ್ಥಾನವನ್ನು ಕಟ್ಟುವವನು, ಮೂರಿನಕಟ್ಟೆಯನ್ನು ಹೇಗೆ ಮಾಡಬೇಕು. ಎಲ್ಲಿ ಮಾಡಬೇಕು. ಅದರ ಮೂಲ ಎಲ್ಲಿದೆ ಎನ್ನುವುದನ್ನು ತಿಳಿದುಕೊಂಡು ಹೇಗಾಗಬೇಕು ಅದೇ ರೀತಿಯಲ್ಲಿ ಮಾಡುತ್ತೇನೆ.



ಬಿಜೆಪಿ ಪಕ್ಷದವರು ಎಂದೂ ದೇವಸ್ಥಾನವನ್ನು ಕಟ್ಟುವವರಲ್ಲ, ಅವರು ಕಟ್ಟುವವರಿಗೆ ತೊಂದರೆ ಕೊಡುವುದನ್ನೇ ರೂಢಿಸಿಕೊಂಡಿದ್ದಾರೆ. ನಾನು ಕಟ್ಟುತ್ತೇನೆ ಎಂದರೆ ಇವರು ಹೋಗ್ರೋ ಬೈಯ್ರೋ ಎನ್ನುವ ಮನಸ್ಥಿತಿಯವರು ಎಂದು ಖಾರವಾಗಿ ಹೇಳಿದರು. ದೇವಸ್ಥಾನವನ್ನು ಕಟ್ಟುವವ ನಾನು, ಕೆಡವುವವನಲ್ಲ ಎಂದು ಈ ಹಿಂದೆಯೇ ನಾನು ಸ್ಪಷ್ಟಪಡಿಸಿದ್ದು ಅದಕ್ಕೆ ಬದ್ಧನಾಗಿದ್ದೇನೆ ಎಂದರು. ಪಕ್ಷಾತೀತರಾಗಿ ಹೋರಾಟ ಮಾಡುವುದನ್ನು ಬಿಟ್ಟು ಪಕ್ಷದ ವತಿಯಿಂದ ಹೋರಾಟ ಹಮ್ಮಿಕೊಂಡಿರುವುದು ತಪ್ಪು. ವಿಜಯೇಂದ್ರ ಅವರೇ, ಆರ್.ಅಶೋಕ ಅವರೇ ಇಲ್ಲಿ ದೇವಸ್ಥಾನದ ಕುರಿತು ರಾಜಕಾರಣ ಮಾಡಲು ಬರುವುದು ಸರಿಯಲ್ಲ. ಕಳೆದ ಐದು ವರ್ಷ ಇಲ್ಲಿ ಏನೂ ಮಾಡದೇ ಈಗ ಮಾಡಲು ಬಂದಿರುವುದನ್ನು ಖಂಡಿಸಿದ ಅವರು ಈಗ ಬಂದಿರುವುದು ತೊಂದರೆ ಕೊಡಲಿಕ್ಕೆ ಮಾತ್ರ ಎಂದು ಹೇಳಿದರು.

ನಾನು ಸಾಮಾನ್ಯ ಜನರೊಂದಿಗೆ, ಬಡವರೊಂದಿಗೆ ಇರುವವನು. ನನಗೆ ಬಡವರ, ಸಾಮಾನ್ಯ ಜನರ ಆಶೀರ್ವಾದ ಇದೆ. ಇಲ್ಲಿ ಅನ್ಯಾಯ ಮಾಡಿದವರು ಯಶಸ್ಸನ್ನು ಕಾಣಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಹೇಳಿದರು.

ಬೀದಿ ಬದಿ ಗೋವುಗಳ ರುಂಡ ಬಿಸಾಡಿದ ಕ್ರಮ ಖಂಡಿಸಿ

ಬಿಜೆಪಿ, ಹಿಂದೂಪರ ಸಂಘಟನೆ ಪ್ರತಿಭಟನೆ

ಬಳ್ಳಾರಿ: ಬೀದಿ ಬದಿ ಗೋವುಗಳ ರುಂಡಗಳನ್ನೂ ಬಿಸಾಡಿದ ಕ್ರಮ ಖಂಡಿಸಿ ಇಲ್ಲಿನ ಬಿಜೆಪಿ ಮುಖಂಡರು, ಕಾರ್ಯಕರ್ತರು, ಹಿಂದೂಪರ ಸಂಘಟನೆ ಕಾರ್ಯಕರ್ತರು ನಗರದಲ್ಲಿ ಶನಿವಾರ ಬೃಹತ್ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಕಪ್ಪಗಲ್ ರಸ್ತೆಯ ವಿಶ್ವೇಶ್ವರಯ್ಯ ನಗರದ 9ನೇ ಕ್ರಾಸ್‌ನಲ್ಲಿ ಎರಡು ಗೋವುಗಳ ರುಂಡಗಳನ್ನೂ ದುಷ್ಕರ್ಮಿಗಳು ಬಿಸಾಡಿದ್ದು, ಗಮನಿಸಿದ ಬಿಜೆಪಿ ಕಾರ್ಯಕರ್ತರು, ಮುಖಂಡರ, ಹಿಂದೂಪರ ಸಂಘಟನೆ ಕಾರ್ಯಕರ್ತರು, ಮಾಜಿ ಸಚಿವ ಬಿ.ಶ್ರೀರಾಮುಲು, ಗಂಗಾವತಿ ಶಾಸಕ, ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ನೇತೃತ್ವದಲ್ಲಿ ಸ್ಥಳದಲ್ಲೇ ದಿಢೀರ್ ಬೃಹತ್ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಗೋವುಗಳನ್ನು ಹತ್ಯೆ ಮಾಡಿದ ದುಷ್ಕರ್ಮಿಗಳನ್ನು ಬಂಧಿಸಬೇಕು. ರುಂಡಗಳನ್ನೂ ಬಿಸಾಡಿದ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಇಂತಹ ಘಟನೆಗಳು ಮತ್ತೆ ಮರುಕಳಿಸದಂತೆ ಜಿಲ್ಲಾಡಳಿತ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಹಿಂದೂ ಸಂಪ್ರದಾಯದಂತೆ ಅಂತ್ಯಕ್ರಿಯೆ ನಡೆಸಲೂ ಅವಕಾಶ ಕಲ್ಪಿಸಬೇಕು. ಬಕ್ರಿದ್ ಹಬ್ಬ ಹಿನ್ನೆಲೆಯಲ್ಲಿ ಗೋವುಗಳನ್ನು ಹತ್ಯೆ ಮಾಡಿ, ರುಂಡಗಳನ್ನೂ ಸ್ವಲ್ಪನೂ ಮಾನವೀಯತೆ ಇಲ್ಲದೇ ಬಿಸಾಡಿದ್ದಾರೆ. ಕೂಡಲೇ ದುಷ್ಕರ್ಮಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.



ಸ್ಥಳಕ್ಕೆ ಗಾಂಧಿನಗರ ಪೊಲೀಸ್ ಠಾಣೆ ಅಧಿಕಾರಿಗಳು ತೆರಳಿ ಪರಿಸ್ಥಿತಿ ತಿಳಿಗೊಳಿಸಲು ಹರಸಾಹಸ ಪಟ್ಟರು. ಎಫ್‌ಎಸ್‌ಎಲ್ ತಂಡ ಸ್ಥಳಕ್ಕೆ ಆಗಮಿಸಿ ಪರಿಶೀಲಿಸಿದರು.

ಮಾಜಿ ಸಚಿವರಾದ ಶ್ರೀರಾಮುಲು, ಗಾಲಿ ಜನಾರ್ಧನ ರೆಡ್ಡಿ ಮಾತನಾಡಿ, ಈ ಘಟನೆ ಅತ್ಯಂತ ಖಂಡನೀಯ. ಗೋವುಗಳ ರುಂಡಗಳನ್ನೂ ಶವ ಪರೀಕ್ಷೆ ನಡೆಸಿ, ನಮಗೆ ಹಸ್ತಾಂತರಿಸಿ, ನಂತರ ನಾವು ಮೆರವಣಿಗೆ ನಡೆಸಿ, ಹಿಂದೂ ವಿಧಾನಗಳಂತೆ ನಾವು ಅಂತ್ಯಕ್ರಿಯೆ ನಡೆಸುತ್ತೇವೆ. ಗೋವುಗಳನ್ನು ಕಡಿದು, ರುಂಡಗಳನ್ನೂ ಬಿಸಾಡಿದ ದುಷ್ಕರ್ಮಿಗಳು ಯಾರೇ ಇರಲಿ ಅವರನ್ನು ಕೂಡಲೇ ಬಂಧಿಸಿ, ಕಠಿಣ ಶಿಕ್ಷೆಗೆ ಒಳಪಡಿಸಬೇಕು. ಅಲ್ಲಿವರೆಗೂ ನಮ್ಮ ಹೋರಾಟ ನಿರಂತರ ನಡೆಯಲಿದೆ ಎಂದು ಎಚ್ಚರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ, ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎಸ್. ಗುರುಲಿಂಗನ ಗೌಡ, ಮಹಿಳಾ ಘಟಕ ಜಿಲ್ಲಾಧ್ಯಕ್ಷೆ ಹಂಪಿ ರಮಣ, ನಗರ ಅಧ್ಯಕ್ಷ ಜಿ.ವೆಂಕಟರಮಣ, ಪಾಲಿಕೆ ಸದಸ್ಯರಾದ ಕೆ.ಹನುಮಂತಪ್ಪ, ಶ್ರೀನಿವಾಸ್ ಮೊತ್ಕರ್, ಮಂಜುನಾಥ್ ಗೋನಾಳ ಸೇರಿದಂತೆ ನೂರಾರು ಕಾರ್ಯಕರ್ತರು ಇದ್ದರು.

ರಾಜ್ಯ ದಿವಾಳಿ ಬಳಿಕ ರಾಜನಿಗೆ ಪಟ್ಟ: ಬೆಲ್ಲದ

ಧಾರವಾಡ: ಸಿದ್ದರಾಮಯ್ಯ ಅವರು ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಮಾಡಿದ ನಂತರವೇ ಡಿ.ಕೆ.ಶಿವಕುಮಾರ ಅವರಿಗೆ ಪಟ್ಟಾಭಿಷೇಕ ನಡೆಯುತ್ತಿದೆ. ಆದಾಗ್ಯೂ ನೂತನ ಮುಖ್ಯಮಂತ್ರಿಗೆ ವಿಧಾನಸಭೆ ವಿಪಕ್ಷದ ಉಪನಾಯಕ ಅರವಿಂದ ಬೆಲ್ಲದ ಅಭಿನಂದಿಸಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬರುವ ಮುನ್ನ ನೀಡಿದ 136 ಭರವಸೆ ಈಡೇರಿಸುವಲ್ಲಿ ಸಂಪೂರ್ಣ ವಿಫಲ ಆಗಿದೆ. ಸಿದ್ದರಾಮಯ್ಯ ಅವರು, ರಾಜ್ಯವನ್ನು ಸಾಲದ ಕೂಪಕ್ಕೆ ತಳಿದ್ದಾರೆ ಎಂದು ದೂರಿದರು.

ಅಲ್ಲದೇ, ಕಳೆದ ಮೂರು ವರ್ಷದಲ್ಲಿ ಕೈ ಸರ್ಕಾರ ಜನರಿಗೆ ನ್ಯಾಯ ಒದಗಿಸಿಲ್ಲ. ಜನರ ನಿರೀಕ್ಷೆಗಳನ್ನೂ ಹುಸಿಗೊಳಿಸಿದೆ. ಇದೀಗ ನೂತನ ಮುಖ್ಯಮಂತ್ರಿಗೆ ಈ ಎಲ್ಲ ಸವಾಲುಗಳನ್ನು ಎದುರಿಸಿ, ಉತ್ತಮ ಕೆಲಸ ಮಾಡಲಿ ಎಂದು ಅಭಿಲಾಷೆ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ವಿಜಯಪುರದಲ್ಲಿ ಆಸ್ತಿ ವಿಷಯಕ್ಕಾಗಿ ಒಂದೇ ಕುಟುಂಬದ 6 ಜನರನ್ನು ಹತ್ಯೆ ಮಾಡಲಾಗಿದೆ. ಅಲ್ಲದೇ ಧಾರವಾಡದಲ್ಲೂ ಆಗಾಗ್ಗೆ ಗುಂಡಿನ ಸದ್ದು ಕೇಳಿ ಬರುತ್ತಿದೆ ಎಂದು ಆರೋಪವೂ ಮಾಡಿದರು.

ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಪೊಲೀಸರೇ, ಭ್ರಷ್ಟಾಚಾರದಲ್ಲಿ ಮುಳುಗಿ ಸಮಾಜಘಾತಕ ಶಕ್ತಿಗಳೊಂದಿಗೆ ಕೈಜೋಡಿಸಿದ್ದಾರೆ. ಇದರಿಂದಲೇ ಅಪರಾಧ ಪ್ರಕರಣ ಹೆಚ್ಚುತ್ತಿವೆ. ಈ ಬಗ್ಗೆ ಸರ್ಕಾರ ಗಂಭೀರ ಪರಿಗಣಿಸಿ, ಕ್ರಮ ಜರುಗಿಸಲು ಆಗ್ರಹಿಸಿದರು.

ಪಾಲಿಕೆ ಕಚೇರಿಗಳ ಮೇಲೆ ಏಕಕಾಲಕ್ಕೆ ಲೋಕಾ ದಾಳಿ

ಬಳ್ಳಾರಿ: ಇಲ್ಲಿನ ಮಹಾನಗರ ಪಾಲಿಕೆಯಲ್ಲಿ ಅಕ್ರಮವಾಗಿ ಫಾರಂ-2 ವಿತರಿಸುವ ಹಾಗೂ ಬಿ-ಖಾತಾ ವಿತರಿಸಿರುವ ಆರೋಪ ಹಿನ್ನೆಲೆ ದೂರುಗಳ ಆರೋಪ ಆಧರಿಸಿ ಪಾಲಿಕೆ ವ್ಯಾಪ್ತಿಯ ಮೂರು ವಲಯ ಕಚೇರಿಗಳ ಮೇಲೆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಶುಕ್ರವಾರ ಏಕಕಾಲಕ್ಕೆ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ಪರಿಶೀಲಿಸಿದರು.

ಲೋಕಾಯುಕ್ತ ನ್ಯಾಯಮೂರ್ತಿ ಅವರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ಮಹಾನಗರ ಪಾಲಿಕೆ ಹಾಗೂ ವ್ಯಾಪ್ತಿಯ ವಲಯ ಕಚೇರಿಗಳ ಶೋಧನೆಗಾಗಿ ಇತ್ತೀಚೆಗೆ ಶೋಧನಾ ವಾರೆಂಟ್ ಹೊರಡಿಸಿದ್ದರು.

ಲೋಕಾಯುಕ್ತ ಜಿಲ್ಲಾ ಪೊಲೀಸ್ ಅಧೀಕ್ಷಕ ಎನ್.ವಾಸುದೇವ ರಾಮ ಅವರ ನೇತೃತ್ವದಲ್ಲಿ ಬಳ್ಳಾರಿ ಹಾಗೂ ಹೊಸಪೇಟೆ ಲೋಕಾಯುಕ್ತ ಅಧಿಕಾರಿಗಳು, ಪೊಲೀಸರು, ಸಿಬ್ಬಂದಿಗಳು, ಪಂಚ ಸಾಕ್ಷಿದಾರರೊಂದಿಗೆ ಒಟ್ಟು 4 ತಂಡಗಳಾಗಿ ಪಾಲಿಕೆ ಕಚೇರಿಗಳ ಮೇಲೆ ಏಕಾಲಕ್ಕೆ ದಾಳಿ ನಡೆಸಿದರು.



ದಾಳಿ ವೇಳೆ ಕೆಲ ಮಹತ್ವದ ದಾಖಲೆಗಳು ಬೆಳಕಿಗೆ ಬಂದಿವೆ ಎಂದು ಹೇಳಲಾಗುತ್ತಿದೆ. ಕೆಲ ಮಹತ್ವದ ದಾಖಲೆಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ದಾಳಿಯಲ್ಲಿ ಲೋಕಾಯುಕ್ತ ಪೊಲೀಸ್ ಡಿವೈಎಸ್ಪಿಗಳಾದ ಸಚಿನ್ ಎಸ್.ಛಲವಾದಿ, ಎಸ್.ಎಸ್.ಬೀಳಗಿ, ಪಿಎಸ್‌ಐಗಳಾದ ಅಮರೇಶ್ ಹುಬ್ಬಳ್ಳಿ, ಗುರಣ್ಣ ಎಸ್.ಹೆಬ್ಬಾಳ, ಸುರೇಶ್ ಭಾವಿಮನಿ, ರಾಜೇಶ್ ಲಮಾಣಿ ಸೇರಿದಂತೆ ಸಿಬ್ಬಂದಿಗಳು ಇದ್ದರು.

12 ಜನರಿಂದ ಕೃತ್ಯ

ಚೈತನ್ಯಕುಮಾರದುಂಡಪ್ಪ ನಿರಾಳೆ ಅವರು ಚಡಚಣ ಪೊಲಿಸ್ ಠಾಣೆಯಲ್ಲಿ ಕೊಟ್ಟ ಫಿರ್ಯಾದಿ ಪ್ರಕಾರ ಚಡಚಣ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, 12 ಜನರು ಕೂಡಿ ಕೃತ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದು, ಕಲ್ಲನಗೌಡ ಈ ಪಾಟೀಲ, ಅಪ್ಪುಗೌಡ ಲ ಪಾಟೀಲ, ಈಶ್ವರಪ್ಪ ಲ ಪಾಟೀಲ, ಪ್ರಕಾಶ ಬ ಪಾಟೀಲ(ಮಾಸ್ತರು), ಪ್ರಶಾಂತ ಉರ್ಫ ಪರುಗೌಡ ಬ ಪಾಟೀಲ, ಸಿದ್ದರಾಮ ಕ ಪಾಟೀಲ, ಲಾಯಪ್ಪ ನಿ ಬಿರಾದಾರ, ಚಿದಾನಂದ ನಾ ಕೋಳಿ ಉರ್ಫ ಟಕ್ಕಳಕಿ, ಮಾಸಿದ್ದ ಶ್ರೀ ಬಿರಾದಾರ, ಶ್ರೀಮಂತ ಶ ಬಿರಾದಾರ, ಶಂಕ್ರೆಪ್ಪ ಮಾ ಅರಕೇರಿ, ಅಪ್ಪಾಸಾಬ ಶ ಬೋವಿ ಈ 12 ಜನರು ಗೋವಿಂದಪುರದ ನಿವಾಸಿಗಳಾಗಿದ್ದಾರೆ.

ಗೋವಿಂದಪುರ ಸಾಮೂಹಿಕ ಹತ್ಯೆ ಪ್ರಕರಣ | ಕುಟುಂಬಸ್ಥರ ಆಕ್ರಂದನ

12 ಜನ ಆರೋಪಿಗಳ ಮೇಲೆ ಎಫ್‌ಐಆರ್ ದಾಖಲು

ಚಡಚಣ: ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ಶುಕ್ರವಾರ ನಡೆದ ಭೀಕರ ಸಾಮೂಹಿಕ ಹತ್ಯೆ ಪ್ರಕರಣ ಇಡೀ ಭೀಮಾತೀರ ಪ್ರದೇಶವನ್ನು ಬೆಚ್ಚಿ ಬೀಳಿಸಿದ್ದು, ಹತ್ಯೆಗೀಡಾದ ನಿರಾಳೆ ಕುಟುಂಬದ ಐವರು ಸದಸ್ಯರ ಅಂತ್ಯಸಂಸ್ಕಾರ ಶನಿವಾರ ಪೊಲೀಸ್ ಬಿಗಿ ಭದ್ರತೆಯಲ್ಲಿ ನೆರವೇರಿತು.

ಹತ್ಯೆಗೀಡಾದ ಚಡಚಣ ಪಟ್ಟಣದ ನಿವಾಸಿಗಳಾದ ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಚಂದು ಅಲಿಯಾಸ್ ಚಂದ್ರಶೇಖರ ನಿರಾಳೆ, ಶಿವಪುತ್ರ ನಿರಾಳೆ, ದುಂಡಪ್ಪ ನಿರಾಳೆ, ರಾಹುಲ್ ನಿರಾಳೆ, ಸಮರ್ಥ ನಿರಾಳೆ ಹಾಗೂ ಶಬ್ಬೀರ ಅತ್ತಾರ ಅವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಗೆ ಶುಕ್ರವಾರ ಸಾಗಿಸಲಾಗಿತ್ತು. ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಶನಿವಾರ ಮೃತದೇಹಗಳನ್ನು ಚಡಚಣಕ್ಕೆ ತರಲಾಯಿತು.

ಮಧ್ಯಾಹ್ನ ಸುಮಾರು 2 ಗಂಟೆಗೆ ಪಟ್ಟಣದ ಹಳ್ಳದ ದಂಡೆಯಲ್ಲಿರುವ ಸ್ಮಶಾನ ಭೂಮಿಯಲ್ಲಿ ನಿರಾಳೆ ಕುಟುಂಬದ 5 ಜನರನ್ನು ಹಿಂದೂ ಸಂಪ್ರದಾಯದಂತೆ ಸಾಮೂಹಿಕವಾಗಿ ಅಗ್ನಿ ಸ್ಪರ್ಷದೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು.



ಮೃತದೇಹಗಳು ಅಂಬ್ಯುಲೆನ್ಸ್ ಮೂಲಕ ಸ್ಮಶಾನಕ್ಕೆ ಆಗಮಿಸುತ್ತಿದ್ದಂತೆ ಕುಟುಂಬಸ್ಥರು ಹಾಗೂ ಬಂಧುಗಳು, ಆಪ್ತಮಿತ್ರರ ಆಕ್ರಂದನ ಮುಗಿಲು ಮುಟ್ಟಿತು. ದುಃಖದ ವಾತಾವರಣದಲ್ಲಿ ಸಾವಿರಾರು ಜನರು ಅಂತಿಮ ದರ್ಶನ ಪಡೆದು ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಇನ್ನೊಂದೆಡೆ, ಈ ಪ್ರಕರಣದಲ್ಲಿ ಮೃತಪಟ್ಟ ಚಡಚಣ ಪಟ್ಟಣದ ನಿವಾಸಿ ಶಬ್ಬೀರ ಅತ್ತಾರ ಅವರ ಅಂತ್ಯಕ್ರಿಯೆಯನ್ನು ಮುಸ್ಲಿಂ ಸಮಾಜದ ಧಾರ್ಮಿಕ ವಿಧಿ-ವಿಧಾನಗಳಂತೆ ಪಟ್ಟಣದ ಈದ್ಗಾ ಮೈದಾನದ ಪಕ್ಕದಲ್ಲಿರುವ ಖಬ್ರಸ್ತಾನದಲ್ಲಿ ನೆರವೇರಿಸಲಾಯಿತು.

ಮೃತರ ಅಂತಿಮ ದರ್ಶನ ಪಡೆಯಲು ಅಪಾರ ಸಂಖ್ಯೆಯ ಬಂಧು-ಬಳಗ, ಸ್ನೇಹಿತರು ಹಾಗೂ ಸಾರ್ವಜನಿಕರು ಆಗಮಿಸಿದ್ದರು. ಅಂತಿಮ ಯಾತ್ರೆಯಲ್ಲಿ ವಿವಿಧ ಸಮುದಾಯಗಳ ಮುಖಂಡರು, ಗಣ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿ ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಶಬ್ಬೀರ ಅತ್ತಾರ ಅವರ ಅಕಾಲಿಕ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ ಜನರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಪ್ರಕರಣದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಚಡಚಣ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆ ಬಿಗಿಬಂದೋಬಸ್ತ್ ಕೈಗೊಂಡಿತ್ತು. ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಹೆಚ್ಚುವರಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದ್ದು, ಪರಿಸ್ಥಿತಿಯ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ. ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಪ್ರಕರಣದ ತನಿಖೆಗೆ ಪೊಲೀಸರು ಮುಂದಾಗಿದ್ದಾರೆ.

ಘಟನೆಗೆ ಪ್ರೇಮ ಪ್ರಕರಣದ ನಂಟು!

ವಿಜಯಪುರ: ಈ 6 ಜನರ ಭೀಕರ ಹತ್ಯೆಯ ಘಟನೆಯ ರಕ್ತಪಾತದ ಹೆಜ್ಜೆಗಳು 2015ರ ಒಂದು ಪ್ರೇಮ ಪ್ರಕರಣ, ಅಪಹರಣದ ಘಟನೆಗೆ ಹೋಗಿ ನಿಲ್ಲುತ್ತವೆ. ಕಳೆದ 2015ರಲ್ಲಿ ಚಡಚಣ ಪೊಲೀಸ್ ಠಾಣೆಯಲ್ಲಿ ಕಲ್ಲನಗೌಡ ಪಾಟೀಲ ಅವರ ಪುತ್ರ ಶಿವಾನಂದ ಪಾಟೀಲ ಹಾಗೂ ಗಾಣಿಗ ಸಮಾಜದ ಹುಡುಗಿಯ ಅಪಹರಣ ಪ್ರಕರಣ ದಾಖಲಾಗಿತ್ತು.

ತಳವಾರ ಸಮಾಜದ ಯುವಕ ಶಿವಾನಂದ ಎಂಬವನು ಗಾಣಿಗ ಸಮಾಜದ ಯುವತಿಯನ್ನು ಕಿಡ್ನ್ಯಾಪ್ ಮಾಡಿದ್ದಕ್ಕೆ ಪ್ರತೀಕಾರವಾಗಿ ಶಿವಾನಂದ ಪಾಟೀಲನ ಕೊಲೆಯಾಗಿತ್ತು.

ಆ ಕೊಲೆ ಪ್ರಕರಣದಲ್ಲಿ ಶಶಿಕಾಂತ ತೇಲಿ, ಪ್ರಶಾಂತ ತೇಲಿ ಹಾಗೂ ಕಾಮನಿಂಗ ತೇಲಿ ಆರೋಪಿಗಳಾಗಿದ್ದರು. ಈ ಪ್ರಕರಣ ವಿಚಾರಣೆ ನಡೆದು ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆಯನ್ನೂ ಪ್ರಕಟಿಸಿತ್ತು. ಆರೋಪಿಗಳು ಕಳೆದ 2024ರಲ್ಲಿ ಬೇಲ್ ಪಡೆದು ಹೊರಗೆ ಬಂದಿದ್ದಾರೆ. ಕೋರ್ಟ್ ಶಿಕ್ಷೆ ಪ್ರಕಟಿಸಿದ ಬೆನ್ನಲ್ಲೇ ತೇಲಿ ಕುಟುಂಬದವರು ಗೋವಿಂದಪುರ ಗ್ರಾಮದಲ್ಲಿದ್ದ ತಮ್ಮ ಜಮೀನನ್ನು ಬಿಟ್ಟು ಊರು ಖಾಲಿ ಮಾಡಿದ್ದರು.

ತೇಲಿ ಕುಟುಂಬಕ್ಕೆ ಸೇರಿದ 25 ಎಕರೆ ಜಮೀನನ್ನು ಕಲ್ಲನಗೌಡ ಪಾಟೀಲ ಕಡೆಯವರ ತೀವ್ರ ವಿರೋಧದ ಮಧ್ಯೆಯೂ ಚಡಚಣದ ನಿರಾಳೆ ಕುಟುಂಬದವರು ಖರೀದಿ ಮಾಡಿದ್ದರು. ಇದು ಕಲ್ಲನಗೌಡ ಪಾಟೀಲ ಕಡೆಯವರ ಕೆಂಗಣ್ಣಿಗೆ ಕಾರಣವಾಗಿತ್ತು. ಇದೇ ಜಮೀನಿನ ವಿಷಯವಾಗಿ ಎರಡು ಬಣಗಳ ನಡುವೆ ಗಲಾಟೆ ಆರಂಭವಾಗಿದೆ.

ಈ ವೇಳೆ ಕಲ್ಲನಗೌಡ ಪಾಟೀಲ ಕಡೆಯವರು ನಿರಾಳೆ ಕುಟುಂಬದವರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ, ಜಮೀನಿನಲ್ಲೇ ಆರು ಜನರನ್ನು ಭೀಕರ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರು ಸುದ್ದಿ

ಬ್ಯಾಗ್ ಮರಳಿಸಿದ ಪ್ರಯಾಣಿಕ

ಮುಂಡಗೋಡ: ಪಟ್ಟಣದ ಪರಶುರಾಮು ಭೀಮಪ್ಪ ಕುಂಬಾರ ಎಂಬುವವರು ಬಸ್‌ನಲ್ಲ ಬಿಟ್ಟು ಹೊಗಿದ್ದ ಬ್ಯಾಗನು ವಾರಸುದಾರರಿಗೆ ನೀಡಿ ಪ್ರಾಮಾಣಿಕ ಮೆರೆದಿದ್ದಾರೆ. ಹುಬ್ಬಳ್ಳಿ ಸುಳಾ ಗ್ರಾಮದ ಮಹಾಲಕ್ಷ್ಮಿ ನಾಗಣ್ಣ ನರಗುಂದ ಎಂಬುವರು ಶನಿವಾರ ಮುಂಡಗೋಡದಿಂದ ಕಲಘಟಗಿಗೆ ಹೋಗುವಾಗ ಕಲಘಟಗಿ ಬಸ್ ನಿಲ್ದಾಣದಲ್ಲಿ ಬ್ಯಾಗನ್ನು ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬಿಟ್ಟು ಇಳಿದಿದ್ದು, ಅದೇ ಬಸ್ ಮರಳಿ ಮುಂಡಗೋಡಗೆ ಬರುವಾಗ ಪ್ರಯಾಣಿಕ ಪಟ್ಟಣದ ದೇಶಪಾಂಡೆ ನಗರ ನಿವಾಸಿ ಪರಶುರಾಮು ಕುಂಬಾರ ಆ ಬ್ಯಾಗನ್ನು ಇಲ್ಲಿನ ಪೊಲೀಸ ಠಾಣೆಗೆ ಬಂದು ನೀಡಿ ಪ್ರಾಮಾಣಿಕ ಮೆರೆದಿದ್ದಾರೆ. ಬ್ಯಾಗನಲ್ಲಿ 2 ಜೊತೆ ಬಂಗಾರದ ಕಿವಿ ಓಲೆ, 2 ಜೊತೆ ಬೆಳ್ಳಿ ಕಾಲು ಚೈನ್ ಇತ್ತು. ಇವುಗಳನ್ನು ಮರಳಿ ವಾರಸುದಾರರಿಗೆ ನೀಡಲಾಗಿದೆ. ಪ್ರಾಮಾಣಿಕ ಮೆರೆದಿದ್ದ ಪರಶುರಾಮರಿಂದ ಪೊಲೀಸರು ಮರಳಿ ವಾರಸುದಾರರಿಗೆ ನೀಡಿದ್ದಾರೆ. ಸಿಪಿಐ ರಮೇಶ ಹನಾಪುರ, ಪಿಎಸ್‌ಐ ಮಂಜುನಾಥ ಗೌಡರ, ಸಿಬ್ಬಂದಿ ರಾಜೇಶ ನಾಯ್ಕ ಇದ್ದರು.

ರವೀಂದ್ರ ನಾಯಕ್‌ಗೆ ಪ್ರಶಸ್ತಿ

ಗೋಕರ್ಣ: ಇಲ್ಲಿನ ಲಯನ್ಸ್ ಕ್ಲಬ್‌ನ ಸದಸ್ಯರಾದ ಎಂಜೆಎಫ್ ರವೀಂದ್ರ ನಾಯಕ್‌ರವರಿಗೆ ಅತ್ಯುತ್ತಮ ಪ್ರಾದೇಶಿಕ ಅಧ್ಯಕ್ಷರ ಪ್ರಶಸ್ತಿ ದೊರೆತಿದೆ.



ಇತ್ತೀಚಿಗೆ ಬೆಂಗಳೂರಿನಲ್ಲಿ ನಡೆದ ಅಂತಾರಾಷ್ಟ್ರೀಯ ಲಯನ್ಸ್ ಸಂಸ್ಥೆಯ ಮಲ್ಟಿಪಲ್ ಡಿಸ್ಟ್ರಿಕ್ಟ್ 317 ನ ಕಾರ್ಯಕ್ರಮದಲ್ಲಿ ಮಲ್ಟಿಪಲ್ ಕನ್ಸಿಲ್ ಚೇರ್ ಪರ್ಸನ್ ಪಿಎಂಜೆಎಫ್ ಕೃಷ್ಣೇಗೌಡ ಪ್ರಶಸ್ತಿ ನೀಡಿ ಗೌರವಿಸಿದರು. ಮಾಜಿ ಜಿಲ್ಲಾ ಗವರ್ನರ್ ಪಿ ಎಂಜೆಎಫ್ ಗಣಪತಿ ನಾಯಕ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಗೋಕರ್ಣ ಲಯನ್ಸ ಕ್ಲಬ್‌ನ ಪ್ರಥಮ ಸದಸ್ಯರಾಗಿದ್ದು ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು ಅಭಿನಂದಿಸಿದ್ದಾರೆ.



ಕವಿ ಕನ್ಯಾನ ವೆಂಕಟರಮಣ ಭಟ್ಟ ವಿರಚಿತ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನಗೊಂಡಿತು.

ಇಂದು ಸರ್ಪ ಸಂಘರ್ಷ ಯಕ್ಷಗಾನ, ಗುರುವಂದನೆ

ಸಿದ್ದಾಪುರ: ಲಕ್ಷ್ಮೀ ನಾರಾಯಣ ಯಕ್ಷಗಾನ ಕಲಾಮಂಡಳಿ ಹೆಮ್ಮನಬೈಲ್, ಯಕ್ಷತರಂಗಿಣಿ ಹಾರ್ಸಿಕಟ್ಟಾ ಹಾಗೂ ಯಕ್ಷಾಭಿಮಾನಿ ಬಳಗ ಹಾರ್ಸಿಕಟ್ಟಾ ಇವರಿಂದ ಕಲಾವಿದರ ಕಾಮದೇನು ದಿ.ಅನಂತ ಶಾನಭಾಗ ಹಾರ್ಸಿಕಟ್ಟಾ ಇವರ ಒಂದನೇ ವರ್ಷದ ಪುಣ್ಯ ಸ್ಮರಣೆಯ ಪ್ರಯುಕ್ತ ಗುರುವಂದನೆ ಹಾಗೂ ಯಕ್ಷಗಾನ ಕಾರ್ಯಕ್ರಮ ಹಾರ್ಸಿಕಟ್ಟಾ ಗಣೇಶ ಮಂಟಪದಲ್ಲಿ ಮೇ 31ರಂದು ಸಂಜೆ 7ಕ್ಕೆ ನಡೆಯಲಿದೆ. ನಾಟ್ಯಾಚಾರ್ಯ ಶಂಕರ ಭಟ್ಟ ಸಿದ್ದಾಪುರ ಕಾರ್ಯಕ್ರಮ ಉದ್ಘಾಟಿಸಲಿದ್ದು, ಟಿಎಸ್‌ಎಸ್ ನಿರ್ದೇಶಕ ರವೀಂದ್ರ ಹೆಗಡೆ ಹಿರೇಕೈ ಅಧ್ಯಕ್ಷತೆವಹಿಸಲಿದ್ದಾರೆ. ಪ್ರಗತಿಪರ ಕೃಷಿಕ, ಕಲಾಸಂಘಟಕ ಪಿ.ವಿ.ಹೆಗಡೆ ಹೊಸಗದ್ದೆ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ, ವರ್ತಕ ಶ್ರೀಕಾಂತ ಶಾನಭಾಗ, ಯಕ್ಷಗಾನ ಕಲಾವಿದ ಕುಮಾರ ನಾಯ್ಕ ಮೆಣಸಿ ಉಪಸ್ಥಿತರಿರಲಿದ್ದಾರೆ. ಹವ್ಯಾಸಿ ಯಕ್ಷಗಾನ ಕಲಾವಿದ ಶ್ರೀಪಾದ ಹೆಗಡೆ ಮಾವಿನಗುಂಡಿ ಅವರಿಗೆ ಗುರುವಂದನೆ ನಡೆಯಲಿದೆ. ನಂತರ ಕುಮಾರ ನಾಯ್ಕ ಮೆಣಸಿ ರಚಿಸಿದ ಸರ್ಪ ಸಂಘರ್ಷ ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62899	68299
ಬಿಳಿಗೋಟು	25899	35500
ಕೆಂಪುಗೋಟು	22099	35500
ಬೆಟ್ಟೆ	41500	49500
ರಾಶಿ	51599	52909
ಚಾಲಿ	44099	47499



ಮುಂಡಗೋಡ: ಪಟ್ಟಣದ ಪರಶುರಾಮು ಭೀಮಪ್ಪ ಕುಂಬಾರ ಎಂಬುವವರು ಬಸ್‌ನಲ್ಲ ಬಿಟ್ಟು ಹೊಗಿದ್ದ ಬ್ಯಾಗನು ಪ್ರಯಾಣಿಕ ಪಟ್ಟಣದ ದೇಶಪಾಂಡೆ ನಗರ ನಿವಾಸಿ ಪರಶುರಾಮು ಕುಂಬಾರ ವಾರಸುದಾರರಿಗೆ ನೀಡಿ ಪ್ರಾಮಾಣಿಕ ಮೇರೆದಿದ್ದಾರೆ. ಈ ವೇಳೆ ಸಿಪಿಐ ರಮೇಶ ಹನಾಪುರ, ಪಿಎಸ್‌ಐ ಮಂಜುನಾಥ ಗೌಡರ, ಸಿಬ್ಬಂದಿ ರಾಜೇಶ ನಾಯ್ಕ ಇದ್ದರು.

ಕಲೆ ಅಮೂಲ್ಯವಾದ ಆಸ್ತಿ: ನಾಗರಾಜ ಭಟ್ಟ

ಸಿದ್ದಾಪುರ: ಚಂಚಲವಾದ ಮನಸ್ಸಿಗೆ ಒಂದು ನಿಲುಗಡೆ ಸಿಗಬೇಕು ಅಂತಾದರೆ ಕಲೆ ಹಾಗೂ ಸಾಹಿತ್ಯದ ಮೊರೆ ಹೋಗಬೇಕು. ಮನಸ್ಸಿಗೆ ಆನಂದವನ್ನು ನೀಡುವ ಕಲೆ ಬಹು ಅಮೂಲ್ಯವಾದ ಆಸ್ತಿ. ಅದನ್ನು ಉಳಿಸಿ ಬೆಳೆಸಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮಮೇಲಿದೆ ಎಂದು ಭಾರತ ಸೇವಾದಳದ ತಾಲೂಕಾ ಅಧ್ಯಕ್ಷ ಕೆಕ್ಕಾರ ನಾಗರಾಜ ಭಟ್ಟ ಹೇಳಿದರು. ತಾಲೂಕಿನ ಇಟಗಿಯ ಕಲಾಭಾಸ್ಕರ ಸಂಘಟನೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಧನ ಸಹಾಯದೊಂದಿಗೆ ಬಿದ್ರಕಾನ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ ಹಮ್ಮಿಕೊಂಡ 'ನವರಸ ಯಕ್ಷೋತ್ಸವ'ದ ಎರಡನೇ ದಿನ ಶುಕ್ರವಾರ ನಡೆದ ಸಭಾಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು. ಬಿದ್ರಕಾನ ಸೊಸೈಟಿಯ ಉಪಾಧ್ಯಕ್ಷ ಪ್ರಕಾಶ ಹೆಗಡೆ ಮುತ್ತಿಗೆ ಅಧ್ಯಕ್ಷತೆ ವಹಿಸಿದ್ದರು.

ಸಾಮಾಜಿಕ ಕಾರ್ಯಕರ್ತ ಸುಧೀರ ಗೌಡರ್ ಹೆಗ್ಗೋಡಮನೆ, ಬಿದ್ರಕಾನ ಸೊಸೈಟಿಯ ಮಾಜಿ ಅಧ್ಯಕ್ಷ ಜಿ.ಟಿ.ಹೆಗಡೆ ಹಳದೋಟ ಅನಿಸಿಕೆ ವ್ಯಕ್ತಪಡಿಸಿದರು.

ಕಲಾಭಾಸ್ಕರದ ಅಧ್ಯಕ್ಷ ಇಟಗಿ ಮಹಾಬಲೇಶ್ವರ ಭಟ್ಟ ಸ್ವಾಗತಿಸಿದರು. ಕಾರ್ಯದರ್ಶಿ ವಿನಾಯಕ ಹೆಗಡೆ ಕವಲಕೊಪ್ಪ ನಿರ್ವಹಿಸಿ, ವಂದಿಸಿದರು.

ನಂತರ ಕವಿ ಕನ್ಯಾನ ವೆಂಕಟರಮಣ ಭಟ್ಟ ವಿರಚಿತ 'ಭಸ್ಮಾಸುರ ಮೋಹಿನಿ' ಯಕ್ಷಗಾನ ಪ್ರದರ್ಶನಗೊಂಡಿತು.



ಸಿದ್ದಾಪುರ: ತಾಲೂಕಿನ ಇಟಗಿಯ ಕಲಾಭಾಸ್ಕರ ಸಂಘಟನೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಧನ ಸಹಾಯದೊಂದಿಗೆ ಬಿದ್ರಕಾನ ಸೇವಾ ಸಹಕಾರಿ ಸಂಘದ ಸಭಾಭವನದಲ್ಲಿ ಹಮ್ಮಿಕೊಂಡ 'ನವರಸ ಯಕ್ಷೋತ್ಸವ'ದ ಎರಡನೇ ದಿನ ಶುಕ್ರವಾರ ನಡೆದ ಸಭಾಕಾರ್ಯಕ್ರಮದಲ್ಲಿ ಕೆಕ್ಕಾರ ನಾಗರಾಜ ಭಟ್ಟ ಮಾತನಾಡಿದರು.

ಜೂನ್ 1ರಿಂದ ಯಾಂತ್ರೀಕೃತ ಮೀನುಗಾರಿಕೆ ನಿಷೇಧ

ಸಾಂಪ್ರದಾಯಿಕ ಮೀನುಗಾರಿಕೆ ಚುರುಕು

ನಾಗರಾಜ ಶೆಟ್ಟಿ

ಅಂಕೋಲಾ: ಕರ್ನಾಟಕ ಕಡಲ ಮೀನುಗಾರಿಕೆ ಕಾಯ್ದೆಯಂತೆ ಜಿಲ್ಲೆಯ ಕರಾವಳಿಯಲ್ಲಿ ಜೂನ್ 1ರಿಂದ ಜುಲೈ 31 ರವರೆಗೆ 61 ದಿನಗಳ ಕಾಲ ಯಾಂತ್ರಿಕೃತ ಆಳ ಸಮುದ್ರ ಮೀನುಗಾರಿಕೆಗೆ ನಿಷೇದ ಇರಲಿದ್ದು ನಿಷೇದಿತ ಅವಧಿಗಿಂತ ಸುಮಾರು ಒಂದು ವಾರದ ಹಿಂದಿನಿಂದಲೇ ಯಾಂತ್ರಿಕೃತ ಬೋಟುಗಳು ಮೀನುಗಾರಿಕೆ ಬಂದರುಗಳಲ್ಲಿ ಲಂಗರು ಹಾಕುತ್ತಿರುವುದು ಕಂಡು ಬಂದಿದೆ.

ಮೀನುಗಾರಿಕೆ ನಿಷೇದಿತ ಅವಧಿಯಲ್ಲಿ 10 ಅಶ್ವಶಕ್ತಿಗಿಂತ ಹೆಚ್ಚಿನ ಸಾಮರ್ಥ್ಯದ ಯಾಂತ್ರಿಕೃತ ದೋಣಿಗಳು ಮೀನುಗಾರಿಕೆಗೆ ಇಳಿಯುವುದು ನಿಯಮ ಬಾಹಿರ ಎಂದು ಪರಿಗಣಿಸಲಾಗುತ್ತಿದ್ದು, ಸಮುದ್ರ ಮೀನುಗಾರಿಕೆಗೆ ಎರಡು ತಿಂಗಳುಗಳ ಕಾಲ ವಿರಾಮ ದೊರಕಿದ್ದರಿಂದ ಮೀನುಗಾರರು ಸಾಂಪ್ರದಾಯಿಕ ನಾಡ ದೋಣಿ ಮೀನುಗಾರಿಕೆಯತ್ತ ಮುಖ ಮಾಡಬೇಕಿದೆ.

ಮೀನುಗಳ ಸಂತಾನಾಭಿವೃದ್ಧಿಯ ಅವಧಿಯಲ್ಲಿ ಪ್ರತಿವರ್ಷ ಯಾಂತ್ರಿಕೃತ ಮೀನುಗಾರಿಕೆಗೆ ಎರಡು ತಿಂಗಳುಗಳ ನಿಷೇಧಹೇರಲಾಗುತ್ತಿದ್ದು ಈ ಸಂದರ್ಭದಲ್ಲಿ ಯಾಂತ್ರಿಕೃತ ಮೀನುಗಾರಿಕೆ ನಡೆಸುವುದು ಕಾನೂನು ಬಾಹಿರ ಎಂದೇ ಪರಿಗಣಿಸಲಾಗುತ್ತದೆ.

ನಿಯಮಗಳ ಉಲ್ಲಂಘನೆ ಕಾನೂನಿನ ಪ್ರಕಾರ ದಂಡಾರ್ಹವಾಗಿದ್ದು ಆದೇಶದ ಉಲ್ಲಂಘನೆ ನಡೆದರೆ ಅಂತ ಬೋಟುಗಳಿಗೆ ಮೀನುಗಾರಿಕೆ ಇಲಾಖೆ ವತಿಯಿಂದ ಸಿಗುವ ಸೌಲಭ್ಯಗಳನ್ನು ನಿಲ್ಲಿಸಲಾಗುತ್ತದೆ ಅಲ್ಲದೇ ಬೋಟು ಮಾಲಿಕರಿಗೆ ದಂಡ ಸಹ ವಿಧಿಸಲಾಗುತ್ತದೆ.



ಮೀನುಗಾರಿಕೆ ತಾತ್ಕಾಲಿಕ ಬಂದ್

ಮೀನುಗಾರಿಕೆ ನಿಷೇಧಿತ ಅವಧಿಯಲ್ಲಿ ಜಿಲ್ಲೆಯ ಬಹುತೇಕ ಮೀನುಗಾರಿಕೆ ಬಂದರುಗಳು ಸ್ತಬ್ದಗೊಳ್ಳಲಿದ್ದು, ಮೀನುಗಾರಿಕೆ ಅವಲಂಬಿತ ಉದ್ದಿಮೆಗಳು ತಾತ್ಕಾಲಿಕವಾಗಿ ಬಂದ್ ಆಗಲಿವೆ. ಕಡಲ ತೀರದಲ್ಲಿ ಅನುಕೂಲಕರ ವಾತಾವರಣ ಇದ್ದರೆ ಮಾತ್ರ ಸಾಂಪ್ರದಾಯಿಕ ಬಲೆ, ನಾಡ ದೋಣಿ ಮೀನುಗಾರಿಕೆ ನಡೆಯಲಿದ್ದು ಮತ್ಸ್ಯ ಪ್ರಿಯರು ಕೆಲವು ದಿನಗಳ ಕಾಲ ಒಣ ಮೀನಿಗೆ ಒಗ್ಗಿಕೊಳ್ಳುವುದು ಅನಿವಾರ್ಯವಾಗಲಿದೆ.

ಈ ಬಾರಿ ಹವಾಮಾನ ವೈಪರಿತ್ಯ ದ ಕಾರಣ ಅವದಿಗೆ ಮುನ್ನವೇ ಮೀನುಗಾರರು ತಮ್ಮ ಬೋಟುಗಳನ್ನು ಕಡಲ ತೀರಗಳಲ್ಲಿ ಲಂಗರು ಹಾಕಿದ್ದು ಬೋಟುಗಳ ನಿಲುಗಡೆಗೆ ನಿರ್ಮಾಣ ಮಾಡಲಾಗಿರುವ ಶೆಡ್ಡುಗಳಿಗೆ ಬೋಟು ಮತ್ತು ಬಲೆಗಳನ್ನು ತಂದು ಇಡುವ ಕಾರ್ಯ ಬರದಿಂದ ಸಾಗಿದೆ.ಮೀನುಗಾರಿಕೆ ನಿಷೇದದ ಸಂದರ್ಭದಲ್ಲಿ ಮೀನುಗಾರರು ಬೋಟುಗಳು,ಇಂಜಿನ್ ರಿಪೇರಿ, ಪರವಾನಗಿ ನವೀಕರಣ, ಬಲೆಗಳ ರಿಪೇರಿ ಮೊದಲಾದ ಕಾರ್ಯಗಳನ್ನು ಮುಗಿಸಲಿದ್ದಾರೆ. ಮೀನುಗಾರಿಕೆ ನಿಷೇದಿತ ಅವಧಿ ಆರಂಭದೊಂದಿಗೆ ಹಳೆಯ ಮೀನುಗಾರಿಕೆ ಋತು ಸಹ ಮುಕ್ತಾಯವಾಗಲಿದ್ದು ಆಗಸ್ಟ 1 ರಿಂದ ಹೊಸ ಋತುವಿನ ಮೀನುಗಾರಿಕೆ ಆರಂಭವಾಗಲಿದೆ.ಜಿಲ್ಲೆಯ ಸಹಸ್ರಾರು ಜನ ಮೀನುಗಾರ ಯುವಕರು ಉಡುಪಿ, ಮಂಗಳೂರು ಭಾಗಗಳ ಮೀನುಗಾರಿಕೆ ಬೋಟುಗಳಲ್ಲಿ ಕೆಲಸ ಮಾಡುತ್ತಿದ್ದು ಮೀನುಗಾರಿಕೆ ನಿಷೇದಿತ ಅವಧಿಯಲ್ಲಿ ತಮ್ಮ ಊರಿಗೆ ಮರಳಿ ಬರಲಿದ್ದು, ಸುಮಾರು ಎರಡು ತಿಂಗಳು ಮನೆ ಮಂದಿಯೊಂದಿಗೆ ಕಾಲ ಕಳೆಯಲಿದ್ದಾರೆ.

ಮೀನುಗಾರಿಕೆ ನಿಷೇದದ ಸಂದರ್ಭದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆಗೆ ಅವಕಾಶ ಇದ್ದರೂ ನಾಡ ದೋಣಿಗಳಿಗೆ ಹೆಚ್ಚಿನ ಮೀನು ದೊರಕವುದು ಕಷ್ಟ, ಮಳೆಗಾಲ ಆರಂಭವಾದ ನಂತರ ಕಡಲು ಪ್ರಕ್ಷುಬ್ದಗೊಳ್ಳಲಿದ್ದು ಕಡಲ ಅಬ್ಬರದಲ್ಲಿ ಸಾಂಪ್ರದಾಯಿಕ ದೋಣಿಗಳು ನೀರಿಗಿಳಿಯಲು ಸಾಧ್ಯವಿಲ್ಲ ಇದರಿಂದಾಗಿ ಎರಡು ತಿಂಗಳು ಮಾರುಕಟ್ಟೆಯಲ್ಲಿ ತಾಜಾ ಮೀನಿಗೆ ತತ್ವಾರ ಎದುರಾಗಲಿದ್ದು ಕೋಲ್ಡ ಸ್ಟೋರೇಜ್, ಬಾಕ್ಸ್ ಮೀನುಗಳು ಮಾರುಕಟ್ಟೆಗೆ ಲಗ್ಗೆ ಇಡಲಿವೆ.

ಪಕ್ಷದ ಬೆಳವಣಿಗೆಗೆ ಒಗ್ಗಟ್ಟು ಅವಶ್ಯ: ರೂಪಾಲಿ ನಾಯ್ಕ

ಕಾರವಾರ: ಎಸ್ ಐ ಆರ್ ಕುರಿತು ಕಾರ್ಯಕರ್ತರು ಜಾಗರೂಕರಾಗಿರಬೇಕು. ಬಿಎಲ್ ಎ 2 ಗಳು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಜನಮಾನ್ಯರಿಗೆ ನೀಡಿದ ಸೌಲಭ್ಯಗಳನ್ನು ಮನೆ ಮನೆಗೆ ತಲುಪಿಸಬೇಕು. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷೆ, ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿ ರೂಪಾಲಿ ಎಸ್.ನಾಯ್ಕ ತಿಳಿಸಿದರು.

ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ನಗರ ಹಾಗೂ ಗ್ರಾಮೀಣ ಮಂಡಲದಿಂದ ನಡೆದ ಬಿಎಲ್‌ಎ 2 ಮತ್ತು ಬೂತ್ ಅಧ್ಯಕ್ಷರ ವಿಶೇಷ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಎಸ್‌ಐಆರ್ ಬಗ್ಗೆ ವಿವರವಾಗಿ ವಿಶ್ಲೇಷಣೆ ಮಾಡಿದ ಅವರು, ಬಿಎಲ್ ಎ 2 ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದರು.

ಪಕ್ಷ ಬೆಳೆದಂತೆ ಪ್ರತಿಯೊಬ್ಬ ಕಾರ್ಯಕರ್ತರೂ ಬೆಳೆಯುತ್ತಾರೆ. ಇದು ನಮ್ಮೆಲ್ಲರ ಪಕ್ಷ. ಪಕ್ಷ ಇನ್ನಷ್ಟು ಬೆಳವಣಿಗೆ ಸಾಧಿಸಲು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಪಕ್ಷದ ನಗರ ಮಂಡಲ ಅಧ್ಯಕ್ಷ ನಾಗೇಶ ಕುರ್ಡೇಕರ ಪ್ರಾಸ್ತಾವಿಕವಾಗಿ ಮಾತನಾಡಿ, ಪಕ್ಷ ಸಂಘಟನೆಯಲ್ಲಿ ಬೂತ್ ಮಟ್ಟದ ಸಂಘಟನೆ ಪ್ರಮುಖ ಪಾತ್ರ ವಹಿಸಲಿದೆ ಎಂದು ತಿಳಿಸಿದರು.

ಗ್ರಾಮೀಣ ಮಂಡಲದ ಅಧ್ಯಕ್ಷ ಸುಭಾಷ್ ಗುನಗಿ ಮಾತನಾಡಿ, ಪ್ರತಿಯೊಬ್ಬ ಕಾರ್ಯಕರ್ತರು ತಮಗೆ ನೀಡಿದ ಜವಾಬ್ದಾರಿಯನ್ನು ಅರಿತುಕೊಂಡು. ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದರು.

ಜಿಲ್ಲಾ ಉಪಾಧ್ಯಕ್ಷರು ಹಾಗೂ ಗ್ರಾಮೀಣ ಪ್ರಭಾರಿ ಆದ ಗಜಾನನ ಗುನಗ ಮಾತನಾಡಿದರು.

ರಾಜ್ಯ ಪ್ರಕೋಷ್ಟದ ಸುನಿಲ್ ಸೋನಿ. ಜಿಲ್ಲಾ ಮಾಧ್ಯಮ ಸಹ ಸಂಚಾಲಕ ಕಿಶನ್ ಕಾಂಬಳೆ, ಗ್ರಾಮೀಣ ಪ್ರಧಾನ ಕಾರ್ಯದರ್ಶಿಗಳಾದ ಉದಯ ನಾಯ್ಕ್, ಸೂರಜ್ ದೇಸಾಯಿ, ನಗರ ಪ್ರಧಾನ ಕಾರ್ಯದರ್ಶಿ ಅಶೋಕ ಗೌಡ ಉಪಸ್ಥಿತರಿದ್ದರು.

ಬಿಎಲ್‌ಎ 2 ಮಹಾಶಕ್ತಿ ಕೇಂದ್ರ, ಶಕ್ತಿ ಕೇಂದ್ರ, ಮೋರ್ಚಾ, ಬೂತ್ ಅಧ್ಯಕ್ಷರು ನಗರ ಸಭೆ ಸದಸ್ಯರು, ವಿವಿಧ ಜವಾಬ್ದಾರಿ ಇದ್ದ ಎಲ್ಲಾ ಕಾರ್ಯಕರ್ತರು ಉಪಸ್ಥಿತರಿದ್ದರು.ಈ ಸಂದರ್ಭದಲ್ಲಿ ಅಗಲಿದ ಪಕ್ಷದ ಕಾರ್ಯಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.



ಇಂದು ಉಚಿತ ಯಕ್ಷಗಾನ ಕಾರ್ಯಕ್ರಮ

ಕುಮಟಾ: ಯಾಜಿ ಯಕ್ಷ ಮಿತ್ರ ಮಂಡಳಿ ವಾಲಗಳ್ಳಿ-ಕುಮಟಾ ಇದರ ಆಶ್ರಯದಲ್ಲಿ 18ನೇ ವರ್ಷದ 'ಯಾಜಿ ಯಕ್ಷಮಿತ್ರ' ಪ್ರಶಸ್ತಿ ಪ್ರದಾನ, ನಿಧಿ ಸಮರ್ಪಣೆ ಹಾಗೂ ಉಚಿತ ಯಕ್ಷಗಾನ ಕಾರ್ಯಕ್ರಮ ಅನಂತ ನಮನ ಮೇ31ರಂದು ಭಾನುವಾರ ಸಂಜೆ 4 ಗಂಟೆಗೆ ಕುಮಟಾದ ಹವ್ಯಕ ಸಭಾಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಗಣ್ಯರ ಉಪಸ್ಥಿತಿಯಲ್ಲಿ ಉದ್ಘಾಟಿಸಲಾಗುವುದು. ಈ ಸಂದರ್ಭದಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಸ್ತ್ರೀ ವೇಷಧಾರಿಯಾಗಿ ಸುಮಾರು 25 ವರ್ಷಗಳ ಕಾಲ ವಿಶಿಷ್ಟ ಸೇವೆ ಸಲ್ಲಿಸಿರುವ ಖ್ಯಾತ ಕಲಾವಿದ ಶಶಿಕಾಂತ ಶೆಟ್ಟಿ ಕಾರ್ಕಳ ಅವರಿಗೆ ಪ್ರತಿಷ್ಠಿತ 'ಯಾಜಿ ಯಕ್ಷಮಿತ್ರ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಜೊತೆಗೆ ರೂ.25,000 ಮೊತ್ತದ ನಿಧಿಯನ್ನು ಸಮರ್ಪಿಸಲಾಗುತ್ತದೆ.

ಕಾರ್ಕಳದ ದಿವಂಗತ ಧರಣಪ್ಪ ಶೆಟ್ಟಿ ಹಾಗೂ ಲಲಿತಾ ಶೆಟ್ಟಿ ದಂಪತಿಯ ಪುತ್ರರಾಗಿರುವ ಶಶಿಕಾಂತ ಶೆಟ್ಟರು ಯಕ್ಷಗಾನ ರಂಗದಲ್ಲಿ ಸ್ತ್ರೀಪಾತ್ರಗಳ ಮೂಲಕ ಅಪಾರ ಜನಮನ್ನಣೆ ಗಳಿಸಿದ್ದಾರೆ. ಅಂಬೆ, ಚಂದ್ರಮತಿ, ದಾಕ್ಷಾಯಿಣಿ, ಜ್ವಾಲೆ ಮೊದಲಾದ ಪಾತ್ರಗಳಿಗೆ ಜೀವ ತುಂಬಿದ ಅವರು, ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದ ಛಾಪು ಮೂಡಿಸಿದ್ದಾರೆ. ತಾಳಮದ್ದಲೆ ಅರ್ಥಧಾರಿಯಾಗಿ ಹಾಗೂ ಯಕ್ಷಗಾನ ವಸ್ತ್ರವಿನ್ಯಾಸಕಾರರಾಗಿಯೂ ಗುರುತಿಸಿಕೊಂಡಿರುವ ಅವರು ತೆಂಕು ಹಾಗೂ ಬಡಗು ತಿಟ್ಟುಗಳೆರಡರಲ್ಲೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಪ್ರಸ್ತುತ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಶಶಿಕಾಂತ ಶೆಟ್ಟರ ಸೇವೆಯನ್ನು ಸ್ಮರಿಸಿ ಅವರಿಗೆ ಗೌರವ ಹಾಗೂ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಮಂಡಳಿಯ ಪ್ರಮುಖರು ತಿಳಿಸಿದ್ದಾರೆ.

ಸಭಾ ಕಾರ್ಯಕ್ರಮದ ಬಳಿಕ ಉಚಿತ ಯಕ್ಷಗಾನ ವೈಭವವಾಗಿ 'ರಾಜಾ ಯಯಾತಿ' ಪ್ರಸಂಗ ಪ್ರದರ್ಶನಗೊಳ್ಳಲಿದೆ. ಭಾಗವತರಾಗಿ ರಾಮಕೃಷ್ಣ ಹೆಗಡೆ ಹಿಲ್ಲೂರು, ಅಭಿಷೇಕ ಆಡಿ ಗೋಕರ್ಣ ಭಾಗವಹಿಸಲಿದ್ದಾರೆ. ಮೃದಂಗದಲ್ಲಿ ಪರಮೇಶ್ವರ ಭಂಡಾರಿ ಕರ್ಕಿ, ಚಂಡೆಯಲ್ಲಿ ಗಜಾನನ ಸಾಂತೂರು ಸಹಕರಿಸಲಿದ್ದಾರೆ. ಯಕ್ಷಗಾನದಲ್ಲಿ ಕೃಷ್ಣಯಾಜಿ ಬಳ್ಕೂರು, ಶಂಕರ ಹೆಗಡೆ ನೀಲ್ಕೋಡು, ಪ್ರಸನ್ನ ಮಂದರ್ತಿ, ವಿನಯ ಬೇರೊಳ್ಳಿ, ಮಂಜುನಾಥ ಹಿಲ್ಲೂರು, ವಿಶ್ವೇಶ್ವರ ಹಾವಗೋಡಿ, ದೀಪಕ ಕುಂಕಿ, ನಾಗರಾಜ ಕುಂಕಿಪಾಲ, ನಾಗೇಶ ಕುಳಿಮನೆ, ವಿನಾಯಕ ಗುಂಡಬಾಳ, ಸಂಕೇತ ಹಾಗೂ ಇತರ ಕಲಾವಿದರು ಭಾಗವಹಿಸಲಿದ್ದು, ಹಾಸ್ಯ ಪಾತ್ರದಲ್ಲಿ ಶ್ರೀಧರ ಹೆಗಡೆ ಚಪ್ಪರಮನೆ ಅಭಿನಯಿಸಲಿದ್ದಾರೆ. ಯಕ್ಷಗಾನಾಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಸಂಘಟಕ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಕಲಾವಿದ ಕೃಷ್ಣಯಾಜಿ ಬಳ್ಕೂರು ಮನವಿ ಮಾಡಿದ್ದಾರೆ.

ಯುವಶಕ್ತಿ ದೇಶದ ಸಂಪತ್ತು: ಶಾಸಕ ಹೆಬ್ಬಾರ್

ಯಲ್ಲಾಪುರ : ನಮ್ಮ ದೇಶದಲ್ಲಿರುವ ಯುವ ಶಕ್ತಿ ಎಲ್ಲಾ ದೇಶಗಳಿಗೆ ಲಭ್ಯವಿರುವುದಿಲ್ಲ, ಇದೇ ನಮ್ಮ ದೇಶದ ಮುಖ್ಯ ಸಂಪತ್ತಾಗಿದೆ. ನಿಮಗೆ ಉತ್ತಮ ಶಿಕ್ಷಣ ನೀಡುವ ಕಾರಣಕ್ಕಾಗಿ ನಿಮ್ಮ ಪಾಲಕರು ಕಷ್ಟ ಪಡುತ್ತಿದ್ದಾರೆ. ಅವರ ಕಷ್ಟಕ್ಕೆ ನೀವೆಲ್ಲ ಪ್ರತಿಫಲ ನೀಡಬೇಕು ಎಂದು ಶಾಸಕ ಶಿವರಾಮ ಹೆಬ್ಬಾರ್ ಹೇಳಿದರು.

ಶನಿವಾರ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಉತ್ತರಕನ್ನಡ ಜಿಲ್ಲೆಯಲ್ಲಿ ಎಲ್ಲೂ ಇಲ್ಲದಂತಹ ಸರ್ಕಾರಿ ಕಾಲೇಜಿನಲ್ಲಿ ಆಡಿಟೋರಿಯಂ ನಿರ್ಮಾಣ ಆಗುತ್ತಿರುವುದು ನಮಗೆಲ್ಲರಿಗೂ ಸಂತಸದ ವಿಷಯವಾಗಿದೆ. ವಿದ್ಯಾರ್ಥಿಗಳು ಕೇವಲ ಅಂಕಗಳ ಆಧಾರದ ಮೇಲೆ ಬದುಕಲು ಸಾಧ್ಯವಿಲ್ಲ. ಇಂದು ಬೇರೆ ದೇಶಗಳ ಅಭಿವೃದ್ಧಿಗೂ ಸಹ ನಮ್ಮ ದೇಶದ ಯುವಜನತೆ ಕಾರಣವಾಗುತ್ತಿದ್ದಾರೆ. ನಮಗೆ ಕೆಲಸ ನೀಡುವ ಉದ್ಯೋಗದಾತರನ್ನೂ ಸಹ ನಾವು ಗೌರವಿಸಬೇಕಿದೆ ಎಂದರು. ಪ್ರಾಂಶುಪಾಲ ಡಾ. ಆರ್. ಡಿ. ಜನಾರ್ಧನ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೇವಲ ಶಿಕ್ಷಣ ಪಡೆದ ಮಕ್ಕಳಲ್ಲ, ವಿಚಾರಾತ್ಮಕವಾಗಿ ಯೋಚನೆ ಮಾಡುವ ಯುವ ಜನತೆಯನ್ನು ಹೊರತರುವ ಉದ್ದೇಶ ನಮ್ಮದಾಗಿದೆ. ವಿದ್ಯಾರ್ಥಿ ಜೀವನದಿಂದಲೇ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳುವತ್ತ ಎಲ್ಲರೂ ಗಮನ ವಹಿಸಬೇಕಿದೆ ಎಂದರು. ಉಪನ್ಯಾಸಕ ಡಾ. ಓಂಪ್ರಕಾಶ್ ಪ್ರಾಸ್ತಾವಿಕ ಮಾತನಾಡಿ, ವಾರ್ಷಿಕ ವರದಿ ವಾಚಿಸಿದರು.



ಸಿಡಿಸಿ ಸದಸ್ಯ ಉಲ್ಲಾಸ್ ಶ್ಯಾನಭಾಗ, ವಿಜಯ ಮಿರಾಶಿ, ಶಿರೀಶ್ ಪ್ರಭು, ಗೋಪಾಲ ನೇತ್ರಕರ್, ಡಿ.ಎನ್. ಗಾಂವ್ಕರ್ ಉಪಸ್ಥಿತರಿದ್ದರು. ವೈಶಾಲಿ ದೇವಳಿ ಸ್ವಾಗತಿಸಿದರು. ಸಾಕೀನ ಶೇಖ್ ನಿರ್ವಹಿಸಿದರು. ಶಿಕ್ಷಣಿಕವಾಗಿ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಪಡಿತರ ವಿತರಣೆ ಅವಧಿ ವಿಸ್ತರಣೆಗೆ ಒತ್ತಾಯ

ಹೊನ್ನಾವರ: ಸರ್ವರ್ ತಾಂತ್ರಿಕ ದೋಷದಿಂದ ರೇಷನ್(ಪಡಿತರ) ವಿತರಣೆಯಲ್ಲಿ ಸಮಸ್ಯೆ ಉಂಟಗಿದ್ದು, ಪಡಿತರ ವಿತರಣೆ ಮಾಡಲು 15 ದಿನಗಳ ಕಾಲ ವಿಸ್ತರಣೆ ಮಾಡುವಂತೆ ತಾಲೂಕಿನ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಅಧ್ಯಕ್ಷರು ತಹಶೀಲ್ದಾರ ಪ್ರವೀಣ ಕರಾಂಡೆಗೆ ಶನಿವಾರ ಮನವಿ ಸಲ್ಲಿಸಿದ್ದರು.

ಮನವಿಯಲ್ಲಿ ಮೇ ತಿಂಗಳಿಗೆ ಸಂಬಂಧಿಸಿದ ರೇಷನ್ ವಿತರಿಸಲು ಸರ್ವರ್ ಸಮಸ್ಯೆ ಉಂಟಾಗಿದ್ದು, ಪಡಿತರ ವಿತರಿಸುವುದು ತುಂಬಾ ಕಷ್ಟಕರವಾಗಿದ್ದು ಕೇವಲ ಎರಡು ದಿನಗಳು ಬಾಕಿ ಇದ್ದು ರೇಷನ್ ವಿತರಣೆ ಕಷ್ಟವಾಗಿದೆ. ತಿಂಗಳ ಆರಂಭದಿಂದಲ್ಲೂ ಸರ್ವರ್ ದೋಷ ಮುಂದುವರಿದಿದೆ. ಕೇವಲ ಎರಡು ದಿನ ಎಲ್ಲಾ ಸಂಘಗಳಲ್ಲಿಯೂ ರೇಷನ್ ವಿತರಿಸಿದ ಕಾರ್ಡ್‌ಗಿಂತ ವಿತರಿಸಿದೇ ಇರುವ ಕಾರ್ಡ್‌ಗಳ ಸಂಖ್ಯೆ ಹೆಚ್ಚಾಗಿದ್ದು ಪ್ರತಿ ದಿನ ಗ್ರಾಹಕರು ಸಂಘಗಳಿಗೆ ಬಂದು ಮರಳಿ ಮನೆಗೆ ಹೋಗುವಂತಾಗಿದೆ. ತಾಲೂಕಿನ 50%ಕ್ಕಿಂತ ಹೆಚ್ಚಿನ ಜನರ ಮನೆಗಳು ಕಾಡು ಪ್ರದೇಶಗಳಲ್ಲಿ ಇದ್ದು ಪಡಿತರ ನಂಬಿ ಇರುವವರಿಗೆ ಕಷ್ಟವಾಗುತ್ತಿದೆ. ಹಾಗಾಗಿ ಮೇ ತಿಂಗಳ ಪಡಿತರ ವಿತರಿಸುವ ಕಾಲಾವಕಾಶ 15 ದಿನಗಳವರೆಗೆ ವಿಸ್ತರಿಸಿ ಬಡವರಿಗೆ ಜನಸಾಮಾನ್ಯರಿಗೆ ಅನುವು ಮಾಡಿ ಕೊಡಬೇಕೆಂದು ತಹಶೀಲ್ದಾರರ ವರಿಗೆ ನೀಡಿದ ಮನವಿಯಲ್ಲಿ ವಿನಂತಿಸಿದ್ದಾರೆ.



ಸಂಘದ ಅಧ್ಯಕ್ಷರಾದ ವಿ.ಕೆ.ವಿಶಾಲ ವಂದೂರ, ಚಂದ್ರಶೇಖರ ಗೌಡ ಚಿತ್ತಾರ, ರಾಜೇಂದ್ರ ನಾಯ್ಕ ಕೊಡಾಣಿ, ಗೋವಿಂದ ನಾಯ್ಕ ನಗರಬಸ್ತಿಕೇರಿ, ಕೃಷ್ಣ ಗೌಡ ಮಾವಿನ ಕುರ್ವಾ, ಸುರೇಶ ಶೆಟ್ಟಿ ಹೊಸಾಕುಳಿ, ಶ್ರೀಕಾಂತ ಮೊಗೇರ್ ಕರ್ಕಿ, ಹರಿಯಪ್ಪ ನಾಯ್ಕ ಹಡಿನಬಾಳ, ಗಂಗಾಧರ ಗೌಡ ಗುಣವಂತೆ ಇದ್ದರು.

ಮನವಿ ಸ್ವೀಕರಿಸಿದ ತಹಶೀಲ್ದಾರರವರು ಉಪ ನಿರ್ದೇಶಕರು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕೆ ರವಾನಿಸಿದ್ದಾರೆ.

ಕಸದ ರಾಶಿ ತೆರವಿಗೆ ಮುಂದಾದ ಗ್ರಾಪಂ ಸಿಬ್ಬಂದಿ

ಬನವಾಸಿ: ಇಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಹಾಕಿದ್ದ ಕಸದ ರಾಶಿಯನ್ನು ಗ್ರಾಪಂನ ಸ್ವಚ್ಚತಾ ಸಿಬ್ಬಂದಿ ತೆರವುಗೊಳಿಸಿದರು.

ಈ ಕುರಿತು ಹೊಸದಿಗಂತ ದಿನಪತ್ರಿಕೆ ಮೇ 15ರಂದು 'ಎಲ್ಲೆಂದರಲ್ಲಿ ಕಸದ ರಾಶಿ: ರೋಗ ಹರಡುವ ಭೀತಿ' ಎಂಬ ತಲೆಬರಹದಡಿ ಸುದ್ದಿ ಪ್ರಕಟಿಸಿದ ಬಳಿಕ ಎಚ್ಚೆತ್ತ ಗ್ರಾಪಂ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮೀಪ ಕೊಳೆತು ನಾರುತ್ತಿದ್ದ ಕಸದ ರಾಶಿ ತೆರವುಗೊಳಿಸಿ ಅಲ್ಲಿಯ ನಿವಾಸಿಗಳಿಗೆ ಈ ಸ್ಥಳದಲ್ಲಿ ಹಾಕದಂತೆ ಹಾಗೂ ಕಸ ಹಾಕುವವರ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ನೋಟಿಸ್ ನೀಡಿದರು.

ಈ ಸ್ಥಳ ಮಾತ್ರವಲ್ಲದೆ ಪ್ರತಿ ವಾರ್ಡ್‌ಗಳಲ್ಲಿ ಎಲ್ಲೆಂದರಲ್ಲಿ ಕಸದ ರಾಶಿಯೇ ಕಾಣ ಸಿಗುತ್ತಿದ್ದು ಸ್ಥಳೀಯ ಆಡಳಿತದ ವಿರುದ್ಧ ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಪಟ್ಟಣದ ಕದಂಬೋತ್ಸವ ಮೈದಾನಕ್ಕೆ ತೆರಳುವ ರಸ್ತೆಯ ಪಕ್ಕದಲ್ಲಿ, ಜಯಂತಿ ಪ್ರೌಢಶಾಲಾ ಮೈದಾನ, ಪರೀವಿಕ್ಷಣಾ ಮಂದಿರದ ಕಂಪೌಂಡ್, ಸಂತೆ ಮಾರ್ಗಗಳಲ್ಲಿ ರಾಶಿಗಟ್ಟಲೆ ಕಸ ಬಿದ್ದು ಗಬ್ಬೆದ್ದು ನಾರುತ್ತಿದೆ. ಅಲ್ಲದೇ ಪಟ್ಟಣದ ಸಣ್ಣಪುಟ್ಟ ಅಂಗಡಿಕಾರರು, ಹೊಟೇಲ್, ಎಗ್ ರೈಸ್ ಅಂಗಡಿ,



ಕಟಿಂಗ್ ಶಾಪ್, ಮಾಂಸದಂಗಡಿಕಾರರು, ಬೇಕರಿಗಳು ಶಿರಸಿ-ಹೊಸನಗರ ರಾಜ್ಯ ಹೆದ್ದಾರಿ ಮತ್ತು ಬನವಾಸಿ-ಚಂದ್ರಗುತ್ತಿ, ಬನವಾಸಿ- ದಾಸನಕೊಪ್ಪ, ಬನವಾಸಿ- ಬೆಂಗಳೆ ರಸ್ತೆಯ ಅಕ್ಕ ಪಕ್ಕದಲ್ಲಿ ಕಸ ಹಾಕುತ್ತಿದ್ದು, ಎಲ್ಲೆಂದರಲ್ಲಿ ಅಪಾರ ಪ್ರಮಾಣದಲ್ಲಿ ಪ್ಲಾಸ್ಟಿಕ್, ಪ್ಲಾಸ್ಟಿಕ್ ಗ್ಲಾಸ್, ಕೂದಲು, ಕೋಳಿ ಪುಕ್ಕಗಳು, ಮೊಟ್ಟೆ ಸಿಪ್ಪೆಗಳ ರಾಶಿಯೇ ಕಂಡು ಬರುತ್ತಿದ್ದು ಪಟ್ಟಣದ ಸ್ವಚ್ಚತೆಗೆ ಇದು ಕೂಡ ಮಾರಕವಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರ ಸ್ವಚ್ಚತಾ ಅಭಿಯಾನಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜನತೆಗೆ ಅರಿವು ಮೂಡಿಸುವ ಕಾರ್ಯ ಕೈಗೊಂಡರು ಯಾವುದೇ ರೀತಿಯ ಪ್ರಯೋಜನ ಆಗುತ್ತಿಲ್ಲ. ಗ್ರಾಪಂಯಿಂದ ಪ್ರತಿ ದಿನ ಮನೆ, ಅಂಗಡಿಗಳಿಗೆ ಕಸದ ವಾಹನ ಬಂದರು ಕಸ ನೀಡಲು ಮುಂದಾಗದೇ ಎಲ್ಲೆಂದರಲ್ಲಿ ಕಸ ಹಾಕುತ್ತಿದ್ದಾರೆ ಎಂದು ಗ್ರಾಪಂಯವರ ಆರೋಪವಾದರೇ, ಗ್ರಾಪಂಯ ಕಸದ ಗಾಡಿ ಸರಿಯಾಗಿ ಬರುತ್ತಿಲ್ಲ ಎಂಬುದು ಸಾರ್ವಜನಿಕರ ಆರೋಪವಾಗಿದೆ.



ಎಲ್ಲೆಂದರಲ್ಲಿ ಕಸದ ರಾಶಿ: ರೋಗ ಹರಡುವ ಭೀತಿ

ಕಸ, ಪ್ಲಾಸ್ಟಿಕ್ ಜತೆಗೆ ಕೊಳೆತ ಹಣ್ಣು, ಆಹಾರ ಮತ್ತು ತರಕಾರಿಗಳನ್ನು ಎಸೆಯುತ್ತಿರುವುದರಿಂದ ಜಾನುವಾರುಗಳು ಇದನ್ನು ತಿನ್ನಲು ಕಸದ ರಾಶಿಗೆ ಬಾಯಿ ಹಾಕುತ್ತಿದ್ದು, ಪ್ಲಾಸ್ಟಿಕ್ ಕೂಡ ಮೂಕ ಪ್ರಾಣಿಗಳ ಒಡಲು ಸೇರುತ್ತಿದೆ.

ಮಳೆಗಾಲ ಆರಂಭವಾಗುತ್ತಿರುವ ಈ ಸಂದರ್ಭದಲ್ಲಿ ಶಾಲೆ, ಆಸ್ಪತ್ರೆ, ರಾಜ್ಯ ಹೆದ್ದಾರಿಯ ಸಮೀಪದಲ್ಲಿ ಕಸದ ರಾಶಿ ಇರುವುದರಿಂದ ದುರ್ವಾಸನೆ ಮತ್ತು ಸೊಳ್ಳೆಗಳ ಕಾಟದಿಂದ ಜನರ ಆರೋಗ್ಯದ ಮೇಲು ಪರಿಣಾಮ ಬೀರುತ್ತದೆ. ಎಲ್ಲಿ ಬೇಕೆಂದರಲ್ಲಿ ಕಸ ಎಸೆಯುವವರ ವಿರುದ್ಧ ಕಠಿಣ ಕ್ರಮ ಜರುಗಿಸಿ, ಕಸದ ಸಮಸ್ಯೆ ಮುಂದುವರಿಯುತ್ತಿದ್ದು. ಗ್ರಾಪಂ ಇದನ್ನು ಗಂಭೀರವಾಗಿ ಪರಿಗಣಿಸಿ ಕಸ ಹಾಕುವವರ ವಿರುದ್ಧ ಕ್ರಮಕೈಗೊಳ್ಳಬೇಕು ಎಂಬುವುದು ಸಾರ್ವಜನಿಕರ ಆಗ್ರಹವಾಗಿದೆ.

ಶಿಕ್ಷಕರ ಹಾಜರಾತಿಗೆ ವಿನಾಯತಿ ನೀಡಲು ಒತ್ತಾಯ

ಯಲ್ಲಾಪುರ: ರಾಜ್ಯ ಸರ್ಕಾರಕ್ಕೆ ಎಂಎಸ್ ಆ್ಯಪ್ ಮೂಲಕ ಶಿಕ್ಷಕರ ಹಾಜರಾತಿಯನ್ನು ಜಾರಿಗೊಳಿಸಿದ್ದು, ಇದರಿಂದ ಹಲವು ಸಮಸ್ಯೆಗಳು ಎದುರಾಗುತ್ತಿದೆ. ಈ ಹಾಜರಾತಿ ಕ್ರಮದಿಂದ ಶಿಕ್ಷಕರಿಗೆ ವಿನಾಯಿತಿ ನೀಡಬೇಕೆಂದು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂಜೀವಕುಮಾರ ಹೊಸ್ಕೇರಿ ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಗ್ರಾಮೀಣ ಪ್ರದೇಶಗಳಲ್ಲಿ ಸಾರಿಗೆ ಸಮಸ್ಯೆ ಇರುವುದರಿಂದ ಸಮಯಕ್ಕೆ ಶಾಲೆಗೆ ತಲುಪಿ, ಆ್ಯಪ್‌ನಲ್ಲಿ ಹಾಜರಾತಿ ನಮೂದಿಸುವುದು ಕಷ್ಟವಾಗುತ್ತಿದೆ. ಮಲೆನಾಡು, ಗುಡ್ಡಗಾಡು ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುವ ಶಿಕ್ಷಕರಿಗೆ ನೆಟವರ್ಕ್ ಸಮಸ್ಯೆಯಿಂದ ಹಾಜರಾತಿ ದಾಖಲಿಸುವುದು ಸಮಸ್ಯೆಯಾಗಿದೆ. ಶಿಕ್ಷಕರನ್ನು ಇದರಿಂದ ಮುಕ್ತಗೊಳಿಸಬೇಕೆಂದು ಒತ್ತಾಯಿಸಿದರು.

ಒಂದು ವೇಳೆ ಜಾರಿಗೊಳಿಸುವುದೇ ಆದಲ್ಲಿ, ನೆಟವರ್ಕ್ ಸಮಸ್ಯೆ, ಹಾಜರಾತಿ ದಾಖಲಾತಿಗೆ ಉಂಟಾಗುವ ಸಮಸ್ಯೆ ಪರಿಹರಿಸಬೇಕು. ದೂರದ ಪ್ರದೇಶಗಳಿಂದ ಪ್ರಯಾಣಿಸುವ ಶಿಕ್ಷಕರಿಗೆ ಹೆಚ್ಚುವರಿ ಸಮಯ ನೀಡಬೇಕು. ಹಾಜರಾತಿಯನ್ನು ಕಚೇರಿಯಲ್ಲಿ ಹಾಕಲು ವ್ಯವಸ್ಥೆ ಕಲ್ಪಿಸಬೇಕು. ಪ್ರತ್ಯೇಕವಾಗಿ ಆಧಾರ್, ಕೆಜಿಐಡಿ ಸಂಖ್ಯೆ ನಮೂದಿಸುವ ಬದಲು, ಎಚ್‌ಆರ್‌ಎಂಎಸ್ ಮಾಹಿತಿಯನ್ನೇ ಅನ್ವಯವಾಗುವಂತೆ ಮಾಡಿಕೊಂಡು ಹಾಜರಾತಿ ದಾಖಲಿಸಲು ಅವಕಾಶ ನೀಡಬೇಕು. ಶಾಲಾ ವೇಳಾ ಪಟ್ಟಿಯನ್ನು ಎಸ್‌ಡಿಎಂಸಿ ಮತ್ತು ಮುಖ್ಯಾಧ್ಯಾಪಕರು ನಿಗದಿಗೊಳಿಸಲು ಅವಕಾಶ ನೀಡಬೇಕು. ನಿತ್ಯದ ವೇಳಾಪಟ್ಟಿ ಹಾಗೂ ಶನಿವಾರದ ವೇಳಾ ಪಟ್ಟಿಗೊಂದಲ ನಿವಾರಿಸಲು ಸಹ ಅವರಿಗೆ ಅವಕಾಶ ಕಲ್ಪಿಸುವ ಬಗ್ಗೆ ಸಂಬಂಧಪಟ್ಟವರು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಆರ್. ಆರ್.ಭಟ್ಟ ಪ್ರತಿಕ್ರಿಯಿಸಿ, ಶಿಕ್ಷಕರಿಗೆ ಅನಗತ್ಯವಾಗಿ ತೊಂದರೆಯಾಗದಂತೆ ಈ ಪದ್ಧತಿಯನ್ನು ಜಾರಿಗೊಳಿಸುವುದಾದರೆ ಯಾವುದೇ ಆಕ್ಷೇಪವಿಲ್ಲ. ಹಾಜರಾತಿಗಾಗಿಯೇ ಗಂಟೆಗಟ್ಟಲೆ ಸಮಯ ವ್ಯರ್ಥವಾದರೆ, ಶಾಲಾ ಕರ್ತವ್ಯ ನಿರ್ವಹಿಸುವಲ್ಲಿ ಸಮಸ್ಯೆಯಾಗುತ್ತದೆ. ಈ ಪದ್ಧತಿ ಜಾರಿಗೊಳಿಸುವುದೇ ಆದಲ್ಲಿ, ಎದುರಾಗಬಹುದಾದ ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮೊದಲು ಗಮನ ಹರಿಸಬೇಕೆಂದು ಒತ್ತಾಯಿಸಿದ್ದಾರೆ.

ಚುನಾವಣೆ ನಡೆಸಲು ಒತ್ತಾಯ

ಯಲ್ಲಾಪುರ: ಪಂಚಾಯತ ಚುನಾವಣೆ ನಡೆಸದೇ ಆಡಳಿತಾಧಿಕಾರಿಗಳಿಗೆ ಅಧಿಕಾರ ನೀಡಿರುವುದು ಸಂವಿಧಾನದ ಉಲ್ಲಂಘನೆಯಾಗಿದೆ. ತಕ್ಷಣವೇ ಚುನಾವಣೆ ನಡೆಸಿ, ಪ್ರಜಾಪ್ರಭುತ್ವವನ್ನು ಜೀವಂತವಾಗಿರಿಸಬೇಕೆಂದು ಸಂಕಲ್ಪ ಸಂಸ್ಥೆಯ ಅಧ್ಯಕ್ಷ ಪ್ರಮೋದ ಹೆಗಡೆ ಆಗ್ರಹಿಸಿದರು.ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು,ಪಂಚಾಯತ ವ್ಯವಸ್ಥೆಯಲ್ಲಿ ಅನೇಕ ಲೋಪದೋಷಗಳಿವೆ. ಆದಾಗದ ಹೊರತ ಜಿಲ್ಲಾ ವಲಯ ಹಾಗೂ ರಾಜ್ಯ ವಲಯಗಳ ವರ್ಗೀಕರಣಗೊಳಿಸಿ, ಬಜೆಟ್ ಯೋಜನೆ ತಯಾರಿಸಲು ಸಾಧ್ಯವಾಗುವುದಿಲ್ಲ. ಗ್ರಾಮ ಸಭೆಗಳಲ್ಲಿ ಬೇಡಿಕೆಗಳ ಪೂರೈಕೆಯ ಕ್ರಮ ಕೈಗೊಳ್ಳದೇ ಇರುವುದು, ಗ್ರಾಮ ಸಭೆಗಳು ವಿಫಲವಾಗುವಂತೆ ಮಾಡಿದೆ. ನಮ್ಮಲ್ಲಿ ಇ-ಸ್ವತ್ತು ಜಾರಿಯಾಗಿರುವುದಿಲ್ಲ. ಬಹುತೇಕ ಗ್ರಾಪಂಗಳಲ್ಲಿ ಗೋಮಾಳ, ಎನ್.ಎ. ಜಾಗ ಹಾಗೂ ಗಾಂವಠಾಣಾ ಸ್ಥಳವೇ ಇಲ್ಲದಿರುವುದು, ಪಂಚಾಯತಗಳ ಅಭಿವೃದ್ಧಿಗೆ ಸ್ಥಳಾವಕಾಶ ಇಲ್ಲದಂತಾಗಿದೆ. ಎನ್‌ಆರ್‌ಇಜಿ ಹಾಗೂ 15ನೇ ಹಣಕಾಸು ಆಯೋಗದಲ್ಲಿ ಎಲ್ಲದಕ್ಕೂ ಮೀಸಲಾತಿ ಇರುವುದು, ಅಗತ್ಯ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಅಡ್ಡಗಾಲಾಗಿದೆ. ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಪಂಚಾಯತ ಆಡಳಿತಕ್ಕೆ ತಕ್ಷಣವೇ ಸಮಿತಿ ರಚನೆಯಾಗಬೇಕು ಎಂದರು.

ಕಿರುಸುದ್ದಿ

ರಾಷ್ಟ್ರೋತ್ಥಾನ ಶಾಲಾ ಕಟ್ಟಡ ಲೋಕಾರ್ಪಣೆ ಇಂದು

ಹಾವೇರಿ: ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ನಡೆಸಲ್ಪಡುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಶಾಲಾ ಕಟ್ಟಡದ ಲೋಕಾರ್ಪಣೆ, ಅಕ್ಷರಾಭ್ಯಾಸ ಹಾಗೂ ವಿದ್ಯಾರಂಭ ಕಾರ್ಯಕ್ರಮ ಮೇ 31ರಂದು ಬೆಳಗ್ಗೆ 11 ಗಂಟೆಗೆ ದೇವಿಹೊಸೂರ ಗ್ರಾಮದ ರಸ್ತೆಯಲ್ಲಿ ನಿರ್ಮಾಣವಾಗಿರುವ ನೂತನ ರಾಷ್ಟ್ರೋತ್ಥಾನ ಶಾಲಾ ಆವರಣದಲ್ಲಿ ಜರುಗಲಿದೆ. ಸಾನ್ನಿಧ್ಯವನ್ನು ಹುಕ್ಕೇರಿಮಠದ ಡಾ.ಸದಾಶಿವ ಶ್ರೀಗಳು ವಹಿಸಲಿದ್ದು, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಉತ್ತರ ಕರ್ನಾಟಕ ಪ್ರಾಂತ ಕಾರ್ಯವಾಹರಾದ ರಾಘವೇಂದ್ರ ಕಾಗವಾಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ ಹೆಗ್ಡೆ ಉಪಸ್ಥಿತರಿರುವರು ಎಂದು ರಾಷ್ಟ್ರೋತ್ಥಾನ ಪರಿಷತ್‌ನ ಪ್ರಕಟಣೆ ತಿಳಿಸಿದೆ.

ಇಂದು ಚೆಸ್ ಟೂರ್ನಮೆಂಟ್

ಹಾವೇರಿ: ಹಾವೇರಿ ಜಿಲ್ಲಾ ಚೆಸ್ ಅಸೋಸಿಯೇಶನ್ ವತಿಯಿಂದ ಮೇ 31ರಂದು ಬೆಳಗ್ಗೆ 9 ಗಂಟೆಗೆ ನಗರದ ಗೆಳೆಯರ ಬಳಗ ಶಾಲೆಯಲ್ಲಿ ರ‍್ಯಾಪಿಡ್ ಚೆಸ್ ಟೂರ್ನಮೆಂಟ್ ಆಯೋಜಿಸಲಾಗಿದೆ. ಇಲ್ಲಿನ ಕಿಂಗ್ಸ್ ಹಂಟ್ ಚೆಸ್ ಅಕಾಡೆಮಿ ಆಶ್ರಯದಲ್ಲಿ ಓಪನ್ ಹಾಗೂ ವಯೋಮಿತಿ ಆಧಾರದ ಟೂರ್ನಮೆಂಟ್ ಆಯೋಜಿಸಲಾಗಿದ್ದು, 9, 11, 13, 15 ವರ್ಷದ ಒಳಗಿನ ಮಕ್ಕಳಿಗೆ ಹಾಗೂ ಮುಕ್ತ ವೇದಿಕೆ ಹೀಗೆ 5 ವಿಭಾಗಗಳಲ್ಲಿ ಪಂದ್ಯಗಳು ನಡೆಯಲಿವೆ. ಒಟ್ಟು 30ಸಾವಿರ ರು. ನಗದು ಪ್ರಶಸ್ತಿ, 101 ಟ್ರೋಫಿ, ಮೆಡಲ್‌ಗಳನ್ನು ನೀಡಲಾಗುತ್ತಿದೆ. ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರತ್ಯೇಕ ಪಂದ್ಯಗಳು ನಡೆಯಲಿವೆ ಎಂದು ಚೆಸ್ ಅಸೋಸಿಯೇಶನ್ ಪ್ರಕಟಣೆಯಲ್ಲಿ ತಿಳಿಸಿದೆ.

ಮನೆಯಲ್ಲಿ ಕಳ್ಳತನ

ಹಾವೇರಿ: ಮನೆಯೊಂದರ ಹಿಂದಿನ ಬಾಗಿಲಿಗೆ ಅಳವಡಿಸಿದ್ದ ಕದವನ್ನು ಮುರಿದು ಒಳಗೆ ನುಗ್ಗಿರುವ ಕಳ್ಳರು, ನಗದು ಹಾಗೂ ಚಿನ್ನಾಭರಣವನ್ನು ಕಳವು ಮಾಡಿರುವ ಘಟನೆ ಇಲ್ಲಿಯ ಶಿವಯೋಗೇಶ್ವರ ನಗರ 3ನೇ ಕ್ರಾಸ್‌ನಲ್ಲಿ ನಡೆದಿದೆ. ಶಿಕ್ಷಕರಾಗಿರುವ ಶಿವಯೋಗೇಶ್ವರ ನಗರ 3ನೇ ಕ್ರಾಸ್ ನಿವಾಸಿ ಸುರೇಶ ನಿಂಗಪ್ಪ ಅಣ್ಣಿಗೇರಿ ಎಂಬುವವರು ವಾಸವಿದ್ದ ಬಾಡಿಗೆ ಮನೆಯಲ್ಲಿ ಈ ಕಳ್ಳತನ ನಡೆದಿದೆ. ಕಳ್ಳರು ಮನೆಯ ಹಾಲ್‌ನಲ್ಲಿದ್ದ ತಿಜೋರಿ ಲಾಕರ್ ತೆಗೆದು ಅದರಲ್ಲಿದ್ದ ನಾಲ್ಕು ಬಂಗಾರದ ಉಂಗುರ, ಎರಡು ಜೊತೆ ಕಿವಿಯೋಲೆ, ಎರಡು ಜೊತೆ ಕಿವಿ ರಿಂಗ್, ಕಿವಿಗೆ ಹಾಕುವ ಮುರಾ, ಬೆಳ್ಳಿ ತಟ್ಟೆ, ಬೆಳ್ಳಿ ಲೋಟ, ಚೆಂಬು, ನಗದು ಹಣ ಸೇರಿದಂತೆ ಒಟ್ಟು 6.27 ಲಕ್ಷ ರೂ.ಮೌಲ್ಯದ ಚಿನ್ನಾಭರಣ, ನಗದು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಈ ಸಂಬಂಧ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಕಾರು ಡಿಕ್ಕಿ: ಗಾಯ

ಹಾವೇರಿ: ಮುಂದೆ ಹೋಗುತ್ತಿದ್ದ ಬೈಕ್‌ಗೆ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಾಯಗೊಂಡಿರುವ ಘಟನೆ ಜಿಲ್ಲೆಯ ಕಿರಗೇರಿ ಗ್ರಾಮದ ಬಳಿ ನಡೆದಿದೆ. ರಾಣೆಬೆನ್ನೂರು ತಾಲೂಕು ಚಳಗೇರಿಯ ವಿನಾಯಕ ಶಂಕರಗೌಡ ಪಾಟೀಲ ಎಂಬುವವರೆ ಗಾಯಗೊಂಡ ಬೈಕ್ ಸವಾರ. ಶಿಗ್ಗಾವಿಯ ಚಿನ್ಮಯಿ ರುದ್ರಯ್ಯ ಕುಂಬಾರಗೇರಿಮಠ ಎಂಬ ಕಾರು ಚಾಲಕನ ವಿರುದ್ಧ ದೂರು ದಾಖಲಿಸಲಾಗಿದೆ. ಬೈಕ್ ಸವಾರ ತುಮ್ಮಿನಕಟ್ಟಿ ಕಡೆಯಿಂದ ಚಟ್ನಳ್ಳಿ ಕಡೆಗೆ ಹೋಗುತ್ತಿರುವಾಗ ವೇಗವಾಗಿ ಬಂದ ಕಾರು ಬೈಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಅಪಘಾತದ ವೇಳೆ ಬೈಕ್ ಸವಾರ ಗಾಯಗೊಂಡಿದ್ದಾರೆ ಎಂದು ಗಾಯಾಳು ತಂದೆ ಶಂಕರಗೌಡ ಪಾಟೀಲ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಷಜಂತು ಕಚ್ಚಿ ಸಾವು

ಹಾವೇರಿ: ಆರ್‌ಸಿಸಿ ಮನೆಯ ಮೇಲೆ ಮಲಗಿದ್ದ ವ್ಯಕ್ತಿಯೊಬ್ಬರ ಮುಖಕ್ಕೆ ವಿಷ ಜಂತು ಕಚ್ಚಿದ್ದರಿಂದ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾಗ ಉಪಚಾರ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ. ಸವಣೂರ ತಾಲೂಕು ತೆವರಮೆಳ್ಳಿಹಳ್ಳಿ ಗ್ರಾಮದ ಮಂಜುನಾಥ ಬಸವಣ್ಣೆಪ್ಪ ಹುಣಸಿಕಟ್ಟಿ (35) ಮೃತರು. ಮನೆಯಲ್ಲಿ ರಾತ್ರಿ ಊಟ ಮುಗಿಸಿ, ಮನೆಯ ಆರ್‌ಸಿಸಿ ಮೇಲೆ ಹೋಗಿ ಮಲಗಿಕೊಂಡಾಗ ಯಾವುದೋ ವಿಷ ಜಂತು ಮುಖಕ್ಕೆ ಕಚ್ಚಿದೆ. ಚಿಕಿತ್ಸೆ ಕೊಡಿಸಲೆಂದು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಿದ್ದಾಗ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತನ ತಂದೆ ಬಸವಣ್ಣೆಪ್ಪ ಹುಣಸಿಕಟ್ಟಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಸವಣೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹುಬ್ಬಳ್ಳಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಕಪ್ ಗೆಲುವು ಸಾಧಿಸಲಿ ಎಂದು ನಗರದ ನೆಹರು ಮೈದಾನದಲ್ಲಿ ಕ್ರಿಕೆಟ್ ಅಭಿಮಾನಿಗಳು ಶುಭ ಹಾರೈಸಿದರು. ರಾಜು ಕೋರ್ಯಾಣಮಠ, ಸಂದೀಪ ಅನ್ವೇಕರ, ಮಹೇಶ ಲಕಾಜನವರ, ಸಂಜೀವ ಇದ್ದರು.

ನಾಳೆ ವಿಶ್ವ ತಂಬಾಕು ರಹಿತ ದಿನದ ಜಾಥಾ

ಹಾವೇರಿ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಿಲ್ಲಾ ನ್ಯಾಯವಾದಿಗಳ ಸಂಘ, ಜಿಲ್ಲಾ ಆಸ್ಪತ್ರೆ, ಪೊಲೀಸ್ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆ ಪ್ರಯುಕ್ತ ಜಾಥಾ ಕಾರ್ಯಕ್ರಮ ಜೂನ್ 1ರಂದು ಬೆಳಗ್ಗೆ 10 ಗಂಟೆಗೆ ಹಾವೇರಿ ನಗರದ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ಜರುಗಲಿದೆ. ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವೀಂದ್ರಪ್ಪಾ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ., ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸಿದ್ದನಗೌಡ ಎಚ್.ಸಿ., ಕಾರ್ಯದರ್ಶಿ ಪಿ.ಎಸ್. ಹೆಬ್ಬಾಳ, ಡಿಎಚ್‌ಒ ಡಾ.ಎಂ. ಜಯಾನಂದ, ಜಿಲ್ಲಾ ಶಸ್ತ್ರ ಚಿಕಿತ್ಸಕ ಮತ್ತು ವೈದ್ಯಕೀಯ ಅಧೀಕ್ಷಕ ಡಾ.ಪಿ.ಆರ್. ಹಾವನೂರ, ಜಿಲ್ಲಾ ಜಾರಿ ಅಧಿಕಾರಿ ಹಾಗೂ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ದೇವರಾಜ ಸಾರಥಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕಿ ಭಾರತಿ ಎಚ್., ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರಭಾಕರ ಕುಂದೂರ ಹಾಗೂ ಜಿಲ್ಲಾ ಶುಶ್ರೂಷಕ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಸರಸ್ವತಿ ವೈ.ಎಚ್. ಅವರು ಭಾಗವಹಿಸಲಿದ್ದಾರೆ.



ಸಿದ್ದಾಪುರ: ತಾಲೂಕಿನ ಬೇಡ್ಕಣಿಯ ವ್ಯವಸಾಯ ಸೇವಾ ಸಹಕಾರಿ ಸಂಘದ ವತಿಯಿಂದ ಮುಗದೂರಿನ ಪುನೀತ ರಾಜಕುಮಾರ ಆಶ್ರಯಧಾಮ ಅನಾಥಾಶ್ರಮಕ್ಕೆ ಸಹಾಯ ನೀಡಲಾಯಿತು. ಸಂಘದ ವತಿಯಿಂದ ಅನಾಥಾಶ್ರಮಕ್ಕೆ 2.50 ಕ್ವಿಂಟಲ್ ಅಕ್ಕಿ ಹಾಗೂ 5 ಸಾವಿರ ರೂ. ನಗದು ನೀಡಲಾಯಿತು. ಸೊಸೈಟಿ ಅಧ್ಯಕ್ಷ ಪ್ರಶಾಂತ ನಾಯ್ಕ ಕುಂಬ್ರಿಗದ್ದೆ, ಉಪಾಧ್ಯಕ್ಷ ಮಾರುತಿ ನಾಯ್ಕ ತ್ಯಾರ್ಸಿ, ಸದಸ್ಯರಾದ ನೀಲಕಂಠ ನಾಯ್ಕ ಬೇಡ್ಕಣಿ, ಜಗದೀಶ ಗೌಡರ್ ತ್ಯಾರ್ಸಿ ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಗ್ರಾಪಂ ನೌಕರರ ಒತ್ತಾಯ

ಡಿಸಿ ಕಚೇರಿ ಎದುರು ಪ್ರತಿಭಟನೆ

ಹಾವೇರಿ: ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುವ ಸಿಪಾಯಿ, ಸ್ವಚ್ಛತಾಗಾರರು, ಬಿಲ್ ಕಲೆಕ್ಟರ್ ಹಾಗೂ ವಾಟರ್‌ಮೆನ್‌ಗಳಿಗೆ ಬಾಕಿ ವೇತನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು ಸಂಯೋಜಿತ ರಾಜ್ಯ ಗ್ರಾಪಂ ನೌಕರರ ಸಂಘ ಜಿಲ್ಲಾ ಸಮಿತಿಯ ಪದಾಧಿಕಾರಿಗಳು ಶನಿವಾರ ನಗರದ ಜಿಲ್ಲಾಡಳಿತ ಭವನದ ಎದುರು ಪ್ರತಿಭಟನೆ ನಡೆಸಿದರು.

ಸಂಘಟನೆಯ ಜಿಲ್ಲಾಧ್ಯಕ್ಷ ಅಂದಾನೆಪ್ಪ ಹೆಬಸೂರ ಮಾತನಾಡಿ, ಗ್ರಾಪಂಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ 15ನೇ ಹಣಕಾಸು ಮತ್ತು ಕರ ವಸೂಲಾತಿಯಲ್ಲಿ ವೇತನ ಪಾವತಿ ಮಾಡಲು ಸರ್ಕಾರದ ಆದೇಶವಿದ್ದರೂ ಪಿಡಿಓಗಳು ಕಳೆದ ಹಲವು ತಿಂಗಳುಗಳಿಂದ ಸಿಬ್ಬಂದಿಗಳಿಗೆ ವೇತನ ಪಾವತಿ ಮಾಡುತ್ತಿಲ್ಲ, ಕರ ವಸೂಲಾತಿಯಲ್ಲಿ ಸಂಗ್ರಹಗೊಳ್ಳುವ ಹಣವನ್ನು ಬೇರೆ ಕೆಲಸಗಳಿಗೆ ಹೊಂದಿಸಿಕೊಳ್ಳುತ್ತಿದ್ದಾರೆ. ಪಿಡಿಓಗಳು ಸರ್ಕಾರದ ಆದೇಶವನ್ನು ಪಾಲಿಸುವ ಮೂಲಕ ಗ್ರಾಪಂ ನೌಕರರಿಗೆ ವೇತನ ಪಾವತಿಸಬೇಕೆಂದು ಆಗ್ರಹಿಸಿದರು.

ಸರ್ಕಾರ ಗ್ರಾಪಂಗಳಲ್ಲಿ ಕಾರ್ಯನಿರ್ವಹಿಸುವ ಕರ ವಸೂಲಿಗಾರರು, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟ್, ನೀರಗಂಟಿಗಳು, ಜವಾನರು, ಸ್ವಚ್ಛತಾಗಾರರನ್ನು ಏಕಕಾಲಕ್ಕೆ ಸರ್ಕಾರಿ ನೌಕರರೆಂದು ಘೋಷಣೆ ಮಾಡಬೇಕು. ಸೇವಾ ಹಿರಿತನ ಪರಿಗಣಿಸಿ ಇನ್‌ಕ್ರಿಮೆಂಟ್ ಕೊಡಬೇಕು. ವೃತ್ತಿನಿರತ ಸಿಬ್ಬಂದಿಗಳು ನಿವೃತ್ತಿ ಅಥವಾ ಮರಣಹೊಂದಿದರೆ 6 ಲಕ್ಷ ರೂ. ಇಡಿಗಂಟು ಕೊಡಬೇಕು. ಗ್ರಾಪಂಗಳಲ್ಲಿರುವ ಸಿಬ್ಬಂದಿಗಳಲ್ಲಿ ಕಂಪ್ಯೂಟರ್ ಜ್ಞಾನವಿದ್ದರೆ ಅವರಿಗೆ ಅವಕಾಶ ನೀಡಬೇಕೆಂದು ಒತ್ತಾಯಿಸಿದರು.

ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಗದೀಶ ಕೋಟಿ ಮಾತನಾಡಿ, ಸಂಜೀವಿನಿ ಒಕ್ಕೂಟದ ಮೂಲಕ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ವಾಹಿನಿ ಮಹಿಳಾ ಚಾಲಕಿಯರು ಹಾಗೂ ಸಹಾಯಕಿಯರಿಗೆ ಎರಡು ವರ್ಷಗಳಿಂದ ಸರಿಯಾದ ಸಂಬಳವಿಲ್ಲದೆ ಜೀವನ ನಿರ್ವಹಣೆಗೆ ಪರದಾಡುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ವಚ್ಛತಾ ವಾಹಿನಿ ಕಾರ್ಮಿಕರಿಗೆ ವೇತನ ಪಾವತಿ ಮಾಡಬೇಕು. ಇವರನ್ನು ಸಹಿತ ಗ್ರಾಪಂ ನೌಕರರೆಂದು ಪರಿಗಣಿಸಿ, ಕನಿಷ್ಠ ವೇತನದ ಜತೆಗೆ ಆರೋಗ್ಯ ಸೌಲಭ್ಯ, ಪಿಂಚಣಿ ವ್ಯವಸ್ಥೆ, ಇಡಿಗಂಟು ಸೇರಿ ಸರ್ಕಾರದಿಂದ ಸಿಗುವ ಎಲ್ಲ ಸವಲತ್ತುಗಳನ್ನು ಒದಗಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಪ್ರತಿಭಟನಾಕಾರರು ಅಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಫಕ್ಕಿರೇಶ ಹಕ್ಕಿಮರೆಣ್ಣವರ, ಬಸವರಾಜ ಪೂಜಾರ, ನಾಗರಾಜ ನಾಯಕ, ಮಂಜು ಮಲ್ಲಮ್ಮನವರ, ಆಂಜನೇಯ ರಟ್ಟಿಹಳ್ಳಿ, ಮಮತಾ, ಸುರೇಖಾ ಸೇರಿದಂತೆ ಸಂಘಟನೆ ಪದಾಧಿಕಾರಿಗಳು, ವಿವಿಧ ಗ್ರಾಪಂಗಳಲ್ಲಿ ಕಾರ್ಯನಿರ್ವಹಿಸುವ ಸಿಪಾಯಿ, ಸ್ವಚ್ಛತಾಗಾರರು, ಬಿಲ್ ಕಲೆಕ್ಟರ್ ಹಾಗೂ ವಾಟರ್‌ಮೆನ್ ಹಾಜರಿದ್ದರು.



ಆಪರೇಟರ್ ನೇಮಿಸಿ

ಗ್ರಾಪಂ ಕಂಪ್ಯೂಟರ್ ಆಪರೇಟರ್‌ಗಳ ಮೇಲಿನ ಒತ್ತಡ ಕಡಿಮೆ ಮಾಡಲು ಎರಡನೇ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಿಸಬೇಕು.

- ಸ್ವಚ್ಛತಾ ವಾಹಿನಿ ಕಾರ್ಮಿಕರಿಗೆ ವೇತನ ಪಾವತಿಸಿ
- ಕನಿಷ್ಠ ವೇತನದ ಜತೆಗೆ ಆರೋಗ್ಯ ಸೌಲಭ್ಯ, ಪಿಂಚಣಿ ವ್ಯವಸ್ಥೆ ಒದಗಿಸಿ

ನಾಡಿನಲ್ಲಿ ಹೊಸ ಅಧ್ಯಾಯ ಆರಂಭ: ಶಾಸಕ ಮಾನೆ

ಹಾನಗಲ್ಲ: ತಳ ಹಂತದಿಂದ ಬೆಳೆದು ಬಂದಿರುವ ಕಾಂಗ್ರೆಸ್ ಪಕ್ಷದ ಕಟ್ಟಾಳು ಡಿ.ಕೆ.ಶಿವಕುಮಾರ ಅವರು ಸರ್ಕಾರದ ನಾಯಕತ್ವ ವಹಿಸಿಕೊಳ್ಳಲಿದ್ದು, ಇನ್ನು ಮುಂದೆ ನಾಡಿನಲ್ಲಿ ಹೊಸ ಅಧ್ಯಾಯ ಆರಂಭವಾಗಲಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಸಂತಸ ವ್ಯಕ್ತಪಡಿಸಿದ್ದಾರೆ.



ಶನಿವಾರ ಬೆಂಗಳೂರಿನಿಂದ ಮಾಧ್ಯಮ ಪ್ರತಿನಿಧಿಗಳೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಅವರು ಸಂಘಟನೆ, ಹೋರಾಟ, ಪರಿಶ್ರಮ ಇವನ್ನೆಲ್ಲ ಒಳಗೊಂಡಂತೆ ಅಪರೂಪದ ನಾಯಕತ್ವದ ಗುಣ ಮೈಗೂಡಿಸಿಕೊಂಡಿರುವ ಡಿ.ಕೆ. ಶಿವಕುಮಾರ ಅವರಲ್ಲಿ ನಾಯಕರನ್ನು ತಯಾರು ಮಾಡುವಂಥ ಸಾಮರ್ಥ್ಯವಿದೆ. ವಿದ್ಯಾರ್ಥಿ ಸಂಘಟನೆಯಲ್ಲಿ ಗುರುತಿಸಿಕೊಂಡು, ಯುವ ಕಾಂಗ್ರೆಸ್ ಮೂಲಕ ಬೆಳೆದು ಬಂದಿರುವ ನಾಯಕ ಡಿ.ಕೆ.ಶಿವಕುಮಾರ ಅವರು ಕಳೆದ 6 ವರ್ಷಗಳಿಂದ ಕೆಪಿಸಿಸಿ ನಾಯಕತ್ವ ವಹಿಸಿಕೊಂಡು ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಭದ್ರವಾದ ನೆಲೆ ಕಲ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಿದರು.

ಹಾವೇರಿ ಜಿಲ್ಲೆಯಲ್ಲಿ ಎಲ್ಲ ಆರೂ ಸ್ಥಾನಗಳಲ್ಲಿಯೂ ಸಹ ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದಿದ್ದು, ಜಿಲ್ಲೆ ಸಂಪೂರ್ಣವಾಗಿ ಬಿಜೆಪಿ ಮುಕ್ತವಾಗಿದೆ. ಕಳೆದ 3 ವರ್ಷಗಳಿಂದ ಸಂಪುಟದಲ್ಲಿ ಜಿಲ್ಲೆಗೆ ಪ್ರಾತಿನಿಧ್ಯ ಸಿಕ್ಕಿಲ್ಲ ಎನ್ನುವ ಕೊರಗು ಕಾಡುತ್ತಿದೆ. ಉಳಿದಿರುವ 2 ವರ್ಷಗಳ ಅವಧಿಗೆ ಜಿಲ್ಲೆಗೆ ಪ್ರಾತಿನಿಧ್ಯ ಸಿಗಬೇಕು ಎಂದು ಎಲ್ಲ ಆರೂ ಜನ ಶಾಸಕರು ಪಕ್ಷದ ವರಿಷ್ಠರ ಎದುರು ಒಕ್ಕೊರಲಿನಿಂದ ಹಕ್ಕು ಮಂಡಿಸಿದ್ದೇವೆ. ಕಳೆದ 30 ವರ್ಷಗಳಿಂದ ಯುವ ಕಾಂಗ್ರೆಸ್ ಮೂಲಕ ರಾಜಕೀಯ ಜೀವನದಲ್ಲಿದ್ದು, 17 ವರ್ಷಗಳಿಂದ ವಿಧಾನ ಪರಿಷತ್ ಮತ್ತು ವಿಧಾನಸಭೆ ಸದಸ್ಯನಾಗಿ ಸದನದಲ್ಲಿದ್ದೇನೆ. ಹಾಗಾಗಿ ನನಗೆ ಅವಕಾಶ ಮಾಡಿಕೊಡುವಂತೆ ಮನವಿ ಸಲ್ಲಿಸಿದ್ದು, ಪಕ್ಷದ ತೀರ್ಮಾನಕ್ಕೆ ಬದ್ಧ ಇರುವುದಾಗಿ ಶಾಸಕ ಮಾನೆ ತಿಳಿಸಿದ ಅವರು ಸಚಿವ ಸ್ಥಾನದ ಬಗ್ಗೆ ಇದುವರೆಗೆ ಯಾವುದೇ ನಿಖರ ಮಾಹಿತಿ ಲಭ್ಯವಾಗಿಲ್ಲ, ಆದರೆ ಆಶಾಭಾವನೆಯಲ್ಲಿ ಇರುವುದಾಗಿ ಹೇಳಿದರು.

ಕಾಂಗ್ರೆಸ್ ಪಕ್ಷದಲ್ಲಿ ನಾಯಕರ ಕೊರತೆ ಇಲ್ಲ, ಅವಕಾಶ ಸಿಕ್ಕ ಸಂದರ್ಭದಲ್ಲೆಲ್ಲ ನಾಯಕತ್ವ ಪ್ರದರ್ಶಿಸಿದ್ದಾರೆ. ಬಹಳಷ್ಟು ನಾಯಕರು ಇಂದು ಬೆಳೆದಿದ್ದಾರೆ. ಕೆಲವು ಹೊಸ ಮುಖಗಳೂ ಕೂಡ ನಾಯಕತ್ವ ಸಾಬೀತು ಪಡಿಸಲು ಅವಕಾಶಕ್ಕೆ ಕಾಯುತ್ತಿದ್ದು, ಅವಕಾಶ ಸಿಕ್ಕರೆ ಪಕ್ಷಕ್ಕೆ ಆಸ್ತಿಯಾಗಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಶ್ರೀನಿವಾಸ ಮಾನೆ ಉತ್ತರಿಸಿದರು.

ಶಾಸಕ ಶಿವಣ್ಣನವರಿಗೆ ಸಚಿವ ಸ್ಥಾನ ನೀಡಲು ಅಹಿಂದ ಆಗ್ರಹ

ರಾಣೆಬೆನ್ನೂರ: ನೂತನ ಸಚಿವ ಸಂಪುಟದಲ್ಲಿ ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರಿಗೆ ಸಚಿವ ಸ್ಥಾನ ನೀಡುವಂತೆ ಅಹಿಂದ ಕಾರ್ಯಕರ್ತರು ಶನಿವಾರ ನಗರದಲ್ಲಿ ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ಗೆ ಆಗ್ರಹಿಸಿದರು.

ಅಹಿಂದ ಮುಖಂಡ ಹಾಗೂ ನ್ಯಾಯವಾದಿ ನಾಗರಾಜ ಸಂಶಿ ಮಾತನಾಡಿ, ಕಾಂಗ್ರೆಸ್ ಪಕ್ಷದ ನಿರ್ದೇಶನದ ಮೇರೆಗೆ ಅಹಿಂದ ಮುಖಂಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಯಂಪ್ರೇರಿತವಾಗಿ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಎಲ್ಲಾ ಸಮಾಜಕ್ಕೆ ಅಧಿಕಾರ ಸಿಗಲಿ ಸದುದ್ದೇಶದಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಇದೀಗ ಸಿಎಂ ಸ್ಥಾನವನ್ನು ಡಿ.ಕೆ. ಶಿವಕುಮಾರಗೆ ನೀಡಲು ಹೈಕಮಾಂಡ್ ತೀರ್ಮಾನಿಸಿದೆ. ಹಾವೇರಿ ಜಿಲ್ಲೆಯ ಅಹಿಂದ ಸಮಾಜದ ಮುಖಂಡ ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರಿಗೆ ನೂತನ ಸಚಿವ ಸಂಪುಟದಲ್ಲಿ ಮಂತ್ರಿ ಸ್ಥಾನ ನೀಡಬೇಕು. ಇದಕ್ಕೆ ಅಹಿಂದ ಸಂಘಟನೆ ಹಾಗೂ ಎಲ್ಲಾ ಸಂಘಟನೆಗಳ ಒತ್ತಾಸೆಯಾಗಿದೆ. ಈಗ ಸಿದ್ದರಾಮಯ್ಯನವರು ರಾಜೀನಾಮೆ ನೀಡಿದ್ದರಿಂದ ಬಸವರಾಜ ಶಿವಣ್ಣನವರಿಗೆ ಸಚಿವ ಸ್ಥಾನ ನೀಡಬೇಕು. ಹೀಗಾದಲ್ಲಿ 2028ರ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲಾ 6 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಲಿದೆ. ಇಲ್ಲವಾದಲ್ಲಿ ಅಹಿಂದ ಬೆಂಬಲ ಕಡಿಮೆಯಾಗುತ್ತದೆ ಎಂದರು.

ತಾಲೂಕು ಕುರುಬ ಸಮಾಜದ ಅಧ್ಯಕ್ಷ ಹನುಮಂತಪ್ಪ ದೇವರಗುಡ್ಡ ಮಾತನಾಡಿದರು.

ರೈತ ಮುಖಂಡ ಹನುಮಂತಪ್ಪ ಕಬ್ಬಾರ, ಹನುಮಪ್ಪಜ್ಜ ಹೊಳಿಯಪ್ಪನವರ, ಮಂಜುನಾಥ ಬೂಸಮ್ಮನವರ, ಮಾಲತೇಶ ಹೊಳಿಯಪ್ಪನವರ, ಮಂಜುನಾಥ ಬ್ಯಾಡಗಿ, ಸುಭಾಸ ಕೆಂಗಲ್, ನಿಂಗಪ್ಪ ಗಂಟಿ, ಮಲ್ಲಪ್ಪ ದೇವರಗುಡ್ಡ, ರಾಹುಲ್ ಎಳೆಹೊಳಿ ಸೇರಿದಂತೆ ಮತ್ತಿತರರಿದ್ದರು.



ಸಿಲಿಂಡರ್ ಪೂರೈಕೆ ವ್ಯತ್ಯಯವಾಗದಂತೆ ಕ್ರಮ ಕೈಗೊಳ್ಳಿ

ಹಾವೇರಿ: ಪಿ.ಎಂ ಪೋಷಣ್ ಯೋಜನೆಯಡಿ ಶಾಲೆಗಳ ಬಿಸಿಯೂಟ ತಯಾರಿಕೆಗೆ ಅಗತ್ಯವಿರುವ ಗ್ಯಾಸ್ ಸಿಲಿಂಡರ್‌ಗಳ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಘಟಕದ ಪದಾಧಿಕಾರಿಗಳು ಶನಿವಾರ ಜಿಪಂ ಸಿಇಒ ದಲ್ಜಿತ್‌ಕುಮಾರಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶಪ್ಪ ಕರಿಗಾರ, ಮಧ್ಯಪ್ರಾಚ್ಯ ದೇಶಗಳಲ್ಲಿ ಉಂಟಾಗಿರುವ ಯುದ್ಧದ ಪರಿಸ್ಥಿತಿಯಿಂದ ಎಲ್‌ಪಿಜಿ ಗ್ಯಾಸ್ ಸಿಲಿಂಡರಗಳ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾಗಿರುವ ಪಿಎಂ ಪೋಷಣ್ ಶಕ್ತಿ ನಿರ್ಮಾಣ್ (ಮಧ್ಯಾಹ್ನದ ಉಪಾಹಾರ) ಯೋಜನೆಗೆ ನಿರಂತರವಾಗಿ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳು ಅಗತ್ಯ ಇರುತ್ತದೆ. ಮುಂಬರುವ ಜೂ.1ರಿಂದ ಶಾಲೆಗಳಲ್ಲಿ ಶೈಕ್ಷಣಿಕ ವರ್ಷದ ತರಗತಿಗಳು ಪ್ರಾರಂಭವಾಗಲಿದ್ದು, ಹಾವೇರಿ ಜಿಲ್ಲೆಯ ಪಿಎಂ ಪೋಷಣ್ ಯೋಜನೆಯಡಿ ಬರುವ ಎಲ್ಲಾ ಶಾಲೆಗಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ತೊಂದರೆಯಾಗದಂತೆ ಅಗತ್ಯ ವಸ್ತುಗಳ ಕಾಯಿದೆಯಡಿ ಪರಿಗಣಿಸಿ ಗ್ಯಾಸ್ ಸಿಲಿಂಡರ್‌ಗಳನ್ನು ಪೂರೈಸಬೇಕೆಂದು ಒತ್ತಾಯಿಸಿದರು.

ಜತೆಗೆ ಶಾಲೆಗಳಿಗೆ ಗ್ಯಾಸ್ ಪೂರೈಕೆ ವೇಳೆ ಓಟಿಪಿ ಹಾಗೂ ನೋಂದಣಿ ವ್ಯವಸ್ಥೆಯಿಂದ ವಿನಾಯತಿ ನೀಡಬೇಕು. ಒಂದು ವೇಳೆ ನೊಂದಣಿ ಕಡ್ಡಾಯವಾದಲ್ಲಿ ನೋಂದಣಿಯಾದ ದಿನವೇ ಸಿಲಿಂಡರ್ ವಿತರಿಸಬೇಕು. ಎಲ್‌ಪಿಜಿಗೆ ಸರ್ಕಾರ ನಿಗದಿಪಡಿಸಿದ ಮೊತ್ತವನ್ನು ಚೆಕ್ ಮೂಲಕ ಪಡೆಯಲು ಎಲ್ಲಾ ಎಜೆನ್ಸಿಗಳಿಗೆ ನಿರ್ದೇಶನ ನೀಡಬೇಕೆಂದು ತಿಳಿಸಿ, ಜಿಪಂ ಸಿಇಒ ಅವರಿಗೆ ಮನವಿ ಸಲ್ಲಿಸಿದರು.

ಮನವಿ ನೀಡುವ ವೇಳೆ ಸಂಘದ ಜಿಲ್ಲಾ ಕಾರ್ಯದರ್ಶಿ ಜಿ.ಎಸ್. ಪಾಟೀಲ ಸೇರಿದಂತೆ ನೌಕರರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.



ವಿದ್ಯಾರ್ಥಿಗಳ ರಿಯಾಯಿತಿ ಬಸ್ ಪಾಸ್‌ಗೆ ಅರ್ಜಿ

ಹಾವೇರಿ: ಪ್ರಸಕ್ತ 2026–27ನೇ ಸಾಲಿನ ವಿದ್ಯಾರ್ಥಿ ರಿಯಾಯಿತಿ ಬಸ್ ಪಾಸ್ ವಿತರಣೆ ಕಾರ್ಯವನ್ನು ಇ.ಡಿ.ಸಿ.ಎಸ್ ಇಲಾಖೆಯಿಂದ ಕೈಗೊಳ್ಳಲಾಗಿದೆ. ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸುವಾಗ ವಿದ್ಯಾರ್ಥಿಯ ಹೆಸರು, ಎಸ್‌ಎಟಿಎಸ್ ನಂಬರ್ ಹಾಗೂ ಶೈಕ್ಷಣಿಕ ವರ್ಷ ಈ ಎಲ್ಲಾ ಅಂಶಗಳ ದೃಢೀಕರಣವನ್ನು ಶಾಲಾ ಮುಖ್ಯಸ್ಥರಿಂದ ಪಡೆದು ಸೇವಾಸಿಂಧುವಿನಲ್ಲಿ ಫೀ ರಶೀದಿ ಬದಲಾಗಿ ದೃಢೀಕರಣವನ್ನು ಅಪಲೋಡ್ ಮಾಡಬೇಕು.ಹಾವೇರಿ ಜಿಲ್ಲೆಯ ಶಾಲಾ–ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳು ಕೂಡಲೇ ಪಾಸುಗಳನ್ನು ಪಡೆಯುವಂತೆ ಎಲ್ಲಾ ಬಿಇಓಗಳ ಮುಖಾಂತರ ನಿರ್ದೇಶನ ನೀಡಲು ಕೋರಲಾಗಿದೆ. ವಿದ್ಯಾರ್ಥಿಗಳು ಆನ್‌ಲೈನ ಅರ್ಜಿ ಸಲ್ಲಿಸುವಾಗ, ಹಾವೇರಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಶಾಲಾ, ಕಾಲೇಜು ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಹತ್ತಿರದ ಸಂಭಂದಪಟ್ಟ ಪಾಸ್ ಕೌಂಟರನ್ನು ಆಯ್ಕೆ ಮಾಡಿಕೊಳ್ಳಬೇಕು. ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದ ವಿಷಯಗಳಿಗೆ ಇ–ಮೇಲ್ sevasindhu@kamataka.gov.in ಹಾಗೂ ಪಾಸ್ ವಿತರಣಾ ಕೇಂದ್ರಗಳಲ್ಲಿ ಪಾಸ್ ಮುದ್ರಣ ಮತ್ತು ವಿತರಣೆಗೆ ಸಂಬಂಧಿಸಿದ ವಿಷಯಗಳಿಗೆ ಇ–ಮೇಲ್ onehelpdesk@karnataka.gov.in ಸಂಪರ್ಕಿಸಬಹುದೆಂದು ವಾ.ಕ.ರ.ಸಾ.ಸಂಸ್ಥೆ ಹಾವೇರಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಂಬಾಕು ಆರೋಗ್ಯವಂತ ಸಮಾಜಕ್ಕೆ ಕಂಟಕ

ಹಾವೇರಿ: ತಂಬಾಕು ಮತ್ತು ಅದರ ಅಪಾಯಕಾರಿ ಉತ್ಪನ್ನಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ತಂಬಾಕು ಸೇವನೆಯಿಂದ ಹೃದಯವಿದ್ರಾವಕ ದುರಂತ ಘಟನೆಗಳು ಸಮಾಜದಲ್ಲಿ ಸಂಭವಿಸುತ್ತವೆ. ತಂಬಾಕು ಎಂಬ ಹೆಮ್ಮಾರಿ ವಿಶ್ವವ್ಯಾಪಿಯಾಗಿದ್ದು, ಆರೋಗ್ಯವಂತ ನಾಗರೀಕ ಸಮಾಜಕ್ಕೆ ಕಂಟಕ ಪ್ರಾಯವಾಗಿದೆ ಎಂದು ಸಾಹಿತಿ ಹನುಮಂತಗೌಡ ಗೊಲ್ಲರ ಹೇಳಿದರು.

ತಾಲೂಕಿನ ಅಗಡಿ ಗ್ರಾಮದಲ್ಲಿ ಶನಿವಾರ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಆಶ್ರಯದಲ್ಲಿ ವಿಶ್ವ ತಂಬಾಕು ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿ, ಸಿಗರೇಟ್, ಬೀಡಿ, ಗುಟ್ಕಾ ಮುಂತಾದ ತಂಬಾಕಿನ ಉತ್ಪನ್ನಗಳನ್ನು ನಾವು ಸೇದುವ ಅಥವಾ ಸೇವಿಸುವ ಮೂಲಕ ನಮಗರಿವಿಲ್ಲದಂತೆ ನಾವೇ ಹಚ್ಚಿ ಸುಟ್ಟ ಬೆಂಕಿಯ ಹೊಗೆಯಲ್ಲಿ ನಿಕೋಟಿನ್ ಒಳಗೊಂಡಂತೆ ನಾಲ್ಕು ಸಾವಿರಕ್ಕೂ ಹೆಚ್ಚು ಅಪಾಯಕಾರಿ ಪದಾರ್ಥಗಳನ್ನು ನಮ್ಮ ಶ್ವಾಸನಾಳಗಳು ಹೀರಿ ದೇಹದೊಳಕ್ಕೆ ಬಿಟ್ಟುಕೊಳ್ಳುತ್ತದೆ ಎಂದರು.



ಇವೆಲ್ಲವೂ ಕ್ಯಾನ್ಸರ್, ಹೃದಯಘಾತ ಉಂಟು ಮಾಡುವ ತನ್ಮೂಲಕ ಜೀವ ತೆಗೆಯುವ ವಿಷಯುಕಾರಕ ವಿಚ್ಛಿದ್ರ ಶಕ್ತಿಗಳಾಗಿವೆ. ಆದ್ದರಿಂದ ತಂಬಾಕು ಸೇವನೆಯೇ ಬಾಯಿ ಕ್ಯಾನ್ಸರ್‌ಗೆ ಕಾರಣವಾಗಿದೆ. ನಮಗೆ ನಾವೇ ಸಾವಿಗೆ ಆಹ್ವಾನ ಕೊಟ್ಟಂತೆ, ಪ್ರತಿ ಶೇ.100 ಕ್ಯಾನ್ಸರ್ ಪ್ರಕರಣಗಳಲ್ಲಿ 40 ತಂಬಾಕು ಸೇವನೆಗೆ ಸಂಬಂಧಿಸಿದಾಗಿರುತ್ತವೆ. ಶೇ.95 ತಂಬಾಕು ಸೇವನೆ ಬಾಯಿ ಕ್ಯಾನ್ಸರ್‌ಗೆ ಕಾರಣವಾಗಿದೆ. ಗರ್ಭಿಣಿಯರು ಬೇರೆಯವರು ಬಿಟ್ಟ ಹೊಗೆ ಸೇವಿಸಿದರೆ ಗರ್ಭಸ್ಥ ಶಿಶುವಿಗೆ ಕ್ಯಾನ್ಸರ್ ತಗಲುವುದು ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ, ಶಿಕ್ಷಣ ಚಿಂತಕ ನಿಜಲಿಂಗಪ್ಪ ಬಸೇಗಣ್ಣಿ ಮಾತನಾಡಿ, ತಂಬಾಕು ಅನೇಕ ಕಾಯಿಲೆಗಳ ಮೂಲ. ಆರೋಗ್ಯ ಪೂರ್ಣ ಸಮಾಜ ನಿರ್ಮಾಣವು ಸರ್ಕಾರದ್ದು ಮಾತ್ರವಲ್ಲ, ಪ್ರತಿಯೊಬ್ಬರ ಕರ್ತವ್ಯವಾಗಿದೆ. ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಬೇಕು. ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸರ್ಕಾರ ಇಚ್ಛಾಶಕ್ತಿ ತೋರಬೇಕು. ದುಶ್ಚಟಗಳಿಂದ ಅನೇಕ ಕುಟುಂಬಗಳು ಹಾಳಾಗಿವೆ. ಧರ್ಮಸ್ಥಳ ಸಂಸ್ಥೆಯ 10 ಹಲವಾರು ರಚನಾತ್ಮಕ ಜನಪರ ಯೋಜನೆಗಳು ಒಂದು ವರವಾಗಿವೆ ಎಂದರು.

ಕೃಷಿ ಮೇಲ್ವಿಚಾರಕ ರವಿಚಂದ್ರ ಮಡಿವಾಳರ ಮಾತನಾಡಿ, ಚಟಗಳನ್ನು ಬೆಳೆಸಿಕೊಳ್ಳಬಾರದು. ಅದು ವ್ಯಸನವಾಗಿ ಪರಿವರ್ತನೆ ಹೊಂದಿದರೆ ಬದುಕು ಸರ್ವನಾಶದ ಅಂಚಿಗೆ ಬಂದು ತಲುಪುವುದು. ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮವಿದೆ. ಸಂಸ್ಥೆಯ ಅನೇಕ ಸಮಾಜಮುಖಿ ಯೋಜನೆಗಳು ಗ್ರಾಮೀಣ ಜನರ ಬದುಕಲ್ಲಿ ಬೆಳಕು, ಸ್ವಾವಲಂಬನೆ ಮೂಡಿಸುವೆ ಎಂದರು.


ಒಕ್ಕೂಟದ ಅಧ್ಯಕ್ಷೆ ನಾಗಮ್ಮ ಕಟ್ಟಿಮನಿ ಅಧ್ಯಕ್ಷತೆ ವಹಿಸಿದ್ದರು. 40ಕ್ಕೂ ಅಧಿಕ ಸ್ವಸಹಾಯ ಸಂಘದ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಶಂಕ್ರಮ್ಮ ಹಿರೇಮಠ, ಶೈಲಜಾ ಹಿರೇಮಠ ಪ್ರಾರ್ಥಿಸಿದರು. ಸೇವಾ ಪ್ರತಿನಿಧಿ ಲಲಿತ ಬೆಳವಿಗಿ ಸ್ವಾಗತಿಸಿದರು. ಮೇಲ್ವಿಚಾರಕ ರವಿ ಕವಟಕೊಪ್ಪ ನಿರೂಪಿಸಿದರು. ಸೇವಾ ಪ್ರತಿನಿಧಿ ನಿಂಗಪ್ಪ ಕಮಾಟರ ವಂದಿಸಿದರು.

ವ್ಯಕ್ತಿ ಸಂಸ್ಕಾರವಂತನಾಗಲು ಶಿಕ್ಷಣ ಅವಶ್ಯ

ಕುಮಟಾ: ಇಲ್ಲಿನ ಪ್ರಗತಿ ವಿದ್ಯಾಲಯದಲ್ಲಿ 2026–27ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಾರಂಭೋತ್ಸವವು ಸಂಭ್ರಮದಿಂದ ನೆರವೇರಿತು. ಹೊಸ ಶೈಕ್ಷಣಿಕ ವರ್ಷದ ಮೊದಲ ದಿನ ಶಾಲಾ ಆವರಣ ವಿದ್ಯಾರ್ಥಿಗಳ ಉತ್ಸಾಹಭರಿತ ಸಂಭ್ರಮಕ್ಕೆ ಸಾಕ್ಷಿಯಾಯಿತು. ಶಾಲಾ ಅಂಗಳದತ್ತ ಆಗಮಿಸಿದ ವಿದ್ಯಾರ್ಥಿಗಳನ್ನು ಹೂಗುಚ್ಛ ನೀಡಿ ಸ್ವಾಗತಿಸಲಾಯಿತು.

ಶೈಕ್ಷಣಿಕ ವರ್ಷದ ಶುಭಾರಂಭದ ಅಂಗವಾಗಿ ಸರಸ್ವತಿ ಪೂಜೆ, ಗಣಹವನ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮ ಶ್ರದ್ಧಾ–ಭಕ್ತಿಯಿಂದ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭವು ವಿಶೇಷ ಮೆರುಗು ಪಡೆದುಕೊಂಡಿತು. 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಅತ್ಯುತ್ತಮ ಅಂಕಗಳಿಸಿ ರ‍್ಯಾಂಕ್ ಪಡೆದ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿಲಾಯಿತು. ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಾಮವೇದದ ಹಿರಿಯ ವಿದ್ವಾಂಸ ವೇದಮೂರ್ತಿ ಶ್ರೀ ಸುಬ್ರಹ್ಮಣ್ಯ ಭಟ್ಟ, ಶಿಕ್ಷಣವು ವ್ಯಕ್ತಿಯನ್ನು ಸಂಸ್ಕಾರವಂತನನ್ನಾಗಿ ರೂಪಿಸುವ ಶಕ್ತಿಯಾಗಿದೆ. ಉತ್ತಮ ಪರಿಸರದಲ್ಲಿ ಬೆಳೆದ ಮಕ್ಕಳು ಸಹಜವಾಗಿಯೇ ಉತ್ತಮ ಸಂಸ್ಕಾರ ರೂಢಿಸಿಕೊಳ್ಳುತ್ತಾರೆ. ಈ ಶಾಲೆಯ ಮಕ್ಕಳು ಸಾಧನೆಯ ಮೂಲಕ ಉತ್ತಮ ಮಾದರಿ ನಿರ್ಮಿಸಿದ್ದಾರೆ ಎಂದರು.



ರಾಜ್ಯ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಜಿ.ಕೆ. ಭಟ್ಟ ವಿದ್ಯಾನಿಕೇತನ ಸಂಸ್ಥೆಯ ಕಾರ್ಯಾಧ್ಯಕ್ಷ ಆರ್.ಜಿ. ಭಟ್ಟ ಮಾತನಾಡಿದರು. ಪೂರ್ವ ವಿದ್ಯಾರ್ಥಿ ಸಂಘದ ವತಿಯಿಂದ ದೇಣಿಗೆಯಾಗಿ ಸಂಗ್ರಹಿಸಿದ ನಿಧಿಯಿಂದ ಶಾಲೆಗೆ ಸ್ಮಾರ್ಟ್ ಟಿ.ವಿ.ಯನ್ನು ಕೊಡುಗೆಯಾಗಿ ನೀಡಲಾಯಿತು. ಜೊತೆಗೆ 'ಭಾರತ ಸಂಸ್ಕೃತಿ ಪ್ರಕಾಶನ' ಬೆಂಗಳೂರು ವತಿಯಿಂದ ಸನಾತನ ಸಂಸ್ಕೃತಿಗೆ ಸಂಬಂಧಿಸಿದ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸಲಾಯಿತು. ಶಿಕ್ಷಣ ವಿಭಾಗದ ಸಂಚಾಲಕ ಟಿ.ಆರ್. ಜೋಶಿ, ಕಾರ್ಯದರ್ಶಿ ಗಣೇಶ ಭಟ್ಟ, ಪ್ರಾ. ಎಂ.ಜಿ. ಭಟ್ಟ ಹಾಗೂ ವಿವಿಧ ವಿಭಾಗಗಳ ಮುಖ್ಯಾಧ್ಯಾಪಕರು ಉಪಸ್ಥಿತರಿದ್ದರು. ವಿದ್ಯಾನಿಕೇತನ ಸಂಸ್ಥೆಯ ಸದಸ್ಯರು, ಶಿಕ್ಷಕರು, ಪಾಲಕರು, ಊರ ನಾಗರಿಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು. ಟಿ.ಆರ್. ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಗಣೇಶ ಭಟ್ಟ ವಂದಿಸಿದರು. ಶಿಕ್ಷಕ ರಾಘವೇಂದ್ರ ಭಟ್ಟ ಕಾರ್ಯಕ್ರಮ ನಿರೂಪಿಸಿದರು.

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ರಾಯಬಾಗ: ವಿದ್ಯುತ್ ವಿತರಣಾ ಕೇಂದ್ರದಲ್ಲಿ ಉಪಕರಣಗಳ ಮತ್ತು ಶಕ್ತಿ ಪರಿವರ್ತಕಗಳ ತ್ರೈ ಮಾಸಿಕ ನಿರ್ವಹಣೆ ಕಾರ್ಯವನ್ನು ಕೈಗೊಳ್ಳುವುದರಿಂದ ತಾಲೂಕಿನ ನಾಗರಾಳ, ಭಿರಡಿ, ಬಾವಚಿ, ರೈಲ್ವೆ ಸ್ಟೇಷನ, ದೇವನಕಟ್ಟಿ, ರಾಯಬಾಗ ಪಟ್ಟಣ, ಹಣಬರಟ್ಟಿ, ಮೇಖಳಿ, ಲಕ್ಷ್ಮೀ ಗುಡಿ, ಜಲಾಲಾಪುರ, ರಾಯಬಾಗ ಗ್ರಾಮೀಣ, ಸಂತುಬಾಯಿಗುಡಿ, ಮಾವಿನಹೊಂಡಾ, ಬ್ಯಾಕೂಡ ರೈಲ್ವೆ ಗೇಟ, ಹುಬ್ಬರವಾಡಿ, ಬೂದಿಹಾಳ ಮತ್ತು ಮಾಡಲಗಿ ಗ್ರಾಮಗಳಿಗೆ ಮೇ 31ರಂದು ಬೆಳ್ಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯವಾಗಲಿದೆ ಎಂದು ಹೆಸ್ಕಾಂ ಆಧಿಕಾರಿ ವೈ.ಎಸ್. ಸನಮುನಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿಶಾ ತ್ರೈಮಾಸಿಕ ಸಭೆ ಜೂನ್ 2 ರಂದು

ಬೆಳಗಾವಿ: 2026-27ನೇ ಸಾಲಿನ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ತ್ರೈಮಾಸಿಕ ಸಭೆಯನ್ನು ಸುವರ್ಣ ವಿಧಾನ ಸೌಧ, ಕೊಠಡಿ ಸಂಖ್ಯೆ 354, ಕಾನರನ್ಸ್ ಹಾಲ್‌ನಲ್ಲಿ ಜೂನ್ 2 ರಂದು ಬೆಳಿಗ್ಗೆ 11.30 ಗಂಟೆಗೆ ಜಿಲ್ಲಾ ಮಟ್ಟದ ಅಭಿವೃದ್ಧಿ ಸಮನ್ವಯ ಮತ್ತು ಮೇಲ್ವಿಚಾರಣಾ ಸಮಿತಿ (ದಿಶಾ) ಸಭೆಯ ಅಧ್ಯಕ್ಷರು ಹಾಗೂ ಲೋಕಸಭಾ ಸದಸ್ಯರಾದ ಜಗದೀಶ ಶೆಟ್ಟರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಕಾರಿ ರಾಹುಲ್ ಶಿಂಧೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾನುವಾರುಗಳ ಕೃತಕ ಗರ್ಭಧಾರಣೆ ತಡೆ

ಬೆಳಗಾವಿ: ಜಿಲ್ಲೆಯಲ್ಲಿ ಜಾನುವಾರುಗಳ ಕೃತಕ ಗರ್ಭಧಾರಣೆ ಸೇವೆಗಳನ್ನು ಇಲಾಖೆಯ ಹೊರತಾಗಿ ಕೆಲವು ಖಾಸಗಿ ಹಾಗೂ ಅನಧಿಕೃತ ಕಾರ್ಯಕರ್ತರು ಮನೆ ಬಾಗಿಲು ಸೇವೆಯ ರೂಪದಲ್ಲಿ ನೀಡುತ್ತಿರುವ ಬಗ್ಗೆ ಮಾಹಿತಿ ದೊರೆತಿದ್ದು, ಕರ್ನಾಟಕ ರಾಜ್ಯ ಪಶು ಸಂತತಿ ಸುಧಾರಣಾ ನೀತಿಗೆ ವಿರುದ್ಧವಾಗಿ ಅನಧಿಕೃತ ಮೂಲಗಳಿಂದ ಹಾಗೂ ರಾಜ್ಯದ ಹೊರಗಿನಿಂದ ವೀರ್ಯ ಸಂಗ್ರಹಿಸಿ ಬಳಕೆ ಮಾಡುತ್ತಿರುವುದು, ವೀರ್ಯ ಮಾರಾಟ ಹಾಗೂ ದ್ರವಸಾರಜನಕ ಬಳಕೆ, ಪೂರೈಕೆ ನಡೆಯುತ್ತಿರುವ ಬಗ್ಗೆ ವರದಿಗಳು ಬಂದಿವೆ.

ಕೃತಕ ಗರ್ಭಧಾರಣೆ ಕಾರ್ಯಕ್ರಮವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಮುಖ ಪಶು ಸಂತತಿ ಸುಧಾರಣಾ ಕಾರ್ಯಕ್ರಮವಾಗಿದ್ದು, ಉತ್ತಮ ತಳಿ ಅಭಿವೃದ್ಧಿ, ಹಾಲು ಉತ್ಪಾದನೆ ಹೆಚ್ಚಳ ಹಾಗೂ ರೈತರ ಆದಾಯ ವೃದ್ಧಿಗೆ ಮಹತ್ವದ ಪಾತ್ರವಹಿಸುತ್ತದೆ. ಆದರೆ, ಅನಧಿಕೃತ ವೀರ್ಯ ಬಳಕೆ ಮತ್ತು ನಿಯಂತ್ರಣವಿಲ್ಲದ ಸೇವೆಗಳು ರಾಜ್ಯದ ಸಂತತಿ ಸುಧಾರಣಾ ನೀತಿಯ ಉದ್ದೇಶಗಳನ್ನು ಹಾನಿಗೊಳಿಸಬಹುದಾಗಿದೆ. ಅನಧಿಕೃತವಾಗಿ ಸೇವೆ ನೀಡುವುದು, ನಿಯಮ ಬಾಹಿರವಾಗಿ ವೀರ್ಯ ಅಥವಾ ದ್ರವ ಸಾರಜನಕ ಮಾರಾಟ, ಬಳಕೆ ಮಾಡುವುದು ಕಂಡು ಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

ರೈತರು ತಮ್ಮ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಸೇವೆ ಪಡೆಯುವಾಗ ಮಾನ್ಯತೆ ಪಡೆದ ಪಶು ವೈದ್ಯ ಸಂಸ್ಥೆಗಳು ಅಥವಾ ನೋಂದಾಯಿತ ಕಾರ್ಯಕರ್ತರ ಸೇವೆಯನ್ನು ಮಾತ್ರ ಬಳಸುವಂತೆ ಹಾಗೂ ಅನುಮಾನಾಸ್ಪದ ಚಟುವಟಿಕೆಗಳ ಬಗ್ಗೆ ಸಮೀಪದ ಪಶು ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡುವಂತೆ ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯು ಸೂಚಿಸಿದೆ ಎಂದು ಬೆಳಗಾವಿ ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಉಪ ನಿರ್ದೇಶಕರು(ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಳಗಾವಿ : ಭಾರತ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ ನವದೆಹಲಿ ಇವರು ವಿಶಿಷ್ಟಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ, ಸಂಸ್ಥೆಗಳಿಗೆ 2025ನೇ ಸಾಲಿಗೆ ರಾಷ್ಟ್ರ ಪ್ರಶಸ್ತಿಯನ್ನು ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಅರ್ಹರು ಮೇ 15 ರಿಂದ ಜುಲೈ 31ರವರೆಗೆ ಅರ್ಜಿ ಸಲ್ಲಿಸಬಹುದಾಗಿದ್ದು, ಜಿಲ್ಲೆಯ ವಿಶಿಷ್ಟಚೇತನರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ, ಸಂಸ್ಥೆಗಳು ನಿಗದಿತ ಅರ್ಜಿ ನಮೂನೆಗಳಲ್ಲಿ, ಆನ್ಲೈನ್ ಮೂಲಕ www.depwd.gov.inಅಥವಾ www.awards.gov.in ವೆಬ್‌ಸೈಟ್ ದಲ್ಲಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಭೌತಿಕ ಅರ್ಜಿಗಳನ್ನು , ನಾಮ ನಿರ್ದೇಶನಗಳನ್ನು ಸ್ವೀಕರಿಸಲಾಗುವುದಿಲ್ಲ, ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಗಾಗಿ ವೆಬ್ಸೈಟ್ ಡಿಡಿಡಿ.ಛಿಛಿಟಡಿಛಿ.ಜಟಡ.ಜ್ಞಿ ಅಥವಾ www.awards.gov.inಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜು ಆಯೋಜಿಸಿದ್ದ ರಾಷ್ಟಮಟ್ಟದ ಕಾನೂನು ಉತ್ಸವ ಲೆಕ್ಸ್ ಅಲ್ಟಿಮಾದಲ್ಲಿ ಕೆಎಲ್‌ಎಸ್ ರಾಜಾ ಲಖಮಗೌಡ ಕಾನೂನು ಕಾಲೇಜಿನ ವಿದ್ಯಾರ್ಥಿನಿ ನಿಹಾರಿಕಾ ಮಿಶ್ರಾ ಅವರು ಅತ್ಯುತ್ತಮ ಮಹಿಳಾ ಮೂಟರ್ ಪ್ರಶಸ್ತಿಯನ್ನು ಗೆದ್ದರು. ಕಾರ್ಯಕ್ರಮದಲ್ಲಿ 28 ಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು.

ಸ್ವಚ್ಛತೆ, ಶಿಕ್ಷಣದ ಬಗ್ಗೆ ನಾಟಕದ ಮೂಲಕ ಜಾಗೃತಿ

ನೇಸರಗಿ: ಸಮೀಪದ ವನ್ನೂರ ಗ್ರಾಮದಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಕಲಾ ತಂಡದ ಸದಸ್ಯರ ವತಿಯಿಂದ ಶ್ರೀ ಸಂಕಲ್ಪ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಬೀದಿ ನಾಟಕ ಪ್ರದರ್ಶನಗೊಂಡಿತು.

ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ, ಕಲಾ ತಂಡದವರಿಂದ ಸ್ವಚ್ಚತೆ ,ಪರಿಸರ ರಕ್ಷಣೆ ,ಶಿಕ್ಷಣದ ಬಗ್ಗೆ ,ಹೆಣ್ಣು ಗಂಡು ತಾರತಮ್ಯ ,ಸುಜ್ಞಾನ ನಿಧಿ ಶಿಷ್ಯವೇತನ, ಜ್ಞಾನ ದೀಪ ಶಿಕ್ಷಕರ ವದಗನೆ ,ವಾತ್ಸಲ್ಯ ಕಾರ್ಯಕ್ರಮ, ವರದಕ್ಷಿಣೆ ಕಿರುಕುಳ ಮುಂತಾದ ಯೋಜನೆಯ ಹಲವಾರು ಕಾರ್ಯ ಕ್ರಮಗಳ ಬಗ್ಗೆ ಬಾಲ್ಯ ವಿವಾಹ,ಹಾಗೂ ಶೌಚಾಲಯ ಬಳಕೆ ಬಗ್ಗೆ ನಾಟಕದ ಮುಖಾಂತರ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಮಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಗ್ರಾ ಪಂ ಅಧ್ಯಕ್ಷ ಮಂಜುಳಾ ಪಾಟೀಲ, ಶ್ರೀ ವೀರಭದ್ರೇಶ್ವರ ದೇವಸ್ಥಾನ ಕಮಿಟಿ ಅಧ್ಯಕ್ಷರಾದ ಈರಪ್ಪ ದೇಮಟ್ಟಿ, ಸರ್ಕಾರಿ ವೈದ್ಯಾಧಿಕಾರಿಗಳಾದ ಎಂ. ಎನ್. ಫಿರಜಾದೆ, ತಾಲೂಕಿನ ಜ್ಞಾನವಿಕಾಸ ಸಮನ್ವಯಾಧಿಕಾರಿ ಶೈಲಾ ಚಿಕ್ಕಣ್ಣವರ, ವಲಯದ ಮೇಲ್ವಿಚಾರಕರಾದ ಪರಶುರಾಮ, ಕಲಾ ತಂಡದ ಅಧ್ಯಕ್ಷರಾದ ಎಸ್. ಎಸ್. ಹಿರೇಮಠ , ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಕಲಾ ತಂಡದ ಸದಸ್ಯರು , ಸೇವಾ ಪ್ರತಿನಿಧಿ ಆಶಾ ಸತ್ಯಮ್ಮ ,ವಿ ಎಲ್ ಇ ಮೀನಾಕ್ಷಿ ಹಾಗೂ ಕೇಂದ್ರದ ಸದಸ್ಯರು ಹಾಗೂ ಊರಿನ ಗಣ್ಯರು ಉಪಸ್ಥಿತರಿದ್ದರು.



ನೇಸರಗಿ: ಸಮೀಪದ ವನ್ನೂರ ಗ್ರಾಮದಲ್ಲಿ ಶ್ರೀ ಧರ್ಮಸ್ಥಳ ಗ್ರಾಮೀಣಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಕಲಾ ತಂಡದ ಸದಸ್ಯರ ವತಿಯಿಂದ ಶ್ರೀ ಸಂಕಲ್ಪ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಬೀದಿ ನಾಟಕ ಪ್ರದರ್ಶನಗೊಂಡಿತು.

ಸೋಮವಾರದಿಂದ ಬೆಳಗಾವಿ ಜಿಲ್ಲಾದ್ಯಂತ ಆರಂಭ

ಶಾಲಾ ಪ್ರಾರಂಭೋತ್ಸವಕ್ಕೆ ಸಕಲ ಸಿದ್ಧತೆ

ಬೆಳಗಾವಿ/ಯರಗಟ್ಟಿ : 2026 - 27ನೇ ಸಾಲಿನ ಶಾಲೆಗಳು ಮೇ 29 ರಿಂದ (ಶುಕ್ರವಾರ) ಪುನರಾರಂಭಗೊಳ್ಳಲಿವೆ. ಬೇಸಿಗೆ ರಜೆಯ ಮಜಾ ಬಳಿಕ ಶಾಲೆಗೆ ಆಗಮಿಸುತ್ತಿರುವ ಮಕ್ಕಳ ಸ್ವಾಗತಕ್ಕೆ ಶಾಲೆಗಳಲ್ಲಿ ಸಜ್ಜಾಗಿವೆ. ಇನ್ನೂ ಈ ವರ್ಷ 245 ದಿನಗಳು ಶಾಲೆ ನಡೆಯಲಿದ್ದು, 119 ದಿನ ರಜೆ ಇರಲಿದೆ.

ಈ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆಯು ಶೈಕ್ಷಣಿಕ ಕ್ಯಾಲೆಂಡರ್‌ನಲ್ಲಿ ಮಾಹಿತಿ ಪ್ರಕಟಿಸಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ ಶಾಲಾ ಪ್ರಾರಂಭೋತ್ಸವವನ್ನು ಹಬ್ಬದಂತೆ ಆಚರಿಸಲು ಸಿದ್ಧತೆ ಕೈಗೊಂಡಿದೆ. ಹಬ್ಬದ ವಾತಾವರಣದಡಿ ಶೈಕ್ಷಣಿಕ ಕಾರ್ಯಗಳಿಗೆ ಚ್ಯುತಿ ಬಾರದಂತೆ ಶಾಲೆ ಆರಂಭಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸೂಚಿಸಿದ್ದಾರೆ.

ದಾಖಿಲಾತಿ ಹಬ್ಬ ಶಾಲೆಗಳು ಆರಂಭವಾದ ಮರುದಿನವೇ, ಅಂದರೆ ಮೇ 30 ರಿಂದ ರಾಜ್ಯಾದ್ಯಂತ ಶಾಲಾ 'ದಾಖಿಲಾತಿ ಹಬ್ಬ'ವನ್ನು ಸಡಗರದಿಂದ ಆಚರಿಸಲಾಗುವುದು. ಜೂನ್ 30ರ ಒಳಗೆ ಎಲ್ಲಾ ದಾಖಲಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಗಡುವು ನೀಡಲಾಗಿದೆ.



2026-27 ನೇ ಸಾಲಿನ ಶಾಲೆ ಆರಂಭವಾಗಿದೆ ಮತ್ತು ಪ್ರವೇಶಗಳು ಸಹ ಪ್ರಾರಂಭವಾಗಿವೆ ಈಗಾಗಲೇ ಮಕ್ಕಳಿಗೆ ಪಠ್ಯಪುಸ್ತಕಗಳು ಮತ್ತು ಬಟ್ಟೆ ಬಂದಿದೆ. ತಾವೆಲ್ಲರೂ ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡೆದುಕೊಂಡು ಸರ್ಕಾರಿ ಶಾಲೆಗೆ ಪ್ರವೇಶ ಮಾಡಬೇಕು. ಸರಕಾರದ ಸೌಲ್ಯಭವನ್ನು ಪಡೆದುಕೊಳ್ಳಬೇಕು.

■ ವಿಶ್ವಾಸ ವೈದ್ಯ, ಶಾಸಕರು ಸವದತ್ತಿ

ಉಚಿತ ಸಮವಸ್ತ್ರ ಮತ್ತು ಪಠ್ಯಪುಸ್ತಕ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತಲಾ 2 ಜೊತೆ ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ.

■ ಎ. ಎ. ಕಾಜಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಯರಗಟ್ಟಿ-ಸವದತ್ತಿ



ಗೋಕಾಕ: ಸತೀಶ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಪದವಿಯೊಂದಿಗೆ ಉನ್ನತ ಹುದ್ದೆ ನೀಡುವಂತೆ ಇಲ್ಲಿಯ ಭೋವಿ ವಡ್ಡರ ವೇಲ್ಫೇರ್ ಸೊಸೈಟಿಯವರು ನಗರದ ಲಕ್ಷ್ಮೀದೇವಿಗೆ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಲಕ್ಷ್ಮಣ ಗಾಡಿವಡ್ಡರ, ಹನಮಂತ ಸಾಗರ, ಭರಮಣ್ಣ ಗಾಡಿವಡ್ಡರ, ಕಲ್ಲೋಳೆಪ್ಪ ಗಾಡಿವಡ್ಡರ, ಶೆಟ್ಟೆಪ್ಪ ಗಾಡಿವಡ್ಡರ, ಪರಶುರಾಮ ಗಾಡಿವಡ್ಡರ, ಹನಮಂತ ಮನವಡ್ಡರ, ಸಂಜು ಬಂಡಿವಡ್ಡರ, ವಿವೇಕ ಜತ್ತಿ ಇದ್ದರು.

ಕನಿಷ್ಠ ವೇತನ, ವಿವಿಧ ಬೇಡಿಕೆ ಈಡೇರಿಸಲು ಆಗ್ರಹ

ಬೆಳಗಾವಿ: ವೈಜ್ಞಾನಿಕವಾಗಿ ಎಲ್ಲಾ ಕಾರ್ಮಿಕರಿಗೂ ಕನಿಷ್ಠ ವೇತನ ನಿಗದಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಹಾಗೂ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ವತಿಯಿಂದ ನಗರದಲ್ಲಿ ಶನಿವಾರ ಪ್ರತಿಭಟಿಸಿ, ಜಿಲ್ಲಾಡಳಿತದ ಮೂಲಕ ರಾಜ್ಯ ಸರಕಾರಕ್ಕೆ ಮನವಿ ರವಾನಿಸಲಾಯಿತು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಉದ್ಯಾನದಿಂದ ಜಿಲ್ಲಾಧಿಕಾರಿ ಕಚೇರಿ ವರಗೆ ಬೃಹತ್ ಮೆರವಣಿಗೆ ಮೂಲಕ ತೆರಳಿದ ನೂರಾರು ಮಹಿಳೆಯರು, ರಾಜ್ಯ ಹಾಗೂ ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕರಿಗೆ ಕನಿಷ್ಠ 36 ಸಾವಿರ ರೂ. ವೇತನ ನಿಗದಿಪಡಿಸಬೇಕು. ಕಾರ್ಮಿಕರಿಗೆ ಮಾರಕವಾದ ಕೇಂದ್ರ ಸರ್ಕಾರದ ನಾಲ್ಕು ಸಂಹಿತೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬಾರದು. ಗುತ್ತಿಗೆಪದ್ಧತಿ ರದ್ದುಪಡಿಸಿ,ಕಾರ್ಮಿಕರನ್ನುಕಾಯಂಮಾತಿಗೊಳಿಸಬೇಕು. ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಿಬ್ಬಂದಿಯನ್ನು ಸರಕಾರಿ ನೌಕರರೆಂದು ಘೋಷಿಸಬೇಕು. ಎಲ್ಲಾ ಅಂಗನವಾಡಿ ನೌಕರರನ್ನು ಕನಿಷ್ಠ ಕೂಲಿ ಕಾಯ್ದೆ ಯ ವ್ಯಾಪ್ತಿಗೆ ಒಳಪಡಿಸಿ, ಇಎಸ್ಐ, ಪಿಎಫ್ ಕೊಡಬೇಕು. ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು. ಚುನಾವಣೆ ಕೆಲಸಗಳಿಂದ ಅಂಗನವಾಡಿ ನೌಕರರನ್ನು ಬಿಡುಗಡೆ ಮಾಡಬೇಕು. ಕನಿಷ್ಠ ವೇತನ ನಿಗದಿ ಮಾಡಬೇಕು. ಬಿಸಿ ಅಡುಗೆ ನೌಕರರನ್ನು ಡಿ ದರ್ಜೆಯ ನೌಕರನ್ನಾಗಿ ಪರಿಗಣಿಸಬೇಕು. ಬಿಸಿಯೂಟ ನೌಕರರಿಗೆ 10 ಸಾವಿರ ನಿವೃತ್ತಿ ವೇತನ ಒದಗಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಂದಾ ನೇವಗಿ, ಜಿ. ಎಮ್. ಜೇನೆಖಾನ, ದೀಲಿಪ್ ವಾರ್ಕೆ,ದೊಡ್ಡವ್ವ ಪೂಜಾರಿ, ಚನ್ನಮ್ಮ ಗಡ್ಕರಿ, ಗೋದಾವರಿ ರಾಜಾಪುರೆ, ಸರಸ್ವತಿ ಮಾಳಶೆಟ್ಟಿ, ಮಂಜುಳಾ ಮಾನೆ, ಸುಮಿತ್ರಾ ಕಮತಗಿ, ಪಾರ್ವತಿ ಕೌಜಲಗಿ, ಸುನಿತಾ ಕರಜಿಗಿ, ಭಾರತಿ ಜೋಗನ್ನವರ್ ಸೇರಿದಂತೆ ನೂರಾರು ಮಹಿಳೆಯರು ಪಾಲ್ಗೊಂಡಿದ್ದರು.




ಜನರಲ್ಲಿ ಅರಿವು ಮೂಡಿಸಿದ ಬೀದಿ ನಾಟಕ ಪ್ರದರ್ಶನ

ಚನ್ನಮ್ಮನ ಕಿತ್ತೂರು: ಕಿತ್ತೂರು ತಾಲೂಕಿನ ಕಾದ್ರೊಳ್ಳಿ ವಲಯದ ದೇವರಶೀಗಳ್ಳಿ ಗ್ರಾಮದಲ್ಲಿ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಬೀದಿ ನಾಟಕ ಕಾರ್ಯಕ್ರಮವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಯೋಗೀಶ್ ಅವರು ದೀಪ ಬೆಳಗಿಸಿ ಹಾಗೂ ತಮಟೆ ಬಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಕಾರ್ಯಕ್ರಮಗಳ ಬಗ್ಗೆ ಹಾಗೂ ಜ್ಞಾನ ವಿಕಾಸ ಕಾರ್ಯಕ್ರಮದ ಮಹತ್ವದ ಬಗ್ಗೆ ತಿಳಿಸಿದರು.

ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಕಲಾ ತಂಡದವರಿಂದ ಬೀದಿ ನಾಟಕದ ಮೂಲಕ ಸ್ವಚ್ಚತೆ, ಪರಿಸರ ರಕ್ಷಣೆ, ಶಿಕ್ಷಣದ ಬಗ್ಗೆ ಹೆಣ್ಣು ಗಂಡು ತಾರತಮ್ಯ, ಸುಜ್ಞಾನ ನಿಧಿ ಶಿಷ್ಯವೇತನ, ಜ್ಞಾನ ದೀಪ ಶಿಕ್ಷಕರ ವದಗನೆ, ವಾತ್ಸಲ್ಯ ಕಾರ್ಯಕ್ರಮ, ವರದಕ್ಷಿಣೆ ಕಿರುಕುಳ ಮುಂತಾದ ಯೋಜನೆಯ ಹಲವಾರು ಕಾರ್ಯಕ್ರಮಗಳ ಬಗ್ಗೆ ಬಾಲ್ಯ ವಿವಾಹ, ಹಾಗೂ ಶೌಚಾಲಯ ಬಳಕೆ ಬಗ್ಗೆ ನಾಟಕದ ಮುಖಾಂತರ ಜನರಲ್ಲಿ ಅರಿವು ಮೂಡಿಸುವ ಕಾರ್ಯ ಕ್ರಮ ಮಾಡಿದರು.

ಕಲಾ ತಂಡದ ಅಧ್ಯಕ್ಷ ಎಸ್ ಎಸ್ ಹಿರೇಮಠ ಭಸ್ತಿ ಸಭಾ ಭವನದ ಕಮಿಟಿಯ ಅಧ್ಯಕ್ಷ ನೇಮಚಂದ್ರ, ಸದಸ್ಯರುಗಳಾದ ಅಶೋಕ, ಭದನೂರು, ರುದ್ರಪ್ಪ ಬೆಟಗೇರಿ, ಅಶೋಕ್ ಬೆಂಡಿಗೇರಿ ವಲಯದ ಮೇಲ್ವಿಚಾರಕಿ ಸವಿತಾ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಸವಿತಾ, ಯುವಜನ ಹಾಗೂ ಸಾಂಸ್ಕೃತಿಕ ಅಭಿವೃದ್ಧಿ ಕೇಂದ್ರ ಕಲಾ ತಂಡದ ಸದಸ್ಯರು, ಸೇವಾ ಪ್ರತಿನಿಧಿ ಭಾರತಿ, ರಕ್ಷಿತಾ, ಕೇಂದ್ರದ ಸದಸ್ಯರು ಹಾಗೂ ಊರಿನ ಗಣ್ಯರು ಉಪಸ್ಥಿತರಿದ್ದರು.



ಕನಿಷ್ಠ ವೇತನ ಹೆಚ್ಚಳ ವಿರೋಧಿಸಿ ಜೂ.1ರಂದು ಬೃಹತ್ ಪ್ರತಿಭಟನೆ

ಬೆಳಗಾವಿ: ಕರ್ನಾಟಕ ಸರ್ಕಾರ ಇತ್ತೀಚೆಗೆ ಘೋಷಿಸಿರುವ ಕನಿಷ್ಠ ವೇತನ ಹೆಚ್ಚಳದ ತಿದ್ದುಪಡಿ ಆದೇಶವನ್ನು ವಿರೋಧಿಸಿ ಬೆಳಗಾವಿಯ ವಿವಿಧ ವ್ಯಾಪಾರ ಮತ್ತು ಕೈಗಾರಿಕಾ ಸಂಘಟನೆಗಳು ಜೂನ್ 1ರಂದು ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಿವೆ.

ಬೆಳಗಾವಿ ನಗರದ ಉದ್ಯಮಬಾಗದ ಚೆಂಬರ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರೀಸ್ ಸಭಾಭವನದಲ್ಲಿ ನಡೆದ ಎಲ್ಲಾ ವ್ಯಾಪಾರ ಮತ್ತು ಕೈಗಾರಿಕಾ ಸಂಘಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಜಂಟಿ ಸಭೆಯಲ್ಲಿ ಈ ಕುರಿತು ಮಹತ್ವದ ನಿರ್ಧಾರ ಕೈಗೊಳ್ಳಲಾಗಿದ್ದು, ಸರ್ಕಾರದ ಕ್ರಮದ ವಿರುದ್ಧ ಜಿಲ್ಲಾಡಳಿತದ ಮೂಲಕ ಆಕ್ಷೇಪಣೆ ಸಲ್ಲಿಸಲು ನಿರ್ಧರಿಸಲಾಗಿದೆ.

ಜೂನ್ 1ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಚನ್ನಮ್ಮ ವೃತ್ತದ ಬಳಿ ಇರುವ ಕನ್ನಡ ಸಾಹಿತ್ಯ ಭವನದಲ್ಲಿ ಎಲ್ಲಾ ವ್ಯಾಪಾರಿಗಳು, ಉದ್ಯಮಿಗಳು ಹಾಗೂ ಸಂಘಟನೆಗಳ ಸದಸ್ಯರು ಒಗ್ಗೂಡಿ ಸಭೆ ನಡೆಸಲಿದ್ದಾರೆ. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಿದ್ದಾರೆ.



ಕನಿಷ್ಠ ವೇತನ ಹೆಚ್ಚಳದ ನಿರ್ಧಾರವನ್ನು ಮರುಪರಿಶೀಲಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ವಾಣಿಜ್ಯೋದ್ಯಮ ಸಂಘದ ಅಧ್ಯಕ್ಷ ಪ್ರಭಾಕರ ನಾಗರಮುನೋಳಿ ಮತ್ತು ಕಾರ್ಯದರ್ಶಿ ಸತೀಶ್ ಕುಲಕರ್ಣಿ ತಿಳಿಸಿದ್ದಾರೆ.

ಮುಟ್ಟಿನ ನೈರ್ಮಲ್ಯ, ಆರೋಗ್ಯದ ಬಗ್ಗೆ ಕಾಳಜಿವಹಿಸಿ

ಯಮಕನಮರಡಿ: ಋತುಸ್ರಾವ ಎನ್ನುವುದು ಪ್ರತಿಯೊಬ್ಬ ಮಹಿಳೆ ಮತ್ತು ಹದಿಹರೆಯದ ಹುಡುಗಿಯರ ಆರೋಗ್ಯ, ಘನತೆ ಮತ್ತು ಸುರಕ್ಷತೆಯ ಮೂಲಭೂತ ಅವಶ್ಯಕತೆಯಾಗಿದೆ. ಮುಟ್ಟಿನ ದಿನಗಳಲ್ಲಿ ಸೂಕ್ತ ಸ್ವಚ್ಚತೆ ಕಾಪಾಡಿಕೊಳ್ಳದಿದ್ದರೆ ಬ್ಯಾಕ್ಟೀರಿಯಾಗಳ ಉತ್ಪತ್ತಿ ಹೆಚ್ಚಾಗಿ ಗಂಭಿರ ಆರೋಗ್ಯ ಸಮಸ್ಯೆಗಳು ಹರಡುವ ಸಾಧ್ಯತೆ ಇದೆ ಎಂದು ಹಿಡಕಲ್ ಡ್ಯಾಂ ನ ಶಕ್ತಿ ಸದನದ ಸಲಹಾಗಾರರಾದ ಸುಗಂಧಾ ಅಳ್ಳಟ್ಟಿ ಅಭಿಪ್ರಾಯಪಟ್ಟರು.

ಜಾಗೃತಿ ಕಾರ್ಯಕ್ರಮ

ಮಹಿಳಾ ಕಲ್ಯಾಣ ಸಂಸ್ಥೆಯ ಶಕ್ತಿ ಸದನ ಹಾಗು ಗ್ರಾಮ ಪಂಚಾಯತಿ ಹೋಸಪೇಟ ಸಂಯುಕ್ತ ಆಶ್ರಯದಲ್ಲಿ ಋತು ನೈರ್ಮಲ್ಯ ದಿನಾಚರಣೆಯ ಅಂಗವಾಗಿ ಸಂಜೀವಿನಿ ಒಕ್ಕೂಟದ ಮಹಿಳೆಯರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಶಾಲಾ ಶಿಕ್ಷಕರಿಗೆ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಋತು ಚಕ್ರದ ಅವಧಿಯಲ್ಲಿ ದೈಹಿಕ ಹಾಗು ಮಾನಸಿಕ ಆರೋಗ್ಯವನ್ನು ಉತ್ತಮವಾಗಿಡಬೇಕು.



ಸಮತೋಲಿತ ಆಹಾರ ಪದ್ಧತಿಯನ್ನು ಅನುಸರಿಸಿ ಸದೃಢರಾಗಿರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ನೀಲಕಂಠ ಕುಲಕರ್ಣಿ, ಸ್ವ ಸಹಾಯ ಸಂಘದ ಎಂಬಿಕೆ ಪೂರ್ಣಿಮಾ ಜುಮಾಯಿ, ಮಹಾನಂದಾ ಗೋಕಾರ, ಪವಿತ್ರಾ ಗೋಕಾವಿ ಹಾಗೂ ಮಂದಾಕನಿ ಹಟ್ಟಿ, ಸಂಜೀವಿನಿ ಒಕ್ಕೂಟದ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ಶಾಸಕ ಆಸೀಫ್ ಸೇಠ್‌ಗೆ ಮಂತ್ರಿ ಸ್ಥಾನ ನೀಡಲು ಆಗ್ರಹ



ಬೆಳಗಾವಿ: ಶಾಸಕ ಆಸೀಫ್ ಸೇಠ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ದಲಿತ ಸಂಘಟನೆಯ ಮುಖಂಡ ಮಲ್ಲೇಶ ಚೌಗಲೇ ಹಾಗೂ ಬೆಂಲಿಗರು ಆಗ್ರಹಿಸಿದರು.

ಶನಿವಾರ ನಗರದ ಕನ್ನಡ ಸಾಹಿತ್ಯ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹಲವಾರು ದಶಕಗಳಿಂದ ಬೆಳಗಾವಿ ನಗರದದಿಂದ ಮಂತ್ರಿ ಸ್ಥಾನಕ್ಕೆ ಬೇಡಿಕೆ ಇದೆ. ಸರ್ಕಾರ ಬೆಳಗಾವಿಗೆ ಕನಿಷ್ಠ ನಾಲ್ಕೈದು ಜನರನ್ನು ಸಚಿವರನ್ನಾಗಿ ಮಾಡಬೇಕು. ಬೆಳಗಾವಿ ನಗರದಿಂದ ಶಾಸಕ ಆಸೀಫ್ ಸೇಠ್ ಅವರನ್ನು ಮಂತ್ರಿ ಮಾಡದಿದ್ದರೆ ಬೆಳಗಾವಿ ಹಾಗೂ ಬೆಂಗಳೂರಿನ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದರು.

ಈ ವೇಳೆ ದಲಿತ ಮುಖಂಡ ಮಲ್ಲೇಶ್ ಚೌಗಲೇ, ಕಾಂಗ್ರೆಸ್ ಮಹಿಳಾ ಹಾಗೂ ಪುರುಷ ಪದಾಧಿಕಾರಿಗಳು, ಕಾರ್ಯದರ್ಶಿಗಳು, ಸದಸ್ಯರು, ಸೇರಿದಂತೆ ಹಲವಾರು ಕಾರ್ಯಕರ್ತರು ಇದ್ದರು.

ಬೆಳಗಾವಿ ಗ್ರಾಮೀಣದಲ್ಲಿ ವಿಶೇಷ ಪೂಜೆ

ಬೆಳಗಾವಿ: ಸಚಿವ ಸತೀಶ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನದ ಜತೆಗೆ ಉಪಮುಖ್ಯಮಂತ್ರಿ ಹುದ್ದೆಯನ್ನೂ ನೀಡಬೇಕೆಂದು ಆಗ್ರಹಿಸಿ ಬೆಳಗಾವಿ ಗ್ರಾಮೀಣ ಹಿರೇ ಬಾಗೇವಾಡಿ ಗ್ರಾಮದಲ್ಲಿ ಅಭಿಮಾನಿಗಳು ವಿಶೇಷ ಪೂಜೆ ಸಲ್ಲಿಸಿದರು.

ಸತೀಶ ಜಾರಕಿಹೊಳಿಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

ಗ್ರಾಮದ ಪ್ರಸಿದ್ಧ ಘಡಿಬಸವೇಶ್ವರ ದೇವಸ್ಥಾನದಲ್ಲಿ ಪರಶುರಾಮ್ ಪೂಜೇರಿ ಅವರ ನೇತೃತ್ವದಲ್ಲಿ ಈ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸತೀಶ್ ಜಾರಕಿಹೊಳಿ ಅವರಿಗೆ ಉನ್ನತ ಜವಾಬ್ದಾರಿಗಳು ಸಿಗುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿ, ವಿಶೇಷ ಪೂಜೆ ಹಾಗೂ ಅರ್ಚನೆ ಮಾಡಿಸಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಗಂಗಪ್ಪ ಮಾಸ್ಮಡಿ, ಎಲ್ಲಪ್ಪ ಹಿತ್ತಲಮನಿ, ಚಂದು ತಳವಾರ, ಶಿವು ಮಡ್ಡಿರ್ಕ, ನಾಗರಾಜ್ ತಳವಾ, ದತ್ತು ಕೋಳಿಕೊಪ್ಪ, ಬಸವರಾಜ್ ಮುದುಗಿ, ಕಲ್ಲಪ್ಪ ತಳವಾರ, ಹಾಗೂ ಗ್ರಾಮದ ಪ್ರಮುಖರು ಸತೀಶ ಜಾರಕಿಹೊಳಿ ಅವರ ಅಭಿಮಾನಿಗಳು, ಬೆಂಬಲಿಗರು ಸೇರಿದಂತೆ ಇತರರು ಇದ್ದರು.



ಆರೋಗ್ಯ ತಪಾಸಣಾ ಶಿಬಿರ



ರಾಯಬಾಗ: ಆರ್‌ಬಿಎಸ್‌ಕೆ ತಂಡದಿಂದ ಆರೋಗ್ಯ ತಪಾಸಣಾ ಶಿಬಿರ ರಾಯಬಾಗ ತಾಲೂಕಿನ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ ತಂಡದಿಂದ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಈ ಸಂದರ್ಭದಲ್ಲಿ ಬಿಸಿಎಂ ವಸತಿ ನಿಲಯದಲ್ಲಿರುವ ಎಲ್ಲಾ ವಿದ್ಯಾರ್ಥಿನಿಯರ ಆರೋಗ್ಯ ತಪಾಸಣೆ ನಡೆಸಲಾಯಿತು. ವಿದ್ಯಾರ್ಥಿನಿಯರ ಸಾಮಾನ್ಯ ಆರೋಗ್ಯ, ದೈಹಿಕ ಬೆಳವಣಿಗೆ ಹಾಗೂ ಇತರೆ ಆರೋಗ್ಯ ಸಂಬಂಧಿತ ಸಮಸ್ಯೆಗಳ ಕುರಿತು ಪರಿಶೀಲನೆ ಮಾಡಲಾಯಿತು. ವಿದ್ಯಾರ್ಥಿನಿಯರಿಗೆ ಆರೋಗ್ಯದ ಮಹತ್ವ, ವೈಯಕ್ತಿಕ ಸ್ವಚ್ಚತೆ ಹಾಗೂ ಪೌಷ್ಟಿಕ ಆಹಾರದ ಬಗ್ಗೆ ಅರಿವು ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಕಲ್ಪನಾ ಕಾಂಬಳೆ, ವೈದ್ಯಾಧಿಕಾರಿಗಳಾದ ಡಾ ಭಾರತಿ ಮೋರ್ಡಿ, ಡಾ ಶಶಿಕಲಾ ಚೌಗಲಾ ಶೈಲಾ ಕಾಂಬಳೆ, ಕವಿತಾ ಶಿಂಗೆ, ಆರ್‌ಬಿಎಸ್ಕೆ ತಂಡದ ವೈದ್ಯರು, ಆರೋಗ್ಯ ಸಿಬ್ಬಂದಿ ಹಾಗೂ ವಸತಿ ನಿಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ನಿವೃತ್ತ ಶಿಕ್ಷಕ ಮಹಾದೇವ ಕಂಬಾರಗೆ ಸನ್ಮಾನ

ರಾಯಬಾಗ: ಸಾಮಾಜಿಕ ಕಾರ್ಯ ಮಾಡುವುದರ ಮೂಲಕ ನಿವೃತ್ತ ಜೀವನವನ್ನು ಕಳೆದು, ಮನುಷ್ಯ ಜನ್ಮ ಸಾರ್ಥಕಗೊಳಿಸಿಕೊಳ್ಳಬೇಕೆಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯ ರಾಯಬಾಗ ಕೇಂದ್ರ ಮುಖ್ಯಸ್ಥೆ ಬಿ.ಕೆ.ಪುಷ್ಪ ಅಕ್ಕನವರು ಹೇಳಿದರು.

ಶನಿವಾರ ಪಟ್ಟಣದ ಕರ್ನಾಟಕ ಪಬ್ಲಿಕ (ಸರ್ಕಾರಿ) ಶಾಲೆಯು ಸಹ ಶಿಕ್ಷಕ ಮಹಾದೇವ ಕಂಬಾರ ಅವರ ಸೇವಾ ನಿವೃತ್ತಿ ಹಿನ್ನೆಲೆಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ನದಿ ಇಂಗಳಗಾಂವ ಮುರುಘೇಂದ್ರ ಶಿವಯೋಗಿಗಳು ಮಠದ ಸಿದ್ಧಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಹಿರಿಯ ಮುಖಂಡ ಡಿ.ಎಸ್.ನಾಯಿಕ, ಉಪಪ್ರಾಚಾರ್ಯ ಬಿ.ಎಮ್. ಮಾಳಿ, ಎಚ್.ಎ.ಭಜಂತ್ರಿ, ಬಸವರಾಜ ಕಾಂಬಳೆ, ಬಿ.ಎಲ್. ಘಂಟಿ, ವ್ಹಿ.ಬಿ.ಅರಗೆ, ಕರೆಪ್ಪ ನಾಯಿಕ, ಡಿ.ಎಸ್.ಡಿಗ್ರಜ, ಕುಮಾರ ಆವಳೆ, ಜಿನೇಂದ್ರ ನಿಲಜಗಿ, ಗಣರಾಜ ನಾಯಿಕ, ವಿಶ್ವನಾಥ ಹಾರೂಗೇರಿ ಹಾಗೂ ಶಿಕ್ಷಕರು ಇದ್ದರು.



ಕಿರುಸುದ್ದಿ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಬೆಳಗಾವಿ: ಅಡುಗೆ ಅನೀಲ, ಸಿಲಿಂಡರ್, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ನಗರದಲ್ಲಿನ ಚನ್ನಮ್ಮ ವೃತ್ತದಲ್ಲಿ ಅಡುಗೆ ಮಾಡುವುದರ ಮೂಲಕ ವಿನೂತನ ಪ್ರತಿಭಟಿಸಿದರು. ಬೆಲೆ ಏರಿಕೆಯಿಂದ ಸಾಮಾನ್ಯ ಜನರು, ಬಡವರು ಹಾಗೂ ಮಧ್ಯಮ ವರ್ಗದ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ ಎಂದು ಆರೋಪಿಸಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ತಕ್ಷಣವೇ ಅಡುಗೆ ಅನಿಲ, ಪೆಟ್ರೋಲ್ ಹಾಗೂ ಡೀಸೆಲ್ ದರಗಳನ್ನು ಇಳಿಸಿ ಜನರಿಗೆ ಪರಿಹಾರ ಒದಗಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.ಪ್ರತಿಭಟನೆಯು ಕೆಲಕಾಲ ಚನ್ನಮ್ಮ ವೃತ್ತದಲ್ಲಿ ಗಮನ ಸೆಳೆಯಿತು.ಈ ವೇಳೆ ಬೆಳಗಾವಿ ಗ್ರಾಮೀಣ ಘಟಕದ ಜಿಲ್ಲಾಧ್ಯಕ್ಷ ವಿನಯ ನಾವಲಗಟ್ಟಿ, ಆಯಿಷಾ ಸನದಿ, ಮಂಜುನಾಥ ಕಾಂಬಳೆ, ಮೋಹನ್ ರೆಡ್ಡಿ, ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಅರ್ಜಿ ಆಹ್ವಾನ

ಬೆಳಗಾವಿ : 2026-27ನೇ ಸಾಲಿಗೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ,3ಬಿ ಮತ್ತು ಪ.ಜಾ ಮತ್ತು ಪ.ವರ್ಗದ ಪಿ.ಯು.ಸಿ ಸಮಾನಾಂತರ ಡಿಪ್ಲೋಮಾ, ಐ.ಟಿ.ಐ ಕೋರ್ಸಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು https://shp.karnataka.gov.in/bcwd ಮೂಲಕ ಆನ್ಲೈನ್ನಲ್ಲಿ ಜೂನ್ 15 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ತಾಲ್ಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ವಿದ್ಯಾರ್ಥಿನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್ಸೈಟ್ https://bcwd.karnataka.gov.in/ ನ್ನು ನೋಡಬಹುದಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@gmai.comC&ಮೇಲ್ ಮುಖಾಂತರ ಅಥವಾ ಜಿಲ್ಲಾ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸುವುದು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಬಂಧ-ಚಿತ್ರಕಲಾ ಸ್ಪರ್ಧೆ

ಧಾರವಾಡ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಹವಾಮಾನ ಬದಲಾವಣೆ (ಪ್ರಕೃತಿಯಿಂದ ಪ್ರೇರಿತ, ಹವಾಮಾನಕ್ಕಾಗಿ, ನಮ್ಮ ಭವಿಷ್ಯಕ್ಕಾಗಿ) ವಿಷಯದ ಕುರಿತು ನಿಬಂಧ ಹಾಗೂ ಚಿತ್ರಕಲಾ ಸ್ಪರ್ಧೆ ಜೂ.2ರಂದು ವಿದ್ಯಾಗಿರಿಯ ಜೆಎಸ್ಎಸ್ ಉತ್ಸವ ಭವನದಲ್ಲಿ ನಡೆಯಲಿದೆ. ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ, ಹು-ಧಾ ಮಹಾನಗರ ಪಾಲಿಕೆಯ ಸಹಯೋಗದಲ್ಲಿ ಈ ಸ್ಪರ್ಧೆ ನಡೆಯಲಿದ್ದು, ವಿಜೇತರಿಗೆ ಜೂ.5ಕ್ಕೆ ನಡೆಯುವ ಸಮಾರಂಭದಲ್ಲಿ ಬಹುಮಾನ ಮತ್ತು ಪ್ರಶಸ್ತಿ ವಿತರಿಸಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ಧಾರವಾಡ: ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ವಿವಿಧ ಘಟಕಗಳಾದ ಹೊಸ ಪ್ರದೇಶ ವಿಸ್ತರಣೆ, ಹೂ ಬೆಳೆಗಳ ಪ್ರದೇಶ ವಿಸ್ತರಣೆ, ತರಕಾರಿ ಬೆಳೆಗಳ ಪ್ರದೇಶ ವಿಸ್ತರಣೆ, ಈರುಳ್ಳಿ ಶೇಖರಣಾ ಘಟಕ, ವೈಯಕ್ತಿಕ ಕೃಷಿ ಹೊಂಡ, ತಳ್ಳುಗಾಡಿ, ಟ್ರ್ಯಾಕ್ಟರ್‌ಗಳಿಗೆ ಸಹಾಯಧನಕ್ಕೆ 2026-27ನೇ ಸಾಲಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ರೈತರು ಜೂ.15ರೊಳಗೆ ನವಲಗುಂದ ಹಿರಿಯ ತೋಟಗಾರಿಕೆ ನಿರ್ದೇಶಕರ ಕಚೇರಿಗೆ ಅರ್ಜಿ ಸಲ್ಲಿಸಲು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ನಿಂಗವ್ವಾ ಮೋರೆ



ಮೂಡಲಗಿ : ಪಟ್ಟಣದ ದೇಶಪಾಂಡೆ ಪ್ಲಾಟ ನಿವಾಸಿ ನಿಂಗವ್ವಾ ಬಾಬು ಮೋರೆ (84) ಶನಿವಾರ ನಿಧನರಾಗಿದ್ದಾರೆ. ಮೃತರು ಪುತ್ರಿ, ಮೊಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.



ಬೆಳಗಾವಿ: ಅಡುಗೆ ಅನೀಲ, ಸಿಲಿಂಡರ್, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಶನಿವಾರ ನಗರದಲ್ಲಿನ ಚನ್ನಮ್ಮ ವೃತ್ತದಲ್ಲಿ ಅಡುಗೆ ಮಾಡುವುದರ ಮೂಲಕ ವಿನೂತನ ಪ್ರತಿಭಟಿಸಿದರು.

ಗಡಿ ಗ್ರಾಮಗಳ ಅಭಿವೃದ್ಧಿಗೆ ಆದ್ಯತೆ

ಸಂಕೇಶ್ವರ: ಕಣಗಲಾ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ದಿ.ಉಮೇಶ್ ಕತ್ತಿ ಅವರು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಕಾರ್ಯವನ್ನು ನಾನು ಮಾಡುತ್ತಿದೇನೆ ಎಂದು ಶಾಸಕ ನಿಖಿಲ್ ಕತ್ತಿ ಹೇಳಿದರು.

ಸಮೀಪದ ಹೊನ್ನಿಹಳ್ಳಿ, ಕೋಣನಕೇರಿ ಹಾಗೂ ಹಡಲಗಾ ಗ್ರಾಮಗಳಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ವಿವಿಧ ರಸ್ತೆ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಹೊನ್ನಿಹಳ್ಳಿ ಗ್ರಾಮದಿಂದ ಕಣಗಲಾ ಗಡಿಯವರೆಗೆ 50 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ, ಕೋಣನಕೇರಿ ಗ್ರಾಮದಿಂದ ಚಂಪಾಹೊಸೂರ ಗಡಿಯವರೆಗೆ 95 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಸುಧಾರಣೆ ಹಾಗೂ ಹಡಲಗಾ ಗ್ರಾಮದ ಶ್ರೀ ಲಕ್ಷ್ಮೀದೇವಿ ದೇವಸ್ಥಾನದಿಂದ ಮಹಾರಾಷ್ಟ್ರ ರಾಜ್ಯ ಗಡಿಯವರೆಗೆ 25 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಅಶೋಕ ಹಿರೆಕೊಡಿ, ಮಹಾದೇವ ಜಕಾತೆ, ಸುಧಾಕರ ದೇಸಾಯಿ, ಕುಮಾರ ತೊದಲೆ, ಸುಧಾಕರ ಬಡಿಗೇರ, ರಾಜು ಪಾಟೀಲ,ಪ್ರಶಾಂತ ಪಾಟೀಲ, ಚೇತನ ಬಶೆಟ್ಟಿ, ಸಚಿನ ಸಪಾಟೆ, ಸಂದೀಪ ದವಡತೆ, ವಿಜಯ ಜರಳಿ, ದಿನೇಶ ಕೊಳೆಕರ, ಅಪ್ಪಾಸಾಹೇಬ್ ಬೊರೆ ಗುತ್ತಿಗೆದಾರ ಮಲ್ಲಪ್ಪ ಬಿಸಿರೊಟ್ಟಿ ಸೇರಿದಂತೆ ಅಧಿಕಾರಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.



ಸಂಕೇಶ್ವರ: ಸಮೀಪದ ಹೊನ್ನಿಹಳ್ಳಿ, ಕೋಣನಕೇರಿ ಹಾಗೂ ಹಡಲಗಾ ಗ್ರಾಮಗಳಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ವಿವಿಧ ರಸ್ತೆ ಕಾಮಗಾರಿಗಳಿಗೆ ಶಾಸಕ ನಿಖಿಲ ಕತ್ತಿ ಭೂಮಿಪೂಜೆ ನೆರವೇರಿಸಿದರು.

ಭೂಮಿಯಲ್ಲಿನ ತೇವಾಂಶ ಗಮನಿಸಿ ಬಿತ್ತನೆಗೆ ಮುಂದಾಗಿ

ಹುಕ್ಕೇರಿ: ಮುಂಗಾರು ಬಿತ್ತನೆ ಮುನ್ನ ನೆಲದ ಹಸಿ ನೋಡಿಕೊಂಡು ಬಿತ್ತನೆ ಮಾಡಬೇಕು. ಪ್ರತಿ ವರ್ಷದ ವಾಡಿಕೆಗಿಂತ ಶೇ.25ರಷ್ಟು ಮಳೆ ಕೊರತೆ ಆಗಿದೆ. ಅದರಲ್ಲೂ ಹುಕ್ಕೇರಿ ತಾಲೂಕಿನಲ್ಲಿ ಮಳೆ ಕೊರತೆ ಆಗಿದೆ ಎಂದು ಶಾಸಕ ನಿಖಿಲ ಕತ್ತಿ ಹೇಳಿದರು.

ಶುಕ್ರವಾರದಂದು ಸ್ಥಳೀಯ ಕೃಷಿ ಇಲಾಖೆಯಲ್ಲಿ ರೈತರಿಗೆ ಸೋಯಾಬಿನ್ ಬೀಜ ವಿತರಿಸಿ ಮಾತನಾಡಿದರು. ತಾಲೂಕಿನಲ್ಲಿ ಸೋಯಾಬಿನ್ 7500 ಕ್ವಿಂಟಲ್, ಗೋವಿನ ಜೋಳ 18.4 ಕ್ವಿಂಟಲ್ ಬೀಜ್ ದಾಸ್ತಾನು ಮಾಡಲಾಗಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಹೆಚ್ಚಿಸಲು ಕೃಷಿ ಇಲಾಖೆ ಸನ್ನದ್ಧ ಆಗಿದೆ ಎಂದರು.

ತಾಲೂಕಿನ 39 ಪಿಕೆಪಿಎಸ್‌ಗಳಲ್ಲಿ ಮತ್ತು 3 ರೈತ ಸಂಪರ್ಕ ಕೇಂದ್ರ ಸೇರಿದಂತೆ 42 ಸ್ಥಳಗಳಲ್ಲಿ ಬೀಜ ವಿತರಿಸಲಾಗುತ್ತಿದೆ. ರೈತರು ಬೀಜ ಖರೀದಿ ಮಾಡಲು ಎಲ್ಲ ಸೌಲಭ್ಯ ಕಲ್ಪಿಸಲಾಗಿದೆ. ಇದರ ಜತೆಗೆ ರಸಗೊಬ್ಬರ ಮತ್ತು ರಾಸಾಯನಿಕ ದಾಸ್ತಾನು ಸಹ ಪೂರ್ಣ ಪ್ರಮಾಣದಲ್ಲಿದೆ ಎಂದರು.

ಕೃಷಿ ಸಹಾಯಕ ನಿರ್ದೇಶಕ ಆರ್.ಬಿ.ನಾಯ್ಕರ ಮಾತನಾಡಿ ರಸಗೊಬ್ಬರ ಮಾರಾಟಗಾರರು ರೈತರಿಗೆ ಸರಿಯಾಗಿ ಸ್ಪಂದನೆ ಮತ್ತು ಯೋಗ್ಯ ದರದಲ್ಲಿ ಮಾರಾಟ ಮಾಡದಿದ್ದಲ್ಲಿ ತಕ್ಷಣ ಇಲಾಖೆಗೆ ತಿಳಿಸಿ.ಅಂತಹವರ ಮೇಲೆ ಯೋಗ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.



- ಶಾಸಕ ನಿಖಿಲ ಕತ್ತಿ ಹೇಳಿಕೆ
- ಬಿತ್ತನೆ ಬೀಜ ವಿತರಣೆ

ಇದೇ ಸಂದರ್ಭದಲ್ಲಿ ಕೃಷಿಗೆ ಪೂರಕವಾಗಿ ಉತ್ತಮ ಸ್ಪಂದನೆ ಹಾಗೂ ಅಧಿಕಾರಿಗಳ ಸಮರ್ಪಕ ಸೇವೆ ಗಮನಿಸಿ ರಾಜ್ಯದಲ್ಲಿ ಬೆಳಗಾವಿ ಜಿಲ್ಲೆ ಕೃಷಿ ಇಲಾಖೆಗೆ ಪ್ರಥಮ ಹಾಗೂ ಜಿಲ್ಲೆಗೆ ಹುಕ್ಕೇರಿ ತಾಲೂಕ ಪ್ರಥಮ ಎಂದು ಪ್ರಶಸ್ತಿ ಸಹಿತ ಪ್ರಮಾಣ ಪತ್ರ ನೀಡಿದ್ದನ್ನು ಶಾಸಕರು ಶ್ಲಾಘಿಸಿದರು. ನಂತರ ಪ್ರಶಸ್ತಿಗಳನ್ನು ಶಾಸಕರಿಂದ ಕೃಷಿ ಇಲಾಖೆ ಸಿಬ್ಬಂದಿಗಳು ಪಡೆದುಕೊಂಡರು. ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಸತ್ತೆಪ್ಪಾ ನಾಯಿಕ, ಬಿಜೆಪಿ ಮಂಡಲ ಅಧ್ಯಕ್ಷ ರಾಚಯ್ಯಾ ಹಿರೇಮಠ, ಪಿಕಾರ್ಡ ಬ್ಯಾಂಕ ನಿರ್ದೇಶಕರಾದ ಗುರುರಾಜ ಕುಲಕರ್ಣಿ, ಶೀತಲ ಬ್ಯಾಳಿ, ಮುಖಂಡರಾದ ಎ.ಕೆ.ಪಾಟೀಲ, ಬಸವರಾಜ ಪಾಟೀಲ, ಶಿವನಗೌಡ ಪಾಟೀಲ, ಚನ್ನಪ್ಪಾ ಗಜಬರ, ಆನಂದ ಲಕ್ಕುಂಡಿ, ರಾಜು ಚೌಗಲಾ, ಗಿರೀಶ ಕುಲಕರ್ಣಿ, ರಾಜು ಮುನ್ನೋಳಿ, ಕೃಷಿ ಇಲಾಖೆ ಸಿಬ್ಬಂದಿಗಳಾದ ರಾಘವೇಂದ್ರ ತಳವಾರ, ಶಿವಾನಂದ ಕಮತ, ಉದಯ ಆಗನೂರ, ಸಮೀರ ಲೋಕಾಪೂರ, ಲಗಮನ್ನಾ ಹೂಲಿಕಟ್ಟಿ ಮತ್ತಿತರರಿದ್ದರು.

ಕೆರೆ ಹೂಳೆತ್ತುವ ಕಾಮಗಾರಿಗೆ ಚಾಲನೆ

ಬೆಳಗಾವಿ: ತಾಲೂಕು ವ್ಯಾಪ್ತಿಯ ಧಾಮಣೆ ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳದ ಭನಮ್ಮೂರು ನಮ್ಮ ಕೆರೆಭಿ ಕಾರ್ಯಕ್ರಮದ ಅನುದಾನದಲ್ಲಿ ಪುನಶ್ಚೇತನಗೊಳ್ಳಲಿರುವ ಮಾದರಿ ನಮ್ಮೂರು ನಮ್ಮ ಕೆರೆ ಹೂಳೆತ್ತುವ ಗಣೇಶ ಕೆರೆಯ ಕಾಮಗಾರಿಗೆ ಕೆರೆ ಸಮಿತಿ ಅಧ್ಯಕ್ಷರಾದ ಮಹಾದೇವ ಚೌಗಲೆ ಅವರು ಭೂಮಿ ಪೂಜೆ ನೆರವೇರಿಸಿದರು.

ತಾಲೂಕು ಯೋಜನಾಧಿಕಾರಿ ಪಾರ್ವತಿ ಮಾತನಾಡಿ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಸಮುದಾಯ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ , ದೇವಸ್ಥಾನ ಜೀರ್ಣೋದ್ಧಾರ, ಸಮುದಾಯ ಭವನ ಕಟ್ಟಡಗಳಿಗೆ ಅನುದಾನ, ಸರ್ಕಾರಿ ಶಾಲೆಗಳಿಗೆ ಡೆಸ್ಕ್ ಬೆಂಚು ವಿತರಣೆ , ವೃತ್ತಿ ಪರ ಶಿಕ್ಷಣಕ್ಕೆ ವಿದ್ಯಾರ್ಥಿನಿಯರಿಗೆ ಶಿಷ್ಯವೇತನ, ರುದ್ರಭೂಮಿ ಅನುದಾನ, ಜನಮಂಗಲ ಕಾರ್ಯಕ್ರಮ ನಿರ್ಗತಿಕರಿಗೆ ಮಾಶಾಸನ ವಿತರಣೆಯಂತಹ ಕಾರ್ಯಕ್ರಮಗಳ ಜೊತೆ ನಮ್ಮೂರು ನಮ್ಮ ಕೆರೆ ಕಾರ್ಯಕ್ರಮವು ಅತೀ ಪ್ರಮುಖವಾಗಿದೆ. ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರಾಜ್ಯದ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದರು.

ರಾಜ್ಯದಾದ್ಯಂತ ಸುಮಾರು 1000 ಕೆರೆಗಳನ್ನು ಪುನಶ್ಚೇತನಗೊಳಿಸಿದ್ದಾರೆ. ನಮ್ಮೂರು ನಮ್ಮ ಕೆರೆ ಯೋಜನೆಯಿಂದ ಅಂತರ್ಜಲ ಮಟ್ಟ ಹೆಚ್ಚಳವಾಗಿದೆ. ಪ್ರಾಣಿ ಪಕ್ಷಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆ ಆಗಿದೆ, ಇದರಿಂದಾಗಿ ಸಮಾಜ ಸಂಕುಲಕ್ಕೆ ಒಳಿತು ಆಗಿರುತ್ತದೆ. ಜನನದಿಂದ ಮರಣದವರೆಗೂ ಎಲ್ಲಾ ಕಾರ್ಯಕ್ರಮಗಳಿಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಮಾಜಕ್ಕೆ ಒಳಿತು ಆಗುವಂತೆ ಕಾರ್ಯಕ್ರಮ ಅನುಷ್ಠಾನ ಮಾಡುತ್ತಾ ಬಂದಿದೆ ಎಂದು ಹೇಳಿದರು.

ಧಾರವಾಡ ಪ್ರಾದೇಶಿಕ ವಿಭಾಗದ ಕೆರೆ ಅಭಿಯಂತರರು ನಿಂಗರಾಜ ಅವರು ಮಾತನಾಡಿ, ಗಣೇಶ ಕೆರೆ ಹೂಳು ತೆಗೆಯಲು ಕೆರೆ ಸಮಿತಿ ಅವರು ಉತ್ತಮ ರೀತಿಯಲ್ಲಿ ಸಹಕಾರ ನೀಡಬೇಕು. ಕೆರೆಗೆ ತಂತಿ ಬೇಲಿ ಹಾಕಿಸಿ, ಮಾದರಿ ಕೆರೆಯನ್ನಾಗಿ ರಚನೆ ಮಾಡಿ, ಬಳಿಕ ಹಸ್ತಾಂತರ ಮಾಡಲಾಗುವುದು. ಬಳಿಕ, ಕೆರೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬೇಕು ಎಂದು ಸೂಚನೆ ನೀಡಿದರು.

ಗ್ರಾಮ ಲೆಕ್ಕಾಧಿಕಾರಿ ಸಿದ್ದು, ಆನಂದ ಜಯಾನಾಚೆ, ಊರಿನ ಪ್ರಮುಖರು, ಗ್ರಾಮಸ್ಥರು, ಕೆರೆ ಸಮಿತಿ ಸರ್ವ ಸದಸ್ಯರು, ಒಕ್ಕೂಟದವರು , ಸೇವಾಪ್ರತಿನಿಧಿ ರೇಖಾ , ವಿ ಎಲ್ ಈ ಪ್ರತೀಕ, ಉಪಸ್ಥಿತರಿದ್ದರು. ಕೃಷಿ ಮೇಲ್ವಿಚಾರಕ ಮಹಾಂತೇಶ ನಿರೂಪಿಸಿ , ವಂದಿಸಿದರು.



ಸಬ್ಸಿಡಿ ಬೀಜದ ಲಾಭ ಪಡೆಯಿರಿ

ಯರಗಟ್ಟಿ: ಕೃಷಿವಿಜ್ಞಾನಿಗಳಿಂದಸಂಸ್ಕರಿಸಿದ ಉತ್ತಮ ಬೀಜಗಳನ್ನು ಸರ್ಕಾರದಿಂದ ಸಬ್ಸಿಡಿ ರೂಪದಲ್ಲಿ ವಿತರಿಸಲಾಗುತ್ತದೆ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಶಿವಪ್ರಕಾಶ ಪಾಟೀಲ ಹೇಳಿದರು.

2026-27 ನೇ ಸಾಲಿನ ಮುಂಗಾರು ಹಂಗಾಮಿಗಾಗಿ ಕೃಷಿ ಇಲಾಖೆಯಿಂದ ಸರ್ಕಾರಿ ಸಹಾಯ ಧನದಲ್ಲಿ ನೀಡುತ್ತಿರುವ ಬೀಜ ವಿತರಣಾ ಕಾರ್ಯಕ್ರಮಕ್ಕೆ ಎಪಿಎಂಸಿ ಆವರಣದಲ್ಲಿ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ ಬಾರಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಈ ಸಲ ಹೆಸರು, ಉದ್ದ, ಗೋವಿನ ಜೋಳ ಬೀಜಗಳ ದಾಸ್ತಾನು ಮಾಡಲಾಗಿದ್ದು, ರೈತರಿಗೆ ಯಾವುದೇ ಕಾರಣಕ್ಕೆ ಬೀಜದ ಕೊರತೆಯಾಗದು. ಈ ಭಾರಿ ವಾಡಿಕೆಗಿಂದ ಮಳೆಯ ಪ್ರಮಾಣ ಸ್ವಲ್ಪ ಕಡಿಮೆ ಇದ್ದು ರೈತರು ತೇವಾಂಶವನ್ನು ನೋಡಿಕೊಂಡು ಬಿತ್ತನೆ ಮಾಡಬೇಕು. ಅಲ್ಲದೇ ಕಬ್ಬು ಬೆಳೆಗಾರರು ಸಹ ಮಳೆಯ ಪ್ರಮಾಣ ಮತ್ತು ಅಂತರ್ಜಲಮಟ್ಟವನ್ನು ನೋಡಿಕೊಂಡುನೀರಿನಕೊರತೆಯಾಗದಂತೆ ಎಚ್ಚರ ವಹಿಸಬೇಕು. ರಾಸಾಯನಿಕ ಗೊಬ್ಬರದ ಬಳಕೆಯನ್ನು ಕಡಮೆ ಮಾಡಿ ಲಾಭದಾಯಕ ಕೃಷಿ ಪದ್ಧತಿಯನ್ನು ಅಳವಡಿಕೊಳ್ಳಬೇಕು ಎಂರು.

ತಹಶೀಲ್ದಾರ್ ಎಂ.ವಿ. ಗುಂಡಪ್ಪಗೋಳ ಮಾತನಾಡಿ, ಸರ್ಕಾರದಿಂದ ವಿತರಿಸಲಾಗುವ ಬೀಜಗಳನ್ನು ಪಡೆದ ರೈತರು ಕೃಷಿ ಅಧಿಕಾರಿಗಳ ಮಾರ್ಗದರ್ಶನ ಮತ್ತು ಸಲಹೆ ಪಡೆದು ಬಿತ್ತನೆ ಮಾಡಬೇಕು ಎಂದರು.

ಮುನವಳ್ಳಿಯ ಶ್ರೀ ಪಂಚಲಿಗೇಶ್ವರ ರೈತ ಉತ್ಪಾದಕ ಸಂಘದಿಂದ ಬೀಜ ವಿತರಿಸಲಾಯಿತು. ಎಪಿಎಂಸಿ ಅಧ್ಯಕ್ಷ ನಿಲಕಂಠ ಸಿದ್ದಬಸನ್ನವರ, ಆರ್. ಕೆ. ಪಟಾತ, ಸೋಮು ರೈನಾಪುರ, ಯಲ್ಲನಾಯ್ಕ ನಾಯ್ಕರ, ಕೃಷಿ ಅಧಿಕಾರಿಗಳಾದ ಎಸ್.ಎಲ್. ದೇಸಾಯಿ, ಎನ್.ಜಿ. ಕಳಸಪ್ಪನವರ, ಉಮೇಶ ಯರಗಟ್ಟಿ, ಮನೋಹರ ದಿನ್ನಿಮನಿ ಇತರರು ಇದ್ದರು.



ಪೊಲೀಸರು ಜನಸ್ನೇಹಿಯಾಗಿ ಕರ್ತವ್ಯ ನಿರ್ವಹಿಸಲಿ

ಚೈಲಹೊಂಗಲ: ಪ್ರತಿಯೊಬ್ಬ ಪೊಲೀಸರು ಜನ ಸಾಮನ್ಯರೊಂದಿಗೆಬೆರೆತುಸೇವಾಮನೋಭಾವದಿಂದ ಕೆಲಸ ಮಾಡಿದಾಗ ಮಾತ್ರ ಜನಸ್ನೇಹಿ ಪೊಲೀಸರಾಗಿ ಹೊರಹೊಮ್ಮಲು ಸಾಧ್ಯವಿದೆ' ಎಂದು ಡಿವೈಎಸ್ಪಿ ಡಾ.ವೀರಯ್ಯ ಹಿರೇಮಠ ಹೇಳಿದರು.

ನಗರದ ಪೊಲೀಸ್ ಇಲಾಖೆಯಲ್ಲಿ ಶನಿವಾರ ನಡೆದ ಪ್ರೊಬೇಷನರಿ ಐಪಿಎಸ್ ಅಧಿಕಾರಿ ಡಾ.ಭಾನುಪ್ರಕಾಶ ಜೆ. ಅವರ ಬೀಳ್ಕೊಡುಗೆ, ಸತ್ಕಾರ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

'ಐಪಿಎಸ್ ಡಾ.ಭಾನುಪ್ರಕಾಶ ಅವರು ಯಾವುದೇ ಶ್ರೀಮಂತ ಕುಟುಂಬದಿಂದ ಬಂದಿಲ್ಲ, ರೈತಾಪಿ ವರ್ಗದಿಂದ ಬಂದಿದ್ದಾರೆ. ಮೂರು ಭಾರಿ ಯುಪಿಎಸ್ಸಿ ಪಾಸಾಗಿದ್ದಾರೆ. ಭಾರತೀಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಐಪಿಎಸ್ ಹುದ್ದೆ ಬಹುದೊಡ್ಡದು. ಈ ಹುದ್ದೆಗೆ ಬರಬೇಕಾದರೆ ಸತತ ಪ್ರಯತ್ನ, ಗುರಿ, ತಾಳ್ಮೆ, ಆಸಕ್ತಿ ಇರಬೇಕು. ಐಪಿಎಸ್ ಭಾನುಪ್ರಕಾಶ ಅವರು ದೊಡ್ಡ ಹುದ್ದೆ ಸಿಗಲೆಂದು' ಹಾರೈಸಿದರು.ಪ್ರೊಬೇಷನರಿ ಐಪಿಎಸ್ ಡಾ.ಭಾನುಪ್ರಕಾಶ ಸತ್ಕಾರ ಸ್ವೀಕರಿಸಿ ಮಾತನಾಡಿದರು.ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್ಐ ಸಂತೋಷ ಮಾತನಾಡಿದರು.

ಸಿಪಿಐಗಳಾದ ಪ್ರಮೋದ ಯಲಿಗಾರ, ಗಜಾನನ ನಾಯಕ, ಪಿಎಸ್ಐ ಎಫ್.ವೈ.ಮಲ್ಲೂರ, ಪೌರಾಯುಕ್ತೆ ಭಾಗ್ಯಶ್ರೀ ಹುಗ್ಗಿ, ಡಾ.ಚೇತನಾ ಭಾನುಪ್ರಕಾಶ, ಹಿರಿಯ ಪತ್ರಕರ್ತ ಮಹಾಂತೇಶ ತುರಮರಿ ವೇದಿಕೆಯಲ್ಲಿ ಇದ್ದರು.

ಪಿಎಸ್ಐಗಳಾದ ಶಿವಲಿಂಗ ಭಾವಿಕಟ್ಟಿ, ಬಸವರಾಜ ಜ್ವಾಲಾಪೂರೆ, ಸಿಬ್ಬಂದಿಗಳು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಸಾರ್ವಜನಿಕರು ಇದ್ದರು.



ಯುವಕರಿಂದ ರಾಷ್ಟ್ರದ ಅಭಿವೃದ್ಧಿ

ಮೂಡಲಗಿ: ಭಾರತ ಸರ್ಕಾರ ಯುವಕರ ಹಾಗೂ ಕ್ರೀಡಾ ಸಚಿವಾಲಯ, ಮೈ ಭಾರತ ಕೇಂದ್ರ ಬೆಳಗಾವಿ, ಜೈ ಕರ್ನಾಟಕ ಅಂಗವಿಕಲರ ಗ್ರಾಮೀಣ ಅಭಿವೃದ್ಧಿ ಸಂಘ ಹಳ್ಳೂರ ಹಾಗೂ ಸಂಕಲ್ಪ ಕ್ರೀಡಾ ಮತ್ತು ಸಮಾಜ ಸೇವಾ ಸಂಘಗಳ ಸಂಯುಕ್ತಾಶ್ರಯದಲ್ಲಿ ಮಂಜುನಾಥ ಸೈನಿಕ ತರಬೇತಿ ಕೇಂದ್ರದಲ್ಲಿ ವಿನಾಯಕ್ ದಾಮೋದರ್ ಸಾವರ್ಕರ್ ಜನ್ಮ ದಿನ ಆಚರಣೆ ಮಾಡಲಾಯಿತು.ಕೇಂದ್ರದ ಸಂಸ್ಥಾಪಕ ಲಕ್ಷ್ಮಣ ಅಡಿಹುಡಿ ಮಾತನಾಡಿ, ನಮ್ಮ ದೇಶ ಅಭಿವೃದ್ಧಿಯಾಗಬೇಕಾದರೆ ಯುವಕರ ಪಾತ್ರ ಪ್ರಮುಖವಾಗಿದೆ. ಯುವಕರು ದೇಶಾಭಿಮಾನ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟದ ಬೆಳಗಾವಿ ಜಿಲ್ಲಾಧ್ಯಕ್ಷ ಸಿದ್ದಣ್ಣ ದುರದುಂಡಿ ಮಾತನಾಡಿ, ನಮ್ಮ ಗ್ರಾಮೀಣ ಭಾಗದ ಯುವ ಜನತೆ ಮುಖ್ಯವಾಹಿನಿಗೆ ಬರಬೇಕಾದರೆ ಪ್ರತಿಯೊಂದು ಸಂಘಟನೆ ಗ್ರಾಮೀಣ ಭಾಗದಲ್ಲಿ ಯುವ ಜನರಿಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.ಸಂಕಲ್ಪ ಕ್ರೀಡಾ ಮತ್ತು ಸಮಾಜ ಸೇವಾ ಸಂಘದ ಅಧ್ಯಕ್ಷ ಸುಭಾಷ ಗೊಡ್ಯಾಗೋಳ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪೈಲ್ವಾನ್ ಮಾರುತಿ ಸಿಂಧೆ, ಮಲ್ಲಮ್ಮ ಹಗೆದ, ಹಣಮಂತ ಅಂಗಡಿ, ಉತ್ತಮಗೌಡ, ಮಹೇಶ ಹೊಸಮನಿ, ಹಾಲಪ್ಪ ಗಿಡ್ಡವಗೋಳ ಹಾಗೂ ಶಿಬಿರಾರ್ಥಿಗಳು ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶಿಕ್ಷಕ ರವಿ ಕರಿಗಾರ ನಿರೂಪಿಸಿ ವಂದಿಸಿದರು.



ಹಳೆ ವೈಷಮ್ಯ, ಕಾರು ವ್ಯವಹಾರಕ್ಕೆ ಯುವಕ ಬಲಿ

- ಹುಂಚ್ಯಾನಟ್ಟಿಯಲ್ಲಿ ಭೀಕರ ಕೊಲೆ ಪ್ರಕರಣ

ಬೆಳಗಾವಿ: ಹಳೆ ವೈಷಮ್ಯ ಹಾಗೂ ಸೆಕೆಂಡ್ ಹ್ಯಾಂಡ್ ಕಾರು ಖರೀದಿಯ ಹಣದ ವ್ಯವಹಾರದ ವಿಚಾರವಾಗಿ ಯುವಕನೊಬ್ಬನನ್ನು ನಿರ್ಜನ ಪ್ರದೇಶಕ್ಕೆ ಕರೆಸಿ, ತಲ್ವಾರ್‌ನಿಂದ ಭೀಕರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ಬೆಳಗಾವಿ ತಾಲೂಕಿನ ಹುಂಚ್ಯಾನಟ್ಟಿ ಗ್ರಾಮದ ಹೊರವಲಯದಲ್ಲಿ ನಡೆದಿದೆ.

ಕೊಲೆ ನಡೆದ ಕೇವಲ 24 ಗಂಟೆಯಲ್ಲಿಯೇ ಬೆಳಗಾವಿ ಗ್ರಾಮೀಣ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿ ಐದು ಜನ ಆರೋಪಿಗಳನ್ನು ಬಂಧಿಸಿದ್ದಾರೆ. ಮಜಗಾವ ಗ್ರಾಮದ ರಾಹುಲ್ ತಳವಾರ (22) ಎಂಬ ಯುವಕನೇ ಹಳೆ ದ್ವೇಷಕ್ಕೆ ಬಲಿಯಾದ ದುರ್ದೈವಿಯಾಗಿದ್ದಾನೆ.

ಸೆಕೆಂಡ್ ಹ್ಯಾಂಡ್ ಕಾರು ಖರೀದಿಸಿ ಹಿಂದಿರುಗಿಸಿದ ಹಣದ ವ್ಯವಹಾರದ ವಿಚಾರವಾಗಿ ಜಗಳ ನಡೆದಿತ್ತು. ಇದೇ ಹಳೆ ವೈಷಮ್ಯವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದ ಮಂಜುನಾಥ ಶೀತಿಮನಿ ಸೇರಿದಂತೆ ಏಳರಿಂದ ಎಂಟು ಜನರ ಗ್ಯಾಂಗ್, ಹಣ ನೀಡುವುದಾಗಿ ಹೇಳಿ ರಾಹುಲ್‌ನನ್ನು ಹುಂಚ್ಯಾನಟ್ಟಿ ಗ್ರಾಮದ ಸಮೀಪದ ನಿರ್ಜನ ಪ್ರದೇಶಕ್ಕೆ ಕರೆಸಿಕೊಂಡಿದ್ದಾರೆ.

ಬಳಿಕ ರಾಹುಲ್ ಮೇಲೆ ತಲ್ವಾರ್ ಹಾಗೂಮಾರಕಾಸ್ತ್ರಗಳಿಂದಭೀಕರವಾಗಿ ಅಟ್ಯಾಕ್ ಮಾಡಿ. ತಲೆ ಹಾಗೂ ಕೈ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದ ರಾಹುಲ್‌ನನ್ನು ತಕ್ಷಣ ಬಿಮ್ಸ್ ಆಸ್ಪತ್ರೆಗೆ ದ್ಯಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದ.

ರಾಹುಲ್ ಯಾವುದೇ ವಾಗ್ವಾದದಲ್ಲಿರಲಿಲ್ಲ. ಆದರೆ, ರಾಹುಲ್ ಕಂಡರೇ, ಅವರಿಗೆ ದ್ವೇಷವಿತ್ತು. ನಮ್ಮ ಸಹೋದರ ಕೊಲೆ ಮಾಡಿದವರಿಗೆ ಕಾನೂನಿನ ಅಡಿಯಲ್ಲಿ ಕಠಿಣ ಶಿಕ್ಷೆಯಾಗಬೇಕೆಂದು ಮೃತ ರಾಹುಲ್ ಸಹೋದರ ಆಗ್ರಹಿಸಿದರು.

ಮೃತ ರಾಹುಲ್ ತಾಯಿ ಕರೆ ಮಾಡಿ ಕರೆದು ಮೋಸದಿಂದ ಕೊಲೆ ಮಾಡಿದ್ದಾರೆ. ಮಂಜುನಾಥ ನನ್ನ ಮಕ್ಕಳಿಗೆ ಪದೇ ಪದೆ ದ್ವೇಷ ಸಾಧಿಸುತ್ತಿದ್ದ. ನನ್ನ ಮಗ ಯಾವುದೇ ಜಗಳದಲ್ಲಿರಲಿಲ್ಲ. ರಾಹುಲ್‌ನನ್ನು ಕೊಲೆ ಮಾಡಿದವರಿಗೆ ಗಲ್ಲು ಶಿಕ್ಷೆಯೇ ಆಗಬೇಕೆಂದು ಗೋಳಾಡುತ್ತ ಮೃತನ ತಾಯಿ ಹಾಗೂ ಕುಟುಂಬಸ್ಥರು ಒತ್ತಾಯಿಸಿದ್ದಾರೆ.

ಇದೇ ವಿಚಾರಕ್ಕೆ ನಗರ ಪೊಲೀಸ್ ಆಯುಕ್ತರಾದ ಭೂಷಣ್ ಬೋರಸೆ ಅವರು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೊಲೆ ನಡೆದ 24 ಗಂಟೆಗಳಲ್ಲಿ 5 ಆರೋಪಿಗಳನ್ನು ನಮ್ಮ ಗ್ರಾಮೀಣ ಪೊಲೀಸರು ಬಂಧಿಸಿದ್ದು ತನಿಖೆ ಮುಂದುವರೆದಿದೆ. ಈ ಕೊಲೆ ಪ್ರಕರಣದಲ್ಲಿ ಇನ್ನು ಯಾರ್ಯಾರು ಭಾಗಿಯಾಗಿದ್ದಾರೆ ಆ ಆರೋಪಿಗಳ ಪತ್ತೆ ಹಚ್ಚಿ ಕಾನೂನಿನ ಅಡಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಿದ್ದರಾಮಯ್ಯ ಆಡಳಿತ ನೆನೆದು ಹೆಬ್ಬಾಳ್ಕರ್ ಭಾವನಾತ್ಮಕ ಪೋಸ್ಟ್

ಬೆಳಗಾವಿ: ಸ್ಥಾನಗಳು ಬದಲಾಗಬಹುದು, ಆದರೆ ಜನಮನದಲ್ಲಿ ಶಾಶ್ವತವಾಗಿ ಉಳಿಯುವ ನಾಯಕನಿಗೆ ವಿದಾಯ ಇರುವುದಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿಕಟಪೂರ್ವ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಡಳಿತ ಮತ್ತು ವ್ಯಕ್ತಿತ್ವ ನೆನೆದು ತಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಭಾವನಾತ್ಮಕ ಪೋಸ್ಟ್ ಮಾಡಿದ್ದಾರೆ.

ಮೈಸೂರಿನ ನೆಲದ ಒಂದು ಸಾಮಾನ್ಯ ರೈತ ಕುಟುಂಬದಿಂದ ಹೊರಟು, ಕರ್ನಾಟಕದ ಅತ್ಯುನ್ನತ ಹುದ್ದೆಯಾದ ಮುಖ್ಯಮಂತ್ರಿಯ ಸ್ಥಾನವನ್ನು ಅಲಂಕರಿಸಿದರೂ, ತಮ್ಮ ಅಧಿಕಾರದ ಕೊನೆಯ ಕ್ಷಣದವರೆಗೂ ಬಡವರ, ಹಿಂದುಳಿದವರ, ಶೋಷಿತರ ಮತ್ತು ದುರ್ಬಲರ ಧ್ವನಿಯಾಗಿಯೇ ಉಳಿದವರು ನಮ್ಮೆಲ್ಲರ ಪ್ರೀತಿಯ ನಾಯಕ ಸನ್ಮಾನ್ಯ ಸಿದ್ದರಾಮಯ್ಯನವರು ಎಂದಿದ್ದಾರೆ.

ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರಬಹುದು. ಆದರೆ ಒಂದು ಹುದ್ದೆಯಿಂದ ಇಳಿಯುವುದು ಮತ್ತು ಜನರ ಹೃದಯದಿಂದ ಇಳಿಯುವುದು ಎರಡು ಬೇರೆ ಸಂಗತಿಗಳು.



ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಸಾಮಾಜಿಕ ನ್ಯಾಯ, ಸಮಾನ ಅವಕಾಶ ಮತ್ತು ಜನಪರ ಆಡಳಿತದ ಹೆಸರಿನಲ್ಲಿ ಅವರು ಬರೆದ ಅಧ್ಯಾಯ ಎಂದೆಂದಿಗೂ ಅಳಿಸಲಾಗದಂತಹದ್ದು. ಅವರು ಕೇವಲ ಮುಖ್ಯಮಂತ್ರಿ ಆಗಿರಲಿಲ್ಲ; ಅನೇಕ ಬಡ ಕುಟುಂಬಗಳ ಭರವಸೆ, ಅಸಂಖ್ಯಾತ ಯುವಕರ ಕನಸು, ಕೋಟ್ಯಂತರ ಕನ್ನಡಿಗರ ಆತ್ಮವಿಶ್ವಾಸವಾಗಿದ್ದರು ಎಂದು ಲಕ್ಷ್ಮೀ ಹೆಬ್ಬಾಳ್ಕರ್ ಸ್ಮರಿಸಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಸಂಕೇಶ್ವರ: ಪಟ್ಟಣದ ಲಿಂಗಾಯತ ಸ್ಮಶಾನ ಭೂಮಿಗೆ ತೆರಳಲು ರಸ್ತೆಯ ಅಭಿವೃದ್ಧಿಗಾಗಿ ಮುಖ್ಯಮಂತ್ರಿ ಮೂಲಸೌಕರ್ಯ ಯೋಜನೆಯಡಿ 50 ಲಕ್ಷ ವೆಚ್ಚದಲ್ಲಿ ರಸ್ತೆ ನಿರ್ಮಾಣದ ಕಾಮಗಾರಿಗೆ ಮುಖಂಡರ ಸಮ್ಮುಖದಲ್ಲಿ ಶಾಸಕ ನಿಖಿಲ ಕತ್ತಿ ಅವರು ಭೂಮಿ ಪೂಜೆ ನೆರವೇರಿಸಿದರು.

ಪಟ್ಟಣದಲ್ಲಿ ಲಿಂಗಾಯತ ಸ್ಮಶಾನ ಭೂಮಿಯಲ್ಲಿನ ರಸ್ತೆ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಂಕೇಶ್ವರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರಾದ ಅಪ್ಪಾಸಾಹೇಬ್ ಶಿರಕೋಳಿ, ಮುಖಂಡರಾದ ಶಿವಾನಂದ ಮುಡಶಿ, ಸುನೀಲ ಪರ್ವತರಾವ, ಕುಮಾರ ಬಸ್ತವಾಡಿ, ಆನಂದ ಸಂಸುದ್ದಿ, ಸಂತೋಷ ನೇಸರಿ, ಚೇತನ ಬಶೆಟ್ಟಿ, ಶಂಕರ ಚುನಮುರಿ ಸೇರಿದಂತೆ ಅನೇಕರು ಹಾಜರಿದ್ದರು.



ಕಿರುಸುದ್ದಿ

ಜಿಲ್ಲೆಗೆ ಎರಡು ಸಚಿವ ಸ್ಥಾನ ನೀಡಲು ಆಗ್ರಹ



ಬಾಗಲಕೋಟೆ: ಜಿಲ್ಲೆಯು ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿದ್ದು, ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಐದು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಆಯ್ಕೆಯಾಗಿದ್ದಾರೆ. ಜಿಲ್ಲೆಯ ಜನರು ಕಾಂಗ್ರೆಸ್ ಪಕ್ಷದ ಮೇಲೆ ಅಪಾರ ವಿಶ್ವಾಸ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ನೂತನ ಮುಖ್ಯಮಂತ್ರಿಗಳು ರಚಿಸಲಿರುವ ಸಚಿವ ಸಂಪುಟದಲ್ಲಿ ಬಾಗಲಕೋಟೆ ಜಿಲ್ಲೆಗೆ ಎರಡು ಸಚಿವ ಸ್ಥಾನಗಳನ್ನು ನೀಡಬೇಕು ಎಂದು ಕಾಂಗ್ರೆಸ್ ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ನಾಗರಾಜ ಹದ್ಲಿ ಪ್ರಕಟಣೆಯ ಮೂಲಕ ಆಗ್ರಹಿಸಿದ್ದಾರೆ. ಬಾಗಲಕೋಟೆ ಜಿಲ್ಲೆಯು ರಾಜ್ಯ ರಾಜಕೀಯದಲ್ಲಿ ಮಹತ್ವದ ಸ್ಥಾನ ಹೊಂದಿದ್ದು, ಪಕ್ಷದ ಸಂಘಟನೆ ಹಾಗೂ ಚುನಾವಣಾ ಯಶಸ್ಸಿನಲ್ಲಿ ಜಿಲ್ಲೆಯ ನಾಯಕರು ಮತ್ತು ಕಾರ್ಯಕರ್ತರ ಕೊಡುಗೆ ಗಮನಾರ್ಹವಾಗಿದೆ. ಜಿಲ್ಲೆಯ ಅಭಿವೃದ್ಧಿ, ನೀರಾವರಿ ಯೋಜನೆಗಳು, ಕೃಷಿ, ಶಿಕ್ಷಣ, ಮೂಲಸೌಕರ್ಯ ಕ್ಷೇತ್ರಗಳ ಪ್ರಗತಿಗೆ ಸಚಿವ ಸಂಪುಟದಲ್ಲಿ ಸಮರ್ಪಕ ಪ್ರಾತಿನಿಧ್ಯ ಅತ್ಯಗತ್ಯವಾಗಿದೆ.

ಶಾಸಕ ಚಿಮ್ಮನಕಟ್ಟಿಗೆ ಸಚಿವ ಸ್ಥಾನ ನೀಡಿ

ಬಾದಾಮಿ: ಕ್ಷೇತ್ರದ ಸಮಗ್ರ ಅಭಿವೃದ್ಧಿ, ಜನರ ಆಶೋತ್ತರಗಳ ಈಡೇರಿಕೆಗಾಗಿ ಹಾಗೂ ಸರ್ಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಬಾದಾಮಿ ಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರಿಗೆ ಸಚಿವ ಸಂಪುಟದಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಬೇಕು ಎಂದು ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ನಾಮನಿರ್ದೇಶಕ ಸದಸ್ಯ ಬಸವರಾಜ ಪಾತ್ರೋಟ ಆಗ್ರಹಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು ಪ್ರಸ್ತುತ ಯುವ ಜನಾಂಗದ ಕಣ್ಮಣಿಗಳು, ದಲಿತರ, ಶೋಷಿತರ, ಅಲ್ಪಸಂಖ್ಯಾತರ, ಧ್ವನಿ ಇಲ್ಲದವರ ಧ್ವನಿಯಾದ, ಸಮರ್ಥ ಆಡಳಿಗಾರರು, ಅನುಭವ ಕ್ರೂಡೀಕೃತಗೊಂಡ ಜನಾನುರಾಗಿ ಶಾಸಕ ಭೀಮಸೇನ ಬಿ.ಚಿಮ್ಮನಕಟ್ಟಿ ಅವರಿಗೆ ಈ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂಬುದು ಬಾದಾಮಿ ಜನರ ಒತ್ತಾಯವಾಗಿದೆ. ಬಾದಾಮಿ ಮತಕ್ಷೇತ್ರದಲ್ಲಿ ಅಷ್ಟೇ ಅಲ್ಲದೆ ಇಡೀ ಜಿಲ್ಲೆಯ ತುಂಬಾ ಓಡಾಡಿ ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ಬಾದಾಮಿ ಸಮಗ್ರ ಬೆಳವಣಿಗೆಗೆ ಮತ್ತು ಬಲವರ್ಧನೆಗೆ ಬೇಕಾದಂತಹ ಛಲಗಾರಿಕೆ ಹೊಂದಿದ್ದಾರೆ. ಬಾದಾಮಿ ಕ್ಷೇತ್ರದ ಜನರ ಭಾವನೆಗೆ ಸ್ಪಂದಿಸಿ, ಸಕಾರಾತ್ಮಕ ನಿರ್ಧಾರದಿಂದ ಭೀಮಸೇನ ಬಿ. ಚಿಮ್ಮನಕಟ್ಟಿ ಇಂತಹ ಯುವ ನೇತಾರನಿಗೆ ಈ ಸಲ ಮಂತ್ರಿ ಪದವಿ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಸಚಿವ ಸ್ಥಾನಕ್ಕೆ ಮನವಿ



ಬಾದಾಮಿ: ರಾಜ್ಯದಲ್ಲಿ ನೂತನ ಸಚಿವ ಸಂಪುಟ ರಚನೆ ಮಾಡುವ ಸಂದರ್ಭದಲ್ಲಿ ಬಾದಾಮಿ ಮತಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿಯವರಿಗೆ ಸಚಿವ ಸ್ಥಾನ ನೀಡಬೇಕೆಂದು ಬಾದಾಮಿ ಮತಕ್ಷೇತ್ರದ ಕಾಂಗ್ರೆಸ್ ದುರೀಣರು ಹಾಗೂ ಮಾಜಿ ಗ್ರಾಮ ಪಂಚಾಯತಿ ಸದಸ್ಯ ಬಸವರಾಜ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಹಿರಿಯ ನಾಯಕ ರಾಹುಲ್ ಗಾಂಧಿ ಅವರಿಗೆ ಮನವಿ ಮಾಡಿದ್ದಾರೆ. ಈ ಪ್ರಕಟಣೆ ನೀಡಿರುವ ಅವರು ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಹಾಗೂ ಜನಪರ ಕಾರ್ಯಗಳ ಮೂಲಕ ಶಾಸಕರಾಗಿ ಉತ್ತಮ ಸೇವೆ ಸಲ್ಲಿಸುತ್ತಿರುವ ಭೀಮಸೇನ ಬಿ. ಚಿಮ್ಮನಕಟ್ಟಿ ಅವರಿಗೆ ಸಚಿವ ಸ್ಥಾನ ನೀಡುವುದರಿಂದ ಈ ಭಾಗದ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಲಿದ್ದು, ಕ್ಷೇತ್ರದ ಜನರ ಆಶಯವೂ ಇದಾಗಿದೆ ಎಂದು ಅವರು ತಿಳಿಸಿದ್ದಾರೆ.

ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಲು ಆಗ್ರಹ



ಕೆರೂರ: ದಲಿತ ಸಮುದಾಯದ ಪ್ರಭಾವಿ ನಾಯಕ ಆರ್.ಬಿ.ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಬೇಕು ಎಂದು ಯುವ ಕಾಂಗ್ರೆಸ್ ಮುಖಂಡ ಅಶೋಕ ಪೂಜಾರ ಹೇಳಿದರು. 3 ಬಾರಿ ಶಾಸಕರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದು, ತಮ್ಮ ಕ್ಷೇತ್ರದಲ್ಲಿ ಅಷ್ಟೇ ಅಲ್ಲದೆ ಜಿಲ್ಲೆಯಲ್ಲು ಸಹ ಪಕ್ಷವನ್ನು ಬಲವರ್ಧನೆ ಮಾಡುವಲ್ಲಿ ಸಾಕಷ್ಟು ಶ್ರಮ ವಹಿಸಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತರಲು ಅವರಿಗೆ ಡಿಸಿಎಂ ಸ್ಥಾನ ನೀಡಬೇಕೆಂದು ಅಗ್ರಹಿಸಿದ್ದಾರೆ.



ಕಲಾದಗಿ: ಗ್ರಾಮದ ಹರಣಶಿಕಾರಿ ಕಾಲೋನಿಯ ದಂಡಿನ ದುರ್ಗಾದೇವಿ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ಎರಡು ಹಲ್ಲು, ನಾಲ್ಕು ಹಲ್ಲು ಹಾಗೂ ಆರು ಹಲ್ಲಿನ ಟಗರಿನ ಕಾಳಗ ಸ್ಪರ್ಧೆಗೆ ಚಾಲನೆ ನೀಡಲಾಯಿತು. ಮುಖಂಡರಾದ ಬಶೆಟ್ಟೆಪ್ಪ ಅಂಗಡಿ, ಭೀಮಶಿ ಕರಡಿಗುಡ್ಡ, ಗಂಗಪ್ಪ ಮಾದರ, ಬಾಬು ತೇಲಿ, ಅರ್ಜುನಪ್ಪ ಮಾದರ, ವಿಠ್ಠಲ, ಶ್ಯಾಮ ಕಾಳೆ, ಕುಮಾರ ಕಾಳೆ, ಮಂಜು ಕಾಳೆ, ಅಂಜಲಿ ಬಾನು ಸೇರಿದಂತೆ ಇತರರಿದ್ದರು.

ಇಂದು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಬೀಳಗಿ: 25-2026ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ರಷ್ಟು ಅಂಕ ಪಡೆದ ಎಲ್ಲ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಮೇ 31ರಂದು ಬೆಳಗ್ಗೆ 11 ಗಂಟೆಗೆ 218 ರಾಷ್ಟ್ರೀಯ ಹೆದ್ದಾರಿ ಸುನಗ-ತೋಳಮಟ್ಟಿ ಬೈಪಾಸ್ ಹತ್ತಿರದ ತಮ್ಮ ತೋಟದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಗತಿಪರ ರೈತ ರಾಮಣ್ಣ ಕಾಳಪ್ಪಗೋಳ ತಿಳಿಸಿದರು. ಪಟ್ಟಣ ಜಿಎಲ್‌ಬಿಸಿ ಐಬಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಕೋಲಾರ ದಿಗಂಬರೇಶ್ವರ ಮಠದ ಕಲ್ಲಿನಾಥ ದೇವರು, ನಾಗರಾಳದ ದಿಗಂಬರೇಶ್ವರ ಮಠದ ಶೇಷಪ್ಪಯ್ಯ ಸ್ವಾಮಿಗಳು ನೇತೃತ್ವ ವಹಿಸುವರು. ಮಾಜಿ ಸಚಿವ ಡಾ.ಮುರುಗೇಶ ನಿರಾಣಿ ಉದ್ಘಾಟಿಸುವರು. ಪ್ರಗತಿಪರ ರೈತ ದೊಡ್ಡಪ್ಪ ಕಾಳಪ್ಪಗೋಳ ಅಧ್ಯಕ್ಷತೆ ವಹಿಸಿವರು. ಸಿದ್ದೇಶ್ವರ ೀಗಳ ಭಾವಚಿತ್ರಕ್ಕೆ ಪುಷ್ಪಾರ್ಚಣೆಯನ್ನು ಸಂಸದರಾದ ರಮೇಶ ಜಿಗಜಿಣಗಿ, ಪಿ.ಸಿ.ಗದ್ದಿಗೌಡರ, ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಎಸ್.ಕೆ.ಬೆಳ್ಳುಬ್ಬಿ ಮಾಡುವರು. ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ, ವಿಪ ಸದಸ್ಯರಾದ ಎಚ್.ಆರ್.ನಿರಾಣಿ, ಪಿ.ಎಚ್.ಪೂಜಾರಿ, ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ತಹಶೀಲ್ದಾರ್ ವಿನೋದ ಹತ್ತಳ್ಳಿ, ಬಿಇಒ ಆರ್.ಎಸ್.ಆದಾಪೂರ, ಸಿಪಿಐ ಹಣಮಂತ ಸಣಮನಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವರು. ಧಾರವಾಡ ಜಿಪಂ ಉಪ ಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ ಸಾಧನೆ ಸಾಧಕರ ಸ್ವತ್ತು ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡುವರೆಂದು ತಿಳಿಸಿದರು.



ಕಲಾದಗಿ: ಸಮೀಪದ ಶಾರದಾಳ ಗ್ರಾಮದ ಹಿರಿಯ ರೈತರು ಗ್ರಾಮದ ಆದಿಶಕ್ತಿ ದೇವಸ್ಥಾನದಲ್ಲಿ ಬಿತ್ತನೆ ಪರಿಕರಗಳಾದ ನೂತನವಾಗಿ ತಯಾರಿಸಿರುವ ಕೂರಿಗೆ ಪೂಜೆ ನೆರವೇರಿಸಿದರು. ದುಸಂಗೆಪ್ಪ ಕೊಪ್ಪದ, ಗೌಡಪ್ಪ ಪಾಟೀಲ, ರಾಮಣ್ಣ ಕೊಪ್ಪದ, ದೇವೆಂದ್ರಪ್ಪ ಕುರಿ, ಯಲ್ಲಪ್ಪ ಬೀರನ್ನವರ, ಸಿದ್ದಪ್ಪ ಬೀರನ್ನವರ, ಉಮೇಶ ಕಂಬಾರ, ಸುಖದೇವ ಬಡಿಗೇರ, ಬಸವರಾಜ ಬಡಿಗೇರ ಇದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ಜಮಖಂಡಿ: ನಗರದ ಡಾ.ಅಂಬೇಡ್ಕರ ವೃತ್ತದಿಂದ ಚಟ್ಟುಸಿಂಗ್ ವೃತ್ತದ ವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ ಸದ್ಯದಲ್ಲೇ ಪ್ರಾರಂಭವಾಗಲಿದೆ ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.

ನಗರದ ಎಪಿಎಂಸಿ ಆವರಣದಲ್ಲಿ ಶನಿವಾರ ವಾಣಿಜ್ಯ ಮಳಿಗೆಗಳ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನರವೇರಿಸಿ ಮಾತನಾಡಿದರು. ಕ್ಷೇತ್ರದಾದ್ಯಂತ ಹಲವಾರು ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಹುನ್ನೂರು ಗ್ರಾಮದಲ್ಲಿ ಚಾವಡಿಯಿಂದ ಶ್ರೀಶೈಲ ಸಾವಳಗಿ ಅವರ ಮನೆಯ ವರೆಗೆ, ಬಸವೇಶ್ವರ ಕಾಲನಿಯ ಚೆನ್ನಪ್ಪ ಬಿರಾದಾರ ಮನೆ ಎದುರಿನ ರಸ್ತೆ ಸೇರಿ 50 ಲಕ್ಷ ರೂ.ವೆಚ್ಚದಲ್ಲಿ ಸಿಸಿರಸ್ತೆ ನಿರ್ಮಿಸುವ ಕಾಮಗಾರಿ, ನಗರದ ಎಪಿಎಂಸಿ ಆವರಣದಲ್ಲಿ 69 ಲಕ್ಷ ರೂ. ವೆಚ್ಚದಲ್ಲಿ 5 ಶೆಡ್‌ಗಳು, 10 ಚಿಕ್ಕ ಮಳಿಗೆಗಳು ನಿರ್ಮಾಣ ಕಾಮಗಾರಿ, 9 ಲಕ್ಷ ರೂ. ವೆಚ್ಚದಲ್ಲಿ ನೀರಿನ ಹ್ಯಾಳ ನಿರ್ಮಾಣ,11 ಲಕ್ಷ ರೂ.ವೆಚ್ಚದಲ್ಲಿ

ಗೋಠೆ ಗ್ರಾಮದಲ್ಲಿ ಪವಾಡ ಬಸವೇಶ್ವರ ಸಮುದಾಯ ಭವನ ನಿರ್ಮಾಣ, 10 ಲಕ್ಷ ರೂ. ವೆಚ್ಚದಲ್ಲಿ ತುಂಗಳ ಗ್ರಾಮದಲ್ಲಿ ಕಮರೀ ಮಠದ ಹತ್ತಿರ ಸಮುದಾಯ ಭವನ ನಿರ್ಮಾಣ ಸೇರಿದಂತೆ



ವಿವಿಧ ಕಾಮಗಾರಿಗೆಳಿಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಕೃಷ್ಣಾ ನದಿ ನೀರು ಬತ್ತಿಹೋಗಿದ್ದರಿಂದ ನೀರಿನ ಸಮಸ್ಯೆ ಉಂಟಾಗಿದೆ. ಟಾಸ್ಕಫೋರ್ಸ್ ಸಭೆನಡೆಸಿ ಬೋರ್‌ವೆಲ್‌ಗಳ ದುರಸ್ತಿ, ಅಗತ್ಯ ವಿದ್ದಲ್ಲಿ ಟ್ಯಾಂಕರ್‌ಗಳಿಂದ ನೀರು ಪೂರೈಸಲು ಸೂಚಿಸಲಾಗಿದ್ದು ಶೇ.90ರಷ್ಟು ಸಮಸ್ಯೆ ಬಗೆಹರಿಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಪಿಎಂಸಿ ಎಇಇ ಎಲ್.ಬಿ.ಲಮಾಣಿ, ಕಾರ್ಯದರ್ಶಿ ಆನಂದ ರತ್ನಾಕರ, ಮಲ್ಲುದಾನಗೌಡ, ಈಶ್ವರ ಆದೆಪ್ಪನವರ, ಮಲ್ಲು ಚನವೀರ, ಸುರೇಶಗೌಡ ಪಾಟೀಲ, ವಿಶ್ವಾಸ ಪಾಟೀಲ, ವಿನಾಯಕ ಪವಾರ, ಪ್ರದೀಪ ಮಹಾಲಿಂಗಪೂರಮಠ, ಪ್ರಕಾಶ ಅರಕೇರಿ, ಶ್ರೀಧರ ಕಂಬಿ, ಪ್ರದೀಪ ನಂದೆಪ್ಪನವರ, ಶಂಕರ ಕಾಳೆ, ಬಸು ಕಡಪಟ್ಟಿ, ಶ್ರೀಶೈಲ ದಡ್ಡಿಮನಿ, ಸಂಜು ಯಮಗಾರ ಇದ್ದರು.

ಕ್ಷೇತ್ರಕ್ಕೆ ಹೆಚ್ಚಿನ ಅನುದಾನ

ರಾಜ್ಯದ ಕಾಂಗ್ರೆಸ್ ಸರ್ಕಾರದ ಎರಡನೇ ಇನ್ನಿಂಗ್ಸ್ ಪ್ರಾರಂಭವಾಗಲಿದ್ದು, ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರೊಂದಿಗೆ ಉತ್ತಮ ಬಾಂಧವ್ಯವಿದೆ. ಅವರು ಜಮಖಂಡಿ ಕ್ಷೇತ್ರದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಿದ್ದಾರೆ ಎಂಬ ಭರವಸೆ ಇದೆ. ಧಾರ್ಮಿಕ ಆಧ್ಯಾತ್ಮಿಕ ವ್ಯಕ್ತಿ ಆಗಿರುವ ಡಿ.ಕೆ.ಶಿವಕುಮಾರ ಮಠಮಾನ್ಯಗಳಿಗೆ ಸಾಕಷ್ಟು ಅನುದಾನ ನೀಡಲಿದ್ದಾರೆ ಎಂಬ ಭರವಸೆ ಇದೆ ಎಂದು ಹೇಳಿದರು.

ಹೇಮರೆಡ್ಡಿ ಮಲ್ಲಮ್ಮ ತ್ಯಾಗದ ಸಂಕೇತ

ಬಾಗಲಕೋಟೆ: ಮಹಿಳಾ ಕುಲಕ್ಕೆ ಸ್ಫೂರ್ತಿಯಾಗಿರುವ ಹೇಮರೆಡ್ಡಿ ಮಲ್ಲಮ್ಮ ಪ್ರೀತಿ, ತ್ಯಾಗ, ಸಹನೆಯ ಸಂಕೇತ ಎಂದು ಮಾಜಿ ಶಾಸಕಿ, ಕರ್ನಾಟಕ ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ರೆಡ್ಡಿ ಹೇಳಿದರು.

ನಗರದ ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ಹಾಗೂ ರಡ್ಡಿ ಸಮಾಜದ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಶನಿವಾರ ನಡೆದ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಮಲ್ಲಮ್ಮ ಸದ್ಗುಣೆಯಾಗಿ ಆದರ್ಶದ ಬದುಕು ಬಾಳಿ ದೇವತೆಯ ಸ್ಥಾನ ಪಡೆದು ಪೂಜಿತಗೊಳ್ಳುವ ಮೂಲಕ ಮಹಿಳಾ ಕುಲಕ್ಕೆ ಸ್ಫೂರ್ತಿಯಾಗಿದ್ದಾಳೆ ಎಂದ ಸೌಮ್ಯ ರಡ್ಡಿ, ಮಲ್ಲಮ್ಮನ ತತ್ವಾದರ್ಶಗಳನ್ನು ಮುಂದಿನ ಪೀಳಿಗೆಗೆ ತಿಳಿಸಬೇಕಾದ ಆಗತ್ಯತೆಯಿದೆ ಎಂದು ಹೇಳಿದರು.

ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ಹೇಮರಡ್ಡಿ ಮಲ್ಲಮ್ಮನ ಆದರ್ಶಮಯ ಬದುಕು ಜೀವನದ ಸಾರ್ಥಕತೆಗೆ ಪ್ರೇರಣೆಯಾಗಿದೆ. ಮಹಾತ್ಮರು, ಶರಣರ ಜಯಂತಿ ಆಚರಣೆಗಳು ಮನುಕುಲದ ಬದುಕಿಗೆ ಪೂರಕವಾಗಿ ನಡೆಯುತ್ತವೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹಾಗೂ ವಿಧಾನ ಪರಿಷತ್ ಸದಸ್ಯ ಪಿ.ಎಚ್.ಪೂಜಾರ ಮಾತನಾಡಿ, ಭಕ್ತಿ, ಪ್ರೀತಿ, ಸಹಕಾರದ ಸಾಕಾರಮೂರ್ತಿ ಎನಿಸಿಕೊಂಡಿದ್ದ ಹೇಮರಡ್ಡಿ ಮಲ್ಲಮ್ಮ ಮಹಿಳಾ ಕುಲದ ದಿಕ್ಸೂಚಿ ಆಗಿದ್ದಾಳೆ ಎಂದು ಹೇಳಿದರು.

ಸದ್ಬೋಧನೆ ನೀಡಿದ ಆಧ್ಯಾತ್ಮಿಕ ಚಿಂತಕ ಪ್ರದೀಪ ಗುರೂಜಿ ಮಾತನಾಡಿದರು. ರಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಬೀಳಗಿಯ ಎಂ.ಎನ್.ಪಾಟೀಲ ಮಾತನಾಡಿದರು. ಆರ್.ಎಲ್.ಕಟಗೇರಿ, ಮಲ್ಲಿಕಾರ್ಜುನ ಮೆಳ್ಳಿಗೇರಿ, ಡಿ.ಎಂ.ಫೈಲ್, ಚಂದ್ರಶೇಖರ ಕಾಮಾ, ರಾಮನಗೌಡ ಜಕ್ಕನಗೌಡ್ರ, ಪಂಡಿತ ಮಾಚಾ, ನಾರಾಯಣ ಹಾದಿಮನಿ, ಚಂದ್ರಶೇಖರ ಅರಳಿಮಟ್ಟಿ, ಮಾಲತೇಶ ಅಮಾತೆಪ್ಪನವರ ಇದ್ದರು.

ಬೆನಕಟ್ಟಿಯ ಹೇಮರಡ್ಡಿ ಮಲ್ಲಮ್ಮ ಭಜನಾ ಮಂಡಳಿ ವೇಮನ ವಚನ ಸುಧೆ ಪ್ರಸ್ತುತ ಪಡಿಸಿದರು. ಎಸ್.ಟಿ.ಬೆಳಕೊಪ್ಪದ ಸ್ವಾಗತಿಸಿದರು. ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ಅಧ್ಯಕ್ಷ ಮಹೇಶ ಕಕರಡ್ಡಿ ಮಾತನಾಡಿದರು. ಸೋನಾ ಕಟಗೇರಿ ಮತ್ತು ಪಾಂಡು ಕಟಗೇರಿ ನಿರೂಪಿಸಿದರು. ನಕುಲ ಬೆಳ್ಳುಬ್ಬಿ ವಂದಿಸಿದರು.



ಕಸಾಪ ದತ್ತಿನಿಧಿ ಪ್ರಶಸ್ತಿ ಪ್ರದಾನ ಬೇರೆಡೆ ಆಯೋಜನೆ: ವಿಷಾದ

ಬೀಳಗಿ: ಬಾಗಲಕೋಟೆ ಜಿಲ್ಲೆಯ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೀಳಗಿ (2005) ಹಾಗೂ ಬೀಳಗಿ ತಾಲೂಕಾ ಪ್ರಥಮ ಸಾಹಿತ್ಯ ಸಮ್ಮೇಳನ ಬೀಳಗಿ (2008) ಎರಡು ದತ್ತಿನಿಧಿಗಳನ್ನು ಬೀಳಗಿ ತಾಲೂಕಿನಲ್ಲಿ ಕಾರ್ಯಕ್ರಮ ಆಯೋಜನೆ ಮಾಡಬೇಕಾಗಿತ್ತು. ಅದು ದತ್ತಿ ನಿಧಿಯ ಆಶಯ ಕೂಡಾ ಆಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ತಿಳಿಸಿದ್ದಾರೆ. ಹೀಗಿದ್ದಾಗ ಆಡಳಿತಾತ್ಮಕವಾಗಿ ಸಂಘಟನಾತ್ಮಕವಾಗಿ ಬಂದ ಸಲಹೆಗಳನ್ನು ಅನುಲಕ್ಷಿಸಿ ದತ್ತಿ ಪ್ರಶಸ್ತಿ ಕಾರ್ಯಕ್ರಮವನ್ನು ಬೇರೆ ತಾಲೂಕಿನಲ್ಲಿ ನಡೆಸಬೇಕಾಗಿ ಬಂತು. ಈ ವಿಷಯದಲ್ಲಿ ಬೀಳಗಿ ತಾಲೂಕಿನ ಸಾಹಿತಿಗಳಿಗೆ ಸೃಜನಶೀಲರಿಗೆ ಮನಸ್ಸಿಗೆ ನೋವಾಗಿದ್ದರೆ ನಾನು ಈ ವಿಷಯವಾಗಿ ಬೇಸರತ್ತಾಗಿ ವಿಷಾದ ವ್ಯಕ್ತಪಡಿಸುತ್ತೇನೆ.

ನನಗೆ ತವರು ಮನೆಯಂತಿರುವ ಬೀಳಗಿಯನ್ನು, ಬೀಳಗಿ ತಾಲೂಕನ್ನು ಕಡೆಗಣಿಸುವ ಯಾವ ಉದ್ದೇಶವು ನನಗೆ ಇರುವುದಿಲ್ಲ. ಈ ವಿಷಯವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಗೌರವಾನ್ವಿತ ಸದಸ್ಯರುಗಳ ಮನಸ್ಸಿಗೆ ನೋವಾಗಿದ್ದು ನನಗೆ ಗೊತ್ತಾಗಿದೆ. ಅದಕ್ಕೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ. ಮುಂದೆ ಈ ರೀತಿಯ ಸಾಂಸ್ಕೃತಿಕ ಅಪವ್ಯಯಗಳಾಗದಂತೆ ನಾನು ಕಾರ್ಯ ನಿರ್ವಹಿಸುತ್ತೇನೆಂದು ಕಸಾಪ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ತಿಳಿಸಿದ್ದಾರೆ.

ಶಾಸಕ ಕಾಶಪ್ಪನವರಿಗೆ ಮಂತ್ರಿ ಸ್ಥಾನ ನೀಡಿ

ಬಾಗಲಕೋಟೆ: ಎರಡು ಬಾರಿ ಹುನಗುಂದ ಮತಕ್ಷೇತ್ರದಿಂದ ಆಯ್ಕೆಯಾಗಿ ಕ್ಷೇತ್ರದ ಜನರ ಅಚ್ಚು ಮೆಚ್ಚಿನ ನಾಯಕರಾಗಿರುವ ಹಾಗೂ ಎಲ್ಲವರ್ಗದವರ ಅಭಿವೃದ್ಧಿಗೆ ಕೆಲಸ ಮಾಡುವ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಸಚಿವ ಸ್ಥಾನವನ್ನು ನೀಡಬೇಕು ಎಂದು ಹುನಗುಂದ ಮತಕ್ಷೇತ್ರದ ಕಾಂಗ್ರೆಸ್ ನಾಯಕ ವಿಜಯಮಹಾಂತೇಶ ಗದ್ದನಕೇರಿ ಆಗ್ರಹಿಸಿದರು.


ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಯಾಗಿ ಸಿದ್ಧರಾಮಯ್ಯನವರು ಎಂಟು ವರ್ಷ ಆಡಳಿತ ನಡೆಸಿದ್ದು ರಾಜ್ಯದ ಜನರಿಗೆ ಉತ್ತಮ ಯೋಜನೆಗಳನ್ನು ಜಾರಿ ಮಾಡಿದ್ದಾರೆ. ಸಿದ್ಧರಾಮಯ್ಯನವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ರಾಜಕೀಯದಿಂದ ನಿವೃತ್ತಿಯಾಗಿಲ್ಲ ಎಂದು ಹೇಳಿದರು.

ಕಾಶಪ್ಪನವರ ಕುಟುಂಬ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠೆಯಾಗಿದ್ದು ವಿಜಯಾನಂದ ಅವರ ತಂದೆ ಕ್ಷೇತ್ರದಲ್ಲಿ ಶಾಸಕರಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಇದಲ್ಲದೇ ಅವರ ತಾಯಿ ಕೂಡ ಶಾಸಕರಾಗಿ ಕೆಲಸ ಮಾಡಿದ್ದಾರೆ. ವಿಜಯಾನಂದವರು ತಮ್ಮ ತಂದೆಯವರ ಪ್ರಭಾವದಿಂದ ರಾಜಕೀಯ ಪ್ರವೇಶ ಮಾಡಿಲ್ಲ, ವಿದ್ಯಾರ್ಥಿ ಜೀವನದಿಂದಲೇ ಎನ್‌ಎಸ್‌ಯು ಘಟಕದದ ಮೂಲಕ ರಾಜಕೀಯ ಪ್ರವೇಶ ಮಾಡಿದ್ದಾರೆ. 22 ವರ್ಷಗಳ ಕಾಲ ರಾಜಕೀಯ ಜೀವನ ನಡೆಸಿರುವ ಕಾಶಪ್ಪನವರು ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಕ್ಷೇತ್ರಕ್ಕೆ ಸೀಮಿತವಾಗದೇ ರಾಜ್ಯದಲ್ಲಿಯೂ ಅವರ ಸೇವೆ ಅಗತ್ಯವಾಗಿದ್ದು ಹೀಗಾಗಿ ಪಕ್ಷದ ಹೈ ಕಮಾಂಡ್ ಮಂತ್ರಿ ಸ್ಥಾನವನ್ನು ವಿಜಯಾನಂದ ಕಾಶಪ್ಪನವರಿಗೆ ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷದ ಮುಖಂಡ ಜಬ್ಬಾರ ಕಲಬುರ್ಗಿ ಮಾತನಾಡಿ, ವಿಜಯಾನಂದ ಕಾಶಪ್ಪನವರ, ಮುಸ್ಲಿಂ ಸಮುದಾಯ, ದಲಿತರು, ಹಿಂದುಳಿದವರ ನಾಯಕರಾಗಿ ಹೊರಹೊಮ್ಮಿದ್ದಾರೆ. ನಮ್ಮ ಪರವಾಗಿ ಯಾವುದೇ ಸಮಸ್ಯೆ ಇದ್ದರು ಸ್ಪಂದಿಸುವ ಕೆಲಸವನ್ನು ಮಾಡುತ್ತಾರೆ. ಇಂತಹ ನಾಯಕನಿಗೆ ಕಾಂಗ್ರೆಸ್ ಪಕ್ಷದ ವರಿಷ್ಠರು ಮಂತ್ರಿಸ್ಥಾನವನ್ನು ನೀಡಬೇಕು ಎಂದು ಆಗ್ರಹಿಸಿದರು. ಕಾಶಪ್ಪನವರ ಮಂತ್ರಿಯಾದರೆ ಈ ಭಾಗದಲ್ಲಿ ಇರುವ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಹುಡುಕುವ ನಾಯಕತ್ವ ಅವರಲ್ಲಿದೆ ಎಂದು ಹೇಳಿದರು.

ಮುಖಂಡಮಲ್ಲಣ್ಣಯಲಿಗಾರಮಾತನಾಡಿ, ಕೆಪಿಸಿಸಿ ವರಿಷ್ಠರು, ರಾಷ್ಟ್ರೀಯ ನಾಯಕರು ಶಾಸಕ ವಿಜಯಾನಂದ ಕಾಶಪ್ಪನವರಿಗೆ ಮಂತ್ರಿ ಸ್ಥಾನ ಕೊಡಬೇಕು ಎಂದು ಒತ್ತಾಯಿಸಿದರು.

ಹುನಗುಂದ ಕಾಂಗ್ರೆಸ್ ಪಕ್ಷದ ಮಾಧ್ಯಮ ವಕ್ತಾರ ಅಮರೇಶ ನಾಗೂರ, ಶರಣಪ್ಪ ಆಮಗಾಳ, ರಜಾಕ್ ಹಡಗಾರ, ಮಹಾಂತೇಶ ಅವಾರಿ ಇದ್ದರು.



ವಿಶಿಷ್ಟಚೇತನರ ಸಮಸ್ಯೆಗಳಿದ್ದಲ್ಲಿ ನೇರವಾಗಿ ಸಂಪರ್ಕಿಸಲು ಸೂಚನೆ

ಗುಳೇದಗುಡ್ಡ: ಎಲ್ಲ ಇಲಾಖೆಗ ಳಲ್ಲಿ ನಿಗದಿಪಡಿಸಿದ ಒಟ್ಟು ಅನುದಾನದಲ್ಲಿ ಶೇ.5ರಷ್ಟು ಅನುದಾನವನ್ನು ಕಡ್ಡಾಯವಾಗಿ ಖರ್ಚು ಮಾಡಿ, ಅಗತ್ಯ ಮಾಹಿತಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಬೇಕು ಎಂದು ತಹಶೀಲ್ದಾರ್ ಎಸ್.ಎ.ಬೊಮ್ಮಣ್ಣವರ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಯಲ್ಲಿ ನಡೆದ ತಾಲೂಕು ಮಟ್ಟದ ವಿಶಿಷ್ಟಚೇತನರ ಕುಂದುಕೊರತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿಶಿಷ್ಟಚೇತನರು ತಮ್ಮ ಸಮಸ್ಯೆಗಳಿದ್ದಲ್ಲಿ ಲಿಖಿತವಾಗಿ ಅಥವಾ ನೇರವಾಗಿ ಸಂಪರ್ಕಿ ಸಬೇಕು. ಇದುವರೆಗೆ ಮೂರು ತಿಂಗಳ ವಿಕಲಚೇತನರ ಪೋಷಣಾ ಭತ್ಯೆ ಅನುದಾನ ಜಮಾ ಆಗಿಲ್ಲ, ಸರ್ಕಾರದ ಹಂತದಿಂದ ಜಮಾ ಮಾಡುತ್ತಾರೆಬಸ್ ನಿಲ್ದಾಣದಲ್ಲಿ ವಿಶೇಷ ಶೌಚಾಲಯ ನಿರ್ಮಾಣ ಮಾಡಬೇಕು. ಬಸ್‌ನಲ್ಲಿ ವಾಸಸ್ಥಳದಿಂದ 100 ಕಿ.ಮೀ. ಪ್ರಯಾಣಿಸಲು ಅವಕಾಶ ಇದ್ದು, ಮಾನವೀಯತೆಯಿಂದ ವರ್ತಿಸಲು, ನಿಗದಿಪಡಿಸಿದ ಆಸನ ಕೂಡಲು ಅವಕಾಶ ಮಾಡಿಕೊಡಬೇಕು ಎಂದು ಸೂಚಿಸಿದರು.

ವಿಶಿಷ್ಟಚೇತನರ ಸಂಘದ ತಾಲೂಕಾಧ್ಯಕ್ಷ ಹುಚ್ಚೇಶ ಯಂಡಿಗೇರಿ ಮಾತನಾಡಿ, ವಿಶಿಷ್ಟಚೇತನರ ಕುಂದುಕೊರತೆ ಸಭೆ ಪ್ರತಿ ಮೂರು ತಿಂಗಳಿಗೊಮ್ಮೆ ಜರುಗಿಸಬೇಕು. ಕಟಾಚಾರದ ಸಭೆ ಆಗಬಾರದು. ಗೈರಾದ ಅಧಿಕಾರಿಗಳ



ಮೇಲೆ ಶಿಸ್ತಿನ ಕ್ರಮಕೈಗೊಳ್ಳ ಬೇಕು. ಗುಳೇದಗುಡ್ಡದಲ್ಲಿ ವಿಶಿಷ್ಟ ಚೇತನರ ಸಮುದಾಯ ಭವನ ನಿರ್ಮಾಣ ಮಾಡಬೇಕು ಎಂದರು.

ಕರವೇ ತಾಲೂಕಾಧ್ಯಕ್ಷ ರವಿ ಅಂಗಡಿ, ತಾಲೂಕು ವಿಕಲಚೇತನರ ಸಂಘದ ಅಧ್ಯಕ್ಷ ಹುಚ್ಚೇಶ ಯಂಡಿಗೇರಿ, ತಾಲೂಕು ವಿವಿದೊದ್ದೇಶ ಕಾರ್ಯಕರ್ತ ಮಹಾಂತೇಶ ಪಾಟೀಲ, ಸಂತೋಷ ಯರಗುಂಟಿ, ಎಸ್.ವೈ.ಹೊಸಮನಿ, ಎಂ.ಎಂ. ದೋಟೀಗಾರ, ಯಮನಪ್ಪ ಕಂಬಾರ, ಪರಶುರಾಮ ಕಲಾಲ, ಹುಚ್ಚಮ್ಮ ಭಂಗಿ, ಮಂಜುಳಾ ಹಡಪದ, ಕೋನವ್ವ ಭಗವತಿ, ಪ್ರವೀಣ ಅರುಹುಣಶಿ, ಸಾಗರ ಬಡಿಗೇರ, ಬೀರಪ್ಪ ಕುರಿ, ಎ.ವೈ.ಅಳ್ಳೆಪ್ಪನವರ, ರಂಗಪ್ಪ ಓಣಿ, ಭೀಮಪ್ಪ ನೀಲನ್ನವರ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ಹುನಗುಂದ ಪಿಕೆಪಿಎಸ್ 10 ಜನ ನಿರ್ದೇಶಕರ ರಾಜೀನಾಮೆ

ಹುನಗುಂದ: ಪಟ್ಟಣದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಅಧ್ಯಕ್ಷಸ್ಥಾನದ ಅಧಿಕಾರ ಹಂಚಿಕೆ ವಿಷಯ ಸಧ್ಯ ಅಧ್ಯಕ್ಷನನ್ನು ಹೊರತು ಪಡಿಸಿ 10 ಜನ ನಿರ್ದೇಶಕರ ರಾಜೀನಾಮೆಯವರಗೆ ಬಂದು ತಲುಪಿದೆ. ಹುನಗುಂದ ಪಿಕೆಪಿಎಸ್ ನ 12 ಜನ ನಿರ್ದೇಶಕ ಮಂಡಳಿಯ ಪೈಕಿ ಈಗಾಗಲೇ ಒಂದು ಸ್ಥಾನ ನೌಕರಿ ಹೋಗಿದ್ದರಿಂದ ಖಾಲಿ ಇದ್ದು, ಉಳಿದ 11 ಜನ ನಿರ್ದೇಶಕರಲ್ಲಿ ಸಧ್ಯ 9 ಜನ ತಮ್ಮ ಸ್ಥಾನಕ್ಕೆ ವೈಯಕ್ತಿಕ ಕಾರಣ ನೀಡಿ ಸಂಘದ ಮುಖ್ಯ ಕಾರ್ಯನಿರ್ವಾಹಕರಿಗೆ ಮಂಗಳವಾರ ಮತ್ತು ಬುಧವಾರ ರಾಜೀನಾಮೆ ನೀಡಿದ್ದಾರೆ.ಆದರೆ ರಾಜೀನಾಮೆ ಪತ್ರದಲ್ಲಿ ದಿನಾಂಕ ನಮೂದಿಸದೇ ರಾಜೀನಾಮೆ ಸಲ್ಲಿಸಿರುವುದು ಬಹು ಕುತೂಹಲಕ್ಕೆ ಕಾರಣವಾಗಿದೆ.

ಕುತೂಹಲ ಮೂಡಿಸಿದ ನಿರ್ದೇಶಕರ ನಡೆ

ರವಿ ಮಹಾಂತಪ್ಪ ಹುಚನೂರ, ರವಿ ಸಂಗಪ್ಪ ಹೂಲಗೇರಿ, ದೊಡ್ಡಬಸಪ್ಪ ರಾಮನಗೌಡ ಬೆಳ್ಳಿಹಾಳ, ಕುಮಾರ ಶಿವಪುತ್ರಪ್ಪ ಘಟ್ಟಿಗನೂರ, ಚೇತನ ಲಿಂಬಣ್ಣ ಮುಕ್ಕಣ್ಣವರ, ದೇವಪ್ಪ ರಾಮಪ್ಪ ಡಂಬಳ, ಸಂಗಮೇಶ ಸಂಗನಬಸಪ್ಪ ಭದ್ರಶೆಟ್ಟಿ, ದೀಪಾ ಮಹಾಂತೇಶ ಸುಂಕದ,ಅನ್ನಪೂರ್ಣ ಶರಣಪ್ಪ ಹೊಸೂರ ಇವರೆಲ್ಲರೂ ಮಂಗಳವಾರ ರಾಜೀನಾಮೆ ನೀಡಿದರೇ ಉಪಾಧ್ಯಕ್ಷ ಬಸಪ್ಪ ಯಂಕಪ್ಪ ಹಾದಿಮನಿ ಮಂಗಳವಾರ ತಮ್ಮ ಉಪಾಧ್ಯಕ್ಷ ಸ್ಥಾನಕ್ಕೆ ಮಾತ್ರ ರಾಜೀನಾಮೆ ಸಲ್ಲಿಸಿದ್ದರು. ಬುಧವಾರ ಅವರು ಕೂಡಾ ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎನ್ನುವುದ್ದನ್ನು ಸಂಘದ ಮುಖ್ಯ ಕಾರ್ಯನಿರ್ವಾಹಕರು ಖಚಿತ ಪಡಿಸಿದ್ದಾರೆ.

> ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಗಳಿಲ್ಲ ರಾಜೀನಾಮೆ ಕೊಡುವ ಪ್ರಶ್ನೆ ಇಲ್ಲ, ನಿರ್ದೇಶಕರು ವೈಯಕ್ತಿಕ ಕಾರಣ ನೀಡಿ ರಾಜೀನಾಮೆ ನೀಡಿದ್ದಾರೆ. ರಾಜೀನಾಮೆ ನೀಡುವಂತೆ ಶಾಸಕರು ಸೂಚಿಸಿದ್ದು ನಿಜ. ಆದರೆ ನಾವು ಅಧ್ಯಕ್ಷರಾಗುತ್ತೇವೆ ನೀವು ರಾಜೀನಾಮೆ ನೀಡಿ ಅಂತಾ ನನಗೆ ಯಾರು ಕೇಳಿಲ್ಲ, ಹಂಗೇನಾದರೂ ನನಗೆ ರಾಜೀನಾಮೆ ನೀಡುವಂತೆ ಒತ್ತಾಯಿಸಿದ್ದರೇ ನಾನು ರಾಜೀನಾಮೆ ನೀಡಲು ಸಿದ್ಧ.
>
> ■ ಮಹಾಂತೇಶ ಹೊಸೂರ, ಅಧ್ಯಕ್ಷರು

ಸಾವರ್ಕರ್ ಆದರ್ಶಗಳು ಇಂದಿಗೂ ಪ್ರೇರಣೆ

ಲೋಕಾಪುರ: ಜೀವನವನ್ನೇ ರಾಷ್ಟ್ರಕ್ಕಾಗಿಸ್ವಾತಂತ್ರ್ಯ ಹೋರಾಟಕ್ಕಾಗಿ ಮುಡುಪಾಗಿಟ್ಟ ಭಾರತಮಾತೆಯ ಸುಪುತ್ರ, ಕ್ರಾಂತಿಕಾರಿ ಸ್ವಾತಂತ್ರ್ಯ ವೀರ ಸಾವರ್ಕರ್ ಎಂದೇ ಪ್ರಸಿದ್ದರಾದ ವಿನಾಯಕ ದಾಮೋದರ ಸಾ ವರ್ಕರ್ ಅವರ ಆದರ್ಶಗಳು ಇಂದಿಗೂ ಪ್ರೇರಣೆಯಾಗಿವೆ ಎಂದು ಯುವ ಮುಖಂಡ ಭೀಮಶಿ ಅವರಾದಿ ಹೇಳಿದರು.

ಪಟ್ಟಣದ ಹಿರೇಮಠ ಮುಂದೆ ವೀರ ಸಾವರ್ಕರ್ ಗಜಾನನ ಯುವಕ ಮಂಡಳದ ವತಿಯಿಂದ ಹಮ್ಮಿಕೊಂಡ ವೀರ ಸಾವರ್ಕರ ಜಯಂತಿ ಪ್ರಯುಕ್ತ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ನಮ್ಮ ಶಾಲಾ ಪಠ್ಯಪುಸ್ತಕಗಳಲ್ಲಿ ವೀರ ಸಾವರ್ಕರ್, ಭಗತ್ ಸಿಂಗ್, ಹಾಗೂ ಸುಭಾಷಚಂದ್ರಬೋಸ್ ಅವರಂತಹ ಸ್ವಾತಂತ್ರ್ಯ ಹೋರಾಟಗಾರರ ಕುರಿತು ಸಮಗ್ರ ಮಾಹಿತಿ ಇಲ್ಲದಿರುವುದು ವಿಷಾದನೀಯ ಸಂಗತಿ. ಹಿಂದೂ ಸಮಾಜದಲ್ಲಿದ್ದ ಅಸ್ಪಶ್ಯತೆ ಮತ್ತು



ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಸಾವರ್ಕರ್ ಅವರು ಪತಿತ ಪಾವನ ಮಂದಿರ ನಿರ್ಮಿಸಿ ಸಾಮಾಜಿಕ ಸುಧಾರಣಗೆ ಕೈಜೋಡಿಸಿದ್ದರು ಎಂದರು.

ಶಿಕ್ಷಕ ಸುನೀಲ ವಸ್ತ್ರದ ಮಾತನಾಡಿ, ಸಮಾಜದಲ್ಲಿ ದೇಶಭಕ್ತಿ ಮತ್ತು ರಾಷ್ಟ್ರಪ್ರೇಮದ ಮೌಲ್ಯಗಳನ್ನು ಯುವಜನತೆಗೆ ಪರಿಚಯಿಸುವುದು ಅತ್ಯಂತ ಅಗತ್ಯವಾಗಿದೆ, ವೀರ ಸಾವರ್ಕರ್ ಈ ಹೆಸರು ಕೇಳಿದರೆ ದೇಶದ ಅದೆಷ್ಟೋ ಯುವಕರು ಇಂದಿಗೂ ರೋಮಾಂಚನಗೊಳ್ಳುತ್ತಾರೆ, ಅವರ ಸ್ವಾತಂತ್ರ್ಯ ಹೋರಾಟ, ಹಿಂದೂತ್ವದ ಬಗ್ಗೆ ಅವರ ನಿಲುವು ಯುವಕರಿಗೆ ಅಚ್ಚುಮೆಚ್ಚು ಎಂದು ವಿವರಿಸಿದರು.

ಹಿರೇಮಠದ ಚಂದ್ರಶೇಖರ ಸ್ವಾಮೀಜಿ ಪೂಜೆ ಸಲ್ಲಿಸಿದರು. ರಕ್ಷಿತ ಕಡೆಬಾಗಿಲ, ಪ್ರಮೋದ ತೆಗ್ಗಿ, ಗೌರೀಶ ಹೂಗಾರ, ಭರತ ನರಗುಂದ, ಮಹೇಶ ರಾಮದುರ್ಗ, ಅರ್ಜುನ ಮಾನೆ, ವಿಜಯ ಮಾಳಿ, ಪ್ರಮುಲ್ ಉದಪುಡಿ, ನವೀನ ಚೌಧರಿ, ವೀರೇಶ ಹಿರೇಮಠ, ಅಕ್ಷಯ ನರಗುಂದ, ಬಸಯ್ಯ ಹಿರೇಮಠ, ಬಾಲಜಿ ಎನ್. ಹಣಮಂತ ಬುದ್ನಿ, ಭೀಮರಾವ ರೆಡ್ಡಿ, ಸೂರಜ ಕಡೆಬಾಗಿಲ, ಚೇತನ ಗಂಗಣ್ಣವರ, ಹರೀಶ, ಚೆನ್ನಯ್ಯ, ಶ್ರೀಶೈಲ ವೀರ ಸಾವರ್ಕರ್ ಗಜಾನನಯುವಕ ಮಂಡಳದ ಸರ್ವ ಸದಸ್ಯರು, ಸ್ಥಳೀಯರು ಇದ್ದರು.

ತಿಮ್ಮಾಪುರಗೆ ಡಿಸಿಎಂ ಸ್ಥಾನ ನೀಡಿ

ಜಮಖಂಡಿ: ರಾಜ್ಯದ ನೂತನ ಸರ್ಕಾರದಲ್ಲಿ ಹಿರಿಯ ನಾಯಕ, ಮಾಜಿಸಚಿವ ಆರ್.ಬಿ.ತಿಮ್ಮಾಪುರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಹಿರಿಯ ಮುಸ್ಲಿಂ ಮುಖಂಡ ಪಕೀರಸಾಬ ಭಾಗವಾನ ಒತ್ತಾಯಿಸಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಪ್ರಬಲ ಅಹಿಂದ ನಾಯಕರಾಗಿ ಗುರುತಿಸಿಕೊಂಡಿರುವ ತಿಮ್ಮಾಪೂರ ಅವರು ಉತ್ತರ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತಾ ಬಂದಿದ್ದಾರೆ. ಅತ್ಯಂತ ಅನುಭವಿ ರಾಜಕಾರಣಿಯಾಗಿರುವ ಅವರು, ಎಡಗೈ ಸಮುದಾಯದ ಉತ್ತರ ಕರ್ನಾಟಕದ ಏಕೈಕ ಪ್ರಮುಖ ನಾಯಕರಾಗಿದ್ದಾರೆ.



ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರ ಗೆಲುವಿನ ಹಿಂದೆ ತಿಮ್ಮಾಪೂರ ಅವರ ಚಾಣಾಕ್ಷ ನಡೆ ಹಾಗೂ ರಾಜಕೀಯ ತಂತ್ರಗಾರಿಕೆ ಪ್ರಮುಖ ಪಾತ್ರ ವಹಿಸಿದೆ. ಅವರಿಗೆ ಸೂಕ್ತ ಸ್ಥಾನಮಾನ ನೀಡುವುದರಿಂದ ಪಕ್ಷದ ಸಂಘಟನೆಗೆ ಆನೆ ಬಲ ಬಂದಂತಾಗುತ್ತದೆ ಎಂದರು.

ಮುಖಂಡರಾದ ಅಬುಬಕರ ಕುಡಚಿ, ಪೀರಾ ಖಾದ್ರಿ, ಮಲ್ಲಪ್ಪ ಚಾಮೋಜಿ, ಅಪ್ಪಾಸಾಬ ಮನಗೂಳಿ, ಹಾಜಿ ಅಲ್ತಾಫ ಸಗರ, ಹುಸೇನ ಟಿನಮೇಕರ ಹಾಗೂ ಶಾಹಿದ ಬಿಲಕೇರಿ ಮಾತನಾಡಿ, ಉತ್ತರ ಕರ್ನಾಟಕದ ಹಿತದೃಷ್ಟಿಯಿಂದ ಆರ್.ಬಿ.ತಿಮ್ಮಾಪುರ ಅವರಿಗೆ ತಕ್ಷಣವೇ ಡಿಸಿಎಂ ಸ್ಥಾನ ಕಲ್ಪಿಸಬೇಕು ಎಂದು ಜಂಟಿಯಾಗಿ ಒತ್ತಾಯಿಸಿದರು.

ದುಶ್ಚಟದಿಂದ ಯುವ ಪೀಳಿಗೆ ರಕ್ಷಿಸಿ: ಹೂಲಿ

ತೇರದಾಳ: ವಿಸ್ಮಯ ಜಗತ್ತಿನಲ್ಲಿ ಬದುಕುತ್ತಿರುವ ನಾವುಗಳು ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಕ್ಷಣಿಕ ಸುಖದ ಆಕರ್ಷಣೆಗೊಳಗಾಗಿ ದುಶ್ಚಟಗಳ ದಾಸರಾದರೆ ಅದು ನಮ್ಮ ನುಂಗಿಹಾಕುತ್ತದೆ ಎಂದು ಬನಹಟ್ಟಿಯ ದಿವಾನಿ ನ್ಯಾಯಾಧೀಶೆ ಸೌಮ್ಯ ಹೂಲಿ ಹೇಳಿದರು.

ಪಟ್ಟಣದ ಪ್ರತಿಷ್ಠಿತ ಡಿಜಿಬಿ. ಸಂಸ್ಥೆಯ ದಾನಿಗೊಂಡ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬಾಗಲಕೋಟೆ ತಾಲೂಕು ಕಾನೂನು ಸಮಿತಿ ಬನಹಟ್ಟಿ ಮತ್ತು ವಕೀಲರ ಸಂಘ ಬನಹಟ್ಟಿ ಹಾಗೂ ತೇರದಾಳ ಮತ್ತು ಪೊಲೀಸ್ ಇಲಾಖೆ ತೇರದಾಳ ಇವರ ಸಂಯುಕ್ತಾಶ್ರಯದಲ್ಲಿ ದಿ.29ರಂದು ಹಮ್ಮಿಕೊಂಡಿದ್ದ ವಿಶ್ವ ತಂಬಾಕು ನಿಷೇಧ ದಿನ ಹಾಗೂ ಕಾನೂನು ಅರಿವು ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ



ಯುವಪಿಳಿಗೆಯು ಮೋಜು ಮಸ್ತಿ ನೆಪದಲ್ಲಿ ದುಶ್ಚಟಕ್ಕೆ ಬಲಿಯಾಗಿ ತಮ್ಮ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕಾರಣ ಪಾಲಕರು, ಶಿಕ್ಷಕರು, ಇಲಾಖೆಯವರು, ಎಲ್ಲರೂ ಜಾಗೃತರಾಗ ಬೇಕಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಡಾ.ಮಹಾವೀರ ದಾನಿಗೊಂಡ ಮಾತನಾಡಿ, ದುಶ್ಚಟಗಳಿಂದಾಗಿ ನಮ್ಮ ಶರೀರದಲ್ಲಾಗುವ ಹಾಗೂ ಸಮಾಜದಲ್ಲಾಗುವ ದುಷ್ಪರಿಣಾಮವನ್ನು ಬಿಡಿಸಿ ಹೇಳಿದರು. ದುಶ್ಚಟಕ್ಕೆ ಬಲಿಯಾದ ವ್ಯಕ್ತಿಗೆ ತಪ್ಪು ಸರಿ ಎನ್ನುವ ಕಲ್ಪನೆ ಇರದೆ ಅಪರಾಧ ಕೃತ್ಯಗಳನ್ನು ಮಾಡಿ ಸಮಾಜಕ್ಕೆ ಕಂಟಕವಾಗುತ್ತಾನೆ. ಕಾರಣ ನಮ್ಮ ಪೀಳಿಗೆಯನ್ನು ದುಶ್ಚಟದಿಂದ ಕಾಪಾಡಬೇಕಾಗಿದೆ ಎಂದರು.

ಅತಿಥಿ ಉಪನ್ಯಾಸಕರಾಗಿ ಸರಕಾರಿ ಸಹಾಯಕ ಅಭಿಯೋಜಕ ಆರ್.ಜಿ. ಶಹಾ ಮಾತನಾಡಿ, ಜಾಹಿರಾತು ನಿಷೇಧ ಮತ್ತು ವ್ಯಾಪಾರ ನಿಯಂತ್ರಣ ಕಾಯ್ದೆಯ ಬಗ್ಗೆ ಸವಿವರವಾಗಿ ತಿಳಿಸಿದರು.

ಪ್ರಾಂಶುಪಾಲ ಡಾ.ಪ್ರಭಾಕರ ಅಪರಾಜ್, ಡಾ.ಶಕುಂತಲಾಸಾನಿಹಳ್ಳಿ, ಪಿಎಸ್ಐ ಶಿವಾನಂದ ಸಿಂಗನ್ನವರ, ಶ್ರೀಕಾಂತ ಕುಲಕರ್ಣಿ, ಡಾ.ನೇಹ ರೋಕಡೆ ಎಲ್ಲಾ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಶಿವಾನಂದ ಪಾಟೀಲಗೆ ಡಿಸಿಎಂ ಸ್ಥಾನ ನೀಡಿ

ಬಸವನಬಾಗೇವಾಡಿ: ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂದು ಯುವ ಮುಖಂಡ ನ್ಯಾಯವಾದಿ ಜೀವನ ಮ್ಯಾಗೇರಿ ಒತ್ತಾಯಿಸಿದ್ದಾರೆ.



ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಕಳೆದ ಮೂರು ವರ್ಷಗಳಿಂದ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ನಿರ್ದೇಶನಾಲಯ ಹಾಗೂ ಕೃಷಿ ಮಾರುಕಟ್ಟೆಯ ಸಚಿವರಾಗಿ ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದಾರೆ ರಾಜ್ಯದಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವ ನಾಯಕತ್ವವನ್ನು ತೋರಿದ್ದಾರೆ ಎಂದು ಹೇಳಿದ್ದಾರೆ. ಹೀಗಾಗಿ ಅವರ ರಾಜಕೀಯ ಅನುಭವ, ಆಡಳಿತ ಸಾಮರ್ಥ್ಯ ಮತ್ತು ಜನಪರ ಸೇವೆಯನ್ನು ಪರಿಗಣಿಸಿ, ಶಿವಾನಂದ ಪಾಟೀಲ ಅವರಿಗೆ ಉತ್ತಮ ಖಾತೆಯ ಜೊತೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿ ಪ್ರಾತಿನಿಧ್ಯ ನೀಡಬೇಕೆಂದು ತಿಳಿಸಿದ್ದಾರೆ.

ಬಸವನಬಾಗೇವಾಡಿ: ರಾಜ್ಯ ಸರಕಾರದಲ್ಲಿ ಕೃಷಿ ಮಾರುಕಟ್ಟೆ ಸಚಿವರಾಗಿದ್ದ ಶಿವಾನಂದ ಪಾಟೀಲರು ಲಿಂಗಾಯತ ಪಂಚಮಸಾಲಿ ಸಮುದಾಯದ ಪ್ರಭಾವಿ ನಾಯಕರಾಗಿದ್ದಾರೆ ಹಾಗೂ ಆರು ಬಾರಿ ಶಾಸಕರಾಗಿ ಎರಡು ಬಾರಿ ಸಚಿವರಾಗಿ ಕಾರ್ಯನಿರ್ವಹಿಸುವ ಮೂಲಕ ರಾಜ್ಯದ ಅಭಿವೃದ್ಧಿ ಶ್ರಮಿಸಿದ್ದಾರೆ ಲಿಂಗಾಯತ ಕೋಟಾದಲ್ಲಿ ಉಪಮುಖ್ಯಮಂತ್ರಿ ಸ್ಥಾನವನ್ನು ಕಾಂಗ್ರೆಸ್ ವರಿಷ್ಠರು ನೀಡಬೇಕೆಂದು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಜುಗೌಡ ಪಾಟೀಲ (ಹಂಚಿನಾಳ) ತಿಳಿಸಿದ್ದಾರೆ.



ಮುರಡಿಗೆ ಜಾನಪದ ಚೈತನ್ಯ ಪ್ರಶಸ್ತಿ ಪ್ರದಾನ

ದೇವರ ಹಿಪ್ಪರಗಿ: ದೇವರಹಿಪ್ಪರಗಿ ತಾಲೂಕಿನ ಪಡಗಾನೂರ ಗ್ರಾಮದ ಖ್ಯಾತ ಡೊಳ್ಳಿನ ಹಾಡಿನ ಗಾಯಕ ಗುರುನಾಥ ಮಾಸ್ತರ ಮುರಡಿ ಅವರಿಗೆ ಇವರು ಜಾನಪದ ಕ್ಷೇತ್ರದಲ್ಲಿ ಸಲ್ಲಿಸಿದ ವಿಶಿಷ್ಟ ಸೇವೆ ಪರಿಗಣಿಸಿ ಗುರು ಜ್ಞಾನಜ್ಯೋತಿ ಫೌಂಡೇಶನ್ (ರಿ) ವಿಜಯಪುರ ಶಿವು ಸರ್ ಕೋಚಿಂಗ್ ಕ್ಲಾಸಿಸ್ ವಾರ್ಷಿಕೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಗಣ್ಯರು ಶಿಕ್ಷಣ ತಜ್ಞರು, ಮುಖಂಡರು ಜಾನಪದ ಚೈತನ್ಯ ಪ್ರಶಸ್ತಿ ನೀಡಿ ಗೌರವಿಸಿದರು.



ನರೇಗಾದಲ್ಲಿ ಮಹಿಳೆಯರಿಗೆ ಶೋಷಣೆ: ಆರೋಪ



ಬಸವನಬಾಗೇವಾಡಿ: ಕೂಲಿಕಾರರ ಪಟ್ಟಿಯನ್ನು ಅಧಿಕಾರಿಗಳಿಂದ ಕಾಡಿಬೇಡಿ ತಗೆದುಕೊಂಡು ಬಂದರೂ ಕೂಡಾ ಮಹಿಳಾ ಕೂಲಿಕಾರರಿಗೆ ಜಿಪಿಎಸ್ ಹೆಸರಿನಲ್ಲಿ ಮುತ್ತಗಿ ಗ್ರಾಮ ಪಂಚಾಯತಿ ಅಧಿಕಾರಿಗಳು ಶೋಷಣೆ ಮಾಡುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಮಟ್ಟದ ಎಂಬಿಕೆ ಮತ್ತು ಎಲ್‌ಸಿಆರ್‌ಪಿ ಹಾಗೂ ಸಖಿಯರ ಮಹಾ ಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಹೇಮಾ ದಳವಾಯಿ ಆರೋಪಿಸಿದ್ದಾರೆ. ನರೇಗಾ ಯೋಜನೆಯಡಿ ನೂರಾರು ಜನರ ಕೆಲಸ ಮಾಡುವವರ ಲಿಸ್ಟ್ ಇದೆ. ಒಕ್ಕೂಟದ ಸದಸ್ಯರು ತಾಪಂ ಇಒ ಅವರನ್ನು ಭೇಟಿಯಾಗಿ ಅವರೊಂದಿಗೆ ಮಾತುಕತೆ ನೂರು ಜನರಿಗೆ ಕೆಲಸ ಕೊಡಿ ಎಂದು ಕೇಳಿದಾಗ ಕೆಲಸ ಮಾಡಲು ಅವಕಾಶ ಕೊಟ್ಟಿದ್ದಾರೆ ಆದರೆ ಪಂಚಾಯತಿ ಅಮೃತ ಸರೋವರ ಕೆರೆ ಹೂಳು ಎತ್ತುವುದು ಕೃಷಿ ಹೊಂಡ ಕಾರ್ಯದಲ್ಲಿ ತೊಡಗಿದ ಕೂಲಿಕಾರರಿಗೆ ಸರ್ವರ್ ತೊಂದರೆಯಿಂದ ಒಂದು ದಿನ ಪೂರ್ತಿ ಸಮಯ ಹಾಳಾಗುತ್ತಿದೆ. 4 ತಾಸಿನ ಕೆಲಸಕ್ಕೆ ದಿನವಿಡಿ ಸಮಯ ಹಾಳಾಗುತ್ತಿದೆ, ಒಬ್ಬ ರೈತನ ಹೊಲಕ್ಕೆ ಕೂಲಿ ಹೋದರೆ 4ನೂರು ರೂಪಾಯಿಯಿಂದ 500 ರೂ. ಪಾಗಾರ ಕೊಡುತ್ತಾನೆ ಆದರೆ ಈ ಯೋಜನೆಯಲ್ಲಿ ದಿನವಿಡಿ ಕಡಿಮೆ ಪಗಾರದಲ್ಲಿ ದುಡಿಯಬೇಕಾಗಿದೆ ಎಂದು ಅಳಲು ತೋಡಿಕೊಂಡರು.

ಎರಡು ದಿನ 96 ಜನ ಕೆಲಸಕ್ಕೆ ಹೋಗಿದೆವು. ಆದರೆ ಶುಕ್ರವಾರ 30 ಜನ ಕೆಲಸಕ್ಕೆ ಬರಬೇಕೆಂದು ಅಧಿಕಾರಿಗಳು ಹೇಳಿದ್ದರಿಂದ ನಾವು ಕೆಲಸಕ್ಕೆ ಹೋಗದೆ ಪ್ರತಿಭಟನೆ ನಡೆಸಿದ್ದೇವೆ ಎಂದು ತಿಳಿಸಿದ್ದಾರೆ.



ರಬಕವಿ-ಬನಹಟ್ಟಿ: ಇಲ್ಲಿನ ಎಸ್‌ಆರ್‌ಎ ಪ್ರೌಢಶಾಲೆಗೆ ಎಸ್‌ಎಸ್‌ಎಲ್‌ಸಿಯಲ್ಲಿ 614 ಅಂಕದೊಂದಿಗೆ ತೃತೀಯ ಸ್ಥಾನ ಪಡೆದಿರುವ ಸಾಧನಾ ಕಿರಣ ಆಳಗಿಯನ್ನು ರಬಕವಿ-ಬನಹಟ್ಟಿ ಶಿವಶಿಂಪಿ ಗೆಳೆಯರ ಬಳಗದಿಂದ ಸನ್ಮಾನಿಸಲಾಯಿತು.

ರೈಲ್ವೆ ಮೇಲ್ಸೇತುವೆ ನಿರ್ಮಿಸುವಂತೆ ಒತ್ತಾಯ

ವಿಜಯಪುರ: ನಗರದ ವಜ್ರ ಹನುಮಾನ ಬಡಾವಣೆ ಹತ್ತಿರದ ರೇಲ್ವೆ ಕ್ರಾಸಿಂಗ್ ಬಳಿ ಅವೈಜ್ಞಾನಿಕ ಅಂಡರ್ ಪಾಸ್ ಯೋಜನೆ ಕೈಬಿಟ್ಟು, ಮೇಲ್ಸೇತುವೆ ನಿರ್ಮಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನಾ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಕರವೇ ಸ್ವಾಭಿಮಾನಿ ಸೇನಾ ಸಮಿತಿ ರಾಜ್ಯಾಧ್ಯಕ್ಷ ಜಗದೇವ ಸೂರ್ಯವಂಶಿ ಮಾತನಾಡಿ, ಇಲ್ಲಿನ ರೇಲ್ವೆ ಕ್ರಾಸಿಂಗ್‌ನಿಂದ ಪ್ರತಿ ದಿನ ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿದ್ದಾರೆ. ಸದ್ಯ ವಜ್ರ ಹನುಮಾನ ರೈಲ್ವೇ ಕ್ರಾಸಿಂಗ್‌ಗೆ ಅಂಡರ್ ಪಾಸ್ ನಿರ್ಮಿಸಲು ಯೋಜನೆ ರೂಪಿಸಲಾಗಿದ್ದು, ಅದು ಅವೈಜ್ಞಾನಿಕವಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವಲ್ಲ ಎಂದು ದೂರಿದರು. ಜುಮನಾಳ ರಸ್ತೆಗೆ ಹೊಂದಿಕೊಂಡಂತಹ ರಿಂಗ್ ರಸ್ತೆಯ ರೇಲ್ವೆ ಮೇಲ್ಸೇತುವೆಗೆ ಈ ವಜ್ರ ಹನುಮಾನ ರಸ್ತೆಯಲ್ಲಿ ಕಾಲಂಗಳನ್ನು ಅಳವಡಿಸಿ, ಮೇಲ್ಸೇತುವೆ ಜೋಡಿಸಿದ್ದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲಿದೆ ಎಂದರು. ಇಲ್ಲಿನ ರೈಲ್ವೇ ಕ್ರಾಸಿಂಗ್‌ನಲ್ಲಿ ನಿರಂತರ ಸಂಚಾರ ದಟ್ಟಣೆ ಉಂಟಾಗುತ್ತಿರುವುದರಿಂದ ತುರ್ತು ವೈದ್ಯಕೀಯ ಸೇವೆಗಳ ಆ್ಯಂಬುಲೆನ್ಸ್‌ಗಳು, ಅಗ್ನಿಶಾಮಕ ವಾಹನಗಳು ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನೆಲೆ ಮೇಲ್ಸೇತುವೆ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು. ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಎಂ.ಆರ್. ಗುರಿಕಾರ, ರಾಜ್ಯ ಖಜಾಂಚಿ ಎಂ.ಆರ್. ಸೌದಾಗಾರ್, ಶಂಕರ ಸಾತಪುತೆ, ನೀಲಾಂಬಿಕ ಕಟ್ಟಿಮನಿ ಇದ್ದರು.



ವಿಜಯಪುರ: ನಗರದ ವಜ್ರ ಹನುಮಾನ ಬಡಾವಣೆ ಹತ್ತಿರದ ರೇಲ್ವೆ ಕ್ರಾಸಿಂಗ್ ಬಳಿ ಅವೈಜ್ಞಾನಿಕ ಅಂಡರ್ ಪಾಸ್ ಯೋಜನೆ ಕೈಬಿಟ್ಟು, ಮೇಲ್ಸೇತುವೆ ನಿರ್ಮಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನಾ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ವಿಜಯಪುರ ನಗರ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಕಾರ್ಯಕ್ರಮ

ಪಕ್ಷ ಸಂಘಟನೆಗೆ ಶ್ರಮಿಸಿ: ಜಿಗಜಿಣಗಿ

ವಿಜಯಪುರ: ಬಿಜೆಪಿಯಲ್ಲಿದ್ದ ಶಿಸ್ತು, ಧ್ಯೇಯ, ಸಂಘಟನೆ ಬೇರೆ ಯಾವುದೇ ರಾಜಕೀಯ ಪಕ್ಷದಲ್ಲಿ ಇಲ್ಲ, ಪಕ್ಷದ ಕಾರ್ಯಕರ್ತರ ದುಡಿಮೆ ಮೇಲೆ ವಿಶ್ವಾಸವಿದ್ದು, ಮುಂದಿನ 2028 ರ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿ, ಅಧಿಕಾರ ಹಿಡಿಯಲಿದೆ ಎಂದು ಸಂಸದ ರಮೇಶ ಜಿಗಜಿಣಗಿ ಭವಿಷ್ಯ ನುಡಿದರು.

ನಗರದ ಸಾಯಿ ವಿಹಾರ ಕಲ್ಯಾಣ ಮಂಟಪದಲ್ಲಿ ಶನಿವಾರ ಹಮ್ಮಿಕೊಂಡ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026 ನಿಮಿತ್ತ ಭಾರತೀಯ ಜನತಾ ಪಾರ್ಟಿ ವಿಜಯಪುರ ನಗರ ಮಂಡಲ ಮಟ್ಟದ ಪ್ರಶಿಕ್ಷಣ ವರ್ಗ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಾಮಪ್ರಸಾದ ಮುಖರ್ಜಿ ಹಾಗೂ ಪಂಡಿತ ದೀನದಯಾಳ ಉಪಾಧ್ಯಾಯ ಅವರಗಳ ತ್ಯಾಗ ಬಲಿದಾನದಿಂದ ಬಿಜೆಪಿ ಇಂದು ಪ್ರಪಂಚದಲ್ಲೇ ಅತ್ಯಂತ ದೊಡ್ಡ ರಾಜಕೀಯ ಪಕ್ಷವಾಗಿದ್ದು, ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಕೋಟ್ಯಂತರ ಕಾರ್ಯಕರ್ತರು ಇನ್ನಷ್ಟು ಗಟ್ಟಿಯಾಗಿ ಪಕ್ಷ ಸಂಘಟನೆಗೆ ಶ್ರಮಿಸಬೇಕು ಎಂದರು.

ದೇಶದಲ್ಲಿ ಕೇವಲ 2 ಸಂಸದರನ್ನು ಹೊಂದಿದ್ದ ಕಾಲದಿಂದ ಇಂದೂ ಕಳೆದ 12 ವರ್ಷಗಳಿಂದ ಸ್ವಂತ ಬಲದ ಮೇಲೆ ಹೆಮ್ಮೆಯ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಹೆಮ್ಮರವಾಗಿ ಬೆಳೆದಿದೆ. ಕಾರ್ಯಕರ್ತರು ಧೃತಿಗೆಡದೇ ಬೇರು ಮಟ್ಟದಲ್ಲಿ ಸಂಘಟನೆಗೆ ಮುಂದಾಗಬೇಕು. ಕಾರ್ಯಕರ್ತರ ಜೊತೆಗೆ ಪಕ್ಷದ ಎಲ್ಲ ನಾಯಕರು ಇದ್ದೇವೆ. ಅವಕಾಶ ಬಂದಾಗ ಎಲ್ಲರಿಗೂ ಒಳ್ಳೆಯ ಸ್ಥಾನಮಾನ ಸಿಗಲಿವೆ ಎಂದರು.



> ಜಿಲ್ಲೆಯ ಸಂಸದನಾಗಿ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ 1.20 ಲಕ್ಷ ಕೋಟಿ ಅನುದಾನ ತಂದಿರುವೆ. ನನಗಿಂತ ಮೊದಲಿನ ಯಾವ ಸಂಸದರು ಇಷ್ಟು ದೊಡ್ಡ ಪ್ರಮಾಣದ ಅನುದಾನ ತಂದಿಲ್ಲ.
> ■ ರಮೇಶ ಜಿಗಜಿಣಗಿ, ಸಂಸದ

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಮಾತನಾಡಿ, ಪ್ರಶಿಕ್ಷಣ ಅಭಿಯಾನ ಮೊದಲು ರಾಜ್ಯ ಮಟ್ಟದಲ್ಲಿ ನಡೆಯತ್ತಿದ್ದುವು. ಈಗ ಪ್ರತಿ ಮಂಡಲ ಮಟ್ಟದಲ್ಲಿ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆ, ಪಂಡಿತ ದೀನದಯಾಳ ಉಪಾಧ್ಯಾಯ, ಶಾಮಪ್ರಸಾದ ಮುಖರ್ಜಿ ಅವರು ಜನಸಂಘ ಸಂಘಟಿಸಿದ ಮೊದಲಿಗರು. ಮೊದಲು ದೇಶ ಆನಂತರ ಪಕ್ಷ ಎಂಬ ಸಿದ್ಧಾಂತ ಹೊಂದಿದ ಬಿಜೆಪಿ ದೇಶದ ಹಿತ ಕಾಯುವ ಪಕ್ಷ ಎಂದು ಹೇಳಿದರು.

ನಗರ ಮಂಡಲ ಅಧ್ಯಕ್ಷ ಸಂದೀಪ ಪಾಟೀಲ ಮಾತನಾಡಿ, ಪಕ್ಷವನ್ನು ತಳಮಟ್ಟದಿಂದ ಬಲಪಡಿಸುವುದು ಮತ್ತು ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮಹಾನಗರ ಪಾಲಿಕೆ ಮೇಯರ್ ಎಂ.ಎಸ್. ಕರಡಿ, ಚಂದ್ರಶೇಖರ ಕವಟಗಿ, ಸತ್ಯನಾರಾಯಣ ಹೇಮಾದ್ರಿ, ಸುರೇಶ ಬಿರಾದಾರ, ವಿವೇಕಾನಂದ ಡಬ್ಬಿ, ಮಳುಗೌಡ ಪಾಟೀಲ, ಈರಣ್ಣ ರಾವೂರ, ಚಿದಾನಂದ ಚಲವಾದಿ, ಸ್ವಪ್ನಾ ಕಣಮುಚನಾಳ, ಭಾರತಿ ಭುಯ್ಯಾರ, ರಜನಿ ಸಂಬಣ್ಣಿ, ಚಿನ್ನು ಚಿನಗುಂಡಿ, ಪಾಪುಸಿಂಗ್ ರಜಪೂತ ಇದ್ದರು.

ಪಕ್ಷ ಸಂಘಟನೆಯಲ್ಲಿ ತೊಡಗಿ: ಬೆಳ್ಳುಬ್ಬಿ

ನಾಲತವಾಡ: ಭಾರತೀಯ ಜನ ಸಂಘದ ಪ್ರಮುಖ ನಾಯಕ ಹಾಗೂ ಏಕಾತ್ಮ ಮಾನವತವಾದದ ಸಿದ್ದಾಂತಿಗಳಾಗಿದ್ದರು ಅವರ ಒಂದೊಂದು ಆಲೋಚನೆಗಳು ಪಕ್ಷದ ಸಂಘಟನೆಗೆ ಪೂರಕವಾಗಿವೆ ಎಂದು ಮಾಜಿ ಸಚಿವರಾದ ಎಸ್.ಕೆ.ಬೆಳ್ಳುಬ್ಬಿ ಹೇಳಿದರು.

ಇಲ್ಲಿಯ ಹಳ್ಳೂರ ಫ್ಯಾಲೇಸ್‌ನಲ್ಲಿ ಸಂಗನಗೌಡ ಕುಳಗೇರಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪಂ.ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಅಭಿಯಾನ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ದೇಶದ ಹಲವು ರಾಜ್ಯಗಳಲ್ಲಿ ಬಿಜೆಪಿ ತನ್ನ ಬಲಾಡ್ಯತನ ಪ್ರದರ್ಶಿಸಿ ಅಧಿಕಾರ ಹೊಂದಿದೆ, ಬಿಜೆಪಿ ಪಕ್ಷಕ್ಕೆ ತನ್ನದೇಯಾದ ಇತಿಹಾಸ ಇದೆ, ಕಾಂಗ್ರೇಸ್‌ನವರು ತಿರುಚುವ ಕೆಲಸ ಮಾಡಿದ್ದಾರೆ. ಮುದ್ದೇಬಿಹಾಳ ಮತಕ್ಷೇತ್ರದಲ್ಲೂ ಕಾರ್ಯಕರ್ತರು ಇಂದಿನಿಂದಲೇ ಪ್ರತಿ ಹಳ್ಳಿಗಳಿಗೂ ತೆರಳಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡರೆ ಈ ಸಲ ಕ್ಷೇತ್ರದಲ್ಲಿ ಬಿಜೆಪಿ ಶಾಸಕರ ಆಯ್ಕೆ ಖಚಿತ ಎಂದರು.

ಪಕ್ಷ ಸಂಘಟನೆ ನಿಟ್ಟಿನಲ್ಲಿ ಸ್ಥಳಿಯ ಸಂಗನಗೌಡ ಕುಳಗೇರಿ, ಗೋಲಪ್ಪಗೌಡ ಗಂಗನಗೌಡ ಹಾಗೂ ರಮೇಶ ಮುದ್ನೂರ ಅವರನ್ನು ಪಕ್ಷದ ನಗರ ಘಟಕದ ಅಧ್ಯಕ್ಷರಾದ ನೇಮಿಸಿದ ನಂತರ ಮಾಜಿ ಸಚಿವರಾದ ಬೆಳ್ಳುಬ್ಬಿ ಅವರು ಸನ್ಮಾನಿಸಿದರು.

ನಗರ ಘಟಕದ ಅಧ್ಯಕ್ಷ ಸಂಗನಗೌಡ ಕುಳಗೇರಿ ಅವರು ಪ್ರತಿಕ್ರಿಯೆ ನೀಡಿದ್ದು, ಪಕ್ಷದಲ್ಲಿ ನನಗೆ ಸಂಘಟನೆಯ ಜವಾಬ್ದಾರಿ ಹೊರಿಸಲಾಗಿದೆ, ಮುಂಬರುವ ಸ್ಥಳಿಯ ಪ.ಪಂ, ತಾಪಂ ಜಿಪಂ ಸೇರಿ ಇತರೇ ಚುನಾವಣೆಯಲ್ಲಿ ಬಿಜೆಪಿ ಪಕ್ಷವನ್ನು ಸಂಘಟಿಸುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಎಂ.ಎಸ್.ಪಾಟೀಲ, ಪ್ರಭು ಕಡಿ, ಜಗದೀಶ ಪಂಪಣ್ಣನವರು, ಮುತ್ತು ಅಂಗಡಿ, ಮಂಜುನಾಥ ಮೀಸೆ ಗುರುನಾಥ ದೇಶಮುಖ, ಮುನ್ನಾಧಣಿ ನಾಡಗೌಡ, ಸಂಗಮ್ಮ ದೇವರಳ್ಳಿ ಸುವರ್ಣಾ ಬಿರಾದಾರ, ಸಂಗಮೇಶ ಮೇಟಿ, ಚೇತನ ಸಂಗಮ, ಎಸ್.ಎಚ್.ಲೊಟಗೇರಿ, ಬಸವರಾಜ ಬಿರಾದಾರ, ಖಾಜಾಹುಸೇನ ಎತ್ತಿನಮನಿ, ಬಸಯ್ಯ ನಂದಿಕೇಶ್ವರಮಠ, ಅಶೋಕ ರಾಠೋಡ ಇದ್ದರು.



ಬಿಎಲ್‌ಡಿಇಯಲ್ಲಿ ಯಶಸ್ವಿ ಶಸ್ತ್ರ ಚಿಕಿತ್ಸೆ

ವಿಜಯಪುರ: ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಿವಿ ಮೂಗು ಹಾಗೂ ಗಂಟಲು ವಿಭಾಗದಲ್ಲಿ ಶುಕ್ರವಾರ ಅತ್ಯಾಧುನಿಕ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಸುಮಾರು ಒಂದು ವರ್ಷ ಏಳು ತಿಂಗಳ ಜನ್ಮಜಾತ ಕಿವುಡುತನ ಹೊಂದಿರುವ ಮಗುವಿಗೆ ಅತ್ಯಾಧುನಿಕ ನೆಕ್ಸಾ (ನೆಕ್ಸಾ 1022) ಕಾಕ್ಲಿಯರ್ ಇಂಪ್ಲಾಂಟ್ ಉಪಕರಣವನ್ನು ಒಳ ಕಿವಿಯ ಭಾಗದಲ್ಲಿ ಅಳವಡಿಸಲಾಯಿತು.

ಈ ಉಪಕರಣವು ಮಾತನಾಡುವ ಧ್ವನಿಗಳನ್ನು ವಿದ್ಯುತ್ ಪ್ರೇರಣೆಯಾಗಿ ಪರಿವರ್ತಿಸಿ, ಕಿವಿಯ ನರಗಳನ್ನು ಉತ್ತೇಜಿಸುವ ಮೂಲಕ ಮೆದುಳಿಗೆ ಸಂದೇಶಗಳನ್ನು ಕಳುಹಿಸಿ, ಪದಗಳನ್ನು ಸ್ಪಷ್ಟವಾಗಿ ಕೇಳಿಸಿಸುವ ಸಾಮರ್ಥ್ಯವನ್ನು ಹೊಂದಿದೆ.

ಶಸ್ತ್ರ ಚಿಕಿತ್ಸೆಯಲ್ಲಿ ಬಳಸಲಾದ ಸ್ಮಾರ್ಟ್ ನಾವ್ (ಸ್ಮಾರ್ಟ್ ನವಾ) ತಂತ್ರಜ್ಞಾನವು ಮೊಬೈಲ್ ಜೊತೆ ನೇರ ಸಂಪರ್ಕ ಹೊಂದಿದ್ದು, ಡೈರೆಕ್ಟ್ ಸ್ಟ್ರೀಮಿಂಗ್ ಮತ್ತು ಟ್ರ್ಯಾಕಿಂಗ್ ಸೌಲಭ್ಯವನ್ನು ಒದಗಿಸುತ್ತದೆ.

ಈ ರೀತಿಯ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಉತ್ತರ ಕರ್ನಾಟಕ ವಿಭಾಗದಲ್ಲಿ ಇದೇ ಮೊದಲ ಬಾರಿಗೆ ನಡೆದಿರುವುದು ವಿಶೇಷವಾಗಿದೆ.

ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ.ಅರುಣ ಇನಾಮದಾರ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಆಸ್ಪತ್ರೆಯಲ್ಲಿ ಈ ರೀತಿಯ ಚಿಕಿತ್ಸೆಗಳು ನಡೆಯುತ್ತಿದ್ದು, ಚಿಕಿತ್ಸೆ ಪಡೆದ ಮಕ್ಕಳು ವಾಕ್ ಮತ್ತು ಶ್ರವಣ ತಜ್ಞರಿಂದ ತರಬೇತಿ ಪಡೆದು ಸಾಮಾನ್ಯ ಮಕ್ಕಳಂತೆ ಮಾತನಾಡಲು ಸಾಧ್ಯ ಎಂದು ತಿಳಿಸಿದರು.

ಮಹವಿದ್ಯಾಲಯದ ಪ್ರಾಚಾರ್ಯೆ ಮತ್ತು ತಜ್ಞವೈದ್ಯೆ ಡಾ. ತೇಜಸ್ವಿನಿ ವಲ್ಲಭ ಮಾತನಾಡಿ, ಜನ್ಮಜಾತ ಕಿವುಡುತನ ಹೊಂದಿರುವ ಮಕ್ಕಳಿಗೆ ಎರಡು ವರ್ಷದೊಳಗೆ ಚಿಕಿತ್ಸೆ ನೀಡಿದರೆ ಅವರು ಇತರ ಮಕ್ಕಳಂತೆ ಶಿಕ್ಷಣ ಪಡೆದು ಮುಂದಿನ ದಿನಗಳಲ್ಲಿ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದೆ. ಮೂರು ವರ್ಷಗಳ ನಂತರ ಚಿಕಿತ್ಸೆ ಹೆಚ್ಚು ಪರಿಣಾಮಕಾರಿಯಾಗುವುದಿಲ್ಲ ಎಂದು ಹೇಳಿದರು.

ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗಳ ಸಂಯೋಜಕಿ ಡಾ.ಎಚ್.ಟಿ.ಲತಾದೇವಿ ಮಾತನಾಡಿ, ಪ್ರತಿಯೊಂದು ಮಗುವಿಗೂ ಶ್ರವಣ ದೋಷ ತಪಾಸಣೆ ಅಗತ್ಯವಾಗಿದ್ದು, ಪ್ರಾಥಮಿಕ ಹಂತದಲ್ಲಿಯೇ ದೋಷ ಪತ್ತೆಯಾದರೆ ತಕ್ಷಣ ಚಿಕಿತ್ಸೆ ಆರಂಭಿಸುವುದು ಮುಖ್ಯ ಎಂದರು.

ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಎಸ್.ಎನ್.ಬೆಂಟೂರ, ಆಸ್ಪತ್ರೆಯ ವೈದ್ಯಕೀಯ ಉಪ ಅಧೀಕ್ಷಕ, ಡಾ.ರವಿಕುಮಾರ ಬಿರಾದಾರ ಸೇರಿದಂತೆ ನಾನಾ ವೈದ್ಯರು ಮತ್ತು ಮಗುವಿನ ಪೋಷಕರು ಇದ್ದರು.



ವೈದ್ಯಕೀಯ ಅಧ್ಯಯನಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ: ಡಾ.ವಲ್ಲಭ

ವಿಜಯಪುರ: ಪರಿಪೂರ್ಣ ವೈದ್ಯಕೀಯ ಅಧ್ಯಯನಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ ಎಂದು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಬಿ.ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ ಹೇಳಿದರು.

ನಗರದ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸೆ ವಿಭಾಗದ ವತಿಯಿಂದ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಆಶ್ರಯದಲ್ಲಿ ಶುಕ್ರವಾರ ಹಮ್ಮಿಕೊಂಡ ಪ್ರಥಮ ವರ್ಷದ ಶಸ್ತ್ರ ಚಿಕಿತ್ಸೆ ಆಧಾರಿತ ವಿಭಾಗಗಳ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯು ದೇಶಾದ್ಯಂತ ವೈದ್ಯಕೀಯ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಚಲಿಸುವ ವಾಹನದ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಬಿಎಲ್‌ಡಿಇ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಈಗಾಗಲೇ ವಿಶ್ವದರ್ಜೆಯ ಕೌಶಲ್ಯಾಭಿವೃದ್ಧಿ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ ಎಂದರು.



ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಂಜುನಾಥ ಕೋಟೆಣ್ಣವರ ಮಾತನಾಡಿ, ಶಸ್ತ್ರ ಚಿಕಿತ್ಸೆ ಆಧಾರಿತ ವಿಭಾಗಗಳ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ರೋಗಿಗಳಿಗೆ ಸಂಪೂರ್ಣ ಪ್ರಮಾಣದ ಚಿಕಿತ್ಸೆ ನೀಡುವ ಮುನ್ನ ಇಂಥ ಕೌಶಲ್ಯಾಭಿವೃದ್ಧಿ ತರಬೇತಿಗಳು ಅವರ ಆತ್ಮವಿಶ್ವಾಸ ಹೆಚ್ಚಿಸಲು ಸಹಕಾರಿಯಾಗುತ್ತವೆ. ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಾವಳಿಗಳ ಪ್ರಕಾರವೂ ಇಂತಹ ತರಬೇತಿಗಳು ಅತ್ಯಗತ್ಯವಾಗಿವೆ ಎಂದು ಹೇಳಿದರು.

ಬಿಎಲ್‌ಡಿಇ ವೈದ್ಯಕೀಯ ಮಹಾವಿದ್ಯಾಲಯ, ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಜಿಲ್ಲಾ ಆಸ್ಪತ್ರೆಯ ಶಸ್ತ್ರ ಚಿಕಿತ್ಸೆ ವಿಭಾಗ, ಎಲುಬು ಮತ್ತು ಕೀಲು ವಿಭಾಗ ಹಾಗೂ ಸ್ತ್ರೀರೋಗ ವಿಭಾಗಗಳ ಸುಮಾರು 60 ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

ಪ್ರಾಧ್ಯಾಪಕ ಡಾ.ಎಂ.ಬಿ.ಪಾಟೀಲ, ಡಾ.ವಿಜಯಾ ಪಾಟೀಲ, ಡಾ. ರಮಾಕಾಂತ ಬಳೂರಕರ, ಡಾ.ದೀಪಕ ಚವ್ಹಾಣ, ಡಾ. ದಯಾನಂದ ಬಿರಾದಾರ, ಡಾ.ಪ್ರದೀಪ ಜಾಬು, ಡಾ.ಗಿರೀಶ ಕುಲ್ಲೊಳ್ಳಿ, ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಅನಿಲಕುಮಾರ, ಅಮನ್ ಅಥಣಿಕರ, ಶ್ರೀನಿವಾಸ ಇದ್ದರು.

ಹತ್ಯೆಯಾದ ಯುವಕನ ಕುಟುಂಬಕ್ಕೆ ಜಿಲ್ಲಾಡಳಿತದಿಂದ ಪರಿಹಾರ ಧನ ವಿತರಣೆ

ನಾಲತವಾಡ: ಸಮೀಪದ ನಾಗರಬೆಟ್ಟ ಗ್ರಾಮದಲ್ಲಿ ಕಂಪನಿಯೊಂದರಲ್ಲಿ ಹತ್ಯೆಯಾದ ದಲಿತ ಯುವಕ ರಾಮಚಂದ್ರ ಮಾದರ ಕುಟುಂಬಕ್ಕೆ ಇಡೀ ಜಿಲ್ಲಾಡಳಿತವೇ ಸ್ಪಂದಿಸಿದ್ದು, ಶನಿವಾರ ವಿವಿಧ ಇಲಾಖೆಯ ಜಿಲ್ಲಾ ಅಧಿಕಾರಿಗಳು ಭೇಟಿ ನೀಡಿ 8 ಲಕ್ಷ ರೂ.ಪರಿಹಾರದ ಪೈಕಿ ಸುಮಾರು 4.12 ಲಕ್ಷ ರೂ.ಗಳ ಪರಿಹಾರ ಚೆಕ್ ಮತ್ತು ಸ್ಥಳಿಯ ಗ್ರಾಪಂ ಮೂಲಕ ಆಹಾರ ಕಿಟ್ ವಿತರಣೆ ಮಾಡಲಾಯಿತು.

ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ್, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಹೇಶ ಪೋತದಾರ್, ಬೆಳಗಾವಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಾಥ ಜೋಶಿ, ಡಿವೈಎಸ್ಪಿ ಸಂದೀಪಸಿಂಗ್ ಮುರಗೋಡ, ಪಿಎಸ್‌ಐ ಸಂಜಯ ತಿಪ್ಪಾರಡ್ಡಿ, ಸಮಾಜ ಕಲ್ಯಾಣ ಇಲಾಖೆಯ ವ್ಯವಸ್ಥಾಪಕ ಎಸ್.ಎಂ.ಪಾಟೀಲ, ಸಂಗನಗೌಡ ಬಿರಾದಾರ ನೋಡಲ್ ಅಧಿಕಾರಿ ಬಿ.ಎಸ್.ನಾಟೀಕರ, ತಾಪಂ ಇಒ ಸಂಗನಗೌಡ, ಬಸಂತಿ ಮಠ, ಎಚ್.ಎಂ.ಹೆಬ್ಬುಲಿ, ಕಂದಾಯ ನಿರೀಕ್ಷಕ ವಿ.ವಿ.ಅಂಬಿಗೇರ, ತಾಪಂ ವ್ಯವಸ್ಥಾಪಕ ವೀರೇಶ ಹೂಗಾರ ಸೇರಿದಂತೆ ಸ್ಥಳಿಯ ಅಧಿಕಾರಿಗಳು ಹಾಗೂ ಡಿಎಸ್‌ಎಸ್ ಮುಖಂಡರು ಇದ್ದರು.



ಸನಾತನ ಧರ್ಮ ಬೆಳೆಸುವಲ್ಲಿ ಪೇಜಾವರ ಶ್ರೀಗಳ ಪಾತ್ರ ದೊಡ್ಡದು

ವಿಜಯಪುರ: ಹಿಂದು ಸನಾತನ ಧರ್ಮ ಉಳಿಸಿ, ಬೆಳೆಸುವಲ್ಲಿ ಉಡುಪಿ ಪೇಜಾವರ ಮಠದ ಸ್ವಾಮಿ ವಿಶ್ವೇಶತೀರ್ಥ ಶ್ರೀಗಳ ಪಾತ್ರ ಬಹು ದೊಡ್ಡದಾಗಿದೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ಪೇಜಾವರ ಮಠದ ಅಖಿಲ ಭಾರತ ಮಧ್ವ ಮಹಾಮಂಡಲ ವಿದ್ಯಾರ್ಥಿ ನಿಲಯಕ್ಕೆ 25 ಲಕ್ಷ ರೂ. ಅನುದಾನ ಮಂಜೂರಿ ಮಾಡಿದ ಹಿನ್ನೆಲೆಯಲ್ಲಿ ಅವರು ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಸದಾ ಪಾದರಸದಂತೆ ಪ್ರವಾಸ ಮಾಡುತ್ತಿದ್ದ ಅವರು ದೇಶದ ಉದ್ದಗಲಕ್ಕೂ ಹಿಂದು ಧರ್ಮದ ಬಗ್ಗೆ ಜಾಗೃತಿ ಮೂಡಿಸಿದರು. ಪ್ರಸಕ್ತ ಪೀಠಾಧಿಪತಿ ವಿಶ್ವಪ್ರಸನ್ನತೀರ್ಥ ಶ್ರೀಗಳು ಕೂಡ ಅದೆ ದಾರಿಯಲ್ಲಿ ಸಾಗುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಐದು ದಶಕಗಳ ಹಿಂದೆ ಹಿಂದುಳಿದ ವಿಜಯಪುರ ಜಿಲ್ಲೆಯಲ್ಲಿ ವಿದ್ಯಾರ್ಥಿ ನಿಲಯ ತೆರೆದು ಬಡವರ ವಿದ್ಯಾಭ್ಯಾಸಕ್ಕೆ ಅನಕೂಲ ಕಲ್ಪಿಸಿಕೊಟ್ಟ ಅವರ ಕಾಯಕ ನಿಜವಾಗಿಯೂ ಪ್ರಶಂಶನೀಯ. ಇದೀಗ ನೂತನ ಕಟ್ಟಡ ನಿರ್ಮಿಸಿ ಆಧುನಿಕ ಸೌಲಭ್ಯಗಳ ಮೂಲಕ ವಿದ್ಯಾರ್ಜನೆಗೆ ವ್ಯವಸ್ಥೆ ಮಾಡುತ್ತಿದ್ದಾರೆ.



ಇನ್ನೂ 25 ಲಕ್ಷ ರೂ. ಅನುದಾನ ಜೊತೆಗೆ ನಮ್ಮ ಸಂಸ್ಥೆಯಿಂದ 21 ಲಕ್ಷ ರೂ. ದೇಣಿಗೆ ಕೊಡುವುದಾಗಿ ಘೋಷಿಸಿದ ಯತ್ನಾಳರು, ಕಟ್ಟಡ ನಿರ್ಮಾಣದ ಜವಾಬ್ದಾರಿ ವಹಿಸಿಕೊಳ್ಳುವ ಭರವಸೆ ನೀಡಿದರು. ತಾವೂ ಕೂಡ ಬೇರೆ ದಾನಿಗಳಿಗೆ ಹೇಳಿ ದೇಣಿಗೆ ಕೊಡಿಸುವದಾಗಿ ಭರವಸೆ ನೀಡಿದರು.

ಶ್ರೀಮಠದ ಗೌರವಾಧ್ಯಕ್ಷ ಗೋಪಾಲ ನಾಯಕ ಮಾತನಾಡಿ, ಬಸನಗೌಡರಿಗೂ ಪೇಜಾವರ ಮಠಕ್ಕೂ ಅವಿನಾಭಾವ ಸಂಬಂಧ ಇದೆ. ಪ್ರಾತಃಸ್ಮರಣೀಯ ವಿಶ್ವೇಶತೀರ್ಥ ಶ್ರೀಗಳ 60 ನೇ ಪೀಠಾರೋಹಣ ಕಾರ್ಯಕ್ರಮ ವಿಜಯಪುರದಲ್ಲಿ ನಡೆದಾಗ ಸಮಿತಿಯ ಅಧ್ಯಕ್ಷರಾಗಿ ಬಸನಗೌಡರು ಕಾರ್ಯ ನಿರ್ವಹಿಸಿದ್ದರು. ದಶಕದ ನಂತರ ಸಂಸದರಾದ ಬಸನಗೌಡರು ಶ್ರೀಕೃಷ್ಣ ಮಠದ ನಿರ್ಮಾಣಕ್ಕೆ 10 ಲಕ್ಷ ರೂ. ಅನುದಾನ ನೀಡುವ ಮೂಲಕ ಶ್ರದ್ಧಾಭಕ್ತಿ ಮೆರೆದಿದ್ದಾರೆ ಎಂದರು.

ಮಠದ ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ ಪ್ರಾಸ್ತಾವಿಕವಾಗಿ ಮಾತನಾಡಿ, ಶ್ರೀಮಠದ ಗುರುಗಳ ಸಂಪೂರ್ಣ ಅನುಗ್ರಹ ಬಸನಗೌಡರ ಮೇಲಿದೆ ಎಂದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಿಜಯಪುರ ಪ್ರತಿನಿಧಿ ಸತೀಶಚಂದ್ರ ಕುಲಕರ್ಣಿ, ವಿಜಯಪುರ ಹೊಟೇಲ್ ಮಾಲೀಕರ ಸಂಘದ ಅಧ್ಯಕ್ಷ ಚಂದ್ರಕಾಂತ ಶೆಟ್ಟಿ, ಮಹಾನಗರ ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ, ಗಿರೀಶ ಬಿರಾದಾರ ಅವರನ್ನು ಸನ್ಮಾನಿಸಲಾಯಿತು. ಮಠದ ಸದಸ್ಯರಾದ ಡಾ.ಮಂಗಲಗಿ, ಡಾ.ಮಲಘಾಣ, ವಿ.ಸಿ.ಕುಲಕರ್ಣಿ, ಮೋಹನ ಕೌತಾಳ, ಅಶೋಕರಾವ್, ಪಂಡಿತ ವಾಸುದೇವ ಆಚಾರ್ಯ, ಸಮೀರ ಆಚಾರ್ಯ, ಗೋವಿಂದ ದೇಶಪಾಂಡೆ, ವಿಕಾಸ ಪದಕಿ, ವಿಜಯ ಜೋಶಿ ಇದ್ದರು.

ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಿ: ಶಾಸಕ ರಾಜುಗೌಡ

ಸಿಂದಗಿ: ಪ್ರತಿಯೊಂದು ಮಗುವಿನಲ್ಲಿ ಒಂದೊಂದು ಪ್ರತಿಭೆ ಇರುತ್ತದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಪೋಷಕರು ಹಾಗೂ ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಆಗ ಇನ್ನಷ್ಟು ಸಾಧನೆ ಮಾಡಲು ಸಹಕಾರಿಯಾಗಲಿದೆ ಎಂದು ಶಾಸಕ ಭೀಮನಗೌಡ(ರಾಜುಗೌಡ) ಪಾಟೀಲ ಹೇಳಿದರು.

ನಗರದ ಆಶೀರ್ವಾದ ಕಲ್ಯಾಣ ಮಂಟಪದಲ್ಲಿ ಅಖಂಡ ಸಿಂದಗಿ ತಾಲೂಕು ಲಿಂಗಾಯತ ಪಂಚಮಸಾಲಿ ಸಮಾಜ ವತಿಯಿಂದ ಹಮ್ಮಿಕೊಂಡ 2025-2 ನೇ ಸಾಲಿನ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಮಕ್ಕಳು ಉತ್ತಮ ವಿದ್ಯಾಭ್ಯಾಸ ಪಡೆದು ಸಮಾಜದ ಏಳಿಗೆಯಲ್ಲಿ ಮಹತ್ವದ ಪಾತ್ರ ವಹಿಸಬೇಕು. ತಂದೆ-ತಾಯಿ ಹಾಗೂ ಗುರುಹಿರಿಯರಿಗೆ ಗೌರವ ನೀಡುವ ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಪ್ರತಿಭಾ ಪುರಸ್ಕಾರಗಳು ವಿದ್ಯಾರ್ಥಿಗಳ ಜವಾಬ್ದಾರಿ ಮತ್ತಷ್ಟು ಹೆಚ್ಚಿಸುತ್ತವೆ ಎಂದರು.

ವಿದ್ಯಾರ್ಥಿಗಳನ್ನು ನಾಗರತ್ನ ಅಶೋಕ ಮನಗೂಳಿ ಸನ್ಮಾನಿಸಿದ ಬಳಿಕ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಮತ್ತು ಉನ್ನತ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡುವುದು ಕಾರ್ಯಕ್ರಮದ ಉದ್ದೇಶವಾಗಿದೆ. ಮಕ್ಕಳಿಗೆ ಕೇವಲ ಹೆಚ್ಚು ಅಂಕಗಳಿಸುವ ಶಿಕ್ಷಣ ನೀಡಿದರೇ ಸಾಲದು, ಅವರಿಗೆ ಒಳ್ಳೆಯ ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಕಲಿಸುವುದರ ಜೊತೆಗೆ ಅವರಲ್ಲಿರುವ ಕೌಶಲ್ಯ ಗುರುತಿಸಿ, ಪ್ರೋತ್ಸಾಹಿಸಿದಾಗ ಸಾಧಕರಾಗಿ ಹೊರಹೊಮ್ಮಲು ಸಾಧ್ಯ ಎಂದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮಿಗಳು ಮಾತನಾಡಿ, ಸಮಾಜದ 2ಎ ಮೀಸಲಾತಿ ಸಿಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ, ಒಂದು ವೇಳೆ ಎಲ್ಲರ ಪ್ರಯತ್ನದಿಂದ ಸಮಾಜಕ್ಕೆ 2ಎ ಮೀಸಲಾತಿ ಸಿಕ್ಕರೇ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ತಾಲೂಕು ಘಟಕವು ಪ್ರತಿ ವರ್ಷವೂ ಇಂಥತ ಸಮಾವೇಶಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.



ಆಸಂಗಿಹಾಳ ಶ್ರೀಮಠದ ಶಂಕರಾನಂದ ಮಹಾರಾಜರು ಸಮ್ಮುಖ ವಹಿಸಿದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಲಿಂಗಾಯತ ಪಂಚಮಸಾಲಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಡಾ.ಸವಿತಾ ಝಳಕಿ, ಪುರಸಭೆಯ ಮಾಜಿ ಅಧ್ಯಕ್ಷ ಶಾಂತವೀರ ಬಿರಾದಾರ, ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಹಂಗರಗಿ, ಅಶೋಕ ಕೊಳಾರಿ, ಚಂದ್ರಶೇಖರ ನಾಗರಬೆಟ್ಟ, ಕುಮಾರ ದೇಸಾಯಿ, ಸಂಗನಗೌಡ ಪಾಟೀಲ ಆಗಸಬಾಳ, ಮಲ್ಲನಗೌಡ ಪಾಟೀಲ ಇಬ್ರಾಹಿಂಪೂರ, ಶಿವಾನಂದ ಬಡಾನೂರ, ವಿಶ್ವನಾಥ ಕುರಡಿ, ಬಸವರಾಜ ಐರೋಡಗಿ, ಕಾಳಪ್ಪ ಬಗಲಿ, ಪ್ರಧಾನ ಕಾರ್ಯದರ್ಶಿ ಆನಂದ ಶಾಬಾದಿ ಪಂಚಮಸಾಲಿ ನೌಕರರ ಸಂಘದ ಅಧ್ಯಕ್ಷ ಮಹಾಂತೇಶ ಯಡ್ರಾಮಿ ಮಾತನಾಡಿದರು.

ಕಿರುಸುದ್ದಿ

ಋತುಚಕ್ರ ನೈರ್ಮಲ್ಯ ದಿನಾಚರಣೆ

ಕುಕನೂರು: ತಾಲೂಕಿನ ಸ.ಆ.ಕೇಂದ್ರ ಮಂಗಳೂರು ವ್ಯಾಪ್ತಿಯ ಚಿಕ್ಕ ಮ್ಯಾಗೇರಿ ತಾಂಡಾದಲ್ಲಿ ನಡೆದ ವಿಶ್ವ ಋತುಚಕ್ರ ನೈರ್ಮಲ್ಯ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಹದಿಹರೆಯದವರ ಆಪ್ತ ಸಮಾಲೋಚಕ ಲಕ್ಷ್ಮಣ ಗಂಟಿ ಅವರು ವೈಯಕ್ತಿಕ ಸ್ವಚ್ಛತೆ, ಶುಚಿ ಪ್ಯಾಡ್ ಗಳ ಬಳಕೆ ಮತ್ತು ವಿಲವಾರಿ ಆರ್‌ಟಿಐ, ಎಸ್‌ಟಿಐ ಪೌಷ್ಟಿಕ ಆಹಾರ ಐಎಫ್‌ಎ ಮಾತ್ರೆಗಳು ರಕ್ತಹೀನತೆಯಿಂದಾಗುವ ಸಮಸ್ಯೆಗಳ ಬಗ್ಗೆ ಹಾಗೂ ಬಾಲ್ಯ ವಿವಾಹ ನಿಷೇಧದ ಬಗ್ಗೆ ಕುರಿತು ಮಾಹಿತಿ ನೀಡಿದರು.

ಸಮುದಾಯ ಆರೋಗ್ಯ ಅಧಿಕಾರಿ ಕು.ಗಾಯತ್ರಿ ಭಟ್ಟಿ ಮಾತನಾಡಿ, ಮುಟ್ಟು ಒಂದು ನೈಸರ್ಗಿಕ ಪ್ರಕ್ರಿಯೆ ಸ್ವಚ್ಛ ಹಾಗೂ ಸುರಕ್ಷಿತ ನೈರ್ಮಲ್ಯವಾಗಿರದಿದ್ದರೆ ಗರ್ಭ ಕ್ಯಾನ್ಸರ್ ಉಂಟಾಗುವ ಸಂಭವ ಹೆಚ್ಚಾಗಿರುತ್ತದೆ ಎಂದ ಅವರು Menustral Cup ಬಗ್ಗೆ, ಋತುಚಕ್ರ ಸಂಬಂಧ ಸಮಸ್ಯೆಗಳ ನಿವಾರಣೆ ಬಗ್ಗೆ ವಿವರಿಸಿದರು. ಪಿಎಚ್‌ಸಿಒ ಸುಜಾತಾ, ಹದಿಹರೆಯದವರ ಕೆಎಚ್ ಪಿಟಿಯ ನಂದಿನಿ, ಬಸಮ್ಮ, ಗಂಗಮ್ಮ ಅಂಗನವಾಡಿ, ಆಶಾ ಕಾರ್ಯಕರ್ತರು ಮತ್ತು ಕಿಶೋರಿಯರು ಹಾಜರಾಗಿದ್ದರು.

ಇಂದು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ

ಸುರಪುರ: ಅಖಿಲ ಕರ್ನಾಟಕ ಹೆಳವ ಸಮಾಜ ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಹೆಳವ ಸಮಾಜದ ವಿದ್ಯಾರ್ಥಿಗಳಿಗೆ ಇಂದು ಕಕ್ಕೇರಾ ಪಟ್ಟಣದಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ



ಎಂದು ಪ್ರಧಾನ ಕಾರ್ಯದರ್ಶಿ ರಾಘವೇಂದ್ರ ಮಾಸ್ತರ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಮೇ 31ರಂದು ಬೆಳಿಗ್ಗೆ 11 ಗಂಟೆಗೆ ಕಕ್ಕೇರಾ ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದ್ದು, ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಸೌರಾಷ್ಟ್ರ ಅಧಿಪತಿ ಸೋಮನಾಥ ದೇವಸ್ಥಾನದ ನಂದಣಪ್ಪ ಪೂಜಾರಿಯವರು ವಹಿಸಿಕೊಳ್ಳಲಿದ್ದಾರೆ. ಸಾನಿಧ್ಯವನ್ನು ಹುಮನಾಬಾದ್ ತಾಲ್ಲೂಕು ದುಮ್ಮನಸೂರ ಹೆಳವ ಸಮಾಜದ ಪೀಠದ ಪೂಜ್ಯರಾದ ಶಂಕರಲಿಂಗ ಸ್ವಾಮಿಗಳು ವಹಿಸಿಕೊಳ್ಳಲಿದ್ದಾರೆ. ಉದ್ಘಾಟಕರಾಗಿ ಹಣಮಂತ್ರಾಯ ಸೀತಾರಾಮ ನಾಯಕ ಮಾಲಿಪಾಟೀಲ ಜಾಗೀರದಾರರು ಇರಲಿದ್ದಾರೆ. ಉಳಿದಂತೆ ಕೆಪಿಸಿಸಿ ಸದಸ್ಯರಾದ ಗುಂಡಪ್ಪ ಸೊಲ್ಲಾಪುರ, ಹೆಳವ ಸಮಾಜ ಜಿಲ್ಲಾಧ್ಯಕ್ಷ ಹಣಮಂತರಾಯ ಹಳಿಸಗರ, ಯಾದಗಿರಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಸದಾಶಿವ ನಾರಾಯಣಕರ, ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಅಧಿಕಾರಿ ಟಿ.ಪ್ರಿಯದರ್ಶಿನಿ, ಪುರಸಭೆ ಅಧ್ಯಕ್ಷರಾದ ಪರಮಣ್ಣ ಕಮತಗಿ, ಮಾಜಿ ಪುರಸಭೆ ಅಧ್ಯಕ್ಷರಾದ ರಾಜು ಹವಾಲ್ದಾರ್, ಪುರಸಭೆ ಉಪಾಧ್ಯಕ್ಷರಾದ ಜಟ್ಟೆಪ್ಪ ದಳಾರ, ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಯಂಕಣ್ಣ ಟಣಕೆದಾರ, ಪಿಯುಸಿ ಕಾಲೇಜು ಪ್ರಾಂಶುಪಾಲರಾದ ಅನುರಾಧ ನಾಯಕ, ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಬಸಯ್ಯ ಹಿರೇಮಠ ಸೇರಿದಂತೆ ಇತರರು ವೇದಿಕೆ ಹಂಚಿಕೊಳ್ಳಲಿದ್ದಾರೆ.

142 ಮೆಟ್ರಿಕ್ ಟನ್ ಅಕ್ರಮ ಮರಳು ವಶ: ಹರಾಜು



ಸಿಂಧನೂರು: ತಾಲೂಕಿನ ತುರವಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಳೆದ ಒಂದುವರೆ ವರ್ಷದಿಂದ ಅಕ್ರಮ ಮರಳು ಸಾಗಾಣಿಕೆಯಲ್ಲಿ ದೂರು ದಾಖಲಾಗಿ ಸಂಗ್ರಹವಾಗಿದ್ದ ಮರಳಿನ ಬಹಿರಂಗ ಹರಾಜು ನಡೆಯಿತು.ಒಟ್ಟು 12 ಪ್ರಕರಣಗಳಲ್ಲಿ ಯಾವುದೇ ರಾಜಧನ ಪಾವತಿಸದೆ ಮರಳು ಸಾಗಾಣಿಕೆಯಲ್ಲಿ ತೊಡಗಿದ್ದ ಟಿಪ್ಪರ್‌ಗಳನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಮರಳು ಸಂಗ್ರಹಿಸಲಾಗಿತ್ತು. 142 ಮೆಟ್ರಿಕ್ ಟನ್ ಮರಳನ್ನು ಗುತ್ತೆದಾರ ಶಿವಕುಮಾರ್ 75,786 ರೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರಿಗೆ ಪಾವತಿಸಿ ಮರಳನ್ನು ಟೆಂಡರ್ ಪಡೆದಿದ್ದಾರೆ. ಈ ಹರಾಜು ಮರಳು ಸರ್ಕಾರಿ ಕಾಮಗಾರಿಗಳಿಗೆ ಬಳಸುವಂತೆ ಸೂಚಿಸಲಾಗಿದೆ.



ಕುಕನೂರು: ತಾಲೂಕಿನ ಸ.ಆ.ಕೇಂದ್ರ, ಮಂಗಳೂರು ವ್ಯಾಪ್ತಿಯ ಚಿಕ್ಕ ಮ್ಯಾಗೇರಿ ತಾಂಡಾದಲ್ಲಿ ನಡೆದ ವಿಶ್ವ ಋತುಚಕ್ರ ನೈರ್ಮಲ್ಯ ಕಾರ್ಯಕ್ರಮ ನಡೆಯಿತು. ಹದಿಹರೆಯದವರ ಆಪ್ತ ಸಮಾಲೋಚಕ ಲಕ್ಷ್ಮಣ ಗಂಟಿ, ಸಮುದಾಯ ಆರೋಗ್ಯ ಅಧಿಕಾರಿ ಕು.ಗಾಯತ್ರಿ ಭಟ್ಟಿ ಪಿಎಚ್‌ಸಿಒ ಸುಜಾತಾ, ಹದಿಹರೆಯದವರ ಕೆಎಚ್‌ಪಿಟಿಯ ನಂದಿನಿ, ಬಸಮ್ಮ, ಗಂಗಮ್ಮ ಅಂಗನವಾಡಿ, ಆಶಾ ಕಾರ್ಯಕರ್ತರು ಮತ್ತು ಕಿಶೋರಿಯರು ಹಾಜರಾಗಿದ್ದರು.

ಕೆ.ಎಚ್.ಮುನಿಯಪ್ಪಗೆ ಡಿಸಿಎಂ ಸ್ಥಾನ ನೀಡಿ

ಸಿಂಧನೂರು: ಕರ್ನಾಟಕ ರಾಜ್ಯದಲ್ಲಿ ದಲಿತ ಎಡಗೈ ಮಾದಿಗ ಸಮುದಾಯದ ಹಿರಿಯ ಹಾಗೂ ಪ್ರಭಾವಿ ನಾಯಕರಾದ ಕೆ.ಎಚ್.ಮುನಿಯಪ್ಪ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡುವಂತೆ ಸಿಂಧನೂರು ಮಾದರ ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯ ದುರುಗೇಶ್ ಬಾಲಿಯವರು ಒತ್ತಾಯಿಸಿದ್ದಾರೆ.



ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಸತತವಾಗಿ ಗೆಲುವು ಸಾಧಿಸಿರುವ ಮುನಿಯಪ್ಪ ಅವರು 2019ರ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಸೋತಿದ್ದು,ನಂತರ ಅವರು ರಾಜ್ಯ ರಾಜಕಾರಣಕ್ಕೆ ಇಳಿದು ದೇವನಹಳ್ಳಿ ವಿಧಾನಸಭಾ ಕ್ಷೇತ್ರದಯಲ್ಲಿ ನಿಂತು ಗೆದ್ದು ಸಚಿವರಾದವರು. ಇನ್ನೂ 7 ಬಾರಿ ಸಂಸದರಾಗಿ 10 ವರ್ಷ ಕೇಂದ್ರದಲ್ಲಿ ಸಚಿವರಾಗಿ ಹೈಕಮಾಂಡ್ ಗೆ ಆಪ್ತರಾಗಿದ್ದು,ಕಾಂಗ್ರೆಸ್ ಪಕ್ಷಕ್ಕೆ ಮುನಿಯಪ್ಪನವರು ಮಾಡಿದ ತ್ಯಾಗವನ್ನು ಹೈಕಮಾಂಡ್ ಗೌರವಿಸಬೇಕಾಗಿದೆ ಅವರು ಸುಧೀರ್ಘಕಾಲದ ರಾಜಕೀಯ ಅನುಭವ ಹೊಂದಿರುವ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಹಾಗೂ ಜನಪರ ನಾಯಕ ಮುನಿಯಪ್ಪ ಅವರಿಗೆ ಡಿಸಿಎಂ ಸ್ಥಾನ ನೀಡುವುದರ ಮೂಲಕ ರಾಜ್ಯದ ದಲಿತ ಹಿಂದುಳಿದ ಹಾಗೂ ಶೋಷಿತ ಜನಾಂಗಗಳಿಗೆ ಪ್ರಾತಿನಿತ್ಯ ಕಲ್ಪಿಸಿ ಕೊಟ್ಟಂತಾಗುತ್ತದೆ.ಆದಕಾರಣ ಮುಂದಿನ ಮುಖ್ಯಮಂತ್ರಿ ಡಿ ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಮುನಿಯಪ್ಪ ಅವರಿಗೆ ಡಿಸಿಎಂ ಸ್ಥಾನ ಕೊಡಬೇಕೆಂದು ಮಾದಿಗ ಸಮುದಾಯದ ಒತ್ತಾಯವಾಗಿದೆ ಎಂದಿದ್ದಾರೆ.



ಕೊಪ್ಪಳ: ಕೆಂಪೇಗೌಡ, ಡಾ.ಫ.ಗು.ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆ ಕುರಿತು ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕರ್ಣಕುಮಾರ್, ಬಸವ ಅನುಯಾಯಿಗಳಾದ ಬಸವರಾಜ ಬಳ್ಳೊಳ್ಳಿ, ಬಸವಶ್ರೀ ಬಿ. ಸೋಮನಾಳ ಮತ್ತಿತರರು ಇದ್ದರು.

ಮುಸಲಾಪುರದಲ್ಲಿ ಜನಸಂಪರ್ಕ ಸಂವಾದ | ಬಡಿಗೇರ ಹೇಳಿಕೆ

ನವಜಾತ ಶಿಶು ಕಸದ ತೊಟ್ಟಿಗೆ ಎಸೆಯದಿರಿ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪೋಲಿಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕೊಪ್ಪಳ ಮತ್ತು ಮುಸಲಾಪೂರ ಗ್ರಾಮ ಪಂಚಾಯತ್ ಸಂಯುಕ್ತಾಶ್ರಯದಲ್ಲಿ 'ಮಕ್ಕಳ ಮೇಲಿನ ದೌರ್ಜನ್ಯ ತಡೆಗಾಗಿ ಜನಸಂಪರ್ಕ ಸಂವಾದ ಕಾರ್ಯಕ್ರಮ' ಮುಸಲಾಪುರ ಗ್ರಾಮದಲ್ಲಿ ನಡೆಯಿತು.

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ(ಅಸಾಂಸ್ಥಿಕ) ರವಿ ಬಡಿಗೇರ ಮಾತನಾಡಿ, ಪೋಷಣೆ ಮತ್ತು ರಕ್ಷಣೆ ಅವಶ್ಯವಿರುವ ಯಾರೇ ಮಕ್ಕಳು ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ-1098 ಕರೆ ಮಾಡಿ, ಮಾಹಿತಿಯನ್ನು ನೀಡಿದಲ್ಲಿ ಮಗು ಇರುವಲ್ಲಿಯೇ ತಂಡವು ಆಗಮಿಸಿ, ಮಗುವನ್ನು ರಕ್ಷಿಸಿ ಮುಂದಿನ ಪೋಷಣೆ ಮತ್ತು ರಕ್ಷಣೆಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಾಗುವುದು ಅಥವಾ ನೀವುಗಳೇ ಖುದ್ದು ಮಗುವನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರಪಡಿಸಬಹುದಾಗಿದೆ. ಬೇಡವಾದ ಮಗುವನ್ನು ಕಸದ ತೊಟ್ಟಿ ಮೋರಿ, ದೇವಸ್ಥಾನ, ರಸ್ತೆಬದಿಗಳಲ್ಲಿ ಬಿಸಾಡುವುದು ಕಾನೂನು ಬಾಹಿರ, ಅಮಾನವೀಯ ಮತ್ತು ಅಪಾಯಕಾರಿ ಕೃತ್ಯವಾಗಿದೆ. ಈ ರೀತಿಯಲ್ಲಿ ತೊರೆದು ಹೋದ ಮಗುವು ಇರುವೆ, ನಾಯಿಗಳ ದಾಳಿಗೆ ತುತ್ತಾಗಿ ಪ್ರಾಣ ಕಳೆದುಕೊಳ್ಳಬಹುದಾಗಿರುತ್ತದೆ. ಆದ್ದರಿಂದ ಬೇಡದ ಮಗುವನ್ನು ಎಲ್ಲೆಂದರಲ್ಲಿ ಬಿಸಾಡದೇ, ಮಗುವನ್ನು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಬಹುದು. ಸಮಿತಿಯು ಮುಂದಿನ ಪುನರವಸತಿಗಾಗಿ ಮಗುವನ್ನು ಕಾನೂನುಬದ್ಧವಾಗಿ ದತ್ತು ನೀಡುವ ಮೂಲಕ ಮಗುವಿಗೆ ಸುಭದ್ರ ಬದುಕನ್ನು ಕಟ್ಟಿಕೊಡುತ್ತದೆ. ಸರ್ಕಾರ, ಸಮಿತಿಯ ವಶಕ್ಕೆ ಮಗುವನ್ನು ಒಪ್ಪಿಸಿದ ಪೋಷಕರ ವಿವರಗಳನ್ನು ಬಹಿರಂಗಪಡಿಸುವುದಿಲ್ಲ, ಗೌಪ್ಯತೆಯನ್ನು ಕಾಪಾಡಲಾಗುವುದು ಎಂದು ಮಾಹಿತಿ ತಿಳಿಸಿದರು.



> ಜಿಲ್ಲೆಯಲ್ಲಿ ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು ಸರಕಾರವು ವಿವಿಧ ಕಾನೂನುಗಳನ್ನು ಜಾರಿಯಲ್ಲಿ ತಂದಿರುತ್ತದೆ. ಅವುಗಳಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ-2012 ತಿದ್ದುಪಡಿ-2019 ಪ್ರಮುಖವಾದದ್ದು, ಈ ಕಾಯ್ದೆಯನ್ವಯ 18 ವರ್ಷದೊಳಗಿನ ಮಕ್ಕಳ ಮೇಲಿನ ಬೇಧಕ ಲೈಂಗಿಕ ಹಲ್ಲೆಗೆ ಕನಿಷ್ಠ 20 ವರ್ಷಗಳಿಂದ ಆಜೀವಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ.
>
> ■ ಪ್ರತಿಭಾ ಕಾಶಿಮಠ, ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರತಿಭಾ ಕಾಶಿಮಠ ಮಾತನಾಡಿ, ಲೈಂಗಿಕ ಕಿರುಕುಳ ಅಂದರೆ ಮಕ್ಕಳಿಗೆ ಶಾಬ್ದಿಕ, ಅಂಗಿಕ, ಭಾಷಿಕ ಹಾಗೂ ಲಿಖಿತವಾಗಿ ಅವರ ಘನತೆಗೆ ಧಕ್ಕೆ ಉಂಟುಮಾಡಬಹುದಾದ ಯಾವುದೇ ಈ ರೀತಿಯ ಕೃತ್ಯಗಳಿಗೆ 07 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಈ ರೀತಿಯ ಕೃತ್ಯಗಳಿಗೆ ಸಹಾಯ, ಪ್ರೋತ್ಸಾಹ ಮತ್ತು ಪ್ರಯತ್ನಪಟ್ಟವರಿಗೂ ಅಷ್ಟೇ ಪ್ರಮಾಣದ ಶಿಕ್ಷೆಯನ್ನು ವಿಧಿಸಬಹುದಾಗಿದೆ. ಮಾಧ್ಯಮಗಳ ಪ್ರಭಾವದಿಂದ ಪ್ರೀತಿ, ಪ್ರೇಮದ ಹೆಸರಿನಲ್ಲಿ ಮಕ್ಕಳು ತಿಳಿದೊ, ತಿಳಿಯದೆಯೋ ಈ ಕಾಯ್ದೆಯಲ್ಲಿ ಸಿಲುಕುತ್ತಿದ್ದಾರೆ ಅಲ್ಲದೇ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದುವೆಯನ್ನು ಮಾಡಿದಂತವರು, ಭಾಗಿಯಾದವರು, ಪ್ರೋತ್ಸಾಹಿಸಿದವರು ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಈ ಕಾಯ್ದೆಯಲ್ಲಿ ಸಿಲುಕಿ ಜೈಲು ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ ಎಂದರು.

ಅಧ್ಯಕ್ಷತೆಯನ್ನು ಮುಸಲಾಪೂರ ಗ್ರಾಪಂ ಆಡಳಿತಧಿಕಾರಿಗಳಾದ ಅಭಿಲಾಷ ಅವರು ವಹಿಸಿದ್ದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ನಾಗೇಶ ಪೂಜಾರ, ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಾದ ಡಾ.ಅಂಜುಮ್ ತಾಜ್, ಗ್ರಾಂಥಾಲಯ ಮೇಲ್ವಿಚಾರಕರಾದ ಶೇಖರಗೌಡ ಪಾಟೀಲ, ಕನಕಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯದ ಅಂಗನವಾಡಿ ಮೇಲ್ವಿಚಾರಕಿಯರಾದ ಚಂದ್ರಕಲಾ, ಕನಕಗಿರಿ ತಾಲೂಕ ಸಂಯೋಜಕರಾದ ರೇಣುಕಾ ಸೇರಿದಂತೆ ಮುತ್ತಿತರರು ಉಪಸ್ಥಿತರಿದ್ದರು. ಯಮುನಮ್ಮ ಅವರು ನಿರೂಪಿಸಿ, ಪ್ರಸ್ತಾವಿಕವಾಗಿ ಮಾತನಾಡಿದರು. ರಮೇಶ ಅವರು ಕೊನೆಯಲ್ಲಿ ವಂದಿಸಿದರು.

ಮಹನೀಯರ ಜಯಂತಿಗೆ ಅಗತ್ಯ ಸಿದ್ಧತೆ ಕೈಗೊಳ್ಳಿ

ಕೊಪ್ಪಳ: ಜಿಲ್ಲಾ ಕೇಂದ್ರದಲ್ಲಿ ಜೂನ್ ಮತ್ತು ಜುಲೈ ಮಾಹೆಯಲ್ಲಿ ನಡೆಯಲಿರುವ ಕೆಂಪೇಗೌಡ, ಡಾ.ಫ.ಗು. ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣ ಈ ಮೂರು ಮಹನೀಯರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆಂಪೇಗೌಡ, ಡಾ.ಫ.ಗು.ಹಳಕಟ್ಟಿ ಹಾಗೂ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆ ಕುರಿತು ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ. ಫ.ಗು.ಹಳಕಟ್ಟಿ ಜಯಂತಿ: ಜಿಲ್ಲಾ ಮಟ್ಟದಲ್ಲಿ ಡಾ.ಫ.ಗು.ಹಳಕಟ್ಟಿ ಜಯಂತಿಯನ್ನು ಜುಲೈ 2 ರಂದು ಹಮ್ಮಿಕೊಳ್ಳಲಾಗುವುದು. ಅಂದು ಬೆಳಿಗ್ಗೆ 10.30 ಗಂಟೆಗೆ ಕೊಪ್ಪಳ ನಗರದ ಬಾಲಕರ ಸರಕಾರಿ ಪದವಿ ಪೂರ್ವ ಕಾಲೇಜು ಪ್ರೌಢ ಶಾಲಾ ವಿಭಾದಲ್ಲಿ ವೇದಿಕೆ ಸಮಾರಂಭದಲ್ಲಿ ಡಾ. ಫ.ಗು.ಹಳಕಟ್ಟಿ ಭಾವಚಿತ್ರಕ್ಕೆ ಪೂಜೆ, ವಿಶೇಷ ಉಪನ್ಯಾಸ ಸೇರಿದಂತೆ ಇತರೆ ಕಾರ್ಯಕ್ರಮಗಳು ಜರುಗಲಿವೆ. ಈ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಕುಷ್ಟಗಿ ರಸ್ತೆಯಲ್ಲಿರುವ ಡಾ. ಫ.ಗು ಹಳಕಟ್ಟಿ ವೃತ್ತದಲ್ಲಿ ಪುಷ್ಪಾರ್ಚನೆ ಕಾರ್ಯಕ್ರಮ ಜರುಗಲಿದೆ ಎಂದು ಹೇಳಿದರು.

ಹಡಪದ ಅಪ್ಪಣ್ಣ ಜಯಂತಿ: ಕೊಪ್ಪಳ ಜಿಲ್ಲಾ ಮಟ್ಟದ ಹಡಪದ ಅಪ್ಪಣ್ಣನವರ ಜಯಂತಿ ಆಚರಣೆಯನ್ನು ಜು.29ರಂದು ಆಯೋಜಿಸಲಾಗುವುದು. ಅಂದು ಬೆಳಿಗ್ಗೆ 8.30ಕ್ಕೆ ಹಡಪದ ಅಪ್ಪಣ್ಣನವರ ಭಾವಚಿತ್ರದ ಮೆರವಣಿಗೆಯು ನಗರದ ಗಡಿಯಾರ ಕಂಬದ ಹತ್ತಿರವಿರುವ ಅಕ್ಕಮಹಾದೇವಿ ದೇವಸ್ಥಾನದ ಆವರಣದಿಂದ ಆರಂಭಗೊಂಡು ಸಾಹಿತ್ಯ ಭವನದವರೆಗೆ ಜರುಗಲಿದೆ. ಬಳಿಕ 10.30 ಗಂಟೆಗೆ ಸಾಹಿತ್ಯ ಭವನದಲ್ಲಿ ವೇದಿಕೆ ಸಮಾರಂಭ ನಡೆಯಲಿದ್ದು, ಕಾರ್ಯಕ್ರಮದಲ್ಲಿ ಪೂಜೆ, ಹಡಪದ ಅಪ್ಪಣ್ಣನವರ ಕುರಿತು ವಿಶೇಷ ಉಪನ್ಯಾಸ ಹಾಗೂ ಇತರೆ ಕಾರ್ಯಕ್ರಮಗಳು ನಡೆಯಲಿದೆ ಎಂದರು.

ಕೆಂಪೇಗೌಡ ಜಯಂತಿಯನ್ನು ಜೂನ್ 27 ರಂದು ಸರಳವಾಗಿ ಆಚರಿಸುವ ಕುರಿತು ಸಭೆಯಲ್ಲಿ ನಿರ್ಧರಿಸಲಾಯಿತು. ಮಹನೀಯರ ಜಯಂತಿ ಕಾರ್ಯಕ್ರಮಗಳ ಯಶಸ್ವಿಗೆ ವಿವಿಧ ಸಮಾಜದ ಮುಖಂಡರು, ಸಾರ್ವಜನಿಕರು ಸಹಕರಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕರ್ಣಕುಮಾರ್, ಬಸವ ಅನುಯಾಯಿಗಳಾದ ಬಸವರಾಜ ಬಳ್ಳೊಳ್ಳಿ, ಬಸವಶ್ರೀ ಬಿ. ಸೋಮನಾಳ, ಹನುಮೇಶ ಕಲ್ಮಂಗಿ, ಮಹಾಂತೇಶ ಮಲ್ಲನಗೌಡ್ರು, ವೀರಣ್ಣ, ಸತೀಶ್ ಮಂಗಳೂರು, ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾಧ್ಯಕ್ಷರಾದ ಮೌನೇಶ್, ಉಪಾಧ್ಯಕ್ಷರಾದ ಫಕೀರಪ್ಪ, ಗೌರವ ಅಧ್ಯಕ್ಷರಾದ ಮಂಜುನಾಥ ಹಾಂದ್ರಾಳ, ಮುಖಂಡರಾದ ದ್ಯಾಮಣ್ಣ, ಫಕೀರೇಶ ಹಾಂದ್ರಾಳ, ಬಸವರಾಜ ಇಟ್ಟಗಿ, ಮುತ್ತಣ್ಣ ಮಾದನೂರು, ಗಣೇಶ್ ಹಂಚಿನಾಳ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಗಳು, ಸಿಬ್ಬಂದಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಆಡಳಿತಕ್ಕೆ ಜನರ ಮೆಚ್ಚುಗೆ

ಯಲಬುರ್ಗಾ: ಈಗಾಗಲೇ 26 ರಾಜ್ಯಗಳಲ್ಲಿ ಎಸ್‌ಐಆರ್ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ಪಟ್ಟಿ ಪರಿಸ್ಕರಣೆಯಿಂದ ಸುಭದ್ರ ಮತ್ತು ಪಾರದರ್ಶಕತೆ ಆಡಳಿತವನ್ನು ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಜನತೆಯ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಮಾಜಿ ಸಚಿವ ಹಾಲಪ್ಪ ಆಚಾರ ಹೇಳಿದರು.

ಪಟ್ಟಣದ ಬಿಜೆಪಿ ಪಕ್ಷದ ಕಚೇರಿಯಲ್ಲಿ ಶನಿವಾರ ಚಿಕ್ಕಮ್ಯಾಗೇರಿ- ಯಲಬುರ್ಗಾ-ಮುಧೋಳ ಮಹಾಶಕ್ತಿ ಕೇಂದ್ರದ ಬಿಎಲ್‌ಎ-2 ಹಾಗೂ ಬೂತ್ ಅಧ್ಯಕ್ಷರ ಕಾರ್ಯಾಗಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಪಾರದರ್ಶಕ ಆಡಳಿತದ ಹಿತದೃಷ್ಟಿಯಿಂದ ಚುನಾವಣೆ ಆಯೋಗದ ಮೂಲಕ ಕರ್ನಾಟಕ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಮತದಾರರ ಪಟ್ಟಿ ಪರಿಸ್ಕರಣೆ ಕೈಗೊಂಡಿರುವುದು ಐತಿಹಾಸಿಕ ದಾಖಲಾಗಿದೆ ಎಂದರು.

ಎಸ್‌ಐಆರ್ ಮತದಾರರ ಪಟ್ಟಿ ಪರಿಸ್ಕರಣೆ ವ್ಯವಸ್ಥೆ ಜಾರಿಗೆ ಬಂದಿರುವುದರಿಂದ ಕಾಂಗ್ರೇಸ್‌ನವರಿಗೆ ಢವಢವ ಶುರುವಾಗಿದೆ. ಅಕ್ರಮ ಹೆಸರುಗಳ ಪಟ್ಟಿ, ಸತ್ತವರ ಹೆಸರುಗಳನ್ನು ತಗೆದುಹಾಕದೆ. ಅಕ್ರಮ ಮತದಾರರಿಂದ ಓಟು ಪಡೆದುಕೊಂಡು ವಾಮಮಾರ್ಗದಿಂದ ಅಧಿಕಾರಕ್ಕೆ ಬರುತ್ತಿರುವುದಕ್ಕೆ ಆಯೋಗ ಕಡಿವಾಣ ಹಾಕಿದಂತಾಗಿದೆ. ಇದಕ್ಕೆ ಉದಾಹರಣೆ ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆ ಫಲಿತಾಂಶವೇ ಸಾಕ್ಷಿಯಾಗಿದೆ. ತಾಲೂಕಿನಲ್ಲಿ 8ಸಾವಿರ ಮತದಾರರ ಪರಿಷ್ಕರಣೆಯಿಂದ ಕೈಬಿಡಲಾಗಿದೆ ಎಂದು ಹೇಳಿದರು.

ಬಿಜೆಪಿ ಮುಖಂಡರಾದ ಬಸವಲಿಂಗಪ್ಪ ಭೂತೆ, ವೀರಣ್ಣ ಹುಬ್ಬಳ್ಳಿ, ರತನ್ ದೇಸಾಯಿ, ಬಿಜೆಪಿ ತಾಲೂಕಾಧ್ಯಕ್ಷ ಮಾರುತಿ ಗಾವರಾಳ ಮಾತನಾಡಿ, ಮಾಜಿ ಸಚಿವ ಹಾಲಪ್ಪ ಆಚಾರ ಆಡಳಿತಾವಧಿಯಲ್ಲಿ ತಾಲೂಕಿನ ಕೆರೆಗಳಿಗೆ ಕೃಷ್ಣೆಯಿಂದ ನೀರು ತುಂಬಿಸುವ ಕಾರ್ಯ, ಹಲವಾರು ಗ್ರಾಮಗಳಿಗೆ ಸೇತುವೆ ಹಾಗೂ ರೈತರ ಜಮೀನುಗಳಿಗೆ ರಸ್ತೆ ನಿರ್ಮಾಣ ಸೇರಿದಂತೆ ಅನೇಕ ಜನಪರ ಯೋಜನೆಗಳ ಕಾರ್ಯಕ್ರಮಗಳನ್ನು ಕ್ಷೇತ್ರದ ಜನರಿಗೆ ತಿಳಿಸಿ ಮತ್ತೊಮ್ಮೆ ಹಾಲಪ್ಪ ಆಚಾರವರನ್ನು ಗೆಲ್ಲೋಣ ಎಂದರು.

ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಬಸವರಾಜ ಗೌರಾ, ಮುಖಂಡರಾದ ಶರಣಪ್ಪ ಬಣ್ಣದಬಾವಿ, ಸಂತೋಷಿಮಾ ಜೋಶಿ, ಶರಣಪ್ಪ ಇಳಗೇರ, ಶಕುಂತಲಾದೇವಿ ಮಾಲಿಪಾಟೀಲ, ಶಿವಣ್ಣ ವಾದಿ, ಶಿವಕುಮಾರ ನಾಗಲಾಪೂರಮಠ, ಆ.ಕೆಂಚಮ್ಮನವರ್, ಅಮರೇಶ ಹುಬ್ಬಳ್ಳಿ, ಮಂಜುನಾಥ ನಾಡಗೌಡ, ಕಲ್ಲೇಶ ಕರಮುಡಿ ಇದ್ದರು.



ಅರ್ಧಕ್ಕೆ ನಿಂತ ಚರಂಡಿ ಕಾಮಗಾರಿ: ಸ್ವಚ್ಛತೆಗೆ ಪುರಸಭೆ ಹಿಂದೇಟು!

ಕಲಬುರಗಿ: ಜಿಲ್ಲೆಯ ಆಳಂದ ಪಟ್ಟಣದ ಹಳೇ ತಹಶೀಲ್ದಾರ್ ಕಚೇರಿಯಿಂದ ದರ್ಗಾ ಬೇಸ್ ವೃತ್ತದವರೆಗೆ ನಿರ್ಮಾಣವಾಗುತ್ತಿರುವ ಚಕ್ರೀಕಟ್ಟಾ ಹತ್ತಿರದ ಚರಂಡಿ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಅದರಲ್ಲಿ ರಕ್ತ ಮಿಶ್ರಿತ ಕೆಂಪು ನೀರು ಹರಿಯುತ್ತಿರುವುದು ಸಾರ್ವಜನಿಕರಲ್ಲಿ ತೀವ್ರ ಆತಂಕ ಹಾಗೂ ಅಸಮಾಧಾನಕ್ಕೆ ಕಾರಣವಾಗಿದೆ.



ಕಳೆದ ಎರಡು-ಮೂರು ದಿನಗಳಿಂದ ಈ ಚರಂಡಿಯಿಂದ ತೀವ್ರ ದುರ್ವಾಸನೆ ಬೀರುತ್ತಿದ್ದು, ಸುತ್ತಮುತ್ತಲಿನ ನಿವಾಸಿಗಳು ಹಾಗೂ ವ್ಯಾಪಾರಸ್ಥರು ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಸ್ಥಳೀಯರ ಆರೋಪದಂತೆ, ಸಮೀಪದ ಕೆಲವು ಮಾಂಸ ಮಾರಾಟ ಕೇಂದ್ರಗಳು ಹಾಗೂ ಅಂಗಡಿಗಳಿಂದ ಮಾಂಸ ತೊಳೆದ ತ್ಯಾಜ್ಯ ನೀರನ್ನು ನೇರವಾಗಿ ಚರಂಡಿಗೆ ಬಿಡಲಾಗುತ್ತಿದೆ. ಪರಿಣಾಮವಾಗಿ ಚರಂಡಿ ನೀರು ಕೆಂಪು ಬಣ್ಣಕ್ಕೆ ತಿರುಗಿದ್ದು, ಪರಿಸರ ಮಾಲಿನ್ಯ ಉಂಟಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಮುಂದಿನ ದಿನಗಳಲ್ಲಿ ಮಳೆ ಬಂದರೆ ಈ ರಕ್ತ ಮಿಶ್ರಿತ ಕಲುಷಿತ ನೀರು ನೇರವಾಗಿ ರಸ್ತೆಗಳಿಗೆ ಹರಿದು ಸಾರ್ವಜನಿಕ ಆರೋಗ್ಯಕ್ಕೆ ಇನ್ನಷ್ಟು ಅಪಾಯ ಉಂಟಾಗುವ ಸಾಧ್ಯತೆ ಇದೆ. ಈ ಗಂಭೀರ ಸಮಸ್ಯೆ ಕುರಿತು ಸಾರ್ವಜನಿಕರು ಪುರಸಭೆ ಮುಖ್ಯಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಪುರಸಭೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕವೂ ಯಾವುದೇ ಶಾಶ್ವತ ಕ್ರಮ ಕೈಗೊಂಡಿಲ್ಲ ಎಂದು ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚರಂಡಿ ಸ್ವಚ್ಛತಾ ಕಾರ್ಯ ಸಮರ್ಪಕವಾಗಿ ನಡೆಯದ ಹಿನ್ನೆಲೆಯಲ್ಲಿ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ. ಪುರಸಭೆ ಅಧಿಕಾರಿಗಳು ತಕ್ಷಣ ಚರಂಡಿಯನ್ನು ಸ್ವಚ್ಛಗೊಳಿಸಿ, ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕೆಂದು ಸಾರ್ವಜನಿಕರು ತೀವ್ರವಾಗಿ ಆಗ್ರಹಿಸಿದ್ದಾರೆ.

ಪುರಸಭೆ ಆಳಂದ ಮುಖ್ಯಾಧಿಕಾರಿ ಸಂಗಮೇಶ ಪನಶಟ್ಟಿ, ಚಕ್ರೀಕಟ್ಟಾ ಹತ್ತಿರ ಚರಂಡಿಯಲ್ಲಿ ರಕ್ತ ಮಿಶ್ರಿತ ಕೆಂಪು ನೀರು ಹರಿಯುತ್ತಿರುವ ಕುರಿತು ಸುತ್ತಮುತ್ತಲಿನ ವ್ಯಾಪಾರಸ್ಥರು ಮತ್ತು ಸಾರ್ವಜನಿಕರು ಮಾಹಿತಿ ನೀಡಿದ್ದಾರೆ. ತಕ್ಷಣವೇ ಚರಂಡಿ ಸ್ವಚ್ಛಗೊಳಿಸಿ, ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲಾಗುವುದು. ಇನ್ನು ಅರ್ಧಕ್ಕೆ ನಿಂತಿರುವ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗುವುದು ಎಂದರು.

ಸಮರ್ಪಕವಾಗಿ ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸಿ: ಡಾಲಾಯತ್

ಕುಷ್ಟಗಿ: ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು. ಪಂಚ ಗ್ಯಾರಂಟಿ ಯೋಜನೆಗಳಿಂದ ಯಾರೂ ಸಹ ವಂಚಿತರಾಗಬಾರದು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲೂಕು ಅಧ್ಯಕ್ಷ ಫಾರೂಕ್ ಡಾಲಾಯತ್ ಹೇಳಿದರು.

ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಶಕ್ತಿ, ಗೃಹ ಜ್ಯೋತಿ, ಯುವ ನಿಧಿ, ಗೃಹಲಕ್ಷ್ಮೀ ಅನ್ನಭಾಗ್ಯ ಯೋಜನೆಗಳು ಎಲ್ಲರಿಗೂ ಸಮರ್ಪಕವಾಗಿ ತಲುಪಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಅಮರೇಶ ಗಾಂಜಿ, ಶಾರದಾ ಕಟ್ಟಿಮನಿ, ತಾಪಂ ಎಡಿ ಗೀತಾ ಅಯ್ಯಪ್ಪ ಮಾತನಾಡಿದರು.



ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ವಿ.ಎಸ್.ಕಾಡಗಿಮಠ , ನರಸಪ್ಪ ಬಿಂಗಿ, ಉಮಾದೇವಿ ಪಾಟೀಲ, ಮಹಿಬೂಬಿ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅನ್ನಪೂರ್ಣ ಪಾಟೀಲ್ ಮಾತನಾಡಿ ಕೊಪ್ಪಳ ಜಿಲ್ಲೆಯಲ್ಲಿಯೇ ಕುಷ್ಟಗಿ ತಾಲೂಕು ಗೃಹಲಕ್ಷ್ಮಿ ಯೋಜನೆಯಲ್ಲಿ ತಾಲೂಕು ಮುಂಚೂಣಿಯಲ್ಲಿ ಇದೆ ಎಂದರು.

ರಕ್ತದಾನ ಶಿಬಿರ, ಬಡ ಮಕ್ಕಳಿಗೆ ಉಚಿತ ಸೈಕಲ್ ವಿತರಣೆ

ಸಿಂಧನೂರು: ಅಖಂಡ ಭೂಮಿ ಫೌಂಡೇಶನ್‌ನ 5ನೇ ವಾರ್ಷಿಕೋತ್ಸವ ಅಂಗವಾಗಿ ಫೌಂಡೇಶನ್ ಅಧ್ಯಕ್ಷ ನೆಕ್ಕಂಟಿ ಸುರೇಶ ಅವರ ನೇತೃತ್ವದಲ್ಲಿ ವನಸಿರಿ ಫೌಂಡೇಶನ್, ವಿಶ್ವೇಶ್ವರ ಸೇವಾ ಸಮಿತಿ ಸೇರಿದಂತೆ ವಿವಿಧ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಟ ಸಾರ್ವಭೌಮ ಡಾ.ನಂದಮೂರಿ ತಾರಕ ರಾಮಾರಾವ್ ಅವರ 103ನೇ ಜಯಂತಿಯ ಅಂಗವಾಗಿ ಗಾಂಧಿನಗರದ ಶಿವಾಲಯದ ದೇವಾಲಯದಲ್ಲಿ ಬೃಹತ್ ರಕ್ತದಾನ ಶಿಬಿರ ಮತ್ತು ಬಡ ಮಕ್ಕಳಿಗೆ ಉಚಿತ ಸೈಕಲ್ ವಿತರಣೆ ಹಾಗೂ ಸಸಿ ನೆಡುವ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಒಂದು ಕಾರ್ಯಕ್ರಮಕ್ಕೆ ಬಿಜೆಪಿಯ ಹಿರಿಯ ಮುಖಂಡ ಕೆ.ಕರಿಯಪ್ಪ, ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ, ಜೆಡಿಎಸ್ ಮುಖಂಡ ಬಸವರಾಜ ನಾಡಗೌಡ ಹಾಗೂ



ಮಾಜಿ ಕಾಡಾಧ್ಯಕ್ಷ ಕೊಲ್ಲಾ ಶೇಷಗಿರಿರಾವ್ ಸೇರಿದಂತೆ ಇತರ ಮುಖಂಡರು ಜಂಟಿಯಾಗಿ ಪದ್ಮಶ್ರೀ ನಂದಮೂರಿ ತಾರಕ ರಾಮರಾವ್ ಹಾಗೂ ಡಾ.ರಾಜ್‌ಕುಮಾರ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಉದ್ಘಾಟಿಸಿದರು.

ಕೆ.ಕರಿಯಪ್ಪ ಮಾತನಾಡಿ, ಶಿವಾಲಯ ದೇವಸ್ಥಾನದಿಂದ ಗೊರೇಬಾಳ ಕ್ಯಾಂಪಿನ ರಸ್ತೆಯವರೆಗೂ ಸಾಲು ಸಸಿ ನೆಟ್ಟು,ಶಿವಾಲಯ ದೇವಸ್ಥಾನದ ಬಳಿ ಪಂಚವಟಿ ಸಸಿಗಳನ್ನು ನೆಡುವುದರ ಮೂಲಕ ಸುಂದರವಾಗಿ ಕಾಣಲು ಕಾರಣರಾಗಿದ್ದಾರೆ. ಪ್ರತಿ ದಿನವು ದಿನಪತ್ರಿಕೆಗಳನ್ನು ಮಳೆ,ಚಳಿ ಎನ್ನದೆ ಮನೆ ಮನೆಗೆ ಹಂಚುತ್ತಲೇ ವಿದ್ಯಾಭ್ಯಾಸ ಮಾಡುವ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸೈಕಲ್ ವಿತರಣೆ ಮಾಡಿ ಶಿಕ್ಷಣಕ್ಕೆ ಆಸರೆಯಾಗಿರುವುದರ ಜೊತೆಗೆ ಎನ್ ಟಿಆರ್ ಅಭಿಮಾನಿಗಳಿಂದ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಿರುವುದು ಅತ್ಯಂತ ಶ್ಲಾಘನೀಯ ಸೇವಾ ಕಾರ್ಯ ಎಂದು ತಿಳಿಸಿದರು.

ಜೆಡಿಎಸ್ ಮುಖಂಡ ಬಸವರಾಜ ನಾಡಗೌಡ ಮಾತನಾಡಿ, ಆಂಧ್ರದಲ್ಲಿ ಎನ್‌ಟಿಆರ್, ಕರ್ನಾಟಕದಲ್ಲಿ ಡಾ.ರಾಜಕುಮಾರ ಇವರಿಬ್ಬರೂ ದಕ್ಷಿಣ ಭಾರತದ ಚಿತ್ರರಂಗದ ಎರಡು ಕಣ್ಣುಗಳಿದ್ದಂತೆ ಎಂದು ಅಭಿಪ್ರಾಯಪಟ್ಟರು ಹಾಗೂ ಎನ್ ಟಿಆರ್ ಅವರು ತಮ್ಮ ಅಧಿಕಾರ ಅವಧಿಯಲ್ಲಿ ಹಲವಾರು ಸಮಾಜ ಮುಖಿ ಕೆಲಸ ಕಾರ್ಯಗಳನ್ನು ಮಾಡಿ ಕೈಲಾದಷ್ಟು ಸಹಾಯ ಸಹಕಾರ ನೀಡುವ ಮೂಲಕ ಮಾನವಿಯತೆ ಮೆರೆದಿದ್ದಾರೆ ಎಂದು ತಿಳಿಸಿದರು.

ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಸೋಮನಗೌಡ ಬಾದರ್ಲಿ ಮಾತನಾಡಿದರು. ಡಾ.ಚನ್ನನಗೌಡ, ಡಾ.ಶರಣಬಸವ ದೇವಿರೆಡ್ಡಿ, ಅರಣ್ಯ ಅಧಿಕಾರಿ ಬಸವನಗೌಡ ಅಳ್ಳಿಪುರ, ಕಮ್ಮವಾರಿ ಸಂಘದ ಅಧ್ಯಕ್ಷ ಬೂರುಗುಪಲ್ಲಿ ಶ್ರೀಹರ್ಷ, ತಾಲೂರಿ ಸುಬ್ಬರಾವ್, ಅಮರೇಗೌಡ ಮಲ್ಲಾಪುರ, ಲಯನ್ಸ್ ಕ್ಲಬ್ ಅಧ್ಯಕ್ಷ ವೆಂಕಟೇಶ, ನಗರ ಮಂಡಲ ಅಧ್ಯಕ್ಷ ಸಿದ್ದರಾಮೇಶ ಮನ್ನಾಪುರು, ಮುಖಂಡರಾದ ಶ್ರೀಹರ್ಷ, ಯಲ್ಲಪ್ಪ ತೆಲಗರ್, ವಿಶ್ವನಾಥ ಚೌಧರಿ, ಜಗದೀಶ್ ಕೆ. ಹಾಗೂ ವಿಶ್ವ ಹಿಂದೂ ಪರಿಷತ್ ಪದಾಧಿಕಾರಿ ಶ್ರೀನಿವಾಸ, ದೇವಸ್ಥಾನದ ಪದಾಧಿಕಾರಿಗಳು ಇತರರಿದ್ದರು.

ಅಧಿಕಾರ ಅವಧಿಯಲ್ಲಿ ಜನಪರ ಕೆಲಸ ಮಾಡಿ: ತಾಪಂ ಇಒ

ಕುಕನೂರ: ಸರ್ಕಾರಿ ವೃತ್ತಿ ಜೀವನದಲ್ಲಿ ನಿವೃತ್ತಿ ಸಹಜ. ಸೇವೆಯ ಅವಧಿಯಲ್ಲಿ ಜನಪರ ಇಲಾಖೆಯ ಕೆಲಸವನ್ನು ಮಾದರಿಯಾದ ಕೆಲಸಗಳನ್ನು ಮಾಡಿದರೆ ಜನರು ನೆನೆಸುತ್ತಾರೆ. ಅವರನ್ನು ಸರ್ಕಾರವು ಕೂಡಾ ಪ್ರೋತ್ಸಾಹ ಮಾಡುತ್ತದೆ ಎಂದು ತಾಪಂ ಇಒ ಸಂತೋಷ ಬಿರಾದರ ಪಾಟೀಲ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬಳಗೇರಿ ಮತ್ತು ಕುದ್ರಿಮೋತಿ ಗ್ರಾಪಂ ಕಾರ್ಯದರ್ಶಿಗಳ ವಯೋನಿವೃತ್ತಿ ಸಮಾರಂಭ ನಡೆಯಿತು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿಗಳಾಗಿ ಕುದ್ರಿಮೋತಿ ಗ್ರಾಪಂ ಹನುಮಂತಪ್ಪ ಕುರಿ ಮತ್ತು ಬಳಗೇರಿ, ಗ್ರಾಪಂ ಫಕೀರೆಡ್ಡಪ್ಪ ಬಾವಿಕಟ್ಟಿ ಅಂತಹವರು ಸರ್ಕಾರದ ಕೆಲಸ ದೇವರ ಕೆಲಸ ಎಂದು ಭಾವಿಸಿ ಕರ್ತವ್ಯದಲ್ಲಿ ನಿಷ್ಠೆ, ಪ್ರಾಮಾಣಿಕತೆಯೊಂದಿಗೆ ಇಲಾಖೆಯ ಬಳಗದ



ಜೊತೆಗೆ ಹೊಂದಾಣಿಕೆ. ಪ್ರೀತಿ ವಿಶ್ವಾಸ ಉತ್ತಮ ಕರ್ತವ್ಯದೊಂದಿಗೆ ಸೇವೆ ಸಲ್ಲಿಸಿದ ಅವರು ಇತರರಿಗೆ ಮಾದರಿಯಾಗಿದ್ದಾರೆಂದು ಹೇಳಿದರು.

ಹಿರಿಯ ಅಭಿವೃದ್ಧಿ ಅಧಿಕಾರಿಗಳಾದ ವೀರನಗೌಡ ಪಾಟೀಲ, ಪ್ರಕಾಶ ಶಿಡಗನಹಳ್ಳಿ, ಸಿದ್ದನಗೌಡ ರಬ್ಬನಗೌಡ, ಚೆನ್ನಬಸಪ್ಪ ಸಣ್ಣಕರದ, ಮನು ಚಿಟ್ಟಿ, ಮಾರುತಿ ಗೊಂಡಬಾಳ, ಶಾಲಿನಿ ಮಾಲಿಪಾಟೀಲ, ಪರಶುರಾಮ ನಾಯಕ, ಹನಮಂತಪ್ಪ ನಾಯಕ, ಫಕೀರಪ್ಪ ಮೂಲಿಮನಿ, ಬಸಲಿಂಗಪ್ಪ ಹಂಚಿನಾಳ ಇತರರಿದ್ದರು.

ಸೇವಾವಧಿಯ ಸಂದರ್ಭದಲ್ಲಿ ಕರ್ತವ್ಯಕ್ಕೆ ಹೆಚ್ಚು ಮಹತ್ವ ನೀಡಿ ಪ್ರಾಮಾಣಿಕವಾದ ಸೇವೆ ಸಲ್ಲಿಸಿದರೆ ನಿವೃತ್ತಿಯ ನಂತರ ನೆಮ್ಮದಿ ತಾನೇ ಅರಸಿಕೊಂಡು ಬರುತ್ತದೆ. ಅಧಿಕಾರವಿದ್ದಾಗ ಸರ್ವರೊಂದಿಗೆ ಹೊಂದಾಣಿಕೆಯಿಂದ ನ್ಯಾಯಯುತವಾಗಿ ಕೆಲಸ ಮಾಡಿದಲ್ಲಿ ನಿವೃತ್ತಿ ನಂತರ ಹೆಚ್ಚಿನ ಗೌರವ ಸಿಕ್ಕುತ್ತದೆ ಎಂದು ಸಂಪನ್ಮೂಲ ವ್ಯಕ್ತಿ ಭೀಮಪ್ಪ ಹವಳಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ಹನಮಂತಪ್ಪ ಕುರಿ.ಮತ್ತು ಫಕೀರಪ್ಪರೆಡ್ಡಿ ಮಾತನಾಡಿ, ಸೇವಾವಧಿಯಲ್ಲಿ ವೇತನಕ್ಕಾಗಿ ದುಡಿಯದೇ ಸಮಾಜದ ಏಳ್ಗೆಗಾಗಿ ದುಡಿಯಬೇಕು. ಸಮಾಜದ ಋಣ ತೀರಿಸಬೇಕು. ಪ್ರತಿ ಕೆಲಸ ದೇವರ ಕೆಲಸವೆಂದು ನಂಬಿ ಸಾಗಬೇಕು ಎಂದು ಸೇವಾವಧಿಯಲ್ಲಿ ಸಹಕಾರ ನೀಡಿದ ಸರ್ವಸಿಬ್ಬಂದಿಗಳನ್ನು ಸ್ಮರಿಸಿಕೊಂಡರು.

ನಿವೃತ್ತರಾದ ಅಧಿಕಾರಿಗಳನ್ನು ಸನ್ಮಾನಿಸಿದರು.

ಇದೇ ರೀತಿ ತಮ್ಮ ಸೇವಾ ದಿನಗಳ ಕಾರ್ಯ ಮತ್ತು ಸಿಬ್ಬಂದಿಗಳ ಸಹಕಾರವನ್ನು ಇತರರು ನೆನಪಿಸಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು. ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಂತೋಷ ಪಾಟೀಲ್ ಬಿರಾದರ್ ವಹಿಸಿದ್ದರು.

ಯಲ್ಲಪ್ಪ ನಿಡಶೇಸಿ. ಇನ್ನಿತರ ಸಿಬ್ಬಂದಿ, ತಾಪಂ ಸಿಬ್ಬಂದಿ, ಅಧಿಕಾರಿ ವರ್ಗದವರು ಪಾಲ್ಗೊಂಡಿದ್ದರು. ನಿವೃತ್ತ ಸಿಬ್ಬಂದಿ ಗಿರಿಧರ್ ಜೋಶಿ ನಿರೂಪಿಸಿ, ವಂದಿಸಿದರು.

ಕಿರುಸುದ್ದಿ

ಶಾಸಕ ಆರ್‌ವಿಎನ್‌ಗೆ ಸಚಿವ ಸ್ಥಾನ ನೀಡಿ



ಹುಣಸಗಿ: ಸುರಪುರ ಮತಕ್ಷೇತ್ರದ ಮಾಜಿ ಶಾಸಕ ದಿ. ರಾಜಾ ವೆಂಕಟಪ್ಪ ನಾಯಕ ಅವರ ಸುಪುತ್ರ, ಹಾಲಿ ಶಾಸಕ ರಾಜಾ ವೇಣುಗೋಪಾಲ್ ನಾಯಕ ಅವರಿಗೆ ಎಸ್ ಟಿ ಕೋಟಾದ ಅಡಿಯಲ್ಲಿ ಸಚಿವ ಸ್ಥಾನ ಕೊಡಬೇಕು ಎಂದು ಹುಣಸಗಿ ತಾಲೂಕ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರ ದಂಡಿನ ಆಗ್ರಹಿಸಿದ್ದಾರೆ.

ದಿವಂಗತ ರಾಜಾ ವೆಂಕಟಪ್ಪ ನಾಯಕ ಅವರು 4 ಬಾರಿ ಶಾಸಕರಾಗಿ ಸುರಪುರ ಹಾಗೂ ಹುಣಸಗಿ ತಾಲೂಕಿನ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದಾರೆ. ಅವರ ಸುಪುತ್ರ ಶಾಸಕ ರಾಜಾ ವೇಣುಗೋಪಾಲ್ ನಾಯಕ ಅವರು ಕೂಡಾ ವಿದ್ಯಾವಂತರು ಹಾಗೂ ಉತ್ತಮ ಆಡಳಿತಗಾರರು ಹಾಗಾಗಿ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಚಂದ್ರಶೇಖರ ದಂಡಿನ ಸರಕಾರಕ್ಕೆ ಒತ್ತಾಯಿಸಿದ್ದಾರೆ.

ಇಂದು ಜ್ಞಾನೇಶ್ವರಿ ವಿಷ್ಣು ಸಹಸ್ರನಾಮ



ಕುರುಗೋಡು: ಸಮೀಪದ ಕುಡತಿನಿ ಪಟ್ಟಣ ಇಂದಿರಾನಗರದ ಶ್ರೀ ಪಾಂಡುರಂಗ ರುಕ್ಮಿಣಿ ಹಾಗೂ ಶ್ರೀ ಶಿರ್ಡಿ ಸಾಯಿಬಾಬಾ ಮಂದಿರದಲ್ಲಿ ಅಧಿಕ ಜ್ಯೇಷ್ಠ ಮಾಸದ (ಪುರುಷೋತ್ತಮ ಮಾಸ) ಪ್ರಯುಕ್ತ ಅಧಿಕ ಜ್ಯೇಷ್ಠ ಶುದ್ಧ ಹುಣ್ಣಿಮೆ ಮೇ 31ರಂದು ಬೆಳಿಗ್ಗೆ 7ರಿಂದ ಸಂಜೆ 8.30ರ ವರೆಗೆ ಗ್ರಂಥರಾಜ ಶ್ರೀಜ್ಞಾನೇಶ್ವರಿ ಶ್ರೀವಿಷ್ಣು ಸಹಸ್ರನಾಮ ಸಾಮುದಾಯಿಕ ಪಾರಾಯಣ ನಾಮಜಪ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಅಂದು ಸಂಜೆ ಹುಣ್ಣಿಮೆಯ ನಿಮಿತ್ತವಾಗಿ ನಡೆಯುವ ಮಾಸಿಕ ಸತ್ಸಂಗ ಶ್ರೀಭಗವದಾಮೃತ 109ನೇ ಸಂತ ಶರಣ ಚಿಂತನಾ ಕಾರ್ಯಕ್ರಮವು ಜರುಗಲಿದ್ದು ಅಂಗವಾಗಿ ಕುಡತಿನಿ ಪಟ್ಟಣ ಹಾಗೂ ಸುತ್ತಮುತ್ತಲಿನ ಸರ್ವ ಭಕ್ತಾದಿಗಳು ಹಾಗೂ ಮಹಿಳಾ ಮಂಡಳಿಗಳು ಭಾಗವಹಿಸಿ ತನು ಮನ ಧನ ಧಾನ್ಯಗಳಿಂದ ಸಹಕರಿಸಿ ಈ ಉತ್ಸವವನ್ನು ಯಶಸ್ವಿಗೊಳಿಸಲು ದೇವಸ್ಥಾನದ ಆಡಳಿತ ಮಂಡಳಿ ಶ್ರೀಮಾವುಲೀ ತುಕಾರಾಮ ಸೇವಾ ಟ್ರಸ್ಟ್ ವತಿಯಿಂದ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ವಿಜಯನಗರ: ಮೌಲಾನಾ ಆಜಾದ್ ಮಾದರಿ ಪದವಿ ಪೂರ್ವ ಕಾಲೇಜು ಶಾಲೆಯಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರು, ಉಪನ್ಯಾಸಕರ ಹುದ್ದೆಗೆ ಅರ್ಜಿ ಕರೆಯಲಾಗಿದೆ. ಕನ್ನಡ, ಇಂಗ್ಲೀಷ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಪಿಯುಸಿ ಅತಿಥಿ ಉಪನ್ಯಾಸಕರು ಹಾಗೂ ಮೌಲಾನಾ ಆಜಾದ್ ಮಾದರಿ ಶಾಲೆಗೆ ಇಂಗ್ಲಿಷ್, ಹಿಂದಿ, ಉರ್ದು, ದೈಹಿಕ ಶಿಕ್ಷಕರ ಹುದ್ದೆ ಖಾಲಿ ಹುದ್ದೆಗಳಿಗೆ ಅರ್ಹ ವಿದ್ಯಾರ್ಹತೆ ಹೊಂದಿರುವ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9945951963ಗೆ ಸಂಪರ್ಕಿಸಬಹುದು ಎಂದು ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

100 ಲೀಟರ್ ಮದ್ಯ ವಶ



ಕುರುಗೋಡು: ತಾಲೂಕಿನ ವ್ಯಾಪ್ತಿಯ ಯಲ್ಲಾಪುರ ಕ್ರಾಸ್ ಬಳಿ ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ವಾಹನದ ಮೇಲೆ ಶುಕ್ರವಾರ ರಾತ್ರಿ ದಾಳಿ ಮಾಡಿದ ಕುರುಗೋಡು ಪೊಲೀಸರು ವಾಹನ ಸೇರಿದಂತೆ ಸುಮಾರು 3.9 ಲಕ್ಷ ರೂ. ಮೌಲ್ಯದ 100 ಲೀಟರ್ ಮದ್ಯ ವಶಪಡಿಸಿಕೊಂಡಿದ್ದಾರೆ.ಪಿಎಸ್ಐ ಸುಪ್ರೀತ್ ವಿರುಪಕ್ಷಪ್ಪ ಮತ್ತು ಸಿಬ್ಬಂದಿ ಶಿವರಾಯಪ್ಪ ಪಕ್ಕಿರಪ್ಪ ಹಾಗೂ ಶರಣಪ್ಪ ರೇವಣ್ಣ ಅವರ ಒಳಗೊಂಡ ತಂಡ ಖಚಿತ ಮಾಹಿತಿ ಮೇರೆಗೆ ತಾಲೂಕಿನ ಯಲ್ಲಾಪುರ ಕ್ರಾಸ್ ನಿವಾಸಿ ತಿಪ್ಪಯ್ಯ ಆದೋನಿ ಸುಧಕರ ಅವರು ಆಂಧ್ರಪ್ರದೇಶದ ಆದೋನಿ ಯಿಂದ ಪರವಾನಿಗೆ ಇಲ್ಲದೇ, ಸಾರ್ವಜನಿಕರಿಗೆ ಮಾರಾಟ ಮಾಡಲು ಶೇಖರಿಸಿದ್ದ ನೂರು ಲೀಟರ್ ಮದ್ಯವನ್ನು ಶುಕ್ರವಾರ ವಶಪಡಿಸಿಕೊಂಡಿದ್ದಾರೆ. ಸಮೀಪದ ಯಲ್ಲಾಪುರ ಕ್ರಾಸ್‌ನಲ್ಲಿ ಅನುಮಾನಾಸ್ಪದ ವಾಹನದ ಮೇಲೆ ದಾಳಿ ಮಾಡಿದ ಪೊಲೀಸರು, ಅಕ್ರಮವಾಗಿ ಶೇಖರಿಸಿದ್ದ 9 ಸಾವಿರ ರೂ. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕುರುಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕುರುಗೋಡು: ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ತಾಲೂಕಿನ ಸಮೀಪದ ಬಾದನಹಟ್ಟಿ ಗ್ರಾಮದ ಕೆಪಿಎಸ್ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಮುಚ್ಚುವುದನ್ನು ವಿರೋಧಿಸಿ, ಶಾಲೆ ಮುಂದೆ ನಮ್ಮೂರ ಶಾಲೆ ನಮ್ಮಯ ಕಣ್ಮಣಿ ಎಂಬ ಬ್ಯಾನರ್ ಕಟ್ಟಿ ನಮ್ಮೂರ ಶಾಲೆ ನಮ್ಮೂರಲ್ಲಿ ಉಳಿಸಬೇಕೆಂದು ಆಗ್ರಹಿಸಿ ಹೋರಾಟ ಮಾಡಲಾಯಿತು. ನಂತರ ಗ್ರಾಪಂ ಪಿಡಿಒ ಅನಿಲ್ ಅವರಿಗೆ ಮನವಿ ಸಲ್ಲಿಸಲಾಯಿತು.

15 ಲಕ್ಷ ರೂ. ಮೌಲ್ಯದ ವಸ್ತುಗಳ ಜಪ್ತಿ

ಬಳ್ಳಾರಿ: ಕಳೆದ 2025ನೇ ಸಾಲಿನ ಅಕ್ಟೋಬರ್ ತಿಂಗಳಿಂದ 2026ನೇ ಸಾಲಿನ ಮೇ ತಿಂಗಳವರೆಗೆ ಕುರುಗೋಡು ಹಾಗೂ ಕುಡುತಿನಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಒಟ್ಟು 8 ಸ್ವತ್ತಿನ ಪ್ರಕರಣಗಳಲ್ಲಿ 15 ಲಕ್ಷ ರೂ. ಬೆಲೆ ಬಾಳುವ ಕಳ್ಳತನವಾದ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಪೊಲೀಸ್ ಅಧೀಕ್ಷಕರಾದ ಡಾ.ಸುಮನ್ ಡಿ.ಪೆನ್ನೇಕರ್, ಎಎಸ್ಪಿ ನವೀನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ತೋರಣಗಲ್ ಉಪ ವಿಭಾಗದ ಡಿವೈಎಸ್ಪಿ ಪ್ರಸಾದ್ ಗೋಖಲೆ, ಕುರುಗೋಡು ಪೊಲೀಸ್ ವೃತ್ತ ನಿರೀಕ್ಷಕ ಬಾಳನಗೌಡ ಎಸ್.ಎಂ.ಅವರ ನೇತೃತ್ವದಲ್ಲಿ ಪಿಎಸ್ಐಗಳಾದ ಶಾಂತಮೂರ್ತಿ, ವಾಣಿ ಕುಡುತಿನಿ ಅವರ ಹಾಗೂ ಸಿಬ್ಬಂದಿ ಮುಂದಾಳತ್ವದಲ್ಲಿ ವ್ಯಾಪ್ತಿಯ ಠಾಣಾ ವ್ಯಾಪ್ತಿಯಲ್ಲಿ ದಾಖಲಾದ ದೂರು ಹಿನ್ನೆಲೆ, ವಶಪಡಿಸಿಕೊಂಡ ಸ್ವತ್ತುಗಳನ್ನು ಸಂಬಂಧಿಸಿದ ವಾರಸುದಾರರಿಗೆ, ದೂರುದಾರರಿಗೆ ಹಿಂದಿರುಗಿಸಲಾಯಿತು.

1 ಲಕ್ಷ ಬೆಲೆ ಬಾಳುವ 8 ಬ್ಯಾಟರಿಗಳು, 1 ಲಕ್ಷ ಬೆಲೆ ಬಾಳುವ 9 ಬ್ಯಾಟರಿಗಳು, 1 ಲಕ್ಷ ಬೆಲೆ ಬಾಳುವ 6 ಬ್ಯಾಟರಿಗಳು, ಕೇಬಲ್, ನಗದು ಹಣ, ಮೋಟಾರ್ ಸೈಕಲ್‌ಗಳು, 4.50 ಲಕ್ಷ ಬೆಲೆ ಬಾಳುವ ಜವಾರಿ ಎಮ್ಮೆಗಳು, ಮೊಬೈಲ್ ಗಳು ಸೇರಿದಂತೆ ಚಿನ್ನಾಭರಣಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ.



ಬಳ್ಳಾರಿ: ಕಳೆದ 2025ನೇ ಸಾಲಿನ ಅಕ್ಟೋಬರ್ ತಿಂಗಳಿಂದ 2026ನೇ ಸಾಲಿನ ಮೇ ತಿಂಗಳವರೆಗೆ ಕುರುಗೋಡು ಹಾಗೂ ಕುಡುತಿನಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಒಟ್ಟು 8 ಸ್ವತ್ತಿನ ಪ್ರಕರಣಗಳಲ್ಲಿ 15 ಲಕ್ಷ ರೂ. ಬೆಲೆ ಬಾಳುವ ಕಳ್ಳತನವಾದ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಅಧಿಕಾರಿಗಳಿಗೆ ದಂಡ, ಶಿಸ್ತುಕ್ರಮಕ್ಕೆ ಶಿಫಾರಸು: ಬಿ.ವೆಂಕಟ್ ಸಿಂಗ್ ಎಚ್ಚರಿಕೆ

ಆರ್‌ಟಿಐ ಅರ್ಜಿ ನಿರ್ಲಕ್ಷ್ಯ ಅಕ್ಷಮ್ಯ

ವಿಜಯನಗರ: ಸರ್ಕಾರಿ ಕಚೇರಿಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಕೆಯಾಗುವ ಅರ್ಜಿಗಳನ್ನು ಅಧಿಕಾರಿಗಳು ನಿಗದಿತ ಅವಧಿಯೊಳಗೆ ವಿಲೇವಾರಿ ಮಾಡಬೇಕು. ಈ ವಿಷಯದಲ್ಲಿ ವಿಳಂಬ, ನಿರ್ಲಕ್ಷ್ಯ ತೋರಿದರೆ ದಂಡ ಮತ್ತು ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ ಎಂದು ಮಾಹಿತಿ ಹಕ್ಕು ಆಯೋಗದ ಕಲಬುರಗಿ ಪೀಠದ ಆಯುಕ್ತ ಬಿ. ವೆಂಕಟ್ ಸಿಂಗ್ ಎಚ್ಚರಿಕೆ ನೀಡಿದ್ದಾರೆ.

ಹೊಸಪೇಟೆಯ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ಜಿಲ್ಲೆಯ ಎಲ್ಲ ಇಲಾಖೆ ಗಳ ಜಿಲ್ಲಾ ಮಟ್ಟದ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಆಯೋಜಿಸಿದ್ದ 'ಮಾಹಿತಿ ಹಕ್ಕು ಕಾಯ್ದೆ ತರಬೇತಿ ಕಾರ್ಯಾಗಾರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕಲ್ಯಾಣ ಕರ್ನಾಟಕದ ರಾಯಚೂರು, ಯಾದಗಿರಿ ಹೊರತಾಗಿ ಐದು ಜಿಲ್ಲೆಗಳಲ್ಲಿ ಮಾಹಿತಿ ಹಕ್ಕು ಕಾಯ್ದೆ ಕುರಿತು? ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಸದ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಅರ್ಜಿಗಳು ಬಾಕಿ ಉಳಿದಿದ್ದು, ಅಧಿಕಾರಿಗಳು ಸಕಾಲಕ್ಕೆ ಮಾಹಿತಿ ನೀಡಲು ಮುಂದಾಗಬೇಕು ಎಂದರು.

ಮಾಹಿತಿ ನೀಡಲು ವಿಳಂಬ ಮಾಡಿದರೆ ಆಯೋಗಕ್ಕೆ 20 ಸಾವಿರ ರೂ. ವರೆಗೆ ದಂಡ ವಿಧಿಸುವ, ಸಮನ್ಸ್ ಜಾರಿಗೊಳಿಸಿ ಆಯೋಗದ ಎದುರು ಹಾಜರುಪಡಿಸುವ ಹಾಗೂ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡುವ ಅಧಿಕಾರವಿದೆ. ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಮಾಹಿತಿ ಹಕ್ಕು ಆಯೋಗದ ಫಲಕ ಪ್ರದರ್ಶಿಸುವುದು ಶಾಸನಬದ್ಧ ನಿಯಮವಾಗಿದ್ದು, ಈ ಬಗ್ಗೆ ಮುಖ್ಯ ಕಾರ್ಯದರ್ಶಿಗಳ ಸುತ್ತೋಲೆ ಇದ್ದರೂ ಎಷ್ಟು ಇಲಾಖೆಗಳು ಇದನ್ನು ಪಾಲಿಸುತ್ತಿವೆ ಎಂದು ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.



> ಅಧಿಕಾರಿಗಳು ಮಾತೃಸ್ಥಾನದ ಭಾವನೆಯೊಂದಿಗೆ ಕೆಲಸ ಮಾಡಬೇಕು. ಕಠಿಣ ಸಂದರ್ಭಗಳಲ್ಲಿ ಹಗಲಿರುಳು ಯುದ್ಧೋಪಾದಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳು, ಸರಳವಾದ ಆರ್‌ಟಿಐ ಅರ್ಜಿಯನ್ನು ವಿಲೇವಾರಿ ಮಾಡಲು ಅನಗತ್ಯವಾಗಿ ಗಾಬರಿ ಪಡಬೇಕಾಗಿಲ್ಲ. ನಿಯಮಾವಳಿಗಳ ಪ್ರಕಾರ ನಿಗದಿತ 30 ದಿನಗಳಲ್ಲಿ ಅರ್ಜಿಯನ್ನು ವಿಲೇವಾರಿ ಮಾಡಬೇಕು, ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗೆ 1 ಲಕ್ಷ ರೂ. ವರೆಗೆ ದಂಡ ಬೀಳುವ ಸಾಧ್ಯತೆಯಿರುತ್ತದೆ.
>
> ■ ಬದ್ರುದ್ದೀನ್, ಬೆಂಗಳೂರು ಪೀಠದ ಆಯುಕ್ತ

ಬೆಂಗಳೂರು ಪೀಠದ ಆಯುಕ್ತ ಡಾ. ಹರೀಶ್ ಕುಮಾರ್ ಮಾತನಾಡಿ, ಇತರ ಇಲಾಖೆಗಳಿಗೆ ಹೋಲಿಸಿದರೆ ಪೊಲೀಸ್ ಠಾಣೆಗಳಲ್ಲಿ ನಡೆಯುವ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಹೆಚ್ಚಿನ ಅರ್ಜಿಗಳು ಸಲ್ಲಿಕೆಯಾಗುತ್ತಿವೆ. ಆರ್‌ಟಿಐ ಕಾಯ್ದೆಯಡಿ ಸಿಸಿಟಿವಿ ಫೂಟೇಜ್‌ಗಳನ್ನು ಕೇಳಿದರೆ ಅದನ್ನು ಒದಗಿಸುವುದು ಕಡ್ಡಾಯವಾಗಿದ್ದು, ಠಾಣೆಗಳಲ್ಲಿ ಕನಿಷ್ಠ ಒಂದು ವರ್ಷದವರೆಗೆ ಸಿಸಿಟಿವಿ ಫೂಟೇಜ್‌ಗಳನ್ನು ಸಂಗ್ರಹಿಸಿಡಬೇಕು ಎಂದು ಸೂಚಿಸಿದರು. ಆರ್‌ಟಿಐ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಿಂಬಾಗಿಲ ಸಂವಾದ ಅಥವಾ ಫೋನ್ ವ್ಯವಹಾರಗಳು ನಡೆಯಬಾರದು. ಅರ್ಜಿದಾರರು ಅಧಿಕಾರಿಗೆ ಫೋನ್ ಮಾಡುವುದು ಅಥವಾ ಅಧಿಕಾರಿಗಳು ಅರ್ಜಿದಾರರನ್ನು ಕರೆಯಿಸಿ ಮಾತನಾಡುವುದು ಸರಿಯಲ್ಲ, ಏನೇ ಇದ್ದರೂ ಪ್ರಕ್ರಿಯೆಯು ಅಧಿಕೃತ ಪತ್ರವ್ಯವಹಾರಕ್ಕೆ ಮಾತ್ರ ಸೀಮಿತವಾಗಿರಬೇಕು ಎಂದು ತಿಳಿಸಿದರು.

ಕಾರ್ಯಾಗಾರದ ವೇದಿಕೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಾಹ್ನವಿ ಎಸ್., ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಮಂಜುನಾಥ ಮತ್ತು ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಉಪಸ್ಥಿತರಿದ್ದರು.

ಕಾಮಗಾರಿ ಕಳಪೆಯಾದರೆ ಶಿಸ್ತು ಕ್ರಮ

ಬೀದರ: ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ. ಚವ್ಹಾಣ ಅವರು ಶನಿವಾರ ಇಟಗ್ಯಾಳ, ಬೇಲೂರ.ಎನ್, ಮುತಖೇಡ, ಅಕನಾಪೂರ ಹಾಗೂ ಚಿಕ್ಲಿ.ಯು ಗ್ರಾಮಗಳಲ್ಲಿ ಸಂಚರಿಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಇಟ್ಯಾಳನಲ್ಲಿ ಇಟಗ್ಯಾಳನಿಂದ ಮಾನೂರ (ಕೆ) ವರೆಗೆ 170 ಲಕ್ಷ ಮೊತ್ತದ ಹೊಸ ರಸ್ತೆ ನಿರ್ಮಾಣ, ಬೇಲೂರ(ಎನ್)ನಲ್ಲಿ 6 ಲಕ್ಷದ ಸಿಸಿ ರಸ್ತೆ, ಮುತಖೇಡ್‌ನಲ್ಲಿ 25 ಲಕ್ಷ ಮೊತ್ತ ಬ್ರಿಜ್ ಕಂ ಬ್ಯಾರೇಜ್ ದುರಸ್ತಿ ಹಾಗೂ ಅಕನಾಪೂರನಲ್ಲಿ 45 ಲಕ್ಷ ಮೊತ್ತದ ಸಣ್ಣ ನೀರಾವರಿ ಕೆರೆ ದುರಸ್ತಿ, ಚಿಕ್ಲಿ(ಯು)ನಲ್ಲಿ 20 ಲಕ್ಷ ಮೊತ್ತದ ಸಣ್ಣ ನೀರಾವರಿ ಕೆರೆಯ ದುರಸ್ತಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ವಿವಿಧ ಕಾಮಗಾರಿಗಳ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಶಾಸಕರು, ಕಾಮಗಾರಿಗಳನ್ನು ಗುಣಮಟ್ಟದೊಂದಿಗೆ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಗ್ರಾಮ ಸಂಚಾರದ ಸಂದರ್ಭದಲ್ಲಿ ಸಾರ್ವಜನಿಕರಿಂದ ಬಂದ ಬೇಡಿಕೆಗಳಿಗೆ ಸ್ಪಂದಿಸಿ ಅಗತ್ಯ ಅನುದಾನವನ್ನು ತಂದು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ತಮ್ಮ ಮುಖ್ಯ ಗುರಿಯಾಗಿದ್ದು, ಜನರ ನಿರೀಕ್ಷೆಗೆ ತಕ್ಕಂತೆ ಮೂಲಸೌಕರ್ಯಗಳನ್ನು ಕಲ್ಪಿಸಲು ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕಾಮಗಾರಿಗಳ ಗುಣಮಟ್ಟದ ವಿಷಯದಲ್ಲಿ ಯಾವುದೇ ರಾಜಿ ಇಲ್ಲ, ನಿರ್ಮಾಣ ಕಾರ್ಯಗಳಲ್ಲಿ ಲೋಪಗಳು ಕಂಡುಬಂದಲ್ಲಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಹಾಗಾಗಿ ಎಚ್ಚರಿಕೆಯಿಂದ ಕೆಲಸ ಮಾಡಬೇಕೆಂದು ಹೇಳಿದರು.

ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಸತೀಷ ಪಾಟೀಲ, ಸಚಿನ ರಾಠೋಡ, ಖಂಡೋಬಾ ಕಂಗಟೆ ಪ್ರಕಾಶ ಜೀರ್ಗೆ, ಮಲ್ಲಪ್ಪ ನೇಳಗೆ, ಪ್ರಕಾಶ ಮೇತ್ರೆ, ಬಾಲಾಜಿ ಪಾಟೀಲ, ಸೋಮನಾಥ ಆಲೂರ, ಸಂಗು ಬೋರ್ಗಿ, ಹಣಮಂತ ನೇಳಗೆ, ರವೀಂದ್ರ ರೆಡ್ಡಿ, ಜಗದೀಶ ಪಾಟೀಲ, ಈರಾರೆಡ್ಡಿ, ಶರಣು ಪಾಟೀಲ, ಅನೀಲ ನಾರಾಯಣಪೂರ, ಪ್ರಕಾಶ ಬೀರಕೂರೆ ಇತರರಿದ್ದರು.



ಜನರ ಹಿತಾಸಕ್ತಿಯೇ ನನ್ನ ಮೊದಲ ಆದ್ಯತೆ

ಯಾದಗಿರಿ: ನಮ್ಮ ಭಾಗದ ಜನತೆ ಭಕ್ತಿ ಮತ್ತು ಬಡತನದ ಮಧ್ಯೆ ಸಿಲುಕಿದ್ದು ಅಭಿವೃದ್ಧಿಗಿಂತ ಹೆಚ್ಚಾಗಿ ದೇವಸ್ಥಾನ, ಮಸೀದಿ ಮತ್ತು ಚರ್ಚ್ ಗಳ ನಿರ್ಮಾಣಕ್ಕಾಗಿ ಅನುದಾನ ಕೇಳುತ್ತಿದ್ದು, ಸರ್ಕಾರದಿಂದ ಹಣ ಬಿಡುಗಡೆಗೆ ಕಷ್ಟವಾಗುತ್ತಿದೆ ಎಂದು ಶಾಸಕ ಶರಣಗೌಡ ಕಂದಕೂರ ತಿಳಿಸಿದರು.

ಶನಿವಾರ ಗುರಮಠಕಲ್ ಕ್ಷೇತ್ರದ ಅರಿಕೇರಾ (ಬಿ)ಗ್ರಾಮದಲ್ಲಿ 2025-26ನೇ ಸಾಲಿನ ಮುಖ್ಯಮಂತ್ರಿಗಳ ವಿಶೇಷ ಯೋಜನೆಯಡಿ ಕೊರಮ ಅಲೆಮಾರಿ ಸಮುದಾಯ ಭವನ ನಿರ್ಮಾಣ, ವೆಂಕಟೇಶ ನಗರ ತಂಡಾದ ದಾಮಾಸಾಬ್ ದೇವಸ್ಥಾನ ಶಿಖರ ನಿರ್ಮಾಣ, ಬಂದಳ್ಳಿ ಗ್ರಾಮದಲ್ಲಿ ಗುಂಜಲಮ್ಮ ದೇವಸ್ಥಾನ ಅಭಿವೃದ್ಧಿ ಕಾಮಗಾರಿ, ಬುದೂರು ಗ್ರಾಮದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ, ಕಾಕಲವಾರ ಗ್ರಾಮದಲ್ಲಿ ಹನುಮಾನ್ ದೇವಸ್ಥಾನ ಮತ್ತು ಗುರಮಠಕಲ್ ಪಟ್ಟಣದಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಹೀಗೆ 90 ಲಕ್ಷ ರೂ. ಗಳ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಈ ವೇಳೆ ತಹಶೀಲ್ದಾರ್ ಚನ್ನಮಲ್ಲಪ್ಪ ಗಂಟಿ, ತಾಪಂಇಒ ಮಹಾದೇವ, ಭೂಸೇನಾ ನಿಗಮದ ಎಇಇ ಬನ್ನಪ್ಪ ಕೋಮಾರ, ಪುರಸಭೆ ಮುಖ್ಯಾಧಿಕಾರಿ ಶರಣಪ್ಪ, ಡಾ.ಪುರುಷೋತ್ತಮ ಜೋಶಿ, ಬಿಇಒ ವೀರಣ್ಣ ಕನ್ನಳ್ಳಿ, ಕಂದಾಯ ನಿರೀಕ್ಷಕ ರಾಜಶೇಖರ, ಟಿಎಪಿಎಂಸಿ ಅಧ್ಯಕ್ಷ ಹಣಮಂತ ಅಕ್ಕಿ, ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ, ವಿಶ್ವನಾಥ ದೇಶಮುಖ ಕಾಕಲಾವರ, ಶಾಂತಯ್ಯ ಸ್ವಾಮಿ ಅರಿಕೇರಾ (ಬಿ), ಸಿದ್ದಲಿಂಗರಡ್ಡಿ ಅರಿಕೇರಾ (ಬಿ), ಭೋಜನಗೌಡ ಯಡ್ಡಳ್ಳಿ, ವೀರಪ್ಪ ಖಾನಳ್ಳಿ, ಅಯ್ಯನಗೌಡ ಕ್ಯಾಸಪನಳ್ಳಿ, ಹಂಪಯ್ಯ ಅಲ್ಲಿಪುರ, ಅಜಯರಡ್ಡಿ ಯಲೇರಿ, ದೊಡ್ಡಣಗೌಡ ಅರಿಕೇರಾ, ತಾಪಂ ಮಾಜಿ ಅಧ್ಯಕ್ಷ ಈಶ್ವರ ನಾಯಕ, ಜಯೇಂದ್ರ ಚವ್ಹಾಣ, ಜನಾರ್ಧನ ರಾಠೋಡ, ಅಮರೇಶ ಪಾಡೀಲ್ ಬಂದಳ್ಳೊ, ಸಾಯಿಬಣ್ಣ ಬಕ್ಕಾ, ಪಂಪನಗೌಡ ಅರಿಕೇರಾ (ಬಿ), ಸಿದ್ದರಾಮರಡ್ಡಿ ಎ.ಟಿ.ಪಲ್ಲಿ, ಕೇಶವರಡ್ಡಿ ಬುದುರ, ವೀರೇಶ ವಿಶ್ವಕರ್ಮ, ಸದಾಶಿವರಡ್ಡಿ ಕಾಕಲವಾರ, ಹುಸೇನಪ್ಪ ಕಾಕಲವಾರ, ಗುರು ಅಲ್ಲಿಪುರ ತಾಂಡಾ ಇದ್ದರು ಇದ್ದರು.



ಪಿಣರಾಯಿ ಮನೆ ಮೇಲೆ ಇಡಿ ದಾಳಿ ಖಂಡಿಸಿ ಪ್ರತಿಭಟನೆ

ಹಗರಿಬೊಮ್ಮನಹಳ್ಳಿ: ಕೇರಳದ ಮಾಜಿ ಮುಖ್ಯಮಂತ್ರಿ, ಪಿಣರಾಯಿ ವಿಜಯನ್.ಅವರ ನಿವಾಸದ ಮೇಲೆ ಇಡಿ ದಾಳಿಯನ್ನು ಖಂಡಿಸಿ ಶನಿವಾರ ಸಿಪಿಐಎಂ ಪಕ್ಷದಿಂದ ಪಟ್ಟಣದ ಪ್ರತಿಭಟನೆ ನಡೆಸಲಾಯಿತು.

ತಾಲೂಕು ಕಾರ್ಯದರ್ಶಿ ಬಿ.ಮಾಳಮ್ಮ ಮಾತನಾಡಿ, ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ವಿರೋಧ ಪಕ್ಷದ ನಾಯಕ ರಾದ ಪಿಣರಾಯ್ ವಿಜಯನ್ ಅವರ ನಿವಾಸದ ಮೇಲೆ ಇಡಿ ದಾಳಿ ಕೇಂದ್ರ ಸರ್ಕಾರದ ಪ್ರತಿಕಾರದ ಕ್ರಮವಾಗಿದೆ. ಪಿಣರಾಯಿ ವಿಜಯನ್ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದು ಒಂದೇ ತಿಂಗಳೊಳಗೆ ಈ ದಾಳಿ ನಡೆದಿರುವುದು ಭಯದ ವಾತಾವರಣ ಸೃಷ್ಟಿಸುವ ಕೇಂದ್ರ ಸರ್ಕಾರದ ಉದ್ದೇಶ ಸ್ಪಷ್ಟವಾಗಿದೆ.

ಪಿಣರಾಯ್ ವಿಜಯನ್ ಅವರಿಗೂ ಎಕ್ಸಲಾಜಿಕ್ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದು ನ್ಯಾಯಾಲಯಗಳು ಪದೇ ಪದೇ ಗಮನಿಸಿವೆ. ಆದರೂ ಅವರ ವಿರುದ್ಧ ರಾಜಕೀಯ ಬೇಟೆ ನಿರಂತರವಾಗಿ ಮುಂದುವರಿದಿದೆ. ಇಂತಹ ರಾಜಕೀಯ ಪ್ರತಿಕಾರವನ್ನು ಪಕ್ಷ ಬಲವಾಗಿ ಖಂಡಿಸುತ್ತದೆ ಎಂದರು.



ಮುಖಂಡ ಎಸ್.ಜಗನ್ನಾಥ ಮಾತನಾಡಿ, ಕೇರಳದ ಮುಖ್ಯಮಂತ್ರಿ ವಿ.ಡಿ.ಸತೀಶನ್ ದಿಲ್ಲಿಯಲ್ಲಿ ಪ್ರಧಾನ ಮಂತ್ರಿಯವರನ್ನು ಕಂಡ ತಕ್ಷಣ ಇಂತಹ ಕ್ರಮವು ನೆಡೆದಿರು ವುದು. ಗಂಭೀರ ಪ್ರಶ್ನೆಗಳನ್ನು ಹುಟ್ಟು ಹಾಕುತ್ತದೆ. ಯುಡಿಎಫ್ ಸರ್ಕಾರ ರಾಜ್ಯದಲ್ಲಿ ಅಧಿಕಾರ ಸ್ವೀಕರಿಸಿ ಹತ್ತು ದಿನಗಳಲ್ಲೇ ರಾಜಕೀಯ ಉದ್ದೇಶದಿಂದ ರೂಪಿಸಲಾದ ಇಂತಹ ಕ್ರಮದ ವಿರುದ್ಧ ಕೇರಳ ರಾಜ್ಯದ ಪ್ರಜ್ಞಾವಂತ ಜನರು ಬೀದಿಗಿಳಿದು ಪ್ರತಿಭಟನೆ ಮಾಡುತ್ತಿದ್ದಾರೆ ಎಂದರು. ತಾಲೂಕು ಸಮಿತಿ ಮುಖಂಡರಾದ ರಂಗಪ್ಪ ದಾಸರ, ಕೊಟಗಿ ಮಲ್ಲಿಕಾರ್ಜುನ, ಕೆ.ರಮೇಶ, ಜಿ.ರಮೇಶ, ಕೆ.ರಾಮಣ್ಣ, ಬಿ.ಮೈಲಮ್ಮ ತಟ್ಟಮ್ಮ, ದುರುಗಮ್ಮ ಇದ್ದರು.

ಬಾದನಹಟ್ಟಿ ಗ್ರಾಮದ ಕೆಪಿಎಸ್ ಶಾಲೆಗೆ ಮಕ್ಕಳನ್ನು ಕಳುಹಿಸಲು ವಿರೋಧ

ಕುರುಗೋಡು: ಎಐಡಿಎಸ್‌ಓ ಹಾಗೂ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೇತೃತ್ವದಲ್ಲಿ ತಾಲೂಕಿನ ಸಮೀಪದ ಬಾದನಹಟ್ಟಿ ಗ್ರಾಮದ ಕೆಪಿಎಸ್ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳ ಮುಚ್ಚುವುದನ್ನು ವಿರೋಧಿಸಿ, ಶಾಲೆ ಮುಂದೆ ನಮ್ಮೂರ ಶಾಲೆ ನಮ್ಮಯ ಕಣ್ಮಣಿ ಎಂಬ ಬ್ಯಾನರ್ ಕಟ್ಟಿ ನಮ್ಮೂರ ಶಾಲೆ ನಮ್ಮೂರಲ್ಲಿ ಉಳಿಸಬೇಕೆಂದು ಆಗ್ರಹಿಸಿ ಹೋರಾಟ ಮಾಡಲಾಯಿತು. ನಂತರ ಗ್ರಾಪಂ ಪಿಡಿಒ ಅನಿಲ್ ಅವರಿಗೆ ಮನವಿ ಸಲ್ಲಿಸಲಾಯಿತು.

ಎಐಕೆಕೆಎಂಎಸ್ ರೈತ ಸಂಘಟನೆಯ ಜಿಲ್ಲಾಧ್ಯಕ್ಷ ಗೋವಿಂದ ಹಾಗೂ ಜಗದೀಶ್ ನೇಮಕಲ್ ಎಐಡಿವೈಓ ಮಾತನಾಡಿ, ಇಡೀ ರಾಜ್ಯಾದ್ಯಂತ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ವಿರುದ್ಧ ಹೋರಾಟ ನಡೆಸುತ್ತಾ ಬಂದಿದ್ದಾರೆ. ಆದರೆ ಜನರ ತೀವ್ರ ವಿರೋಧ ನಡುವೆಯೂ ರಾಜ್ಯ ಸರ್ಕಾರವು ತನ್ನ ಹಟಮಾರಿ ಧೋರಣೆ ಬಿಡದೆ ಕೆಪಿಎಸ್ ಶಾಲೆಗಳನ್ನು ಆರಂಭಿಸಲು ಮುಂದಾಗಿದ್ದು ಅತ್ಯಂತ ಖಂಡನೀಯ ಎಂದರು.


ದೇಶದ ಶಿಕ್ಷಣಕ್ಕಾಗಿ ಹೋರಾಡಿದ ಮಹಾತ್ಮಾ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿ ಬಾಯಿ ಫುಲೆ ಅವರು 200 ವರ್ಷಗಳ ಹಿಂದೆ ಮಹಿಳೆಯರು, ಶೋಷಿತರ ಮಕ್ಕಳಿಗೆ ಶಿಕ್ಷಣ ಪಡೆಯಲು ಸಾಧ್ಯವಿರಲಿಲ್ಲ, ಅಂತಹ ಪರಿಸ್ಥಿತಿಯಲ್ಲಿ ಅವರು ಹೋರಾಟ ಮಾಡಿ ಶಿಕ್ಷಣ ಎಲ್ಲರಿಗೂ ಸಿಗೊತರ ಧ್ವನಿ ಎತ್ತಿದ್ದಾರೆ. ಅವರ ಹೋರಾಟದಿಂದ ಸ್ಫೂರ್ತಿ ಇಂದು ನಾವು ಒಗ್ಗಟ್ಟಾಗಿ ಶಾಲೆ ಉಳಿಸಲು ಹೋರಾಟ ನಡೆಸಬೇಕು ಎಂದು ಕರೆ ನೀಡಿದರು.

ಎಐಡಿವೈಓ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಜಗದೀಶ್ ನೇಮಕಲ್, ಅತಿಥಿ ಶಿಕ್ಷಕರಾದ ಶೇಖರ್ ಊರಿನ ಗ್ರಾಮಸ್ಥರಾದ ಗಾದಿಲಿಂಗಪ್ಪ, ಕರಿಬಸಪ್ಪ, ನವೀನ್, ಮಲ್ಲಿಕಾರ್ಜುನ್ ಹಾಗೂ ಊರಿನ ವಿದ್ಯಾರ್ಥಿ ಕಾಂತೇಶ್ ಶಾಂತಕುಮಾರ್ ಇತತರರಿದ್ದರು.

ವಕೀಲರದ್ದು ಪ್ರಾಮಾಣಿಕ, ಉತ್ಕೃಷ್ಟ ಸೇವೆ: ಫಣೀಂದ್ರ

ಯಾದಗಿರಿ: ಡಾ.ಅಂಬೇಡ್ಕರ್. ಮಹಾತ್ಮ ಗಾಂಧೀಜಿ. ಜವಹರಲಾಲ್ ನೆಹರು. ಸರ್ದಾರ್ ವಲ್ಲಭಭಾಯಿ ಪಟೇಲ್ ಸೇರಿದಂತೆ ಇತರೆ ಹಲವಾರು ನಾಯಕರು ವಕೀಲರಾಗಿ ಅವರು ದೇಶ ಕಟ್ಟುವ ಕೆಲಸ ಮಾಡಿದ್ದರು. ಹಾಗಾಗಿ ವಕೀಲರ ಸೇವೆ ಪ್ರಾಮಾಣಿ ಹಾಗೂ ಉತ್ಕೃಷ್ಟವಾಗಿದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಹೇಳಿದರು.

ಶನಿವಾರ ನಗರದ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಿರಿಯ ನಾಗರಿಕರ ಮತ್ತು ವಿಶೇಷಚೇತನ ಇಲಾಖೆ, ಜಿಲ್ಲಾ ನ್ಯಾಯವಾದಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ನ್ಯಾಯಾಂಗ ಅಧಿಕಾರಿಗಳು ಹಾಗೂ ವಕೀಲರ ಜತೆ ಸಭೆ ಮತ್ತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,



ಹಿಂದಿನದನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ವಕೀಲರ ಮೇಲಿದೆ. ಸಾರ್ವಜನಿಕ ಆಡಳಿತದಲ್ಲಿ ನಮ್ಮ ಪಾತ್ರ ಏನು. ಭಾರತದ ಸಂವಿಧಾನದಲ್ಲಿ ಹೆಣ್ಣಾಗಲಿ ಗಂಡಾಗಲಿ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದೆ ಎಂದರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಮರುಳಸಿದ್ಧಾರಾಧ್ಯ ಪ್ರಾಸ್ತಾವಿಕವಾಗಿ ಮಾತನಾಡಿ, ಉಪ ಲೋಕಾಯುಕ್ತರಾದ ಕೆ.ಎನ್. ಫಣೀಂದ್ರ ಅವರು ಜಿಲ್ಲೆಯಲ್ಲಿ ಎರಡು ದಿನಗಳ ಕಾರ್ಯಕ್ರಮ ಹಮ್ಮಿಕೊಂಡಿದ್ದು ಮಿಂಚಿನ ಸಂಚಾರ ಮಾಡುವ ಮೂಲಕ ಅಧಿಕಾರಿಗಳು ಮತ್ತು ಜನರಲ್ಲಿ ಲೋಕಾಯುಕ್ತ ಮಹತ್ವದ ಕುರಿತು ತಿಳಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಈ ನ್ಯಾಯಾಲಯದ ಹೊಸ ಕಟ್ಟಡದ ಜಾಗಕ್ಕೆ ಫಣೀಂದ್ರ ಸಾಹೇಬರ ಕೊಡುಗೆ ಇದೆ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಆರ್.ಎಸ್.ಪಾಟೀಲ ಅವರು ಕಾರ್ಯಕ್ರಮ ಅಧ್ಯಕ್ಷತೆವಹಿಸಿ ಮಾತನಾಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ, ಜಿಲ್ಲಾ ಹಿರಿಯ ನಾಗರೀಕರ ಮತ್ತು ವಿಶೇಷಚೇತನರ ಕಲ್ಯಾಣಾಧಿಕಾರಿ ಶರಣಪ್ಪ ಪಾಟೀಲ್, ಶಾಹಪೂರ ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಸಂತೋಷ, ಶೋರಾಪುರ ತಾಲೂಕು ವಕೀಲರ ಸಂಘದ ಅಧ್ಯಕ್ಷ ಹನೂರ್ ಬಸವರಾಜ ಸೇರಿದಂತೆ ಇತರೆ ವಕೀಲರು ಜಿಲ್ಲಾ ನ್ಯಾಯಾಲಯದ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

> 6 ರಿಂದ 14 ವರ್ಷದ ಮಕ್ಕಳಿಗೆ ಕೆಲಸ ಕೊಡುವ ಹಾಗಿಲ್ಲ. ಅವರಿಗೆ ದುಡಿಮೆಗೆ ಕಳಿಸುವಂತಿಲ್ಲ. ಮಗುವಿನ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂಬುದಾಗಿದೆ. ವಿಧ್ಯಾಭ್ಯಾಸದ ಜೊತೆಗೆ ಆರೋಗ್ಯ ಸೌಲಭ್ಯಗಳನ್ನು ನೀಡಬೇಕಿದೆ ಹಾಗೂ ಅವರು ತಮಗೆ ಬೇಕಾದ ವೃತ್ತಿಯನ್ನು ಆರಿಕೊಳ್ಳಬಹುದಾಗಿದೆ.
>
> ■ ನ್ಯಾ.ಕೆ.ಎನ್.ಫಣೀಂದ್ರ, ಕರ್ನಾಟಕ ಉಪ ಲೋಕಾಯುಕ್ತ


ಮಾದರಿಯಾದ ಹುಣಸಗಿ ಸರ್ಕಾರಿ ಬಾಲಕಿಯರ ಪ್ರೌಢಶಾಲೆ

▶ ಮಲ್ಲಿಕಾರ್ಜುನ ಗುತ್ತೇದಾರ

ಹುಣಸಗಿ: ಸರ್ಕಾರಿ ಶಾಲೆಗಳ ಬಗ್ಗೆ ಸಮಾಜದಲ್ಲಿ ಇನ್ನೂ ಕೆಲವರಲ್ಲಿ ಇರುವ ನಿರ್ಲಕ್ಷ್ಯದ ಮನೋಭಾವಕ್ಕೆ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆ ಪ್ರಬಲ ಉತ್ತರವಾಗಿ ಹೊರಹೊಮ್ಮಿದೆ. 1996ರಲ್ಲಿ ಆರಂಭಗೊಂಡ ಈ ಶಾಲೆ ಗುಣಮಟ್ಟದ ಶಿಕ್ಷಣ, ಶಿಸ್ತು ಹಾಗೂ ಅತ್ಯುತ್ತಮ ಫಲಿತಾಂಶಗಳ ಮೂಲಕ ಜಿಲ್ಲೆಯ ಮಾದರಿ ಶಾಲೆಯಾಗಿ ಗುರುತಿಸಿಕೊಂಡಿದೆ.

2025-26ನೇ ಶೈಕ್ಷಣಿಕ ಸಾಲಿನಲ್ಲಿ ಶಾಲೆಯಲ್ಲಿ ಒಟ್ಟು 361 ವಿದ್ಯಾರ್ಥಿನಿಯರು ದಾಖಲಾತಿಯಾಗಿದ್ದು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇಕಡಾ 94.5 ಫಲಿತಾಂಶ ದಾಖಲಿಸುವ ಮೂಲಕ ಹೊಸ ಸಾಧನೆ ಮಾಡಿದೆ. ಈ ಯಶಸ್ಸಿನ ಹಿಂದೆ ಶಾಲೆಯ ಶಿಕ್ಷಕರ ಸಮರ್ಪಿತ ಸೇವೆ ಹಾಗೂ ವಿದ್ಯಾರ್ಥಿಗಳ ಪರಿಶ್ರಮ ಪ್ರಮುಖ ಪಾತ್ರ ವಹಿಸಿವೆ.

ಶಾಲೆಯಲ್ಲಿ ಒಟ್ಟು 13 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳೇ ದೇವರು ಎಂಬ ಮನೋಭಾವದೊಂದಿಗೆ ಶಿಕ್ಷಣ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರದ ಯೋಜನೆಗಳನ್ನು ಪರಿಣಾಮ ಕಾರಿಯಾಗಿ ಜಾರಿಗೊಳಿಸುವುದರ ಜೊತೆಗೆ, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಗಳಿಗೆ ಮುಂಜಾನೆ ಹಾಗೂ ಸಂಜೆ ವಿಶೇಷ ತರಗತಿಗಳನ್ನು ನಡೆಸಿ ಗುಣಮಟ್ಟದ ಶಿಕ್ಷಣ ಒದಗಿಸುತ್ತಿದ್ದಾರೆ.



ಮೂಲಭೂತ ಸೌಕರ್ಯಗಳ ವಿಷಯದಲ್ಲಿಯೂ ಶಾಲೆ ಮುಂಚೂಣಿಯಲ್ಲಿದೆ. ಸುಸಜ್ಜಿತ ಗ್ರಂಥಾಲಯ, ಕಂಪ್ಯೂಟರ್, ವಿಜ್ಞಾನ ಪ್ರಯೋಗಾಲಯ, ಸ್ವಚ್ಛ ಶೌಚಾಲಯ ಗಳು, ಸಿಸಿ ಕ್ಯಾಮೆರಾ ವ್ಯವಸ್ಥೆ, ಸೋಲಾರ್ ವಿದ್ಯುತ್ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಹೊಂದಿದೆ.

ವಿದ್ಯಾರ್ಥಿಗಳ ಹಿತ ಕಾಪಾಡಲು ಕರಾಟೆ ತರಬೇತಿ ನೀಡಲಾಗುತ್ತದೆ. ಭಾರತ ಸೇವಾದಳ, ಪ್ರತಿಭಾ ಕಾರಂಜಿಯಲ್ಲಿ ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುತ್ತಾರೆ. ಶಾಲೆಯ ಅಭಿವೃದ್ಧಿಗೆ ವಿವಿಧ ದಾನಿಗಳು ದತ್ತಿ ನಿಧಿ ಹಾಗೂ ಅಗತ್ಯ ನೆರವು ನೀಡುತ್ತಿರುವುದು ವಿಶೇಷವಾಗಿದೆ.

ಪ್ರಸ್ತುತ ಎಸ್‌ಡಿಎಂಸಿ ಅಧ್ಯಕ್ಷ ಸಿದ್ರಾಮಪ್ಪ ಮುದಗಲ್ ಅವರು ಶಾಲೆಯ ಅಭಿವೃದ್ಧಿಗಾಗಿ ತಮ್ಮ ಸಮಿತಿಯೊಂದಿಗೆ ನಿರಂತರವಾಗಿ ಶ್ರಮಿಸುತ್ತಿದ್ದು, ತಮ್ಮ ಐದು ವರ್ಷದ ಪಟ್ಟಣ ಪಂಚಾಯಿತಿ ವೇತನವನ್ನು ಶಾಲೆಯ ಅಭಿವೃದ್ಧಿಗೆ ಬಳಸುವಂತೆ ಘೋಷಿಸಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಒಟ್ಟಾರೆ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿನಿಯರಿಗೆ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಶಾಲೆಯ ಶಿಕ್ಷಕರು, ಸಿಬ್ಬಂದಿ ಹಾಗೂ ಎಸ್‌ಡಿಎಂಸಿ ಸದಸ್ಯರು ತೋರಿಸುತ್ತಿ ರುವ ಬದ್ಧತೆ ಶ್ಲಾಘನೀಯವಾಗಿದೆ.

> ಪಟ್ಟಣದ ಬಾಲಕಿಯರ ಪ್ರೌಢಶಾಲೆಯ ಸಿಬ್ಬಂದಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿನ ಪಾಲಕರ ಸಹಕಾರ, ವಿದ್ಯಾರ್ಥಿಗಳ ಕಲಿಕಾ ಹಂಬಲ ರಾಜಕ್ಕೆ ಮಾದರಿಯಾಗುವಂತಿದೆ.
>
> ■ ಚನ್ನಬಸಪ್ಪ ಮುಧೋಳ, ಡಿಡಿಪಿಐ ಯಾದಗಿರಿ

> ಶಿಕ್ಷಕರ ಕಠಿಣ ಪರಿಶ್ರಮ ಒಗ್ಗಟ್ಟು ಶಾಲೆಯ ಕೀರ್ತಿಗೆ ಸಹಕಾರಿಯಾಗಿದೆ ಶಾಲೆಯ ಅಭಿವೃದ್ಧಿಗಾಗಿ ಪಟ್ಟಣದ ಸಾರ್ವಜನಿಕರು ಸದಾ ಸಿದ್ಧರಿದ್ದೇವೆ.
>
> ■ ಸಿದ್ರಾಮಪ್ಪ ಮುದಗಲ್, ಎಸ್‌ಡಿಎಂಸಿ ಅಧ್ಯಕ್ಷ